

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೪, ಸಂಚಿಕೆ : ೦೧

ಜನವರಿ–ಜೂನ್ ೨೦೨೦

ಸಂಪಾದಕ

ಪ್ರೊ. ಬಿ.ಪಿ. ವೀರೇಂದ್ರಕುಮಾರ್

ಬಿ.ಎಂ.ಶ್ರೀ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಕಲಾಭವನ (ರಿ)
೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦೦೧೯.
ದೂರವಾಣಿ : ೨೬೬೧೫೮೭೭, ೨೬೬೭೬೭೭೩
ವಿ–ಅಂಚೆ : bmsritrust@gmail.com bmsrilochana@gmail.com

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೪, ಸಂಚಿಕೆ : ೦೧

ಜನವರಿ–ಜೂನ್ ೨೦೨೦

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೪, ಸಂಚಿಕೆ : ೦೧

ಜನವರಿ–ಜೂನ್ ೨೦೨೦

ಸಂಪಾದಕ

ಪ್ರೊ. ಬಿ.ಪಿ. ವೀರೇಂದ್ರಕುಮಾರ್

ಬಿ.ಎಂ.ಶ್ರೀ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಕಲಾಭವನ (ರಿ)

೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು – ೫೬೦೦೧೯.

ದೂರವಾಣಿ : ೨೬೬೧೫೪೭೭, ೨೬೬೭೬೭೭೩

ವಿ–ಅಂಚೆ : bmsritrust@gmail.com

bmsrilochana@gmail.com

KARNATAKA LOCHANA
Half yearly Research Journal
Edited by Prof. B.P. Veerendra Kumar and
Published by B.M.Sri. Prathistana
M.V.Si. P.G. Research Centre
B.M.Sri. Kalabhavan(R), 3rd Main Road
Narasimharaja Colony, Bangalore 560 019.
Ph.No. 080-26615877, 26676773
e-mail : bmsritrust@gmail.com bmsrilochana@gmail.com

January-June 2020 (Vol. 34, No. 1)
Pages: viii + 144

Subscription Details :
Annual : Rs. 100/-
Life : Rs. 1500/-

ಚಂದಾ ವಿವರ:
ವಾರ್ಷಿಕ : ರೂ. ೧೦೦/-
ಆಜೀವ : ರೂ. ೧೫೦೦/-

ಮುದ್ರಣ
ಸ್ಪ್ಯಾನ್ ಪ್ರಿಂಟ್
ಬೆಂಗಳೂರು
ದೂರವಾಣಿ : 90369 03496
ಇ-ಅಂಚೆ : spanprint@gmail.com

ಸಂಪಾದಕರ ನುಡಿ

ಎಲ್ಲರ ಬದುಕಿನ ಜೀವನ ಕ್ರಮದ ಮೇಲೆ ಕರಾಳ ನೆರಳನ್ನು ಬೀರುತ್ತಿರುವ ಕರೋನಾ ವೈರಸ್ ಅಬ್ಬರದಿಂದಾಗಿ ಜೂನ್ ತಿಂಗಳಲ್ಲಿ ಬರಬೇಕಾಗಿದ್ದ ಈ ಸಂಚಿಕೆ ತಡವಾಗಿ ಬರುತ್ತಿದೆ. ಈ ವಿಚಿತ್ರ ಸನ್ನಿವೇಶದಲ್ಲೂ ಹಿರಿಯ ಕಿರಿಯ ವಿದ್ವಾಂಸರುಗಳು ಪ್ರಬಂಧಗಳನ್ನು ಸಿದ್ಧಪಡಿಸಿ ಕಳುಹಿಸಿರುವುದು ಸಂತಸದ ಸಂಗತಿ. ಪ್ರೊ. ಜಿ. ಅಶ್ವತ್ಥನಾರಾಯಣರು ನಮಗೆ ಒದಗಿಸಿ ಕೊಟ್ಟಿರುವ ಗದಾಯುದ್ಧ ಸಂಗ್ರಹದ ಬಗೆಗಿನ ಸುಬ್ರಾಯಭಟ್ಟರ ವಿದ್ವತ್ ಪ್ರತಿಕ್ರಿಯೆ ಅವರ ವಿದ್ವತ್ತಿನ ಆಳವನ್ನು ಪರಿಚಯಿಸಿದೆ.

ನಾಗವರ್ಮನ ಕರ್ನಾಟಕ ಭಾಷಾಭೂಷಣದ ಬಗೆಗೆ ಡಾ.ಎಚ್.ಎಸ್. ಅನಂತನಾರಾಯಣ ಅವರು ಕನ್ನಡಿಗರಿಗಾಗಿ ಸಮಗ್ರವಾಗಿ ಪರಿಚಯಿಸಿದ್ದಾರೆ. ವಿಶೇಷವಾಗಿ ಸಮಾಸವನ್ನು ಕುರಿತಂತೆ ವಿವರಿಸುವಾಗ ಡಿ.ಎನ್. ಶಂಕರಭಟ್ಟರು ಕನ್ನಡ ಸಮಾಸಗಳನ್ನು ಕುರಿತಂತೆ ಶೋಧಿಸಿರುವ ಸಂಗತಿಗಳನ್ನು ಪ್ರಸ್ತಾಪಿಸಿದ್ದರೆ ಉಚಿತವಾಗುತ್ತಿತ್ತು ಎನಿಸುತ್ತದೆ.

ಗೋವಿಂದ ಪೈಗಳ ಸಮಗ್ರ ಜೀವನ-ಸಾಧನೆಗಳ ಬಗೆಗೆ ಹೊಸ ಬೆಳಕು ಚೆಲ್ಲುವ ಅಪರೂಪದ ಲೇಖನವನ್ನು ಪ್ರೊ. ಶಿವಾಜಿ ಜೋಯಿಸರು ಕಳುಹಿಸಿದ್ದಾರೆ, ಪ್ರೊ. ಬಿ. ರಾಜಶೇಖರಪ್ಪನವರು ಚಿತ್ರದುರ್ಗದ ಪ್ರಾದೇಶಿಕ ಸಂಸ್ಕೃತಿಯ ಮಹತ್ವವನ್ನು ಬಿಂಬಿಸುವ 'ಚಿತ್ರದುರ್ಗದ ರೂವಾರಿ ಬರಮಣ್ಣ ನಾಯಕ' ಲೇಖನ ಹೊಸ ನೋಟವನ್ನು ನೀಡುತ್ತದೆ. ತಿಪ್ಪೇಸ್ವಾಮಿ ಬಗೆಗೆ ಪ್ರಸ್ತಾಪಿಸಿರುವ ಸಂಗತಿಗಳನ್ನು ಲಿಖಿತ ಆಧಾರಗಳಿಗಿಂತ ಜಾನಪದ ಗ್ರಹಿಕೆಯಿಂದ ವಿಶ್ಲೇಷಿಸಬೇಕಾದ ಅಗತ್ಯವಿದೆ ಎನಿಸುತ್ತದೆ. ಹಲ್ಮಿಡಿ ಪದದ ಬಗೆಗೆ ಡಾ. ಎನ್. ಎಸ್. ತಾರಾನಾಥ್ ಅವರ ಮರುಪರಿಶೀಲನೆ ವಿದ್ವಾಂಸರ ಪ್ರತಿಕ್ರಿಯೆಯನ್ನು ಬಯಸುತ್ತದೆ. ಡಾ. ನಳಿನಿ ವೆಂಕಟೇಶ್ ಅವರ 'ಅರ್ಹದ್ದಾಸನ ಅಟ್ಟಮತಂ' ಲೇಖನ 'ಮಳೆನೀರು' ಗಳ ಬಗೆಗೆ ತಿಳುವಳಿಕೆ ನೀಡುವ ಅಪರೂಪದ ಬರಹವಾಗಿದೆ.

'ಕಾಳಿದಾಸನು ಕಾಣಿಸಿದ ಶಿಕ್ಷಣ' ಎನ್ನುವ ಲೇಖನದಲ್ಲಿ ಕಣ್ಣನ್ ಅವರು ಶಿಕ್ಷಣದ ಬಗೆಗೆ ಕಾಳಿದಾಸನಂಥ ಮಹಾಕವಿಯ ನಿಲುವುಗಳನ್ನು ಶೋಧಿಸಿರುವುದು ಪ್ರಸ್ತುತವಾಗಿದೆ. ಡಾ. ಮುತ್ತುರಾಜ್ ಅವರ ಲೇಖನ ಆ ಪ್ರದೇಶದ ಇತಿಹಾಸ ಸಂಸ್ಕೃತಿಗಳ ಬಗೆಗೆ ಸ್ಪಷ್ಟ ಮಾಹಿತಿ ನೀಡುತ್ತದೆ.

ಮಾಸ್ತಿಯವರು ವಚನಗಳನ್ನು ಮೊತ್ತಮೊದಲು ಇಂಗ್ಲೀಷ್ ಭಾಷೆಗೆ ಅನುವಾದಿಸಿದ ಬಗೆಗೆ ಡಾ.ಎಸ್.ಎಲ್. ಶ್ರೀನಿವಾಸಮೂರ್ತಿಯವರು ಬೆಳಕು ಚೆಲ್ಲಿರುವುದು ಕುತೂಹಲ ಮೂಡಿಸುತ್ತದೆ.

'ಭರತೇಶ ವೈಭವ' ಕಾವ್ಯದ ರಸಗ್ರಹಣದ ಬಗೆಗೆ ವಿವರಿಸುತ್ತಾ ರತ್ನಾಕರನ 'ಅನನ್ಯತೆ'ಯನ್ನೂ ಡಾ.ಎನ್.ಆರ್. ಲಲಿತಾಂಬ ಅವರು ವಿಶ್ಲೇಷಿಸಿರುವುದು ಗಮನಾರ್ಹವಾಗಿದೆ.

ರಾಜಶೇಖರ ಹಳೆಮನೆಯವರು, 'ಪ್ರಗತಿ ಶೀಲ ಸಾಹಿತ್ಯ' ಕುರಿತಂತೆ ಅವಲೋಕನ ಮಾಡಿ, ಪ್ರಗತಿಶೀಲರಲ್ಲಿ ನಿರಂಜನರು ಬದುಕಿನ ಉದ್ದಕ್ಕೂ ಬದ್ಧವಾದ ನಿಲುವನ್ನು ತಾಳಿರುವುದನ್ನು ಗಮನಕ್ಕೆ ತರುತ್ತಾರೆ.

ಸಂಪಾದಕ ಭಾರವನ್ನು ಹಗುರ ಮಾಡುತ್ತಿರುವ ಗೆಳೆಯರೂ ಬಿ. ಎಂ. ಶ್ರೀ. ಪ್ರತಿಷ್ಠಾನದ ಅಧ್ಯಕ್ಷರೂ ಆದ ಡಾ. ಆರ್. ಲಕ್ಷ್ಮೀನಾರಾಯಣ ಅವರಿಗೆ ಸಹಕರಿಸುತ್ತಿರುವ ಬಿ. ಅರ್. ರವೀಂದ್ರನಾಥ್, ವಿಜಯಾ ಸುಬ್ಬರಾಜ್ ಅವರುಗಳಿಗೆ ಕೋಶಾಧಿಕಾರಿಗಳಾದ ಡಾ. ಅನಿಲ್ ಕುಮಾರ್ ಅವರಿಗೆ ಹಾಗೂ ಅಂದವಾಗಿ ಮುದ್ರಿಸಿ ಕೊಟ್ಟಿರುವ ಸ್ವಾನ್ ಪ್ರಿಂಟರ್ಸ್ ಅವರಿಗೆ ಪ್ರೀತಿಪೂರ್ವಕ ವಂದನೆಗಳು.

ಲೇಖಕರಿಗೆ ಸೂಚನೆಗಳು...

೧. ಸಾಹಿತ್ಯ–ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನೆ ವಿಮರ್ಶೆಗಳ ಅಪ್ರಕಟಿತ ಬರಹಗಳನ್ನು 'ಕರ್ನಾಟಕ ಲೋಚನ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಸ್ವೀಕರಿಸಲಾಗುವುದು.

೨. ಲೇಖನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿದವಾಗಿರಬೇಕು ಅಥವಾ ಸ್ಫುಟವಾದ ಕೈಬರಹದಲ್ಲಿರಬೇಕು.

೩. ಲೇಖನಗಳು ಒಪ್ಪಿತವಾದ ಮಾದರಿಯಲ್ಲಿ ಸೂಕ್ತ ಉಲ್ಲೇಖಗಳು ಮತ್ತು ಟಿಪ್ಪಣಿಗಳಿಂದ ಕೂಡಿರಬೇಕು.

೪. ಚಿತ್ರಗಳು, ನಕ್ಷೆಗಳು ಮೊದಲಾದುವನ್ನು ಸ್ಕ್ಯಾನ್ ಮಾಡಿದ ತಂತ್ರಾಂಶದಲ್ಲಿ ನೀಡಬೇಕು.

೫. ಲೇಖಕರು ತಮ್ಮ ವಿಳಾಸ, ದೂರವಾಣಿ ಸಂಖ್ಯೆ ಮತ್ತು ವಿ–ಅಂಚೆಗಳನ್ನು ತಪ್ಪದೆ ನೀಡಬೇಕು.

೬. ಅಸ್ವೀಕೃತ ಬರಹಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಈ ಬಗೆಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

೭. ಲೇಖನಗಳನ್ನು ಪ್ರತಿಷ್ಠಾನದ ವಿಳಾಸಕ್ಕೆ ಅಥವಾ bmsrilochana@gmail.com ಈ ವಿ–ಅಂಚೆಗೆ ಕಳುಹಿಸಬಹುದು.

೮. ಪ್ರಕಟವಾದ ಬರಹಗಳಿಗೆ ಪ್ರತಿಷ್ಠಾನವು ಸಾಂಕೇತಿಕ ಗೌರವ ಸಂಭಾವನೆಯನ್ನು ನೀಡುತ್ತದೆ.

೯. ಲೇಖನದಲ್ಲಿನ ಅಭಿಪ್ರಾಯಗಳು ಲೇಖಕರದೇ ಆಗಿದ್ದು ಪ್ರತಿಷ್ಠಾನದ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.

ಈ ಸಂಚಿಕೆಯಲ್ಲಿ

೧. ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ : ವ್ಯಕ್ತಿ – ಕೃತಿ

– ಪ್ರೊ. ಶಿವಾಜಿ ಜೋಯಿಸ್

೨. ನಾಗವರ್ಮನ ಕರ್ಣಾಟಕ ಭಾಷಾಭೂಷಣ–೨

– ಡಾ. ಎಚ್.ಎಸ್. ಅನಂತನಾರಾಯಣ

೩. ಹಲ್ಮಿಡಿ : ಶಾಸನೋಲ್ಲೇಖಗಳು ಸ್ಥಳನಾಮ

– ಡಾ. ಎನ್. ಎಸ್. ತಾರಾನಾಥ್

೪. ಚಿತ್ರದುರ್ಗದ ರೂವಾರಿ ಬರಮಣ್ಣ ನಾಯಕ

– ಡಾ. ಬಿ. ರಾಜಶೇಖರಪ್ಪ

೫. ಅರ್ಹದ್ದಾಸನ ಅಟ್ಟಮತಂ

– ಡಾ. ಕೆ. ನಳಿನಿ ವೆಂಕಟೇಶ್

೬. ಪರುಶುರಾಮನ ಭೂಮಿ–ಹೈವ

– ಅತ್ತಿಮುರುಡು ವಿಶ್ವೇಶ್ವರ

೭. ಕಾಳಿದಾಸನು ಕಾಣಿಸಿದ ಶಿಕ್ಷಣ

– ಕೆ.ಎಸ್. ಕಣ್ಣನ್

೮. ಸೋಮನಹಳ್ಳಿ ಮತ್ತು ಕೆರೆ ಚೂಡಹಳ್ಳಿಯ ಸ್ಮಾರಕಗಳು

– ಡಾ. ಮುತ್ತುರಾಜು

೯. ಬಸವಣ್ಣನವರ ವಚನಗಳ ಅನುವಾದ ಮತ್ತು ಮಾಸ್ತಿ

– ಡಾ. ಎಸ್. ಎಲ್. ಶ್ರೀನಿವಾಸಮೂರ್ತಿ

೧೦. ಸಾಂಗತ್ಯ – ರಸಗ್ರಹಣ : ಭರತೇಶ ವೈಭವದ ಅಂಕಮಾಲಾಸಂಧಿ ಹಾಗೂ ರಾಜೇಂದ್ರ ಗುಣವಾಕ್ಯ ಸಂಧಿ

– ಡಾ. ಎನ್ ಆರ್ ಲಲಿತಾಂಬ

೧೧. ಪ್ರಗತಿಶೀಲ ಸಾಹಿತ್ಯ ಮತ್ತು ನಿರಂಜನರು

– ರಾಜಶೇಖರ ಹಳೇಮನೆ

೧೨. ತೀನಂಶ್ರೀ ಗದಾಯುದ್ಧ ಸಂಗ್ರಹ ಕುರಿತು ದಿ॥ ಪಿ. ಸುಭ್ರಾಯಭಟ್ಟರ ಟಿಪ್ಪಣಿಗಳು

– ಪ್ರೊ. ಜಿ. ಅಶ್ವತ್ಥನಾರಾಯಣ

- ಪ್ರೊ॥ ಜಿ. ಅಶ್ವತ್ಥನಾರಾಯಣ, ನಂ. ೯೫, ೩೪ನೇ ಬಿ ಕ್ರಾಸ್, ಮಹಡಿ ೧೬ನೇ ಮೇನ್, ೪ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – ೫೬೦೦೪೧ ದೂರವಾಣಿ : ೦೮೦೨೬೬೩೭೭೮೩

- ಡಾ.ಎಚ್.ಎಸ್.ಅನಂತನಾರಾಯಣ, ಭಾಷಾಶಾಸ್ತ್ರ ಪ್ರಾಧ್ಯಾಪಕ (ನಿವೃತ್ತ), ಬೆಂಗಳೂರು, ಮೊಬೈಲ್: ೯೮೦೬೩೨೮೧೦

- ರಾಜಶೇಖರ ಹಳೇಮನೆ ಎಸ್.ಡಿ.ಎಂ ಕಾಲೇಜ್, ಉಜಿರೆ–೫೭೪೨೪೦ ಮೊ–೯೦೦೮೫೨೮೧೧೨

- ಪ್ರೊ. ಎಸ್. ಶಿವಾಜಿ ಜೋಯಿಸ್, (ನಿವೃತ್ತ ಪ್ರಾಂಶುಪಲರು, ಡಿ. ಬನುಮಯ್ಯ ಕಾಲೇಜು, ಮೈಸೂರು), ‘ಸಮರಸ’ ೧೬೬, ಕೆಸರೆ ೩ನೆಯ ಹಂತ, ಆರ್.ಎಸ್. ನಾಯ್ಡುನಗರ, ಮೈಸೂರು–೫೭೦೦೦೭ ಮೊ– ೯೪೪೯೬೨೨೧೬೬

- ಬಿ. ರಾಜಶೇಖರಪ್ಪ ಕನ್ನಡಪ್ರಾಧ್ಯಾಪಕರು, ಪ್ರಾಂಶುಪಾಲರು(ನಿ) ೨ನೆಯಕ್ರಾಸ್ (ಪಶ್ಚಿಮ), ಜಯಚಾಮರಾಜೇಂದ್ರ ಬಡಾವಣೆ. ಚಿತ್ರದುರ್ಗ – ೫೭೭೫೦೧ ಮೊ– ೯೪೮೦೨೨೬೦೬೪

- ಡಾ. ಎನ್. ಎಸ್. ತಾರಾನಾಥ್, ವಿಶ್ರಾಂತ ಕನ್ನಡ ಪ್ರಾಧ್ಯಾಪಕ, ೧೯, ರಾಮಲೀಲಾ, ಮೊದಲನೆಯ ಕ್ರಾಸ್, ಗಂಗೋತ್ರಿ ಬಡಾವಣೆ ೨ನೇಹಂತ, ಮೈಸೂರು–೫೩೦೦೦೯

- ಡಾ. ನಳಿನಿ ವೆಂಕಟೇಶ್, ನಂ. ೧೫, ‘ಮನಸ್ವಿನಿ’, ಸ್ನೇಹ ಕಾಲೋನಿ, ಚಿಕ್ಕಲ್ಲಸಂದ್ರ, ಬೆಂಗಳೂರು–೫೬೦೦೬೧ ಮೊ– ೯೮೪೫೦೫೦೧೯೪

- ಶ್ರೀ ಅತ್ತಿಮುರಡು ವಿಶ್ವೇಶ್ವರ ರಾ. ಹೆಗಡೆ, ಹೇರೂರು, ಉ.ಕ–೫೮೧೪೫೦

- ಕೆ.ಎಸ್.ಕಣ್ಣನ್, # ೧೦೭, ‘ವೈಭವಿ’, ೧೭ನೇ ಮೇನ್, ೪ನೇ ಕ್ರಾಸ್, ಮುನೇಶ್ವರಬ್ಲಾಕ್, ಬೆಂಗಳೂರು– ೫೬೦೦೨೬ ಮೊ– ೯೯೦೦೨೭೫೨೫೫

- ಡಾ. ಮುತ್ತುರಾಜ್, ನಂ. ೨೨೨೨ # ೪೦ ಅಡಿ ಮುಖ್ಯರಸ್ತೆ, ಕುಮಾರಸ್ವಾಮಿ ಬಡಾವಣೆ, ೨ನೇ ಹಂತ, ಬೆಂಗಳೂರು–೫೬೦೦೭೮ ಮೊ– ೯೮೪೫೭೭೯೬೫೦

- ಡಾ. ಎಸ್. ಎಲ್. ಶ್ರೀನಿವಾಸಮೂರ್ತಿ, ನಂ ೭೦೨, 'ಅಂತರಗಂಗೆ', ೭ನೇ ಅಡ್ಡರಸ್ತೆ, ೭ನೇ ಮೇನ್, ಭುವನೇಶ್ವರಿ ನಗರ, ಬನಶಂಕರಿ ೩ನೇ ಹಂತ, ಬೆಂಗಳೂರು ೫೬೦ ೦೮೫

- ಡಾ. ಎನ್. ಆರ್. ಲಲಿತಾಂಬ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು–೫೬೦೦೧೦೪

ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ : ವ್ಯಕ್ತಿ – ಕೃತಿ

◈

ಪ್ರೊ. ಶಿವಾಜಿ ಜೋಯಿಸ್

ಶ್ರೀಮದ್ಭಗವದ್ಗೀತೆಯಲ್ಲಿ, ಮಾನವರು ಫಲಾಕಾಂಕ್ಷೆಯಿಲ್ಲದೆ ಪರಮಶ್ರದ್ಧೆಯಿಂದ ಆಚರಿಸುವ ಮೂರು ವಿಧವಾದ ತಪಸ್ಸನ್ನು 'ಸಾತ್ತ್ವಿಕ'ವೆಂದು ಹೇಳಿದೆ. ಅವು ಕಾಯಿಕ ತಪಸ್ಸು, ವಾಚಿಕ ತಪಸ್ಸು ಮತ್ತು ಮಾನಸಿಕ ತಪಸ್ಸು ಎಂಬವು. (ದೇವ ದ್ವಿಜ ಗುರು ಪ್ರಾಜ್ಞರ ಪೂಜೆಯೂ ಶೌಚವೂ ಆರ್ಜವವೂ ಬ್ರಹ್ಮಚರ್ಯವೂ ಮತ್ತು ಅಹಿಂಸೆಯೂ ಕಾಯಿಕ ತಪಸ್ಸು; ಅನುದ್ವೇಗಕರವಾದ ಸತ್ಯವೂ ಪ್ರಿಯವೂ ಹಿತವೂ ಆದ ವಾಕ್ಯವು ಮತ್ತು ಸ್ವಾಧ್ಯಾಯಾಭ್ಯಸನವು ವಾಚಿಕ ತಪಸ್ಸು; ಮನಃಪ್ರಸಾದ ಸೌಮ್ಯಭಾವ ಮೌನ ಮನೋನಿಗ್ರಹ ಭಾವಶುದ್ಧಿ ಇವು ಮಾನಸಿಕ ತಪಸ್ಸು). ಈ ತ್ರಿವಿಧ ತಪಸ್ಸನ್ನು ಏಕತ್ರ ಸಾಧಿಸಿದ ಸಾತ್ತ್ವಿಕಪುರುಷರಾದ ದಿವಂಗತ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಯವರು ವಾಙ್ಮಯ ತಪಸ್ವಿಯಾಗಿ ಪ್ರಸಿದ್ಧರು. ಮನೋವಾಕ್ಕಾಯ ಕರ್ಮಗಳ ಸಾಂಗತ್ಯದಿಂದಾದ ಒಂದು ಅಖಂಡ ವ್ಯಕ್ತಿತ್ವದಿಂದ ಪುಣ್ಯಶ್ಲೋಕರಾದ ಗೋವಿಂದ ಪೈಯವರನ್ನು, ಅವರ ಬದುಕು ಬರಹಗಳನ್ನು ಪರಿಶೀಲಿಸುವುದು ಸಾಂಸ್ಕೃತಿಕ ಮಹತ್ವದ ಕೆಲಸವಾಗಿದೆ. ಪೈಯವರನ್ನು ನೆನೆಯುವಾಗ ಪಶ್ಚಿಮ ಕರಾವಳಿಯ ಕಡಲಿನ ನೆನಪು ಮೂಡುವುದು, ಅವರ ಬದುಕನ್ನೆ ಒಂದು ಮಹಾಕಾವ್ಯವೆನ್ನುವುದು–ಪೈಯವರ ಘನ ವ್ಯಕ್ತಿತ್ವದ ಪ್ರಕಟಣೆಗಳಾಗಿವೆ.

ಗೋವಿಂದ ಪೈಯವರನ್ನು ಮತ್ತು ಅವರ ಬರಹಗಳನ್ನು ಕುರಿತು, ಬಹುಸಂಖ್ಯೆಯ ಲೇಖನಗಳಲ್ಲದೆ, ಕನ್ನಡದಲ್ಲಿ ಸುಮಾರು ೪೫ ಪುಸ್ತಕಗಳು ಪ್ರಕಟವಾಗಿವೆ. ಡಾ. ಶ್ರೀನಿವಾಸ ಹಾವನೂರ ಮತ್ತು ಮ.ವಿ. ನಾಯಕರು ಸಿದ್ಧಪಡಿಸಿದ "ಗೋವಿಂದ ಪೈ ವಾಙ್ಮಯ ದರ್ಶನ"ವಂತೂ ಪ್ರತ್ಯೇಕ ಉಲ್ಲೇಖಾರ್ಹವಾದ ಅಮೂಲ್ಯ ಕೃತಿ. ಇಂಗ್ಲಿಷಿನಲ್ಲಿಯೂ ಪೂರ್ಣ ಪ್ರಮಾಣದ

ಒಂದು ಕೃತಿ, ಕೊಂಕಣಿಯಲ್ಲಿ 'ಶ್ರದ್ಧಾಂಜಲಿ' ಎಂಬ ಜನ್ಮಶತಾಬ್ದ ಸಂಪುಟ ಪ್ರಕಟವಾಗಿವೆ. ಇವೆಲ್ಲದರ ಮೂಲದಲ್ಲಿ ನಿಲ್ಲುವ ಮಾತೆಂದರೆ ಗೋವಿಂದ ಪೈಯವರ ಬರಹಗಳೆಷ್ಟು ಹಿರಿದೋ ಅವರ ಬದುಕು ಅದಕ್ಕೂ ಹಿರಿದು ಅನ್ನುವಂಥದ್ದು. ಮಿಲ್ಟನ್ ಮಹಾಕವಿ ಹೇಳಿದಂತೆ, ತನ್ನ ಮುಂದಿನ ಜನಾಂಗ ಸಾಯಗೊಡದಿರುವಂಥ ಕಾವ್ಯವನ್ನು ಬರೆಯಬೇಕೆನ್ನುವವನು, ಮೊದಲು ತಾನೇ ಒಂದು ನಿಜವಾದ ಕಾವ್ಯವಾಗಿರಬೇಕು. ಅಂತೇ ಪುಟ್ಟಪ್ಪನವರು ಪೈಯವರನ್ನು 'ಅವರೆ ತಾವೊಂದು ಗೊಮ್ಮಟ ಸಮ ಮಹಾಕಾವ್ಯ'ವೆಂದಿರುವುದು.

ಜೀವನ ಚರಿತ್ರೆಯ ದೃಷ್ಟಿಯಿಂದ ಪೈ ಅವರ ಜೀವನದಲ್ಲಿ ಆಗಿಹೋದ ಉಲ್ಲೇಖಾರ್ಹ ಘಟನೆಗಳು ಕಡಿಮೆಯೆ. ಆದರೆ ಅವರು ಬದುಕಿದ ಬಾಳಿನ ಅರ್ಥವಂತಿಕೆ ಶ್ರೀಮಂತವಾದುದು. ಅದನ್ನು ಅನ್ವೇಷಿಸುವ ಪರಿಕ್ರಮದಲ್ಲಿ ಅವರ ಸಾಹಿತ್ಯ ಅವರ ಜೀವನಕ್ರಮದ ನೇರವಾದ ಸೃಷ್ಟಿ ಎನ್ನುವುದರ ಪ್ರತಿಪಾದನೆಯಾಗಿ ಒಂದು ವ್ಯಕ್ತಿ ಚಿತ್ರವನ್ನು ಮೂಡಿಸಬಹುದು.

ಗೋವಿಂದ ಪೈಯವರು ೨೩-೦೩-೧೮೮೩ರಂದು ಮಂಜೇಶ್ವರದಲ್ಲಿ ತಾಯಿಯ ತವರುಮನೆಯಲ್ಲಿ ಜನಿಸಿದ್ದು. ಹಿಂದೂ ಕಾಲಗಣನೆಯ ಪ್ರಕಾರ ಚಿತ್ರಭಾನು ಸಂವತ್ಸರ ಫಾಲ್ಗುಣ ಶುದ್ಧ ಹುಣ್ಣಿಮೆಯಾಗುತ್ತದೆ. ಅಂದು ಹೋಳಿ ಹುಣ್ಣಿಮೆಯೂ ಹೌದು. "ಬಾಲಕನು ಮುಂದೆ ವಿದ್ಯೆಯಲ್ಲಿ ಪಾಂಡಿತ್ಯ, ಧರ್ಮವಿಷಯಗಳಲ್ಲಿ ಹೃದಯ ವೈಶಾಲ್ಯ, ಸಾಮಾಜಿಕ ವಿಚಾರದಲ್ಲಿ ನೈಪುಣ್ಯಗಳನ್ನು ತೋರಿಸಿ ಕೀರ್ತಿವಂತನಾಗುವನೆಂದು ಜ್ಯೋತಿಷ್ಯರು ಪ್ರತಿಪಾದಿಸಿದ್ದರಂತೆ!" (ಬೈಂದೂರು ಆನಂದರಾವ್, ದೀವಿಗೆ ಪುಟ ೭೩)

ಮಂಗಳೂರಿನ ಸಾಹುಕಾರ ಬಾಪ್ಪೈ (ಬಾಬ ಪೈ) ಮನೆತನ ವಿವಿಧ ಕ್ಷೇತ್ರಗಳಲ್ಲಿ ಪ್ರಸಿದ್ಧರನ್ನು ಕೊಟ್ಟ ಮನೆತನವಾದರೂ ಸಾಹಿತ್ಯ ಕ್ಷೇತ್ರದಲ್ಲಿ ಗೋವಿಂದ ಪೈ ಒಬ್ಬರೇ ದೊಡ್ಡ ಹೆಸರು. ಆ ಮನೆತನದ ಸಾಹುಕಾರ ತಿಮ್ಮ ಪೈ (೧೮೫೨-೧೯೦೨) ಮತ್ತು ದೇವಕಿ ಬಾಯಿ {ದೇವಕಿಯಮ್ಮ} (೧೮೫೬-೧೯೦೯)ಯರ ಜ್ಯೇಷ್ಠ ಪುತ್ರನಾಗಿದ್ದ ಗೋವಿಂದ ಪೈಯವರು ಮೂವರು ಸಹೋದರಿಯರನ್ನು ಮೂವರು ಸಹೋದರರನ್ನು ಹೊಂದಿದ್ದರು.

ಗೌಡ ಸಾರಸ್ವತ ಬ್ರಾಹ್ಮಣರಾದ ಗೋವಿಂದ ಪೈಯವರ ಕುಲನಾಮವಾಗಿರುವ "ಪೈ"- ಸಂಸ್ಕೃತ 'ಪತಿ' ಶಬ್ದ ಪ್ರಾಕೃತರೂಪದಲ್ಲಿ 'ಪಇ'ಯಾಗಿ 'ಪೈ' ರೂಪ ಪಡೆದದ್ದು (ಗೌಡ ಸಾರಸ್ವತರಲ್ಲಿರುವ ಇನ್ನೊಂದು ಕುಲನಾಮ 'ಪ್ರಭು' ಎಂಬುದಕ್ಕೆ ಸಮಾನಾರ್ಥಕವಾಗಿ) ಎಂಬ ನಿರ್ವಚನದಂತೆ ವಿದ್ಯಾಪತಿ ಎನ್ನಬಹುದಾದ ಗೋವಿಂದ ಪೈಯವರಿಗೆ ಶೋಭಾಯಮಾನವಾದುದೇ.

ಕೊಂಕಣಿ ಪೈಯವರ ತಾಯ್ನುಡಿ. "ಕೊಂಕಣಿ ನನ್ನ ಹೆತ್ತತಾಯಿ, ಕನ್ನಡ ಸಾಕುತಾಯಿ" ಎಂದು ಆತ್ಮಕಥನದಲ್ಲಿ ಹೇಳಿಕೊಂಡದ್ದುಂಟು. "ಕೊಂಕಣಿಯಲ್ಲಿ ಹೆಸರಿಗೆ ತಕ್ಕಷ್ಟರ ಸಾಹಿತ್ಯವಿದ್ದರೆ ಸಾಕಿತ್ತು... ನಾನೂ ನನ್ನ ತಾಯ್ನುಡಿಯಲ್ಲಿ ತಾನೆ ರಚಿಸುತ್ತಿದ್ದೆನೇನೋ. ಆದರೆ ತಾಯಿಯ ಮೊಲೆಯಲ್ಲಿ ಹಾಲಿಲ್ಲ. ಕೊಂಕಣಿಯಲ್ಲಿ ಸಾಹಿತ್ಯವಿಲ್ಲ. ಆಕೆ ಆ ಬಗ್ಗೆ ನನ್ನನ್ನು ಕನ್ನಡದ ಮೊರೆಯಲ್ಲಿ ಹಾಕಿದಳು. ಈ ದಾಯಿಯಾದರೆ ಪಯಸ್ವಿನಿ... ತನ್ನ ಮೊಲೆಯನ್ನು ಆಕೆ ತಾಯಿಗೂ ಮಿಕ್ಕ ಅಳ್ತಿಯಿಂದ ನನಗೆ ಉಣಿಸಿದಳು" (ಕನ್ನಡದ ಮೊರೆ). ಕೊಂಕಣಿಯಲ್ಲಿ ಸಾಹಿತ್ಯ ರಚಿಸದೆ ಕನ್ನಡದ ಋಣಕ್ಕೆ ತಾನು ಬಿದ್ದುದನ್ನು ಪೈಯವರು ಮನಮುಟ್ಟುವ ಮಾತುಗಳಲ್ಲಿ ಹೇಳಿಕೊಂಡದ್ದುಂಟು.

ಕೊಂಕಣಿಯಲ್ಲಿ ಸಾಹಿತ್ಯ ರಚಿಸದೆ ಎಂದಿದ್ದರೂ, ಪೈಯವರು ಬರೆದಿರುವ ಐದು ಕೊಂಕಣಿ ಕವನಗಳು ಪ್ರಕಟವಾಗಿವೆ. ಅವುಗಳಲ್ಲಿ 'ವೀಸರಲೊ' (=ಮರೆತೆ) ಹೆಸರಿನ ಕವನ ಸಾನೆಟ್ ಆಗಿರುವುದು ಕೊಂಕಣಿಯಲ್ಲಿ ಮೊದಲ ಚತುರ್ದಶಪದಿಯಾಗಿ ಉಲ್ಲೇಖಾರ್ಹವಾಗುತ್ತದೆ.

ಹುಟ್ಟಿದ್ದು, ಬದುಕಿನ ಬಹುಭಾಗ ಕಳೆದ ನೆಲವಾದ ಮಂಜೇಶ್ವರ, ಮಂಗಳೂರು ಗೋವಿಂದ ಪೈಯವರ ಹೆಸರಿನೊಂದಿಗೆ ಸಮಾಸಗೊಂಡು ಸಾಹಿತ್ಯ ಲೋಕದಲ್ಲಿ ಮೆರೆಯುವಂತಾಯ್ತು. ರಾಜಕೀಯ ವಿಪರ್ಯಾಸದಿಂದ ಮಲೆಯಾಳವಾದ ನೆಲದಲ್ಲಿ ಕನ್ನಡದ ಕಾಯಕ ಮಾಡುತ್ತಾ ಮಂಜೇಶ್ವರ ಕರ್ನಾಟಕದ್ದೇ ಭಾಗವೆಂದು ನಂಬಿ ಪ್ರತಿಪಾದಿಸಿದರು.

ಬಾಲ್ಯದಲ್ಲಿ ಪೈಯವರಿಗೆ ಒದಗಿದ್ದ ಪರಿಸರ ಅವರ ವ್ಯಕ್ತಿತ್ವ ವಿಕಸನಕ್ಕೆ ಪ್ರೋತ್ಸಾಹಕವಾಗಿತ್ತೆನ್ನಬಹುದು. ಮನೆ, ಶಾಲೆ, ಸಮಾಜ ಅವರ ಅಧ್ಯಯನಶೀಲತೆಯನ್ನು ಉದ್ದೀಪಿಸುವಂಥದ್ದೇ ಆಗಿತ್ತು. ಕ್ರೈಸ್ತ ಮಿಷನರಿಗಳ ಶೈಕ್ಷಣಿಕ ಚಟುವಟಿಕೆಯೂ ಸೇರಿದಂತೆ, ಉತ್ತಮ ಮಟ್ಟದ ಶೈಕ್ಷಣಿಕ ವಾತಾವರಣವಿದ್ದ ಮಂಗಳೂರಿನಲ್ಲಿ ಬೌದ್ಧಿಕ ಮತ್ತು ಪ್ರತಿಭಾ ವಿಕಸನಕ್ಕೆ ಅನುಕೂಲ ಸನ್ನಿವೇಶವೇ ಇತ್ತು. ದಕ್ಷಿಣ ಕನ್ನಡದ ಜನರಿಗೆ ಮನೋರಂಜನೆ, ಪುರಾಣಪರಿಜ್ಞಾನ, ಶಿಕ್ಷಣ, ಸಂಸ್ಕೃತಿ ಪರಿಕಲ್ಪನೆ ಒದಗಿಸಿದ್ದ ಪ್ರದರ್ಶನಕಲೆಯಾದ ಯಕ್ಷಗಾನ ಬಾಲಕ ಪೈಯವರ ಮೇಲೆಯೂ ಪ್ರಭಾವ ಬೀರಿಯೇ ಇತ್ತು. ನಾಟಕಗಳು, ಅದರಲ್ಲೂ ಮರಾಟೀ ನಾಟಕಗಳ ಪ್ರದರ್ಶನ ಪೈಯವರ ಸಾಹಿತ್ಯರಚನೆಗೆ ಮೊದಮೊದಲಲ್ಲಿ ಪ್ರೇರಣೆಯಾಗಿ ಬಂದುದನ್ನು ಗಮನಿಸಬಹುದು.

ಪೈಯವರಲ್ಲಿದ್ದ ಕವಿಯನ್ನು ಸಾಹಿತ್ಯಪ್ರೀತಿಯನ್ನು ಬೆಳೆಸುವಲ್ಲಿ ಅರಳಿಸುವಲ್ಲಿ ನೀರೆರೆದ ಮಂದಿಗಳಲ್ಲಿ ಅವರ ಅಧ್ಯಾಪಕರುಗಳಾದ ಬಂಟ್ವಾಳ ವಾಮನ ಬಾಳಿಗ,

ಬಂಟ್ವಾಳ ಪುಂಡರೀಕ ಬಾಳಿಗ, ಆ ಮುಂದೆ ಪಂಜೆ ಮಂಗೇಶರಾಯರಂಥವರನ್ನು ಹೆಸರಿಸಬೇಕು. ಹೈಸ್ಕೂಲಿನಲ್ಲಿ ಸ್ನೇಹಿತರಾಗಿದ್ದ ಎಂ.ಎನ್. ಕಾಮತರ ಸಾಹಚರ್ಯವೂ ಗುಣಾತ್ಮಕ ಪರಿಣಾಮವುಳ್ಳುದೇ. ಹೈಸ್ಕೂಲಿನಲ್ಲಿ Angel ಎಂಬ ಕೈಬರಹದ ಮ್ಯಾಗಜ಼ೀನನ್ನು ತರುವುದರ ಮೂಲಕ ಈ ಸ್ನೇಹಿತ ಜೋಡಿ ತಮ್ಮ ರಚನೆಗಳ ಪ್ರಕಾಶನಕ್ಕೆ ತಾವೇ ಅನುವು ಮಾಡಿಕೊಂಡಿದ್ದುದು ಉಲ್ಲೇಖನೀಯವಾದುದೇ. ಪೈಯವರ ತಾಯಿಯ ಚಿಕ್ಕಪ್ಪನವರಾದ ನರಸಯ್ಯ ಶ್ಯಾನುಭಾಗರ ಪುಸ್ತಕಪ್ರೀತಿ ಮತ್ತು ಅವುಗಳನ್ನು ಕೊಂಡು ಸಂಗ್ರಹಿಸಿಡುವ ಪ್ರವೃತ್ತಿಯಿಂದ ಪೈಯವರ ಅಧ್ಯಯನಕ್ಕೆ ಸೌಕರ್ಯವೂ ಪ್ರೇರಣೆಯೂ ಒದಗಿಬಂದುದನ್ನು ಸ್ಮರಿಸಬೇಕಾಗಿದೆ. ಮನೆಯ ಇತರ ಹಿರಿಯರೂ, ಗೋವಿಂದ ಪೈಯವರು ಬಾಸೆಲ್ ಮಿಶನ್ ಬುಕ್ ಡಿಪೋದಿಂದ ಬೇಕಾದ ಪುಸ್ತಕಗಳನ್ನು ಪಡಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದದ್ದು ಪೈಯವರ ಸಾಹಿತ್ಯ ಶಕ್ತಿಯನ್ನು ಮೊಳಕೆಯಲ್ಲೇ ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನದ್ದು.

ಪೈಯವರ ಕೀರ್ತಿನಿರಪೇಕ್ಷೆ, ಪದವಿ ಪ್ರಶಸ್ತಿ ಸನ್ಮಾನಗಳನ್ನು ಒಲ್ಲದಿರುವುದು ಸ್ವಭಾವಗುಣವೇ– ಅವರ ಮೊದಲು ಪ್ರಕಟಿತ ಕವನ 'ಸುವಾಸಿನಿ' [ಸುವಾಸಿನಿ ಆಗಸ್ಟ್ ೧೯೦೦] ಸ್ಪರ್ಧೆಯಲ್ಲಿ ಬಹುಮಾನಿತವಾದದ್ದೆನ್ನುವುದು ಒಂದು ಅಪವಾದ. ಸ್ಪರ್ಧಿಸುವುದೂ ಪೈಯವರ ಜಾಯಮಾನವಲ್ಲ. ಬಿ.ಎ.ನಲ್ಲಿ ಇಂಗ್ಲಿಷ್ ಭಾಷಾ ವಿಭಾಗದಲ್ಲಿ ಗರಿಷ್ಠ ಅಂಕಗಳಿಗಾಗಿ ಲಭ್ಯವಿದ್ದ ಸುವರ್ಣ ಪದಕ (ರಿಪ್ಪನ್ ಸುವರ್ಣಪದಕ)ವನ್ನು ಅವರು ಸ್ವೀಕರಿಸಬೇಕಾಯಿತಾದರೂ ಜೀವಮಾನದ ಕೊನೆಯ ಭಾಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕೊಡಮಾಡಿದ ಗೌರವ ಡಿ.ಲಿಟ್. ಪದವಿಯನ್ನು ವಿನಯಪೂರ್ವಕ ನಿರಾಕರಿಸಿದ್ದು ಇನ್ನೊಂದು ಉದಾಹರಣೆ. ಈ ನಡುವೆ ಪೈಯವರು ರಾಷ್ಟ್ರಕವಿ ಉಪಾಧಿಗೆ (೧೯೪೯) ಮತ್ತು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ (೧೯೫೦) ಒಪ್ಪಿಕೊಂಡದ್ದು ಸ್ನೇಹದ ಋಣಕ್ಕೆ ಕಟ್ಟುಬಿದ್ದು ಎನ್ನುವುದು ಪ್ರತೀತವಿದೆ. ಆದರೆ ಕನ್ನಡ ಜನತೆಗೆ ಈ ಎರಡರಿಂದಲೂ ಅತೀವ ಧನ್ಯತೆ ಉಂಟಾಗಿತ್ತು. ಪ್ರಾತಿನಿಧಿಕವಾಗಿ ಇಬ್ಬರು ಮಹನೀಯರ ಸಂತಸದ ಉದ್ಗಾರಗಳನ್ನು ಇಲ್ಲಿ ಕೊಡಬಹುದು:

"ಉತ್ತಮ ಸಂಶೋಧಕರೆಂದು ಪ್ರಸಿದ್ಧರಾಗಿರುವ ಶ್ರೀ ಪೈಗಳವರು ಪಟ್ಟಕವಿಯೂ ಆಗಿರುವುದೂ ಸುದೈವವೇ ಸರಿ. ವಿದ್ವತ್ತಿನ ಪೀಠದ ಮೇಲೆ ರಸದ ಕಿರೀಟ ಪ್ರತಿಷ್ಠಿತವಾದರೆ ಅದೆಂತಹ ಮಂಗಳ ಘಟನೆ! ಅದು ನಮಗೆ ಹರ್ಷದಾಯಕ ಮಾತ್ರವಾದರೆ ಸಾಲದು; ಮಾರ್ಗದರ್ಶಕವೂ ಆಗಬೇಕು." –ಕುವೆಂಪು (ಕನ್ನಡ ನುಡಿ ಸಂಪುಟ ೧೩, ೧೯೫೦, ಪುಟ ೧೨೭)

"ಶ್ರೀಮಾನ್ ಗೋವಿಂದ ಪೈಗಳವರು ಅಧ್ಯಕ್ಷ ಪೀಠವನ್ನು ಹತ್ತುವಂತೆ ಒಡಂಬಡಿಸಿದವರು ಅಸಾಧ್ಯ ಸಾಧಕರು... ಪೈಗಳವರಂಥ ವಿದ್ವಾಂಸರೂ ಪ್ರತಿಭಾಶಾಲಿಗಳೂ ವಿಚಾರನಿಷ್ಠರೂ ವಿನಯ ಸೌಶೀಲ್ಯ ಸಂಪನ್ನರೂ ಸಮ್ಮೇಳನದ ಗದ್ದುಗೆಯನ್ನು ಏರದೆ ನಿಂತರೆ ಆ ಗದ್ದುಗೆಯ ಉನ್ನತಿ ನ್ಯಾಯವಾಗಿ ಯಾವ ಮಟ್ಟದ್ದೆನಿಸಬಹುದೋ ಆ ಮೇಲ್ಮಟ್ಟವನ್ನು ಅದು ಮುಟ್ಟಿದಂತಾಗುತ್ತಿರಲಿಲ್ಲ"– ಡಿವಿಜಿ (ಅದೇ... ಪುಟ ೧೨೪)

ಬಹುಭಾಷಾ ಜ್ಞಾನ

ಪೈಯವರ ಬಹುಭಾಷಾಜ್ಞಾನ ಅವರ ಸಾಧನೆಗಳಲ್ಲಿ ಒಂದು. ಮದ್ರಾಸಿನಲ್ಲಿ ಓದುತ್ತಿದ್ದಾಗ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಸಹಾಧ್ಯಾಯಿ ಆಗಿದ್ದರು. ರಾಧಾಕೃಷ್ಣನ್ ಕೂಡ ಬಹುಭಾಷಾವಿದರು. ಆ ದಿನಗಳಲ್ಲೆ ಪೈಯವರು ದೇಶೀಯ ವಿದೇಶೀಯ ಭಾಷೆಗಳ ಅಧ್ಯಯನಕ್ಕೆ ತೊಡಗಿದ್ದಿರಬಹುದು. ೧೯೧೧ರ ಸುಮಾರಿಗೆ ಬಂಗಾಳಿಯಿಂದ ಉರ್ದುವಿನಿಂದ ಕನ್ನಡಕ್ಕೆ ಕವನಗಳನ್ನು ಅನುವಾದಿಸಿದ್ದಲ್ಲದೆ, ಜರ್ಮನ್‌ನಿಂದ ಇಂಗ್ಲಿಷಿಗೆ ಭಾಷಾಂತರಿಸಿದ ಎರಡು ಕವನಗಳು ದೊರೆಯುತ್ತವೆ. ಸಾಹಿತ್ಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ವ್ಯಾಪ್ತಿ ಮತ್ತು ಖಚಿತತೆಯನ್ನು ತರುವುದಕ್ಕೆ ಬಹುಭಾಷಾಜ್ಞಾನ ನೆರವಾಗಿದೆ. ೧೯೨೦ರಿಂದೀಚೆ ನಾಲ್ಕೈದು ವರ್ಷ ಪರಭಾಷೆಗಳನ್ನು ಅಭ್ಯಾಸ ಮಾಡಿರುವ ದಾಖಲೆ ಸಿಗುತ್ತದೆ. ಹೀಗೆ ಕಲಿತ ಭಾಷೆಗಳು ನಿಷ್ಕೃಷ್ಟವಾಗಿ ಇಷ್ಟೇ ಎಂದು ಹೇಳಲಾಗದಿದ್ದರೂ ಅವರ ಗ್ರಂಥಭಂಡಾರದಲ್ಲಿದ್ದ ಪುಸ್ತಕಗಳು [೧೯೬೫ರಲ್ಲಿ ಉಡುಪಿ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿಗೆ ದಾನವಾಗಿ ಬಂದಿರುವ– ಈಗ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದಲ್ಲಿರುವ ಸಂಗ್ರಹದಲ್ಲಿ] ನಲವತ್ತಮೂರು ವಿವಿಧ ಭಾಷೆಗಳವು. ಪೈಯವರಿಗೆ ಕನಿಷ್ಠ ಇಪ್ಪತ್ತೆರಡು ಭಾಷೆಗಳಲ್ಲಾದರೂ ಬರೆದೋದುವ ಜ್ಞಾನವಿತ್ತೆಂದು ಹೇಳಲಾಗಿದೆ. ಪೈಯವರಿಗೆ ರಾಷ್ಟ್ರಕವಿ ಪದವಿಪ್ರದಾನ ಸಮಾರಂಭದ ಹೊತ್ತಿಗೆ ಪ್ರಕಟಿಸಿದ

Our Poets Laureate ಪುಸ್ತಿಕೆಯಲ್ಲಿ ಗೋವಿಂದ ಪೈಯವರ ಭಾಷಾಜ್ಞಾನದ ಕುರಿತು ಈ ಮಾತು ಬರುತ್ತದೆ: "Besides his poetic genius and high research acumen Sri Govinda Pai knows more than 22 languages both European and Indian" (Page ೨೧). ಪೈಯವರು ತಮ್ಮ ಸ್ವಂತ ಪ್ರತಿಯಲ್ಲಿ more than ೨೨ ಎನ್ನುವುದನ್ನು ಸುರುಳಿ ಸುತ್ತಿ ಹಾಕಿ some ಎಂದು ಬರೆದಿದ್ದಾರೆ. ರೂಢಿಸದೆ ಇರುವ ಭಾಷೆಗಳು ಕಾಲಕ್ರಮದಲ್ಲಿ ಮರೆತುಹೋಗುವುದು ಸಹಜವೆ.

ರಾಷ್ಟ್ರಕವಿ ಪದವಿಪ್ರದಾನ ಸಮಾರಂಭದಲ್ಲಿ ಪೈಯವರ ಬಹುಭಾಷಾಜ್ಞಾನ ಪ್ರಶಂಸೆಗೆ ಪಾತ್ರವಾದ ಸನ್ನಿವೇಶವಿತ್ತು. ಅಲ್ಲಿ ತಾನು ಓದಿದ ಕವನವನ್ನು ಇಂಗ್ಲಿಷ್ ಅನುವಾದದಲ್ಲೂ ಕೊಟ್ಟು ಎಲ್ಲರಿಗೆ ತಲುಪುವಂತೆ ಮಾಡಿದ್ದೊಂದು. ಮದರಾಸಿನ ಗವರ್ನರರೂ ಆಗಿದ್ದ ಭಾವನಗರ ಮಹಾರಾಜರು ಪ್ರತ್ಯೇಕ ಅಭಿನಂದನ ಭಾಷಣಗಳನ್ನಿತ್ತು ತಾನು ಇಂಗ್ಲಿಷಿನಲ್ಲಿತ್ತ ಅಭಿನಂದನ ವಾಕ್ಯವನ್ನು ಆಯಾ ಕವಿಪುಂಗವರಿಗೆ ಅವರವರ ಭಾಷೆಯಲ್ಲಿ- ತಮಿಳು, ಮಲೆಯಾಳ, ಸಂಸ್ಕೃತ, ಕನ್ನಡ- ಪರಿವರ್ತಿಸಿ ಹೇಳಲು ಯಾರಾದರೂ ಇದ್ದಾರೋ ಎನ್ನಲು ಗೋವಿಂದ ಪೈಗಳು ಎದ್ದುನಿಂತು ನಮಿಸಿ ತಾನು ಬಲ್ಲೆನೆಂದು ಬಿನ್ನಯಿಸಿ ಪ್ರಶಂಸಾಭಾಜನರಾದರಂತೆ. (ದೀವಿಗೆ, ಪುಟ ೭೩)

ಭಕ್ತಿ

ಭಕ್ತಿ ಪೈಯವರಿಗೆ ಬೆಳಕುದೋರುವ ಶಕ್ತಿಯಾಗಿತ್ತು. ದೈವತ್ವದ ಕಲ್ಪನೆ ಮನೆಯಲ್ಲಿನ ಆರಾಧ್ಯದೈವದ ಮೂಲಕವೇ ಅರಳಿಬಂದದ್ದು. ಬಾಪ್ಪೈ ಮನೆತನಕ್ಕೆ ಕಾಲಿಯಮರ್ದನ ಮುಖ್ಯದೇವರು. ಪೈಯವರು ಕವಿತ್ವ ರಚನೆಯ ಪ್ರಾರಂಭದಲ್ಲಿಯೇ 'ಕಾಲಿಯಮರ್ದನ' ಎಂಬ ಕವನ ಬರೆದದ್ದುಂಟು. ಕೃಷ್ಣನ ಬಗ್ಗೆ ಮುಂದೆಯೂ ಕೆಲವು ಕವನಗಳನ್ನು ಬರೆದರು.

ದೈವ ಭಕ್ತಿಯೇ ಆಗಲಿ, ಇಹವನ್ನು ಅಲ್ಲಗಳೆವ ರೂಪದ್ದಲ್ಲ. ಅನುರಕ್ತಿಯೂ ಅದರ ಶುದ್ಧರೂಪದಲ್ಲಿ ಭಕ್ತಿಯ ಮಟ್ಟದ್ದೇ ಎಂಬುದಾಗಿ ತಿಳಿದ ಪೈಯವರ ಭಕ್ತಿಯ ಸ್ವರೂಪ ವಿಶಿಷ್ಟ ರೀತಿಯದು. ಕೃಷ್ಣನಲ್ಲಿ ಭಕ್ತಿ, ಪತ್ನಿ ಕೃಷ್ಣೆಯಲ್ಲಿ ಅನುರಕ್ತಿಯನ್ನು ಏಕತ್ರ ಭಾವಿಸುವ ಶ್ರದ್ಧೆಯಲ್ಲಿ ಇಹಪರಗಳನ್ನು ಪರಿಭಾವಿಸುವ ನೋಟವೂ ಇದೆ. ಅವರ ಕಾವ್ಯ ಜೀವನಕ್ಕೂ ಇದೇ ಆದರ್ಶವಾಗಿದೆ. ಜಿ.ಪಿ. ರಾಜರತ್ನಂ ಅಂದಿರುವಂತೆ "ಈ ಕವಿಯ ಕಾವ್ಯ ಜೀವನಕ್ಕೆ ಒಂದೆ ಉಚ್ಛ್ವಾಸ, ಒಂದೆ ನಿಃಶ್ವಾಸ; ಇಹದಲ್ಲಿ ಅನುರಕ್ತಿ ಪರದಲ್ಲಿ ಭಕ್ತಿ" (ಕವಿ ಗೋವಿಂದಪೈ, ಪುಟ ೨೫). ಕೃಷ್ಣನಂತೆ ಯೇಸುವೂ ಭಗವಂತನ ಸ್ವರೂಪಿಯಾಗಿ ಕಾಣಲಾಗುವ ಮತಾತೀತವಾದ ದೃಷ್ಟಿ- ಇವರ ಭಾವುಕತೆಯ ನಿರಾಳ ಸ್ವರೂಪವನ್ನು ದ್ಯೋತಿಸುತ್ತದೆ. ಇದು ಸಹಿಷ್ಣುತೆಯ ಔದಾರ್ಯವಷ್ಟೇ ಅಲ್ಲ, ಪರಮಾತ್ಮ ಭೌತಿಕವಾದ ಎಲ್ಲ ಎಲ್ಲೆಕಟ್ಟನ್ನು ಮೀರಿ ಆವರಿಸಿರುವ ಶಕ್ತಿ ಎಂಬುದರಲ್ಲಿ ನಿವೇದಿತವಾದ ಹೃದಯವಿದೆ. ಗೊಲ್ಗೊಥಾವನ್ನು ತನ್ನ ತಮ್ಮಂದಿರ ಮುದ್ದು ಮಕ್ಕಳಿಗೆ ಅರ್ಪಿಸಿದ್ದಾಗ ಮಕ್ಕಳಿಂದ ಇಂಥವನ್ನೆ ಹಾರೈಸಿದ್ದರು.

ದೇವರೆಂಬುದೆ ಸತ್ಯ, ಸತ್ಯವೆಂಬುದೆ ದೇವ
ರೆಲ್ಲ ರಥಕೊಂದೆ ಪಥ- ತತ್ವವಿದೆ ಭಾವ್ಯಂ

ಇಂತಖಿಲ ಧರ್ಮಗಳೊಳೇಕ ದೇವನನೋವ
ಲೆಂದು ಮಕ್ಕಳಿರ ನಿಮಗಿತ್ತೆನೀ ಕಾವ್ಯಂ

ಆ ಶಕ್ತಿಯ ಪ್ರಕಟಣೆಯ ಯಾವ ಅವತಾರವಾದರೂ ಆರಾಧನೀಯ ಅನ್ನಿಸಬಹುದಾಗಿ ಪೈಯವರಿಗೆ ಕೃಷ್ಣ ಆರಾಧ್ಯನಾಗಿದ್ದಾನೆ.

ವ್ಯಕ್ತಿಗೌರವ ಮತ್ತು ರಾಷ್ಟ್ರಪ್ರೇಮ – ಇವುಗಳೂ ಭಕ್ತಿಯ ವಲಯದವೇ, ಪೈಯವರ ದೃಷ್ಟಿಯಲ್ಲಿ. ಮಾನವ ಸಾಮಾನ್ಯನಿಗೂ ಮಾನವೀಯ ನೆಲೆಯಲ್ಲಿ ಪೈ ಗೌರವವಿದೆ. ಆದರೂ ಮಹಾವ್ಯಕ್ತಿಗಳಲ್ಲಿ ಇದು ಭಕ್ತಿಯಾಗಿ ಪರ್ಯಾಪ್ತಗೊಳ್ಳುತ್ತದೆ– ಬುದ್ಧ ಗಾಂಧೀಜಿ ಮುಂತಾದವರಲ್ಲಿ. ಜನ್ಮಭೂಮಿಯ ಬಗೆಗೂ ಅದೇ ಭಕ್ತಿಗೌರವ. ಅದರ ಸ್ವರೂಪವೆಂದರೆ, ಉತ್ಕಟವಾದ ಕನ್ನಡತನದಲ್ಲಿ ಅರಳಿ, ಭಾರತೀಯತೆಯಲ್ಲಿ ಬೆರೆತು, ವಿಶ್ವಮಾನವತೆಯಲ್ಲಿ ಲೀನವಾಗತಕ್ಕಂಥದ್ದು. ಆದ್ದರಿಂದಲೇ ವಿಶ್ವದ ಯಾವುದೇ ಭಾಗದ ಜನರ ಸ್ವಾತಂತ್ರ್ಯಕ್ಕೆ ಅಭಿಮಾನಕ್ಕೆ ಕುಂದಕವಾದಾಗ ನೋವು ನರಳಿಕೆಗಳು ಕೇಳಿದಾಗ ಪೈಯವರ ಹೃದಯದಲ್ಲಿ ಸ್ಪಂದನವಾಗಿದೆ; ಕಾವ್ಯಾಭಿವ್ಯಕ್ತಿಯಲ್ಲಿ ಪ್ರಕಟಗೊಂಡಿದೆ. ಅವು ಭಾರತದ್ದೇ ಆದಾಗ ಪ್ರತಿಕ್ರಿಯೆ ತೀವ್ರತರದ್ದೂ ತುರ್ತಿನದ್ದೂ ಆಗಿದ್ದದ್ದು ಸಹಜವೇ. ಪೈಯವರ ಕಾವ್ಯ ಜೀವನದ ಅವಧಿ ದೇಶಭಕ್ತಿಯನ್ನು ಉಕ್ಕಿಸುವ ಸ್ವಾತಂತ್ರ್ಯದ ಹಂಬಲನ್ನು ಉದ್ದೀಪಿಸುವ ಕಾಲವಾಗಿದ್ದಂತೆ, ಸ್ವಾತಂತ್ರ್ಯೋತ್ತರದಲ್ಲಿ ಜನನಾಯಕರ ದೇಶಭಕ್ತಿಯನ್ನು ವಿಮರ್ಶಿಸುವ ಟೀಕಿಸುವ ದೆಸೆಯದೂ ಆಗಬೇಕಾಗುತ್ತದೆ. ಈ ವಸ್ತುವಿನ ಕವನಗಳ ಮೂಲದಲ್ಲಿ ಒಚ್ಚತವಾಗಿ ಸ್ರೋತಗೊಂಡಿದ್ದ ರಾಷ್ಟ್ರಪ್ರೇಮ ಮಾತ್ರ, ಪೈಯವರಲ್ಲಿನ ಅಪ್ಪಟ ದೇಶಭಕ್ತನನ್ನು ಕಾಣಿಸುತ್ತದೆ.

ಸಾವು– ನೋವು

ಗೋವಿಂದ ಪೈಯವರನ್ನು ಗಾಢವಾಗಿ ತಟ್ಟಿದ ಸೃಷ್ಟಿಯ ಗೂಢಗಳಲ್ಲಿ ಒಂದು, ಸಾವು. ಇದು ವೇದನೆ, ಸಂವೇದನೆ, ಚಿಂತನೆ ಆಧ್ಯಾತ್ಮಿಕತೆಗೆ ಪೈಯವರನ್ನು ಕೊಂಡೊಯ್ದ ಸಂಗತಿ ಕೂಡಾ. ಮಹಾಪುರುಷರೆಲ್ಲರಿಗೆ, ಈ ಜೀವಜಾಲದ ನೋವು ಸಾವುಗಳನ್ನು ತೇರುವ ಮಾರ್ಗೋಪಾಯಗಳನ್ನು ಶೋಧಿಸುವ ಬೋಧಿಸುವ ವಿಷಯವೇ ಆದ್ಯತೆಯದಾಗಿರುವ ಹಾಗೆ, ಸಂವೇದನಾಶೀಲ ಕವಿ, ಸಾಹಿತಿಗಳಿಗೂ ಭಾವಪ್ರಚೋದಕ ವಸ್ತುವಾಗಬಲ್ಲುದು. ಮೂಲತಃ ಪೈಯವರ ಹೃದಯ ಇತರರ ನೋವು ಸಾವಿನಲ್ಲಿ ಕರುಣೆ ಸ್ರವಿಸುವ ತುಡಿತವುಳ್ಳದ್ದು. ಅವರ ಹಾಡು ಹೆಚ್ಚಾಗಿ ನೋವಿನಿಂದ ಪ್ರೇರಿತವಾಗಿ, ನೋವನ್ನು ಮರೆಸುವ ಗುರಿಯುಳ್ಳದ್ದು. "ನಾನು ಹೆಚ್ಚಾಗಿ ಹಾಡುವುದು ನೊಂದಾಗ, ಅದೂ ಆ ನೋವನ್ನು ಮರೆಸುವಂತೆ ಮನ ಮೆಚ್ಚಿಸಲೇ ಹೊರತು, 'ಅಂತಃಸುಖಾಯ'ವೇ ವಿನಾ ಪರರನ್ನು ಮೆಚ್ಚಿಸಲಲ್ಲ."

(ಆತ್ಮಕಥನ ಕನ್ನಡದ ಮೊರೆ, ಪುಟ ೨೩). ಸಾವಿನ ನೆರಳಿನಲ್ಲಿ, ನೋವಿನ ಮಡಿಲಿನಲ್ಲಿ ರಚನೆಗೊಂಡ ಪೈ ಕವನಗಳು ಹೆಚ್ಚು ಹೃದ್ಯವಾಗಿರುವುದು ಈ ಹಿನ್ನೆಲೆಯಿಂದಲೇ. "Our sweetest songs are those that tell of saddest thoughts" ಎಂಬ ಷೆಲ್ಲಿಯ ಉವಾಚಕ್ಕೆ ಪೈಯವರ ಕೃತಿಗಳಲ್ಲಿ ನೆಲೆ ಸಿಗುತ್ತದೆ.

ವಿದ್ಯಾಭ್ಯಾಸದ ಅವಧಿಯಲ್ಲಿ ಸಂಭವಿಸಿದ ತಂದೆಯ ಸಾವು; ಆಮೇಲೆ ತಾಯಿಯ ನಿಧನ; ಹುಟ್ಟಿದ ಕೆಲವೇ ದಿನಗಳಲ್ಲಿ ಕಣ್ಮುಚ್ಚಿದ ತನ್ನದೇ ಹೆಣ್ಣುಮಗುವಿನ ಸಾವು ಸೂಕ್ಷ್ಮ ಹೃದಯದ ಪೈಯವರ ಮೇಲೆ ಮಾಡಿದ್ದಿರಬಹುದಾದ ಪರಿಣಾಮವನ್ನು ಕೇವಲ ಊಹಿಸಬಹುದು. ಸೈರಂಧ್ರಿ ನಾಟಕ ಅಪೂರ್ಣವಾಗಿ ಉಳಿಯುವುದಕ್ಕೆ ಕಾರಣವಾದ ಸಂಗತಿಯನ್ನು ಆತ್ಮಕಥನದಲ್ಲಿ ಹೇಳಿದ್ದನ್ನು ಹಿನ್ನೆಲೆಗೆ ಇಟ್ಟುಕೊಳ್ಳಬಹುದು. 'ಸೈರಂಧ್ರಿ' ಎಂಬ ನಾಟಕ ೫೧೦ ಪಂಕ್ತಿಗಳು ರಚನೆಯಾಗಿರುವಷ್ಟರಲ್ಲಿ, "ನಮಗೊಬ್ಬಳೇ ಇದ್ದ ನಮ್ಮ ಅಕ್ಕರದ ಸೋದರಸೊಸೆ ವೈಕುಂಠವಾಸಿಯಾದಳು. ತಲೆ ಬೆಪ್ಪಾಯಿತು, ಮನಸ್ಸು ಹೆಪ್ಪಾಯಿತು. ಅದನ್ನು ಅಲ್ಲಿಯೇ ಬಿಟ್ಟೆ, ಇನ್ನೂ ಅಲ್ಲಿಯೇ ಇದೆ." (ಕನ್ನಡದ ಮೊರೆ, ಪುಟ ೧೭). ಸಾವಿನ ನೇತ್ಯಾತ್ಮಕ ಪರಿಣಾಮದ ಒಂದು ಮುಖ ಇದರಿಂದ ಪರಿಚಯವಾಗುತ್ತದೆ. ಆದರೆ ಇಂಥವುಗಳಿಂದ ಸಾವೆಂಬ ಸತ್ಯದ ಕಡೆಗೆ ಕಣ್ತೆರೆಯುವುದು ಸಾಧ್ಯವಾಗುತ್ತದೆ. ೧೯೨೭ರಲ್ಲಿ, ಕೈ ಹಿಡಿದ ಪತ್ನಿ ಕೃಷ್ಣಾಬಾಯಿಯೂ ದೈವಾಧೀನಳಾದಾಗ ಚಿಂತೆ ಚಿಂತನೆಗೆ ದೈವಚಿಂತನೆಗೆ ಎಡೆಮಾಡಿಕೊಡುವಷ್ಟು ಸಾವಿನ ಪರಿಣಾಮವಾಗುತ್ತದೆ. ಬದುಕಿನೊಂದಿಗೇ ಹರಿದು ಬರುವ ಈ ಮರಣವೆಂಬ ಸತ್ಯವನ್ನು ಗ್ರಹಿಸಲು ಬೇಕಾದ ಮನೋಧರ್ಮವನ್ನು ರೂಪಿಸುವ ಮತ್ತು ಸಾವಿನಾಚೆಗೂ ಚಾಚಬಹುದಾದ ಬಾಳುವೆಯ ಪರಿವಲಯವನ್ನು ಶೋಧಿಸುವ ಕೃತಿಗಳು ಈ ಹಿನ್ನೆಲೆಯಲ್ಲೇ ಮೂಡಿದುವು. ತ್ಯಾಗ ಪ್ರೇಮಗಳೇ ಸ್ಫೂರ್ತಿಯಾಗಿಯೂ ಪುನರುತ್ಥಾನದಲ್ಲೇ ಗತಿಯುಳ್ಳ ಹಿಂಸೆ ಕ್ರೌರ್ಯಗಳಲ್ಲಿ ಪ್ರಕಟವಾದ ಯೇಸುವಿನ ಮರಣವಾಗಲಿ, ದೀಪ ಆರುವ ಪ್ರಕ್ರಿಯೆಯಷ್ಟೇ ಸರಳವಾಗಿ, ಆದರೆ ಸಾವನ್ನು ಮೊದಲೇ ಪ್ರತೀಕ್ಷಿಸಿ, ಅದಕ್ಕೆ ಸಿದ್ಧವಾಗಿ ತನ್ನನ್ನು ಒಪ್ಪಿಸಿಕೊಳ್ಳುವ ಧೀರಗತಿಯ ಬುದ್ಧನ ನಿರ್ವಾಣವಾಗಲಿ, ಸಾವಿನ ಸಂಭವದಲ್ಲಿ ಬದುಕನ್ನು ನೋಡಲು, ತಿಳಿಯಲು ದೃಷ್ಟಿಕೊಡುವ ರೀತಿಯವು. ಪೈಯವರ ಹೆಚ್ಚಿನೆಲ್ಲ ಕೃತಿಗಳಲ್ಲಿ ಸಾವಿನ ಛಾಯೆ ಆವರಿಸಿರುವುದಲ್ಲದೆ, ಖಂಡಕಾವ್ಯಗಳೆಲ್ಲವೂ– ಮಹಾತ್ಮರ ಮರಣವನ್ನೇ ವಸ್ತುವಾಗಿ ಉಳ್ಳವು ಎಂಬುದನ್ನು ಗಮನಿಸಬೇಕು. ಸಾವನ್ನು ವಿಷಾದದಿಂದ ನೋಡುವುದಷ್ಟೆ ಆಗಿರುವ ಶೋಕಗೀತೆಗಳ ಸಾಮಾನ್ಯ ಕಾವ್ಯಸ್ಥಿತಿಗಿಂತ ಭಿನ್ನವಾಗಿ ಮರಣದಲ್ಲಿ ಭವ್ಯತೆಯುಳ್ಳ ಸಾವಿನ ವರ್ಣನೆಯಿಂದ ಉತ್ಕಟ ಕಾವ್ಯಾನಂದವನ್ನು ಲೋಕೋತ್ತರವಾದ ಸತ್ಯವನ್ನು

ಅವಿಷ್ಕರಿಸಲಾದ ಕೃತಿಗಳಲ್ಲಿ– ಪೈಯವರ ಬದುಕು ಕಾವ್ಯಗಳ ದೃಷ್ಟಿ–ಸೃಷ್ಟಿಗಳ ವೈಶಿಷ್ಟ್ಯವನ್ನೇ ಕಾಣಬಹುದು.

ಕೊನೆಯದಾಗಿ ಕಾಣುವ ಮರಣದ ತುದಿಯಲ್ಲೆ ಮತ್ತೊಂದರ ಆವಿರ್ಭಾವವೂ ಇರುವುದನ್ನು ಸೂಚಿಸುವ ಕಾವ್ಯವಿವರ, ಪುನರ್ಜನ್ಮ, ಅವತಾರ ಕಲ್ಪನೆಗಳ ನಂಬಿಕೆಯ ಬೆಳಕಿನಲ್ಲೆ ಹಾದು ಬಂದುವೆನ್ನಬಹುದು.

ವೈಶಾಖಿಯನ್ನು ತನ್ನ ತಮ್ಮ ನಾರಾಯಣ ಪೈಗಳ ವೈಕುಂಠವಾಸಿಗಳಾಗಿದ್ದ ಮುದ್ದು ಮಗಳಂದಿರ ನೆನಪಿಗೆ ಅರ್ಪಿಸಿ ಬರೆದ ಪದ್ಯವೊಂದರಲ್ಲಿ ಮರಣೋತ್ತರ ನೆಲೆಯಲ್ಲಿ ನಂಬಿಕೆ ಇದೆ–

ಇರುಳು ಹಗಲಿಸುವಂದು, ಹಗಲಿರುಳಿಪಂದು
ಕಾವೆ ನಾನನುದಿನಂ ಬಹಿರಿ ನೀವೆಂದು!
ಈಗ ನೀವಿರುವಲ್ಲಿ ಕೊಳುವಿರೇನಮ್ಮ
ಈ ಕಾಣಿಕೆಯ? ನೆನವಿರೇನಲ್ಲಿ ನಮ್ಮ?

ವಯಸ್ಸು ಮೀರುತ್ತ ದೇಹ ಅಸೌಖ್ಯ ಅಶಕ್ತಿಗಳಿಗೆ ಒಳಗಾದಂತೆಲ್ಲ ಪೈಯವರಿಗೆ ತಾನು ಮರಣಕ್ಕೆ ಸಮೀಪಿಸುವ ಭಾವ ಉಂಟಾಗುತ್ತಿದ್ದುದೇ ಅಲ್ಲ, ಅದನ್ನು ಸ್ಫೂರ್ತಿಯಿಂದ ಸ್ವೀಕರಿಸುವ ವ್ಯಕ್ತಪಡಿಸುವ ಸ್ಥೈರ್ಯವಿತ್ತು. ಕೊನೆಕೊನೆಯಲ್ಲಿ ತನಗೆ ಆತ್ಮೀಯರಾದವರಿಗೆ ಬರೆಯುವಾಗಲೆಲ್ಲ ಆ ಬಗ್ಗೆ ಮಾತುಗಳು ಬರುತ್ತಿದ್ದುವು. ಪ್ರೊ. ಕು.ಶಿ. ಹರಿದಾಸ ಭಟ್ಟರಿಗೆ ಬರೆದ ಪತ್ರಗಳಲ್ಲಿ, "...೭೫ ವರ್ಷಗಳು ಮುಗಿಯುತ್ತಿವೆ. ಸಾಯಲಿಕ್ಕೆ ಹತ್ತಿರ ಹತ್ತಿರವಾಯಿತು." "ನನ್ನ ಆರೋಗ್ಯವೀಗ 'ಗಾಳಿಗೊಡ್ಡಿದ ಸೊಡರಿನಂತೆ' ಅತ್ತಿತ್ತ ಅಲುಗಾಡುತ್ತಿದೆ. ಇವತ್ತು ನಾನು ಹುಟ್ಟಿದ ದಿನ. ಇಂದು ೭೭ನೆಯ ವರ್ಷವಾರಂಭಿಸುತ್ತದೆ. ಇನ್ನೆಷ್ಟು ಕಾಲ ಬದುಕಬೇಕು ಸ್ವಾಮಿ?" ೧೯೬೨ರಲ್ಲಿ ಶಿವರಾಮ ಕಾರಂತರಿಗೆ ಬರೆದ ಪತ್ರದಲ್ಲಿ ಹೀಗಿದೆ: "ನನಗೀಗ ೮೦ನೆಯ ವರ್ಷ ನಡೆಯುತ್ತಿದೆ. ಈಗಣ ಶಕ್ತಿ ಪ್ರಾಯಕ್ಕೆ ಅನುಗುಣವಾಗಿ ಇದೆಯಾದರೂ ಈ ಏದಿಕೆ ಮತ್ತು ಬಲಗೈಯ ನೋವು ಮುಂತಾದ ಹಲವು ಬಗೆಯ ತೊಂದರೆಗಳಿವೆ. ಅಂದರೆ ಜೀವಕ್ಕೆ ಹೊರಗೆ ಹೋಗುವರೆ ಒಂದೊಂದೇ ಬಾಗಿಲು ತೆರೆಯುತ್ತಲಿದೆ." ತನ್ನ ೮೦ನೆಯ ವಯಸ್ಸಿನಲ್ಲೆ, ೬-೯-೧೯೬೩ ರಂದು ವೈಕುಂಠವಾಸಿಗಳಾದ ಮಂಜೇಶ್ವರ ಗೋವಿಂದ ಪೈಯವರು ಬರೆದಿರುವ ಮೇಲಿನ ಪತ್ರಭಾಗಗಳನ್ನು ಓದಿದಾಗ, 'ವೈಶಾಖಿ'ಯಲ್ಲಿ ಬುದ್ಧ ಆನಂದನಿಗೆ ಹೇಳುವ ಮಾತುಗಳು ನೆನಪಿಗೆ ಬರುತ್ತವೆ:

...ಪ್ರಯತ್ನ, ಶ್ರೀ ಜಿ.ಪಿ. ರಾಜರತ್ನಂ ಅವರು ಹೀಗೆ ಗುರುತಿಸುತ್ತಾರೆ: ...ರ್ಣವರ್, ಪದ್ಯ ಬಂಧ ಅಂತ್ಯಪ್ರಾಸಗಳು, ಪ್ರಾಸ ತ್ಯಾಗ, ಛಂದಸ್ಸಿನ ...ದ ಬಂಧ ಪ್ರಾಚೀನ ಶೈಲಿಗಳು, ಒಂದು ಬಗೆಯ ಹೊಸ ಶೈಲಿ. ...ಧಾರವಾಹಿ ಬರವಣಿಗೆ– ಬಂಧ ಸಾಂಕೇತಿಕ ಒಕ್ಕೂಟ, ಹೊಸತನ ...ಮ. ಹೊಸತಾಗಿ ಶಬ್ದಗಳ ಅರ್ಥ, ಸ್ವತಂತ್ರ ಶಬ್ದಗಳು, ಹೊಸ ಹೊಸ ಭಾವ. ...ಹೊಸ ಛಂದಸ್ಸು, ಹೊಸ ಹೊಸ ಪದಪ್ರಯೋಗ, ಹೊಸ ಹೊಸ ಶಬ್ದ, ...ದನ್ನು, ಮತ್ತು ಬರೆದ ರೀತಿಗೆ. ಇಂಗ್ಲೀಷಿನ Sonnet ರೀತಿ ಕನ್ನಡದಲ್ಲಿ ...ನ್ನು ಚತುರ್ದಶ ಪದ್ಯ ಬರೆದ ಹೊಸತನ, ಹರಿಯುವ ಛಂದದಿಂದ ಪ್ರಯೋಗಗಳು, ...ಹೊಸ ಶೈಲಿ ಹೊಸ ಮಾದರಿಯ ಪದ್ಯದ ಪಂಕ್ತಿಗಳಿಗೆ ಅಳ್ಳದೇ ...ಪ್ರಯೋಗಗಳನ್ನು ಒದಗಿಸಿದ್ದು ಈ ರೀತಿ ರಾಷ್ಟ್ರೀಯತೆ ಸಾರುವ ಈ ಹೊಸ ...ಪದ್ಯ– ಹೀಗೆ ಅನೇಕ ರೀತಿಯಿಂದ ಈ 'ಗಿಳಿವಿಂಡು' ವಿಶೇಷವಾಗಿ ಬಂತು. ...ದು 'ಹೊಸತಿ'ಯಿಂದ ಬಂತು" (ಪೈ ಗೌರವ ಗ್ರಂಥ, ೧೯೪೭, ಪುಟ ೪–೫). ...ಯಿಂದ ಕವನ ಸಂಕಲನ ಹೊಸಗನ್ನಡ ಕಾವ್ಯ ಸಂದರ್ಭದಲ್ಲಿ ಐತಿಹಾಸಿಕ ...ಪಡೆದುಕೊಳ್ಳುವುದು ಹೀಗೆ ಪ್ರಸಿದ್ಧವಾಗಿದೆ.

...ಪೈಯವರ ಸಾಹಿತ್ಯವನ್ನು ಸಮಗ್ರವಾಗಿ ಅವಲೋಕಿಸುವ ಮುಖ್ಯ ಪ್ರೇರಕ ...ಗಳನ್ನು ಈ ಕವನ ಸಂಕಲನದಲ್ಲಿ ಗುರುತಿಸಬಹುದು. 'ಕಾವ್ಯಕ್ಕೆ ಮಾರಿಯಿಲ್ಲ, ...ಕ್ಕೆ' ಎಂಬ ನಂಬಿಕೆಯಲ್ಲಿ ಕಾವ್ಯವನ್ನು ಪರಮಗೊಳಿಸಿದರೂ ಅವರ ಕವನಗಳು ...ವನ ಅನುಭವದಲ್ಲಿಯೇ ಮೂಡಿ ಬಂದಿರುವವುಗಳು. ಎಲ್ಲ ಜೀವನದ ...ಗಳನ್ನೂ ಅಭಿವ್ಯಕ್ತಿಸುವ ಜೀವನಾನುಭವ. ಸರ್ವಸಮಾನತಾಭಾವ. ...ಸರ್ವಧರ್ಮಸಮಭಾವ ಮತ್ತು ಭಕ್ತಿಯು ಬೆರೆತ ಗತಿಗಳಲ್ಲಿ ದೇವಭಕ್ತಿ, ದೇಶಭಕ್ತಿ, ...ರಾಷ್ಟ್ರಭಕ್ತಿ ಪೈಯವರ ಹಲವಾರು ಕವನಗಳಲ್ಲಿ ವ್ಯಕ್ತವಾದ ಮುಖ್ಯ ಪ್ರವೃತ್ತಿಗಳು. ...ನ್ನ ಸ್ವಾಭಾವಿಕ ಒಲವು ಗುರಿಯನ್ನು, ಕಾವ್ಯದ ಬಗ್ಗೆ ಪೈಯವರು ...ವ್ಯಕ್ತಪಡಿಸಿದ್ದರು. "ಅನಂತವಾಗಿರುವ ಆತನ (ವಿಧಾತನ) ಜಗದ್ಭವನದಲ್ಲಿ ...ಸಂಚರಿಸುವುದೇ ನನ್ನ ಸಾಧನೆ. ಕವಿತಾಮಾರ್ಗದಲ್ಲಿ ಅದೇ ನನ್ನ ಪ್ರಣಾಳಿಕೆ." ...ಕ್ಷತ್ರನ ಕನ್ನಡದ ಮೊರೆ, ಪುಟ ೨೨)

...ಕನ್ನಡ ಕಾವ್ಯದಲ್ಲಿ ನವೋದಯರಾಗುವ ಮುನ್ನ ಪೈಯವರು ತಮ್ಮ ದಾರಿಯನ್ನು ...ಕಂಡುಕೊಳ್ಳುವುದರಲ್ಲಿ ಒಂದು ಮುಖ್ಯ ಅಂತ ಪ್ರಾಸ ತ್ಯಜಿಸಿ ಬರೆದ ಮಾರ್ಗವನ್ನು ...ರ್ವಿಸ್ಸಿದರಲ್ಲಿದೆಂದು ತಿಳಿಯಬಹುದು. ೧೯೦೦ರಷ್ಟು ಹಿಂದೆಯೇ (ಆದಿಪ್ರಾಸ ...ತ್ಯಜಿಸಿಯು ಬಗ್ಗೆ ಅವರಿಗೆ 'ಹದೇ ಹದೇ ಸ್ವಾತಂತ್ರ್ಯತೆ'. ಅದು ನವೋದಯದಾಗಿ ...ರು ೧೯೧೧ರವರೆಗೆ ಕಾದುಕೊಂಡಿದ್ದು ದೇಶದ ಸ್ವಾತಂತ್ರ್ಯ, ಚಳವಳಿಯಲ್ಲಿ ...ಸಾಗುವ ಅಪೇಕ್ಷೆಯಿಂದ ಗುಜರಾತಿಗೆ ಹೋಗಿದ್ದ ಸಂದರ್ಭ– ಬರೆದಿರುವ

ನೌಸಾರಿಯಲ್ಲಿ ಇದ್ದಾಗ ೧೯೧೧ರ ಏಪ್ರಿಲ್‌ನಲ್ಲಿ ಒಂದು ಮುಂಜಾನೆ, 'ಪ್ರಾಸವನ್ನು ತ್ಯಜಿಸಿಬಿಡುವುದೆ ನಿಶ್ಚಯಂ' ಎಂದು ತೀರ್ಮಾನಿಸಿ, ಮೊದಲಿಗೆ ಠಾಕೂರರ 'ಭಾರತಲಕ್ಷ್ಮಿ' ಪದ್ಯವನ್ನು ಪ್ರಾಸರಹಿತವಾಗಿ ಅನುವಾದಿಸಿದರು. ಠಾಕೂರರದೆ 'ವಿದಾಯ' ಕವನ, ಇಕ್ಬಾಲರ 'ಹಿಂದೂಸ್ತಾನ್ ಹಮಾರಾ' ಅನಂತರದವು. ಇವು ಮಂಗಳೂರಿನ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟವಾದುವು. ಅದೇ 'ಸಪ್ತಂಬರ' ತಿಂಗಳಲ್ಲಿ 'ಹೊಲೆಯನು ಯಾರು?' ಎಂಬ ಸ್ವತಂತ್ರ ಕವನ ಪ್ರಾಸರಹಿತವಾಗಿ ಸ್ವದೇಶಾಭಿಮಾನಿಯಲ್ಲಿ ಪ್ರಕಟವಾದಾಗಲೇ, ಪ್ರಾಸದ ಕುರಿತಿರುವ 'ಛಾಂದಸ ಮಹಾಪ್ರಶ್ನೆ' ಬಗ್ಗೆ ಚರ್ಚೆ ನಡೆಯಿತು. ಪ್ರಾಸ ಬಿಟ್ಟೇ ಹೋಯಿತು. "ಕಾಲಕ್ಕೆ ತಕ್ಕಂತೆ ರಚನೆಯನ್ನೇ ಅಲ್ಲ, ಛಂದಸ್ಸನ್ನು ವ್ಯಾಕರಣವನ್ನು ಕೂಡ ತನಗೆ ಬೇಕಾದಂತೆ ಮಾರ್ಪಡಿಸಿಯೂ ನೇರ್ಪಡಿಸಿಯೂಕೊಳ್ಳಲಿಕ್ಕೆ ಕವಿಗೆ ಅಧಿಕಾರವಿದೆ" (ಆತ್ಮಕಥನ) ಎಂಬ ಆತ್ಮಪ್ರತ್ಯಯ ಉಲ್ಲೇಖಾರ್ಹವಾದುದು. ಅಂತೆಯೇ ಅವರ ಕ್ರಾಂತಿಕಾರಿತನ, ಪ್ರಯೋಗಶೀಲತೆ.

ಚತುರ್ದಶಪದಿ (ಸಾನೆಟ್) ಯನ್ನು ಕನ್ನಡದಲ್ಲಿ ಮೊದಲು ರೂಢಿಸಿದವರೂ ಪೈಯವರೇ; ೧೯೧೬ರಲ್ಲಿ ರಚಿತವಾದ 'ಕವಿತಾವತಾರ' (ಎಲೆಲೆ ದುರುಳ ನಿಷಾದ) ಎಂಬ ಚತುರ್ದಶಪದಿ ಕನ್ನಡದಲ್ಲಿ ಮೊದಲನೆಯದು. ಪೈಯವರಿಗೆ ಅದರ ಬಗ್ಗೆ ಎಷ್ಟು ಮೆಚ್ಚುಗೆಯೆಂದರೆ, ಅವರ ಒಟ್ಟು ೧೭೫ ಕವನಗಳಲ್ಲಿ ೬೭ ಚತುರ್ದಶಪದಿಗಳೇ ಆಗಿವೆ. ಅವುಗಳಲ್ಲಿ ಅಂತ್ಯಪ್ರಾಸ ವಿನ್ಯಾಸದ ನೆಲೆಯಲ್ಲಿ ೩೫ ಬಗೆಗಳನ್ನು ಗುರುತಿಸಬಹುದು.

'ಹಳೆಯ ನಾಣ್ಯ' ಗೋವಿಂದ ಪೈಯವರು ಬರೆದ ಕನ್ನಡದ ಮೊದಲ ಪ್ರಗಾಥ (Ode). ಇಂಗ್ಲಿಷಿನ ಸಾನೆಟ್‌ನ್ನು ಕನ್ನಡದಲ್ಲಿ ರೂಢಿಸಿದ ಸರಿಸುಮಾರಿಗೆ ಪೈಯವರು ಪ್ರಗಾಥವನ್ನು ರಚಿಸಿದ್ದಾರೆ.

'ಉಮರ್ ಖಯ್ಯಾಮ್' ಎಂದೇ ಹೆಸರು ಕೊಟ್ಟು ಗೋವಿಂದ ಪೈಯವರು ಮಾಡಿರುವ ಉಮರನ ರುಬಾಯಿಯಾತ್ ಅನುವಾದ 'ಗಿಳಿವಿಂಡು' ಕವನ ಸಂಕಲನದಲ್ಲಿ ಸೇರಿದೆ. ಗೋವಿಂದ ಪೈಯವರ ಕೆಲವು ಪ್ರಥಮಗಳಲ್ಲಿ ಉಮರ್ ಖಯ್ಯಾಮ್‌ನ ರುಬಾಯಿಗಳನ್ನು ಕನ್ನಡಕ್ಕೆ ಪರಿಚಯ ಮಾಡಿಸಿರುವುದೂ (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಜುಲೈ ೧೯೨೮) ಸೇರುತ್ತದೆ. ಪೈಯವರು ಫಿಟ್ಸ್‌ಜೆರಲ್ಡ್‌ನ ಪ್ರಥಮಾವೃತ್ತಿಗೆ ತೀರ ನಿಷ್ಠರಾಗಿ ಅನುವಾದಿಸಿ ಕೊಟ್ಟಿದ್ದಾರೆ. ಮತ್ತು ತಾನು ಅನುವಾದಿಸಿ ಕೊಟ್ಟಿರುವಷ್ಟೇ ಪರ್ಷಿಯನ್ ಕವನದ ಕಲ್ಪನೆ ಕೊಡಲು ಸಾಕೆಂಬುದು ಅವರ ಅಭಿಪ್ರಾಯವಾಗಿತ್ತು. ಅವರು ಪರ್ಷಿಯನ್ ಮೂಲವನ್ನು ಪರಿಶೀಲಿಸಿದ್ದಕ್ಕೆ ಉಲ್ಲೇಖವಿಲ್ಲ. ಆದರೆ ಪರ್ಷಿಯನ್ ರುಬಾಯಿ ಛಂದಸ್ಸಿನ ಸ್ವರೂಪವನ್ನು

ಪೈಯವರು ಕನ್ನಡಕ್ಕೆ ಯಥಾವತ್ತಾಗಿ ತಂದಿದ್ದಾರೆ. ಉಮರನ ಲೋಕಪ್ರಿಯವಾದ ಪದ್ಯವೊಂದರ ಅನುವಾದ–

ಇಲ್ಲಿ ರೆಂಬೆಯ ನೆಳಲಲಿನಿರೊಟ್ಟಿಯೊಂದು
ಕಳ್ಳ ಬಿಂದಿಗೆಯೊಂದು, ಸವಿಗಬ್ಬವೊಂದು;
ನೀನೆನ್ನ ಬಳಿಯೆ ಕಾಡಲಿ ಹಾಡುವಂದು–
ಕಾಡೆ ಗಡ ಸಗ್ಗದಿಂದೆನಗೆ ಲೇಸಂದು! (ಗಿಳಿವಿಂಡು, ಪುಟ ೧೧೭)

ರುಬಾಯಿ ಛಂದಸ್ಸಿನಲ್ಲೆ ಫಿಟ್ಸ್‌ಜೆರಲ್ಡ್‌ನ ಚೌಪದಿಗಳಿಗೆ ಕನ್ನಡ ಕಟ್ಟಿದ, ಭಾಷಾಂತರದಲ್ಲಿ ಪದ್ಯದ ಆಶಯ, ಧ್ವನಿ ಸೋರಿಹೋಗದಂತೆ ಭರಿಸಿದ ಭಾಷೆಯ ಪ್ರಪತ್ತಿ, ಧಾರಣತ್ವ ಗುಣಗಳಿಂದ ಪೈಯವರ ಉಮರ್ ಖಯ್ಯಾಮ್ ಅನುವಾದ ಕನ್ನಡದಲ್ಲಿ ಅನಂತರ ಬಂದಿರುವ ಉಮರ ಅನುವಾದಗಳ ನಡುವೆ ಗಮನಾರ್ಹ ಕೃತಿಯಾಗಿ ಉಳಿಯುತ್ತದೆ.

ವಿಶಿಷ್ಟ ವಸ್ತು ಮತ್ತು ವಿನ್ಯಾಸ ಹೊಂದಿರುವ 'ನಂದಾದೀಪ' ಕವನ ಮಾಲಿಕೆ ಮೂಡಿ ಬಂದ ಹಿನ್ನೆಲೆ ಪೈಯವರ ಆತ್ಮಚರಿತ್ರೆಯ ಒಂದು ಘಟ್ಟದಲ್ಲಿದೆ. ೧೯೨೭ರ ಸಪ್ತಂಬರದಲ್ಲಿ ಪೈಯವರ ಧರ್ಮಪತ್ನಿ ತನ್ನ ೪೫ನೆಯ ವಯಸ್ಸಿನಲ್ಲೆ ಅಗಲಿ ಹೋದಾಗ ಮಾನವಸಹಜವಾದ ಶೋಕ ಹೃದಯವನ್ನಾವರಿಸಿ, ಶೋಕವೇ ಸ್ಥಾಯಿಯಾದ ವಿರಹವೇದನೆಯ ಕವಿತೆಗಳು ಮೂಡಿಬಂದದ್ದು ಮೊದಲ ಹಂತ. ಅಂಥವು ಕೆಲವು ಗಿಳಿವಿಂಡುನಲ್ಲಿವೆ. ಆರ್ತವಾದ ಶೋಕದಿಂದ ಪೈಯವರು ಚೇತರಿಸಿಕೊಂಡಾಗ ಅವರು ಏರಿನಿಂತ ಹಂತದ ಪ್ರಕಟಣೆಗಳೇ ನಂದಾದೀಪ ಕವನಗಳು. ಪತ್ನಿಯಲ್ಲಿದ್ದ ಅನುರಕ್ತಿ ಪರಮಾತ್ಮನ ಭಕ್ತಿಯಲ್ಲಿ ಮಾಗಿದ ಹೃದಯದ ತುಡಿತಗಳೇ ಈ ಕವನಗಳಲ್ಲಿ ಶಬ್ದರೂಪ ಪಡೆದಿವೆ. ಇವುಗಳೆಲ್ಲ ಒಂದು ವಲಯದೊಳಗೆ ಅವಿರ್ಭವಿಸಿದ ಭಾವಗಳು. 'ಸಹಧರ್ಮಿಣಿಯ ನೆನವಿಗೆ ಬಾಷ್ಪಾಂಜಲಿ' 'ಅಗಲಿಸಿದ ವಿಧಾತನಿಗೆ ಶ್ರದ್ಧಾಂಜಲಿ' ಎಂಬ ಶ್ರದ್ಧೆಯ ಎಲ್ಲೆಕಟ್ಟಿನೊಳಗೆ ದೇವರ ಬಗೆಗಿನ ಚಿಂತನೆಯ ಲಹರಿ ಕಾವ್ಯದ ಓಘ ಪಡೆದುಕೊಂಡಿದೆ. ಆದ್ದರಿಂದ ಇವು ಅನುಭಾವಗೀತೆಗಳಾದ ಭಾವಗೀತಗಳೆಂದು ಪರಿಗಣಿತವಾಗಿವೆ. ಕವಿಗಳೇ ಹೇಳಿಕೊಂಡಿರುವ ಸ್ಪಷ್ಟನೆ ಹೀಗೆ: "ಅಂದು ಅವಳ ಅಗಲಿಕೆಯಿಂದ ನನ್ನಲ್ಲಿ ಹೊತ್ತಿ, ಮುಂದು ನಾನು ಇದ್ದಿರುವನಕಾ ನಂದದ ಶೋಕಾನಲದಿಂದ ದೇವರ ಮುಂದೆ ಹಚ್ಚಿರಿಸಿದ ದೀಪ ಎಂಬ ಅರ್ಥದಲ್ಲಿ ಆ ಕವಿತೆಗಳನ್ನು ನಂದಾದೀಪ ಎಂದೆ" (ಆತ್ಮಕಥನ ಕನ್ನಡದ ಮೊರೆ, ಪುಟ ೧೮) ನಂದಾದೀಪ ಕವನ ಮಾಲಿಕೆಯಲ್ಲಿ ಪ್ರಕಟವಾದ ಪದ್ಯಗಳು ಒಟ್ಟು ೩೭.

ನಂದಾದೀಪ ಕವನಗಳಲ್ಲಿ ಪೈಯವರ ಭಕ್ತಿಯೋಗವಿದೆ. ಭಗವತ್ ಕೃಪೆಯನ್ನು ಸರ್ವದಾ ಬೇಡುವ ಸ್ಥಿತಿಯಿಂದ ಭಗವತ್ ಸಾನ್ನಿಧ್ಯದ ಸಂತೃಪ್ತ ಅರಿವಿನಲ್ಲಿ ನೆಲಸುವ

ನೆಲೆಗೆ ಪ್ರ-ಗತಿ ಇರುವ ಅನುಭಾವದ ಅಭಿವ್ಯಕ್ತಿಗಳಾಗಿ ಕಾಣುವ ಕವನಗಳು- ವೈಯಕ್ತಿಕ ಬದುಕಿನ ಪಾತಳಿಯಿಂದಲೇ ಅನುಭವಶೋಧಗಳಾಗಿ ಮೂಡಿ ಬಂದಂಥವುಗಳು. ಅನುರಕ್ತಿ ಮತ್ತು ಭಕ್ತಿಯನ್ನು ಒಟ್ಟಿಗೇ ನೋಡುವ ದೃಷ್ಟಿ, ಬದುಕನ್ನು ನಿರಾಕರಿಸದ ಅಧ್ಯಾತ್ಮದ ವಲಯದಲ್ಲಿ ಭಗವಂತನನ್ನು ಪ್ರತ್ಯಕ್ಷಿಸುವ ರೀತಿಯದು. ಗಿಳಿವಿಂಡನ್ನು 'ಕೃಷ್ಣಾರ್ಪಣ' ಮಾಡುವ ಪದ್ಯವೊಂದು ಗಿಳಿವಿಂಡಿನಲ್ಲಿದೆ. ಅದು ನಂದಾದೀಪಕ್ಕೆ ಮುನ್ನುಡಿಯ ರಚನೆಯಂತಿದೆ.

ನಿನ್ನೊಳೆನ್ನಯ ಭಕ್ತಿ, ಅವಳೊಳನುರಕ್ತಿ-
ತೋರದನುರಕ್ತಿ, ಭಕ್ತಿಯನೆಂತು ಕಾಂಬೆ?
ನನ್ನ ಕೃಷ್ಣೆಗೊ, ನನ್ನ ಕೃಷ್ಣನಿಗೊ, ವ್ಯಕ್ತಿ
ದ್ವಯಗಳದ್ವಯಕೊ, ಕೃಷ್ಣಾರ್ಪಣಮಿದೆಂಬೆ [ಗಿಳಿವಿಂಡು ಪುಟ ೧೨೫]

ಸಂತಕವಿಗಳ, ಪುರಂದರ ಕನಕರಂಥ ದಾಸವರೇಣ್ಯರ ರಚನೆಗಳಲ್ಲಿರುವಂತೆ ಭಕ್ತಿಯ ಬಹುತೇಕ ಎಲ್ಲ ರೂಪಗಳನ್ನು ಪೈಯವರ ಈ ಕವನಗಳಲ್ಲೂ ದರ್ಶಿಸಬಹುದಾಗಿದೆ. ಅಂದರೆ ಸಾಂಪ್ರದಾಯಿಕ ಪಥದಲ್ಲಿಯೇ ಇವರ ವೈಯಕ್ತಿಕ ಶೋಧ ಹೆಜ್ಜೆಯೂರಿದೆ ಎನ್ನಬಹುದು. ನಾರದ ಭಕ್ತಿಸೂತ್ರದಲ್ಲಿ ಹೇಳಿದ ಭಕ್ತಿಯ ಹನ್ನೊಂದು ರೂಪಗಳು ನಂದಾದೀಪ ಕವನಗಳಲ್ಲಿ ಮೈದೋರಿವೆ. ಉದಾಹರಣೆಗೆ ಕೆಲವು-

ಭಗವಂತನ ಗುಣಮಾಹಾತ್ಮ್ಯಾಸಕ್ತಿಯಳ್ಳವು -

ಬಗೆಯಲೀ ಲೀಲೆಯನ್ನ ನನ್ನಳವೆ? ಒಲವೊ ಇದು ಛಲವೊ ನಿನ್ನ

(ನಂದಾದೀಪ, ಪುಟ ೭)

ಪರಮಾತ್ಮನಿಗೆ ತಾನು ದಾಸನೆಂಬ ಭಾವನೆಯ ದಾಸ್ಯಾಸಕ್ತಿ; ಸ್ವಾಮಿ-ಭೃತ್ಯ ಭಾವ:

- ನಿನ್ನ ನೇಮವ ಮಾಡಲದೆ ಸಾಕು (ನಂದಾದೀಪ, ಪುಟ ೨)

ನಿನ್ನ ಮರೆವೊಗುವ ಬಳಿದೋರಿಸೆನಗೆರೆಯಾ (ನಂದಾದೀಪ, ಪುಟ ೨೯)

ಪರಮಾತ್ಮನನ್ನು ತನ್ನ ಗೆಳೆಯ, ಬಂಧು ಎಂಬಂತೆ ಪರಿಭಾವಿಸಿ ಆರಾಧಿಸುವ ಸಖ್ಯಾಸಕ್ತಿ :

- ಸಹದುಃಖಿ ನಿನ್ನ ಗೆಳೆಯಾ ಎಂದು ಕರೆವೆ! (ನಂದಾದೀಪ, ಪುಟ ೨೦)

ನಿನ್ನಿಂದ ಸಮೀಪ ಬಂಧುವಾರೊಳರೆನ್ನ? (ನಂದಾದೀಪ, ಪುಟ ೫೧)

ಕವಿಯನ್ನು ಅನುಭಾವಿಯಾಗಿಸುವಲ್ಲಿನ ಪ್ರೇರಣೆ ಇಲ್ಲಿ ಪ್ರೇಮವಾಗಿದೆ, ದುಃಖವಾಗಿದೆ. ಭೌತಿಕ ಪ್ರೇಮ ಭಗವಂತನ ಪ್ರೇಮಕ್ಕೆ ಚಾಚುವುದಕ್ಕೆ

ದುಃಖಸೇತುವನ್ನು ಬಳಸಲಾಗಿದೆ. ಚಿಂತೆ–ಚಿಂತನೆಗೆ, ಅನುರಾಗ–ಅನುಭಾವಕ್ಕೆ ಸಂಪನ್ನಗೊಳ್ಳುವ ಕ್ರಮದಿಂದಾಗಿಯೇ ಇಲ್ಲಿ ಬದುಕಿನ ನಿರಾಕರಣೆ ಇಲ್ಲ, ಸ್ವೀಕರಣವಿದೆ.

ನಂದಾದೀಪ ಕವನಗಳ ಕುರಿತ ಬರಹಗಳಲ್ಲಿ ಸಾಮಾನ್ಯವಾಗಿ ಈ ಕವನಗಳನ್ನು ರವೀಂದ್ರನಾಥ ಠಾಕೂರರ ಗೀತಾಂಜಲಿಯೊಂದಿಗೆ ಹೋಲಿಸುವುದನ್ನು ಕಾಣಬಹುದು. ವಸ್ತು ಭಾವ ಸ್ವರೂಪಗಳಲ್ಲಿ ಹೋಲಿಕೆಗಳನ್ನು ಕೆಲವರು ಉಲ್ಲೇಖಿಸುತ್ತಾರಾದರೆ, ಈ ಕವನಗಳಲ್ಲಿ ಗೀತಾಂಜಲಿಯ ಪ್ರಭಾವವನ್ನೂ ಕುರಿತು ಹೇಳಿರುವುದುಂಟು. ನೋವು ಉದ್ವಿಗ್ನತೆಗಳನ್ನು ಮೀರಿದ ಒಂದು ಸಾವಧಾನತೆಯಿಂದ, ಮರಣ ಬಾಳ್ವೆಯಲ್ಲಿ ಅನಿವಾರ್ಯವಾದ ಒಂದು ಸತ್ಯವೆಂಬುದರಿಂದ ಅದನ್ನು ಎದುರುಗೊಳ್ಳುವಲ್ಲಿ ಜ್ಞಾನಿಯ ಧೋರಣೆಯಿಂದ, ಈ ರಚನೆಗಳಲ್ಲಿಯೂ, ಎಲ್ಲವನ್ನೂ ಭಗವಂತನಿಗೆ ನಿವೇದಿಸುವ ಗೀತಾಂಜಲಿಯ ರಚನೆಗಳ ಸ್ಫೂರ್ತಿ ಇದೆ. ಆದರೆ ರವೀಂದ್ರರ ಪ್ರಭಾವವನ್ನು ಅರಗಿಸಿಕೊಂಡು ಪೈಯವರ ಆಧ್ಯಾತ್ಮಿಕ ಚಿಂತನೆ ಸ್ವೋಪಜ್ಞವಾದ ಲಹರಿಯನ್ನು ತಳೆದಿರುವುದನ್ನೂ ಗಮನಿಸಬೇಕಾಗುತ್ತದೆ.

"ಹೃದಯರಂಗ" (೧೯೬೯) ಗೋವಿಂದ ಪೈಯವರ ೪೪ ಬಿಡಿಕವಿತೆಗಳ ಮೂರನೆಯ ಸಂಕಲನ. ೧೯೦೨ರಲ್ಲಿ ಬೆಳಕು ಕಂಡ 'ಕಾಲಿಯಮರ್ದನ' ಕವನ ಹಾಗೂ ೧೯೬೨ರಲ್ಲಿ ಮೊದಲು ಅಚ್ಚಾದಂತೆ ಕಂಡುಬರುವ 'ಯಶೋದೆಯ ಜೋಗುಳ' ಕವನ ಇದರಲ್ಲಿ ಸೇರಿರುವುದರಿಂದ ಕವನ ರಚನೆಯ ಆಚೀಚೆಯ ಎಲ್ಲೆಗಳನ್ನು ನಿದರ್ಶಿಸುವಂತಿವೆ. ಪೈಯವರ ಸಮಷ್ಟಿಕಾವ್ಯದ ಮುಖ್ಯ ಪ್ರೇರಣೆಗಳನ್ನು ಇದರಲ್ಲಿನ ಒಂದಲ್ಲ ಒಂದು ಕವನದಲ್ಲಿ ಕಾಣಲಾಗುವುದು ಈ ಸಂಕಲನದ ವಿಶಿಷ್ಟತೆಯಾಗಿದೆ. ದೈವಭಕ್ತಿಯೊ, ಗುರುಜನಭಕ್ತಿಯೊ, ದೇಶಭಕ್ತಿಯೋ; ಸಾವು ನೋವು ಬವಣೆಗಳಲ್ಲಿ ಪ್ರವರ್ತಿಸುವ ಅನುಕಂಪವೊ, ಜೀವ ಜೀವನ ವಿಚಾರವೋ ಪುರಾಣ ಚರಿತ್ರೆಯ ಕಥಾನಕಗಳನ್ನು ವರ್ತಮಾನದ ಬದುಕಿಗೆ ಸಂಗತೀಕರಿಸುವಲ್ಲಿನ ನೀತಿ ನಡತೆಯ ವಾಸ್ತವ ಪ್ರಜ್ಞೆಯೋ, ಪೈಯವರ ನಂಬಿಕೆಯ ಕಾವ್ಯಧರ್ಮವೋ – ಇಲ್ಲಿನ ಕವನಗಳಲ್ಲಿ ಪ್ರತೀತವಾಗಿವೆ. ಇಲ್ಲಿ ಕವಿ ಹೃದಯ ಸ್ಫುರಣದ ವಿವಿಧ ತಾನಗಳನ್ನು ಆಲಿಸಬಹುದಾಗಿದೆ. ಇದರಲ್ಲಿ ಒಂದು ಕವಿತೆಯಾಗಿ ಸೇರಿರುವ ಶ್ರೀ ಗೊಮ್ಮಟ ಜಿನಸ್ತುತಿ ಪುಸ್ತಕರೂಪದಲ್ಲೂ– ಅದೂ ಅವರ ಮೊದಲ ಪ್ರಕಟಿತ ಕೃತಿಯಾಗಿ– ಪ್ರಕಟವಾಗಿತ್ತು. ಪೈಯವರ ನೀಳ್ಗವಿತೆಗಳಲ್ಲಿ ಒಂದಾದ 'ತುತೂರಿ'ಯೂ (ಮರಾಠಿಯ ಪ್ರಸಿದ್ಧ ಕವಿ ಕೇಶವಸುತರ ತುತಾರಿಯಿಂದ ಪ್ರೇರಿತವಾದುದು) ಇದರಲ್ಲಿ ಸೇರಿದೆ. ಸ್ವಾತಂತ್ರ್ಯ ಚಳವಳಿಯ ಒಡಲಲ್ಲೆ ಆವರಿಸಿರುವ ಶೋಷಣೆ, ಅಸಮಾನತೆ ರೂಢಿಜಾಡ್ಯಗಳನ್ನು ಕಳೆದೊಗೆಯುವ ರಾಷ್ಟ್ರೀಯ ಆಂದೋಲನದ

ತುತ್ತೂರಿ ಮಡುಗಟ್ಟಿದ ಈ ಕವಿತೆ ಪ್ರಾತಿನಿಧಿಕವಾಗಿ ಕಾಣುವ ಹಾಗೆ, ಪೈಯವರು ಸತ್ಯಾಗ್ರಹ, ಸ್ವದೇಶಿ, ಖಾದಿ ಮೊದಲಾದ ಗಾಂಧಿಯುಗದ ಮೌಲ್ಯ ಆದರ್ಶಗಳನ್ನು ಇದರಲ್ಲಿ ಅಳವಡಿಸಿದ್ದಾರೆ.

ಹೃದಯರಂಗದ ಮೂರನೆಯ ಒಂದು ಭಾಗದಷ್ಟು ಕವನಗಳು ದೇಶಭಕ್ತಿ ಮತ್ತು ರಾಷ್ಟ್ರೀಯ ಪ್ರಜ್ಞೆಯ ನೆಲೆಯವು. 'ಭಾರತ' 'ಹಿಂದೂಸ್ತಾನ' ಎಂಬ ರಾಷ್ಟ್ರ ಕಲ್ಪನೆಯನ್ನು ಉಜ್ವಲಗೊಳಿಸಿ ಪರದಾಸ್ಯದಿಂದ ವಿಮುಕ್ತಿಗೊಳ್ಳುವ ಬಯಕೆಯನ್ನು ತೀವ್ರತರವಾಗಿಸಿ ಹೋರಾಟಕ್ಕೆ ತ್ಯಾಗ ಬಲಿದಾನಕ್ಕೆ ಸಜ್ಜುಗೊಳಿಸುವ ಕವನಗಳು ನವೋದಯ ಕಾವ್ಯದಲ್ಲಿ ವಿಪುಲವಾಗಿ ಬಂದುವು. ಸ್ವಾಂತಃಸುಖಾಯ ಕವನ ಬರೆಯುವುದೆಂದ ಪೈಯವರೂ ಬಹಿರ್ಮುಖರಾಗಿ ಪ್ರಚೋದಕ ದೇಶಭಕ್ತಿ ಕವನಗಳನ್ನು ರಚಿಸಿದರು. ಉಜ್ವಲ ರಾಷ್ಟ್ರಾಭಿಮಾನ ಅದರ ಒಂದು ಮುಖ; ದಾಸ್ಯ ವಿಮೋಚನೆ ಅದರ ಮೊದಲ ಗುರಿ; ಸ್ವಾತಂತ್ರ್ಯ ಪ್ರಾಪ್ತಿಯಲ್ಲಿ ಉತ್ಸವ, ಹಿಗ್ಗು; ಸ್ವಾತಂತ್ರ್ಯೋತ್ತರ ಭಾರತದ ಸ್ಥಿತಿಗತಿ ಆಗುಹೋಗುಗಳ ಬಗ್ಗೆ ಅಷ್ಟೇ ವಿಚಕ್ಷಣ ನೋಟ- ಹೀಗೆ ಈ ರಚನೆಗಳಲ್ಲಿ ಭಾವಾವೇಶದ ಆದರ್ಶ ದೇಶಪ್ರೇಮವೇ ಅಲ್ಲ, ಒಬ್ಬ ಸಂವೇದನಾಶೀಲ ರಾಷ್ಟ್ರಕನ ಜ್ವಲಂತಪ್ರಜ್ಞೆಯನ್ನು ಗುರುತಿಸಬಹುದಾಗುತ್ತದೆ. 'ಭಾರತಾಂಬೆಯ ಮಹಿಮೆ', 'ಎರಡು ವರ', 'ಜಯಹಿಂದ ಗೀತ'ಗಳನ್ನು ಹೆಸರಿಸಬಹುದು. ಗಾಂಧೀಜಿಯವರು ಬ್ರಿಟಿಷರನ್ನು ಭಾರತದಿಂದ ತೊಲಗುವಂತೆ ಸಾರಿ ಹೇಳಿದ 'Quit India' ಎಂಬುದು 'ಭಾರತ ಸ್ವಾತಂತ್ರ್ಯದ ಗಾಯತ್ರಿ' ಎಂದು ಕವಿಯ ಭಾವನೆ. ಅದರಲ್ಲಿ ಮಂತ್ರಾಕ್ಷರದ ಪಾವನತೆ ಇದೆಯೆಂದೇ ಇಂಗ್ಲಿಷ್ ಪದರೂಪವನ್ನು ಕವನದಲ್ಲಿ ಹಾಗೆಯೇ ಬಳಸಿದ್ದಾರೆ. 'ತುತೂರಿ'ಯಲ್ಲಿ ತಾಯಿಳೆಗಾಗಿ ಕಾದಾಡಲು ಚುಚ್ಚುವ ಕರೆ ಇದೆ. ಗಾಂಧೀಜಿಯವರನ್ನು ದೇಶ ವಿಭಜನೆಗೆ ಅನುಮತಿಸಿದ ಕಾರಣಕ್ಕಾಗಿ ಪೈಯವರು ಹಳಿಯುವಂತಾಗಿದ್ದರೂ, ಗಾಂಧಿ ವ್ಯಕ್ತಿ-ಶಕ್ತಿಯ ಬಗ್ಗೆ ಅವರಿಗೆ ಇನ್ನಿಲ್ಲದ ಗೌರವ ಭರವಸೆ ಇದ್ದೇ ಇತ್ತು. ಗಾಂಧಿ ಹತ್ಯೆಯಾದೊಡನೆ 'ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು!' ಎಂಬುದು 'ಈಗ ಭಾರತಕತ್ಯಗತ್ಯವಿದೆ ನಿನ್ನ' ಎಂಬುದಕ್ಕಾಗಿ.

ಪೈಯವರ ಆರ್ದ್ರ ಅಂತಃಕರಣದ ಸ್ಪಂದನವನ್ನು, ಸಹಾನುಭೂತಿಯನ್ನು 'ನವಾಖಲಿಗೆ' 'ಸತ್ತರೇ ಅಕಟ ಮೂವತ್ತಯಿದು ಲಕ್ಷ' 'ಅಣುಬಾಂಬು' 'ಹಿರೊಶಿಮ' ಮೊದಲಾದ ಕವನಗಳಲ್ಲಿ ಕಾಣಬಹುದು. ಮೃತ್ಯು ಒಬ್ಬ ತಾಯಿಯ ಬದುಕಿನ ವಲಯದಲ್ಲಿ ಬರುವ ಎಲ್ಲರ ಮೇಲೆ ಎರಗಿ ಮಾಡಬಹುದಾದ ಅಘಾತದ ಸ್ವರೂಪ, ಅದನ್ನು ಭರಿಸಲೇಬೇಕಾದ ಜೀವ ತಾಳಿಕೊಂಡು ಇರಬಹುದಾದ ಪರಿಯನ್ನು ಪೈಯವರು 'ಅಂದಿನಿಂದಾಕೆ ನಕ್ಕಿಲ್ಲ, ಅತ್ತಿಲ್ಲ' ಎಂಬ ಕವನದಲ್ಲಿ ಶಬ್ದಗಳ ಪರಿಮಿತ ಬಳಕೆಯಿಂದ ಅದ್ವಿತೀಯವಾಗಿ ಅರುಹುತ್ತಾರೆ.

ಹೃದಯರಂಗದ ಕವನಗಳಲ್ಲಿ ಎದ್ದು ಕಾಣುವ ಇನ್ನೊಂದು ವರ್ಗ ಕಥನಕವನಗಳದ್ದು. ಗಿಳಿವಿಂಡಿನಲ್ಲೇ 'ಪಾಲುಮಾರಿಕೆ' ಎಂಬ ವಿಡಂಬನೆಯ ಕಥನಕವನವೊಂದಿದೆ. 'ಭಿಕ್ಷುವೂ ಪಕ್ಷಿಯೂ' 'ಹುಲ್ಲುಕಟಿಗ' 'ಮಾತಂಗಿ' 'ವಾಸವದತ್ತೆ' ಕಥನಕವನಗಳು ಬೌದ್ಧಸಾಹಿತ್ಯದಲ್ಲಿ ಆಕರ ಇರುವಂಥವು. ಇವುಗಳಿಗೆ ಬೌದ್ಧ ಕತೆಗಳು ಹಿನ್ನೆಲೆಗಿವೆ. 'ಮಾತಂಗಿ' ಕವನಕ್ಕೆ ಬೌದ್ಧಧರ್ಮ ಹಾಗೂ ಜಾತಿಯ ಆಯಾಮವಿದೆ. ಅಸ್ಪೃಶ್ಯ ಜಾತಿಯ ಹೆಂಗಸೊಬ್ಬಳು ಭಿಕ್ಷುಣಿಯಾಗಿ ಪರಿವರ್ತನೆಗೊಳ್ಳುವ ಬುದ್ಧನ ದಯೆ ಮತ್ತು ಪ್ರಭಾವದ ಚಿತ್ರಣವಿದೆ. 'ಶೂದ್ರರ್ಷಿ ಕವಷ'ನ ಕಥೆ ಋಗ್ವೇದದ ಐತರೇಯ ಬ್ರಾಹ್ಮಣ, ಕೌಷೀತಕೀ ಬ್ರಾಹ್ಮಣದಷ್ಟು ಹಳೆಯದಾದರೂ, ಅದರ ಚಾಚು ಸದ್ಯಕ್ಕೂ ಬೆಳಕು ಚೆಲ್ಲುವಂಥದ್ದು. ವೇದಕಾಲದ ಕಥೆಯ ಬೆಳಕಿನಲ್ಲಿ ಜಾತಿಯ ವೈಷಮ್ಯವೇ ಕಾರಣವಾಗಿ ಉಂಟಾಗುವ ವ್ಯಕ್ತಿ ವ್ಯಕ್ತಿಗಳ ನಡುವಿನಂತರವನ್ನು ತುಂಬಿ, ಸಮಾನತೆಯ ಸಮುದಾಯದ ಸಾಧ್ಯತೆಗೆ ಎಲ್ಲಿ ಯಾರು ಹೇಗೆ ತೊಡಗಬೇಕೆನ್ನುವ ತಿಳಿವನ್ನು ಮೂಡಿಸುವ ಈ ಕವನಕ್ಕೆ ಸಮಕಾಲೀನ ಪ್ರಸ್ತುತತೆ ಒದಗುತ್ತದೆ. ಬೌದ್ಧ ಕತೆಗಳನ್ನು ಆಧರಿಸಿದ ಕಥನಕವನಗಳು ಸಹಜವಾಗಿಯೇ ಕಥಾಪ್ರಧಾನವಾಗಿ ನೀತಿಬೋಧಕವಾದುವು. ಪೈಯವರ 'ಹಳ್ಳಿಯ ಹುಡುಗಿ' ಕಥನಕವನ ಇವುಗಳಿಂದ ಪ್ರತ್ಯೇಕವಾಗಿ ನಿಲ್ಲುವಂಥದ್ದು. ನಾಡಿನ ಸ್ವಾತಂತ್ರ್ಯ, ಧರ್ಮದ ರಕ್ಷಣೆಗಾಗಿ ಬದುಕು ಪ್ರಾಣಗಳನ್ನು ತ್ಯಾಗ ಮಾಡಿದ 'ಹಳ್ಳಿಯ ಹುಡುಗಿ' 'ಮಾಸ್ತಿ'ಯಾಗಿ ಮಾನ್ಯಳಾಗಿ ಕೀರ್ತಿಶರೀರಿಯಾಗಿ ಪ್ರಸಿದ್ಧಳಾಗುತ್ತಾಳೆ.

ಇನ್ನಷ್ಟು ಬಿಡಿಕವಿತೆಗಳಲ್ಲಿ ['ವಿಟಂಕ' ಎಂಬ ಹೆಸರಲ್ಲಿ ಸಂಕಲನಗೊಂಡವು (೨೦೦೯)] 'ಶ್ರೀ ಶಾರದಾದೇವಿಗೆ' ಎಂಬ ಸರಸ್ವತೀ ಸ್ತುತಿ, ಶಾರದೆಯನ್ನು ಜೈನ ಹಾಗೂ ವೈದಿಕ ಸಂಪ್ರದಾಯಗಳೆರಡನ್ನೂ ಬೆಸೆದು ವರ್ಣಿಸುವ ಕಂದವೃತ್ತಗಳಿಂದ ಕೂಡಿದೆ. ಗಿಳಿವಿಂಡಿನಲ್ಲಿರುವ ಮಹದ್ವ್ಯಕ್ತಿ ಗೀತೆಗಳಾದ 'ಶ್ರೀ ವಿದ್ಯಾರಣ್ಯರ ಅಡಿದಾವರೆಯಲ್ಲಿ' 'ಶ್ರೀ ಮಹಾಕವಿ ಕುಮಾರವ್ಯಾಸನಿಗೆ' ಕವನಗಳ ಸಾಲಿಗೇ ನಿಲ್ಲುವ ಇನ್ನೊಂದು ಕೃತಿ 'ರನ್ನ ಮಹಾಕವಿಗೆ' ಎನ್ನುವುದು. 'ಕುಮಾರ ವ್ಯಾಸನಿಗೆ' ಪದ್ಯವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದಂತೆ, ರನ್ನನನ್ನು ಕುರಿತು ವೃತ್ತಗಳಲ್ಲಿ ರನ್ನನ ಶೈಲಿಯಲ್ಲಿಯೇ ಬರೆಯಲಾಗಿದೆ. 'ಯಾರೆಂಬರು ಮುಗಿದುವೆಂದು ಬವರಂ?' ಎಂಬ ಇನ್ನೊಂದು ದೀರ್ಘಕವನ ವಿಷಯಗೌರವದಿಂದ ರೀತಿಗೌರವದಿಂದ ಪೈಯವರ ಅತ್ಯುತ್ತಮವಾದ ಒಂದು ಪದ್ಯ. ಜಿ.ಪಿ. ರಾಜರತ್ನಂ ಅವರು 'ಇದು ಭಗವದ್ಗೀತೆಯೆಂಬ ವೃಕ್ಷವನ್ನು ತಬ್ಬಿ ಹಬ್ಬಿದ ಸೆಳೆಕತ್ತಿಯಂತಿರುವ ಬಳ್ಳಿ'ಯೆಂದಿದ್ದಾರೆ. (ಕವಿ ಗೋವಿಂದ ಪೈ, ಪುಟ ೧೨) "ಮನುಷ್ಯನು ಮನುಷ್ಯನಾಗಿರುವವರೆಗೆ ಯುದ್ಧ ಇದ್ದೇ ಇದೆ; ಎರಡು ಯುದ್ಧಗಳ ನಡುಗಾಲವೇ ಶಾಂತಿ ವಿನಾ ಬೇರೆ ಚಿರಶಾಂತಿ ಎಂದೂ ಇಲ್ಲ, ಯುದ್ಧದಿಂದಲ್ಲದೆ ಶಾಂತಿ ಅನ್ಯಥಾ ಹುಟ್ಟಲೂ ಸಲ್ಲ; ಆದಕಾರಣ

ಶಾಂತಿಯೇ ಮನುಷ್ಯನ ಧ್ಯೇಯವಾದರೆ ಆತನು ಯುದ್ಧಕ್ಕೆ ಸದಾ ಸಿದ್ಧವಾಗಿರಬೇಕು ಎಂಬ ತತ್ವದ ಮೇಲೆ ಈ ಕವಿತೆ ಕಟ್ಟಿದೆ." ಎಂದು ಕವಿ ಪೈಯವರೇ ಈ ಕವನವನ್ನು ೧೯೫೧ರಲ್ಲಿ ರೇಡಿಯೋ ಭಾಷಣಕ್ಕೆ ಅಳವಡಿಸಿದಾಗ ಹೇಳಿಕೊಂಡಿದ್ದಾರೆ. 'ಗೆಲ್ಲಲೇ ಬೇಕಾದುದು ಬರಿಯ ಹೊರಗಿನದನ್ನು ಮಾತ್ರವಲ್ಲ, ಒಳಗಿನದನ್ನು ಕೂಡಾ' ಎನ್ನುವುದು ಮುಖ್ಯ. ಮತ್ತು ಧರ್ಮಯುಕ್ತವಾದ ಯುದ್ಧವೆನ್ನುವುದು ಅವಧಾರಣೆ ಪಡೆವ ಮಾತು; ಆಕ್ರಮಣಶೀಲ ಯುದ್ಧವನ್ನೆಂದೂ ಸಮರ್ಥಿಸುವ ಪ್ರಮೇಯವಿಲ್ಲ.

ವಿಟಂಕದಲ್ಲಿ ಗಾಂಧಿಯನ್ನು ಕುರಿತವೇ ಆರು ಕವನಗಳು – ಎಲ್ಲ ಚತುರ್ದಶಪದಿಗಳು. ಇವುಗಳ ಜೊತೆಗೆ ಗಿಳಿವಿಂಡಿನ 'ಮಹಾತ್ಮರ ಉಪವಾಸ' ಹೃದಯರಂಗದಲ್ಲಿ ಸೇರಿರುವ 'ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು' ಕವನಗಳು, ಗಾಂಧಿಯ ಕಡೆಯ ದಿನದ ಕುರಿತಿರುವ ಅಪೂರ್ಣ ಕವನ 'ದೇಹಲಿ'– ಇವುಗಳನ್ನು ನೆನಪಿಸಬಹುದು. 'ಮಹಾವ್ರತ' (೧೯೨೫) 'ನಿಃಸ್ವ' (೧೯೪೪) ಕವನಗಳಲ್ಲಿ ಅಹಿಂಸೆ ತ್ಯಾಗಗಳ ವ್ರತಧಾರಿಯಾದ, ತನ್ನದೆಲ್ಲವನ್ನೂ ತ್ಯಾಗಮಾಡಿರುವ 'ನಿಃಸ್ವ'ನಾದ ಮಹಾತ್ಮಾ ಗಾಂಧಿಗೆ ಸಾಟಿಯಾದ ಪೂರ್ವೋದಾಹರಣೆಗಳನ್ನು ಪುರಾಣ ಚರಿತ್ರೆಗಳಿಂದ ಕವಿ ಕೊಟ್ಟಿದ್ದಾರೆ. ಸ್ವಾತಂತ್ರ್ಯ ಸುಧೆಗಾಗಿ ಗಾಂಧಿ ನಡೆಸಿದ ಹೋರಾಟವನ್ನು 'ಸಮುದ್ರ ಮಥನ'ಕ್ಕೆ ಹೋಲಿಸಲಾಗಿದೆ. ಇನ್ನುಳಿದವು 'ಮಹಾತ್ಮನ ಆತ್ಮಕ್ಕೆ' ನಿವೇದಿಸುವಂಥವು, ಗಾಂಧಿಯ ಮರಣದ ಅನಂತರದವು. 'ಮಹಾತ್ಮನ ಆತ್ಮಕ್ಕೆ' ಕವನದಲ್ಲಿ ಆತನ ವಿಶ್ವಮೈತ್ರೀ ಭಾವವನ್ನು ಕೊಂಡಾಡಿದ್ದಲ್ಲದೆ, ಗಾಂಧಿ ಮಹಾತ್ಮನನ್ನು ಪ್ರಕೃತಿ – ಕೃಷ್ಣ, ಮಾವೀರ, ಗೌತಮ, ಯೇಸು ಈ ನಾಲ್ವರವತಾರಿಗಳ ಧಾತುವಿನಿಂದಾಯ್ದು ಸೃಜಿಸಿದಳೆಂಬ ದರ್ಶನವಂತೂ ಅಪೂರ್ವವೆನ್ನಬಹುದು. ಇದೇ ಕವನದ ಕೊನೆಯಲ್ಲಿ.

ಮೋಹನಾ, ಮರೆಯದೀ ಭಾರತವ ನಿನ್ನ
ಧ್ರುವತಾರೆಯಂತೆ ನೀ ಮುನ್ನಡಸಿದನ್ನ,

ಎಂದ ಕವಿಯೇ, ಹತ್ತೇವರ್ಷಗಳಲ್ಲಿ, 'ಮರೆತೆವೈ ನಿನ್ನ, ನೀನಿಲ್ಲಿದ್ದುದನ್ನ' ಎಂದೂ 'ಸತ್ತು ಗಡ ಬದುಕಿದಿ ಮಹಾತ್ಮಾ ನೀ ಧನ್ಯ' (೧೯೫೮) ಎಂಬ ಕವನದಲ್ಲಿ ಹೇಳಬೇಕಾಗಿ ಬಂದುದು ಎಂಥ ವಿಪರ್ಯಾಸ!

ಖಂಡಕಾವ್ಯಗಳು

ಗೋವಿಂದ ಪೈಯವರಿಗೆ ಕವಿಯಾಗಿ ಪ್ರಸಿದ್ಧಿ ತಂದ ಕೃತಿಗಳು ಅವರ ಖಂಡಕಾವ್ಯಗಳು– 'ಗೊಲ್ಗೊಥಾ' ಮತ್ತು 'ವೈಶಾಖಿ' ಮುಖ್ಯವಾದುವು; 'ಪ್ರಭಾಸ' ಮತ್ತು 'ದೇಹಲಿ' ಎಂಬೆರಡು ಖಂಡಕಾವ್ಯಗಳು ಅಪೂರ್ಣವಾಗಿ ಉಳಿದವುಗಳಾಗಿವೆ. ಈ ನಾಲ್ಕೂ ಖಂಡಕಾವ್ಯಗಳ ಹಿಂದಿರುವ ಸಮಾನ

ಅಂಶವೆಂದರೆ, ಈ ಕೃತಿಗಳು ಮಹಾತ್ಮರ ಮರಣವನ್ನು– ಅನುಕ್ರಮವಾಗಿ ಯೇಸು (ಗೊಲ್ಗೊಥಾ) ಬುದ್ಧ (ವೈಶಾಖಿ) ಕೃಷ್ಣ (ಪ್ರಭಾಸ) ಗಾಂಧೀಜಿ (ದೇಹಲಿ) ಯವರ ಕಡೆಯ ದಿನದ ಕಥೆಯನ್ನು ವಸ್ತುವಾಗುಳ್ಳವು. ಗೊಲ್ಗೊಥಾ ಕನ್ನಡದ ಮೊತ್ತಮೊದಲ ಖಂಡಕಾವ್ಯವೂ ಹೌದು.

ಯೇಸುವಿನ ಕಡೆಯ ದಿನವನ್ನು ಕುರಿತಿರುವ ಗೊಲ್ಗೊಥಾ ಕಾವ್ಯ (೧೯೩೧) ಬೈಬಲಿನ ಹೊಸ ಒಡಂಬಡಿಕೆಯಲ್ಲಿನ ಪ್ರಮುಖ ಗ್ರಂಥಗಳಾದ ಮಾರ್ಕ್ ಮತ್ತಾಯ ಲೂಕ ಯೋಹಾನರ ಸುವಾರ್ತೆಗಳನ್ನು ಮುಖ್ಯ ಆಕರವಾಗಿ ಬಳಸಿಕೊಂಡಿದೆ. ಈ ನಾಲ್ಕು ಸುವಾರ್ತೆಗಳು ಯೇಸುವಿನ ಬದುಕು ಸಾವಿನ ಚಿತ್ರವನ್ನು ಮೂಡಿಸುವಲ್ಲಿ ಬಹುತೇಕ ಒಂದಕ್ಕೊಂದು ಸಮೀಚೀನವಾಗಿವೆಯಾದರೂ ಪ್ರತಿಯೊಬ್ಬ ಸುವಾರ್ತೆಕಾರನ ಉದ್ದೇಶ ಅಭಿವ್ಯಕ್ತಿಯಲ್ಲಿರುವ ಸ್ವಂತಿಕೆ ಪ್ರತ್ಯೇಕ ಗಮನಿಸುವಂತಿವೆ. ಹೀಗಿದ್ದೂ ಯೇಸುವಿನ ವಿಚಾರಣೆ ಮತ್ತು ಮರಣದ ಕುರಿತು ನಾಲ್ಕೂ ಸುವಾರ್ತೆಗಳು ಸರಿಸುಮಾರು ಸಮಾನವಾದ ವಿವರಗಳನ್ನು ಕೊಡುತ್ತವೆ. ಗೋವಿಂದ ಪೈಯವರು ಗೊಲ್ಗೊಥಾದಲ್ಲಿ ಕ್ರಿಸ್ತನ ಸಾವಿಗೆ ಸಂಬಂಧಿಸಿದ ಚಿತ್ರಣಕ್ಕೆ ನಾಲ್ಕೂ ಸುವಾರ್ತೆಗಳ ಸಂಬಂಧಿತ ವಚನಗಳನ್ನು ಸಮರ್ಥ ಕ್ರೋಡೀಕರಿಸಿ ಗ್ರಥನಕೌಶಲದ ಅತಿಶಯತೆಯನ್ನು ಮೆರೆದಿದ್ದಾರೆ. ಒಟ್ಟು ೩೭೭ ಸಾಲುಗಳಿರುವ ಗೊಲ್ಗೊಥಾದಲ್ಲಿ ೧೪೦ರಷ್ಟು ಸಾಲುಗಳಿಗೆ ಒಂದಿಲ್ಲೊಂದು ಸುವಾರ್ತೆಕಾರರ ವಚನಗಳು ಆಧಾರವಾಗಿವೆ.

'ಗೊಲ್ಗೊಥಾ' ಎಂಬುದು ಯೇಸುವನ್ನು ಶಿಲುಬೆಗೇರಿಸಿದ ಸ್ಥಳ. ಯೇಸು ದೇವರ ಮಹಿಮೆಯನ್ನು ಮೆರೆಯುವ, ತಾನು ಮಹಿಮಾನ್ವಿತನಾಗುವ ಮಹತ್ ಘಟನೆ ಶಿಲುಬೆಯ ಮರಣದಲ್ಲಿ ಘಟಿಸುವುದರಿಂದ, ಚರ್ಚ್ ಶಿಲುಬೆಯ ಅಡಿಯಲ್ಲೇ ಉದ್ಘಾಟಿಸಲ್ಪಡುವುದರಿಂದ, ಈ ಸ್ಥಳಕ್ಕೆ ಅಂಥ ಲೋಕೋತ್ತರ ಗಣ್ಯತೆ ಇದೆ. ಪೈಯವರು ಖಂಡಕಾವ್ಯಕ್ಕೆ ಗೊಲ್ಗೊಥಾ ಎಂಬ ಹೆಸರಿಡುವುದರ ಮೂಲಕ ಇದನ್ನು ಪ್ರಸಿದ್ಧಪಡಿಸಿದ್ದಾರೆ. ಹೀಬ್ರೂ ಭಾಷೆಯಲ್ಲಿ ಅದಕ್ಕೆ ತಲೆಬುರುಡೆಯ ಸ್ಥಾನ ಎನ್ನುವ ಅರ್ಥ. ಸಿಲುಬೆಯಲ್ಲಿಯ ಯೇಸುವಿನ ಚಿತ್ರದ ಕಾಲಬುಡದಲ್ಲಿ ಒಂದು ತಲೆ ಬುರುಡೆ (ಡವುಗೆ)ಯನ್ನು ಆಲ್ಬರ್ಟ್ ಡ್ಯೂರರ್ ಎನ್ನುವ ಜರ್ಮನಿಯ ಚಿತ್ರಕಾರ ಕಾಣಿಸಿದ್ದನಂತೆ. ಪೈಯವರು ಗೊಲ್ಗೊಥಾ ತಲೆಬುರುಡೆಯ ಸ್ಥಳ ಎಂಬುದಕ್ಕೆ ಕಾವ್ಯ ಸಮರ್ಥನೆ ಒದಗಿಸಿದ್ದಾರೆ.

ಮೂಗುಹರಕಾವೊಂದು ಹಳೆಯ ತಲೆಬುರುಡೆ ನಡು
ಶಿಲುಬೆಯಡಿಯಿಂ ಜಗವ ಬಾಯ್ಕಿಸಿದು ನಗುತಲಿದೆ.

ಗೊಲ್ಗೊಥಾದಲ್ಲಿ ಯೇಸುವನ್ನು 'ಸತ್ತ್ವಮೂರ್ತಿ' 'ಸತ್ಯವಿಗ್ರಹ' 'ನಿತ್ಯಸುಂದರ' ಎಂಬಂತೆ ಭಾರತೀಯ ದೈವತ್ವದ ಪರಿಕಲ್ಪನೆಯಲ್ಲಿ ವರ್ಣಿಸಲಾಗಿದೆ. ಮತ್ತು ಮನುಜಸುತನು (Son of the Man) ದೇವಪುತ್ರನೂ (Son of God) ಆಗಿರುವ ಯೇಸು ಜಗದ್ರಕ್ಷಕನೂ (God the Son-Christ) ಆಗಿರುವುದನ್ನು ಅಸದೃಶವಾಗಿ ಚಿತ್ರಿಸಲಾಗಿದೆ.

"ತನಗೆ ತಾನೆಣೆಯ ದೇವಾತ್ಮಜಾತನ ನೋಡ!
ಆಪನಿತು ನೋಡ, ಕಣ್ತುಂಬ ನೋಡೀಗಳಿದೊ
ಈ ಹರೆಯದೀ ಶೋಭೆಯೀ ಜಗತ್ಪ್ರೇಮದೀ
ಸುಜ್ಞಾನದೀ ಶಾಂತಿಯೀ ಮಹಿಮೆಯೀ ಜಿತಾ
ತ್ಮತೆಯೀ ತಪಃಶಕ್ತಿಯೀ ಧರ್ಮದೀ ಮನುಜ
ದೇವತನದೀ ಸುಧಾಸಿಂಧು ಯೋರ್ದನಿನಂತೆ
ಸುರಿವುದಕಟಾ ಮೃತ ಸಮುದ್ರದಲಿ ನೋಡ!"

'ಹುಟ್ಟು ಬಡಗಿ'ಯೆಂಬಂತೆ ಪರಿಚಯ ಪ್ರಾರಂಭವಾಗಿ 'ಮನುಜಸುತನಾ ಜಗದ್ರಕ್ಷಕ'ನನ್ನಾಗಿ ಗುರುತಿಸಿ, 'ಮನುಜದೇವತನದೀ ಸುಧಾಸಿಂಧು ಯೋರ್ದನಿನಂತೆ ಸುರಿವುದಕಟಾ ಮೃತ ಸಮುದ್ರದಲಿ ನೋಡ' ಎಂಬ ವರ್ಣನೆಯ ಕೊನೆಯಲ್ಲಿ- ಅಮೃತಪ್ರಾಯವಾದುದು ಮೃತಸಮುದ್ರಕ್ಕೆ ಸುರಿಯುವ ವಿಲಕ್ಷಣ ಚಿತ್ರಣದಲ್ಲಿ, ಯೇಸುಕ್ರಿಸ್ತನ ಮರಣದ ಲೌಕಿಕ-ಅಲೌಕಿಕ ಅರ್ಥದರ್ಶನವನ್ನು ಮಾಡಲಾಗಿದೆ- 'ಮರಣವೃಕ್ಷದೊಳಮೃತಫಲ'ವೆಂಬುದಕ್ಕೆ ಸಾದೃಶ್ಯವಾದ ಚಿತ್ರಣ.

ಯೇಸುವಿನ ಸಾವು ಒಂದು 'ಮಹಾತ್ಯಾಗ' ಒಂದು 'ಮಹಾನೆರವೇರಿಕೆ' ಎಂಬ ದಾರ್ಶನಿಕತೆಯನ್ನು ಗೊಲ್ಗೊಥಾ ಕಾವ್ಯ ಪ್ರತೀತಗೊಳಿಸುತ್ತದೆ.

'ವೈಶಾಖಿ' (೧೯೪೭) ಅಥವಾ ಬುದ್ಧನ ಕಡೆಯ ದಿನವನ್ನು ಗೊಲ್ಗೊಥದ ಜತೆಯ ಕಾವ್ಯವೆಂದು ಪೈಯವರೇ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಬುದ್ಧನ ಪರಿನಿರ್ವಾಣದ ಕಥೆಯುಳ್ಳ ವೈಶಾಖಿ ಖಂಡಕಾವ್ಯ ಬೌದ್ಧಧರ್ಮಗ್ರಂಥವಾದ ಮಹಾಪರಿನಿಬ್ಬಾನಸುತ್ತವನ್ನು ಆಧರಿಸಿ ರಚಿತವಾಗಿದೆ. ಸುತ್ತದಲ್ಲಿ ಮಹಾಪರಿನಿರ್ವಾಣದ ಮೊದಲಿನ ಕೆಲವು ತಿಂಗಳುಗಳ ಆತನ ಜೀವನ ವಿವರವೂ, ಬುದ್ಧನ ಉಪದೇಶದ ಸಾರವೂ ಸೇರಿವೆಯಾದರೆ, ಗೋವಿಂದ ಪೈಯವರು ಕಡೆಯ ದಿನಕ್ಕೆ ಸಂಬಂಧಿಸಿದ ಭಾಗದಿಂದ ಮಾತ್ರ ಬೇಕಾದಷ್ಟನ್ನು ಆಯ್ದುಕೊಂಡು, ಸಂದರ್ಭೋಚಿತವಾಗಿ ಬುದ್ಧನ ಧರ್ಮದೇಶನೆಯನ್ನು ಅಲ್ಲಿಂದ, ಇತರ ಬೌದ್ಧಗ್ರಂಥಗಳಿಂದ ಸ್ವೀಕರಿಸಿ ವೈಶಾಖಿಯನ್ನು ಒಂದು 'ಅಪ್ಪಟ ಬೌದ್ಧ

ಕಾವ್ಯ'ವಾಗಿಸಿದ್ದಾರೆ. ಮಹಾಪರಿನಿಬ್ಬಾನಸುತ್ತವಲ್ಲದೆ, ಸುತ್ತನಿಪಾತದ ಮಹಾಮಂಗಲಸುತ್ತ, ಧಮ್ಮಪದದ ಕೆಲವು ಗಾಥೆಗಳು, ಮೆತ್ತಸುತ್ತದ ಕೆಲವು ಸಾಲುಗಳು, ಧರ್ಮಚಕ್ರಪ್ರವರ್ತನಸೂತ್ರ- ಮೊದಲಾದವುಗಳನ್ನು ಕಾವ್ಯದಲ್ಲಿ ಉಚಿತವಾಗಿ ಬಳಸಲಾಗಿದೆ. ಬೇರೆಡೆ ವಿಸ್ತೃತವಾಗಿ ಹೇಳಲ್ಪಟ್ಟಿರುವ ಉಪದೇಶಗಳು ಇಲ್ಲಿ ಅಡಕವಾಗಿ ಬಂದಿವೆ. ವೈಶಾಖಿಯ ೭೩೨ ಸಾಲುಗಳಲ್ಲಿ ಮಹಾಪರಿನಿಬ್ಬಾನಸುತ್ತವೇ ಆಧಾರವಾಗಿ ೪೨೪ ಸಾಲುಗಳಿವೆ. ಉಳಿದಂತೆ ಕವಿ ಈ ಪ್ರಸಂಗಕ್ಕೆ ಮತ್ತು ಬೌದ್ಧ ಆವರಣಕ್ಕೆ ಸಲ್ಲುವ ಸ್ವತಂತ್ರ ವರ್ಣನೆ, ಉಪಮಾನಗಳಿಂದ ಕೃತಿಗೆ ಖಂಡಕಾವ್ಯದ ಆಕೃತಿಯನ್ನು ಮೂಡಿಸುತ್ತಾರೆ.

ವಿಶಾಖಾ ನಕ್ಷತ್ರದಿಂದ ಕೂಡಿದ ಹುಣ್ಣಿಮೆಗೆ 'ವೈಶಾಖಿ'ಯೆಂದು ಹೆಸರು. ಬುದ್ಧನ ಬದುಕಿನ ಪ್ರಮುಖ ಘಟನೆ- ಜನ್ಮ, ಸಂಬೋಧಿ, ಪರಿನಿರ್ವಾಣಗಳಿಗೂ ವೈಶಾಖ ಹುಣ್ಣಿಮೆಗೂ ಇರುವ ಸಂಬಂಧ ವಿದಿತವಾದದ್ದು. ವೈಶಾಖ ಹುಣ್ಣಿಮೆಯಂದು ಬುದ್ಧನ ಪರಿನಿರ್ವಾಣವಾದ ಕಾರಣವೇ ಕಾವ್ಯಕ್ಕೆ 'ವೈಶಾಖಿ' ಎಂಬ ಶೀರ್ಷಿಕೆ.

"ಆನಂದ ಏಳಿನ್ನು ಭಿಕ್ಷುಗಳನೆಚ್ಚರಿಸು
ಪಾವೆಯೀ ಆಮ್ರವನದಿಂದ ಕೋಳಿಕೂಗುವುದೆ
ಹೊರಟು ಕುಶಿನಾರಕಾಗುವ' ಎಂದನಮಿತಾಭ"

ಎಂಬುದು ಕಾವ್ಯದ ಪ್ರಾರಂಭದ ಸಾಲುಗಳು. ಇವು ಬುದ್ಧನ ಆ ದಿನದ ದಿನಚರಿಯನ್ನು ಮತ್ತು ಬುದ್ಧನ ಬದುಕಿನ ಕ್ರಿಯೆಯನ್ನು ತಿಳಿಸುವ ಮಾತುಗಳು. ಬುದ್ಧನ ಕೊನೆಯ ದಿನದ ಪಯಣ ಪಾವೆಯಿಂದ ಹೊರಟು, ಪರಿನಿರ್ವಾಣಕ್ಕೆ ಉದ್ದೇಶಿಸಿದ ಸ್ಥಳವಾದ ಕುಶಿನಾರಕ್ಕೆ ತಲಪುವುದಾಗಿದೆ. ಎಲ್ಲರಿಗಿಂತ ಮುನ್ನವೇ ಎದ್ದಿರುವ ಬುದ್ಧ, ಆನಂದನನ್ನು ಏಳುವಂತೆಯೂ ಭಿಕ್ಷುಗಳನ್ನೆಚ್ಚರಿಸುವಂತೆಯೂ ಸೂಚನೆ ಕೊಡುತ್ತಾನೆ. ಇಡೀ ಕೃತಿಯ ಕ್ರಿಯೆಯೂ ಇದೇ- ಎಚ್ಚರಿಸುವುದು. ತಥಾಗತನ ಕೊನೆಯ ವಚನವು ಅಂಥದ್ದೇ:

"ಭಿಕ್ಷುಗಳೆ ಪೇಳ್ವೆ, ವ್ಯಯಧರ್ಮವೀ ಸಂಸ್ಕಾರ,
ಸಾವಧಾನದೊಳೆ ಉದ್ಯೋಗಿಸಿರಿ" - ಎಂಬುದು.

ಸಹಜವಾಗಿಯೇ ವೈಶಾಖಿಯ ತುಂಬ ಬುದ್ಧವಾಣಿ ತುಂಬಿರುವುದು ಕಾವ್ಯವಸ್ತುವಿಗೆ ಸಂಗತವಾಗಿಯೇ ಇರುವಂಥದ್ದು. ಕೊನೆಗಳಿಗೆಯವರೆಗೂ ಧರ್ಮೋಪದೇಶ ಮಾಡುತ್ತಾ ಕೃತಕೃತ್ಯ ಭಾವದಿಂದ ನಿರ್ವಾಣದೆಡೆಗೆ ಬುದ್ಧ ಸಾಗಿದನೆಂಬುದನ್ನೇ ಮಹಾಪರಿನಿಬ್ಬಾನಸುತ್ತವೂ ಹೇಳುವುದು.

ಕಾವ್ಯದ ಒಡಲು ಕವಿಗೆ ಕೊಟ್ಟಿರುವ ಪರಿಮಿತ ಸ್ವಾತಂತ್ರ್ಯದಲ್ಲಿ ಧರ್ಮದೇಶನೆಯನ್ನು ಕಾವ್ಯದರ್ಶನವಾಗುವಂತೆ ಮಾಡುವಲ್ಲಿ ಪೈಯವರು ಚಾತುರ್ಯ ತೋರಿಸಿದ್ದಾರೆ. ಆನಂದ ಮತ್ತು ಭಿಕ್ಷುಗಳಿಗೆ ಮಾರ್ಗಸೂಚೀ ಮಹತ್ವದ ಉಪದೇಶ–

"ಆನಂದ ಆತ್ಮದೀಪರೆ ಆತ್ಮಶರಣರೆಮ
ಧರ್ಮದೀಪರೆ ಧರ್ಮಶರಣರೆಮ ನೀವಾಗಿ"

ಎಂಬುದು, ಬುದ್ಧಧರ್ಮದ ಒಂದು ಮುಖ್ಯ ಮಗ್ಗುಲನ್ನು ಕಾಣಿಸಿದೆ. ಬುದ್ಧಧರ್ಮವನ್ನು ಪ್ರವೇಶಿಸಲಿಚ್ಛಿಸಿದ ಪುಕ್ಕುಸನಿಗೆ ಉಪಾಸಕನ ಮಟ್ಟಕ್ಕೆ ಅನ್ವಯವಾಗುವ ಮಂಗಲಸುತ್ತವನ್ನು; ಕುಶಿನಾರದ ಮಲ್ಲರಿಗೆ ಗೃಹಸ್ಥರಿಗೆ ಉಪಯುಕ್ತವಾಗುವ ಧರ್ಮವನ್ನು ಧಮ್ಮಪದದ ಗಾಹೆ ಸುತ್ತನಿಪಾತದ ಸುತ್ತಗಳಿಂದ; ಪರಿವ್ರಾಜಕ ಸುಭದ್ರನಿಗೆ ಚತುರಾರ್ಯಸತ್ಯ ಅಷ್ಟಾಂಗಮಾರ್ಗಗಳನ್ನು ತಿಳಿಸುವ ಧರ್ಮಚಕ್ರಪ್ರವರ್ತನಸೂತ್ರವನ್ನು ಸಂಗ್ರಹಿಸಿ ಉಪದೇಶಭಾಗಗಳನ್ನು ಅಳವಡಿಸುವಲ್ಲಿ ಗೋವಿಂದ ಪೈಯವರು ಕಲಾಪ್ರಜ್ಞೆಯನ್ನು ಮೆರೆದಿದ್ದಾರೆ. ಆ ಮೂಲಕ ಬುದ್ಧನ 'ರೂಪಕಾಯ'ವನ್ನು 'ಧರ್ಮಕಾಯ'ವನ್ನು ನಿರೂಪಿಸಿ ಚಾರಿತ್ರಿಕ ಬುದ್ಧ ಹಾಗೂ ಪೌರಾಣಿಕ ಬುದ್ಧ ಎಂಬ ನೆಲೆಗಳಲ್ಲಿ ಬುದ್ಧದರ್ಶನವನ್ನು ಮಾಡಿಸಿದ್ದಾರೆ.

ಗೊಲ್ಗೊಥಾ ಮತ್ತು ವೈಶಾಖಿ ಖಂಡಕಾವ್ಯಗಳು ವಸ್ತು ಮತ್ತು ರಚನೆಯ ರೀತಿಯಿಂದ ಸ್ಥೂಲವಾದ ಸಾಮ್ಯತೆ ಉಳ್ಳವು– ಇಬ್ಬರು ಮಹಾಪುರುಷರ ಸಾವಿನ ಸಂದರ್ಭವನ್ನು ವಸ್ತುವಾಗಿ ಹೊಂದಿವೆ; ಇಬ್ಬರ ಸಾವಿನ ದಾರ್ಶನಿಕ ಅರ್ಥವನ್ನು ಮೂಡಿಸುವ ಕಾವ್ಯರಚನಾತಂತ್ರವನ್ನು ಹೊಂದಿವೆ. ಯೇಸುವಿನ ಸಾವು, ಬದುಕನ್ನು ಮೊಟಕುಗೊಳಿಸಿ ಹಿಂಸೆಯಿಂದ ಕ್ರೌರ್ಯದಿಂದ ಹೇರಿದಂಥದ್ದು, ದುರಂತವಾಗಿ ಕಾಣುವಂಥದ್ದು. ಬುದ್ಧನದು ಪೂರ್ಣ ಬದುಕನ್ನು ಬಾಳಿ, ಶಾಂತವಾಗಿಯೆ ಸಹಜ ಸಾವಿಗೆ ಒಳಗಾದದ್ದು. ಕಾವ್ಯಭಾಷೆಯಲ್ಲಿ, ಒಂದು 'ಅಮೃತನ ದೇವಸುತನ ಮೃತಿ ನಾಟಕ' ಇನ್ನೊಂದು "ತಥಾಗತನ ಪರಿನಿರ್ವಾಣ ನಾಟಕ".

ಅಪೂರ್ಣ ಖಂಡಕಾವ್ಯ 'ಪ್ರಭಾಸ' ಶ್ರೀ ಕೃಷ್ಣನ ಕೊನೆಯ ದಿನವನ್ನು ಕುರಿತದ್ದು. ಪ್ರಭಾಸ ಎಂಬುದು ಒಂದು ತೀರ್ಥಕ್ಷೇತ್ರ. ಅಂತಃಕಲಹದಿಂದ ಯಾದವಕುಲ ಸಂಹಾರವಾದ ಸ್ಥಳ ಮತ್ತು ಶ್ರೀಕೃಷ್ಣನ ದೇಹತ್ಯಾಗವಾದದ್ದು ಇಲ್ಲೇ ಎಂಬುದರಿಂದ ಈ ಖಂಡಕಾವ್ಯಕ್ಕೆ ಪೈಯವರು 'ಪ್ರಭಾಸ' ಎಂಬ ಶೀರ್ಷಿಕೆ ಕೊಟ್ಟಿದ್ದಾರೆ. ಮಹಾಭಾರತ ಮತ್ತು ಭಾಗವತ ಪುರಾಣಗಳಲ್ಲಿ ಶ್ರೀಕೃಷ್ಣನ ದೇಹಾವಸಾನಕ್ಕೆ ಹಿನ್ನೆಲೆಯಾಗಿ ಯಾದವಕುಲ ನಾಶಕಾರಕವಾದ ಋಷಿಗಳ ಶಾಪ, ಮುಸಲೋತ್ಪತ್ತಿ

ಪ್ರಕರಣ; ಯಾದವರು ಅಂತಃಕಲಹದಿಂದ ನಾಶವಾಗುವುದು, ಅದರ ಭಾಗವಾಗಿಯೆ ಶ್ರೀಕೃಷ್ಣನ ಸಂಕಲ್ಪದಂತೆ ಮತ್ತು ಗಾಂಧಾರಿ ಶಾಪ ಫಲಿಸುವಂತೆ ಶ್ರೀಕೃಷ್ಣ ಬೇಡನೊಬ್ಬನ ಬಾಣದ ಹೊಡೆತ ನಿಮಿತ್ತವಾಗಿ ದೇಹತ್ಯಾಗ ಮಾಡುವ ವಿವರವಿರುತ್ತದೆ. ಗೋವಿಂದ ಪೈಯವರು ಇವೆರಡು ಆಕರಗಳನ್ನು ಯಥೋಚಿತ ಆಧರಿಸಿದ್ದಾರೆಂದು ರಚಿತವಾಗಿರುವ ಭಾಗವಷ್ಟರಿಂದಲೇ ವೇದ್ಯವಾಗುತ್ತದೆ.

'ಮಹಾತ್ಮನ ಕಡೆಯ ದಿನ'ವೆಂದೇ ಉಪಶೀರ್ಷಿಕೆ ಇರುವ ಪೈಯವರ 'ದೇಹಲಿ' ಖಂಡಕಾವ್ಯ ಮಹಾತ್ಮರ ಮರಣಗಳ ಕುರಿತಿರುವ ಖಂಡಕಾವ್ಯ ಶೃಂಖಲೆಯಲ್ಲಿ ಕೊನೆಯದು, ಅಪೂರ್ಣವಾದುದು. ಇತರ ಮೂರು ಖಂಡಕಾವ್ಯಗಳಿಗಿಂತ ಇದು ಭಿನ್ನವಾಗಿ ಕಾಣುವಂಥದ್ದು. ಮುಖ್ಯವಾಗಿ ಉದ್ದೇಶಿತ ಮಹಾಪುರುಷರಲ್ಲಿರುವ ಅಂತರದಲ್ಲಿದೆ. ಯೇಸು, ಬುದ್ಧ, ಕೃಷ್ಣ- ಧಾರ್ಮಿಕ ಮಹಾತ್ಮರು, ಭಗವಾನರು. ಗಾಂಧೀಜಿ ಬದುಕಿರುವಾಗಲೆ ಪುರಾಣಪುರುಷರಾಗಿ ಬೆಳೆದವರಾದರೂ, ಸದ್ಯೇತಿಹಾಸದ ಬದ್ಧತೆ ಉಳ್ಳವರು. ಆಗಿಯೂ ಒಂದು ರಾಷ್ಟ್ರೀಯ ಬದುಕಿನ ಸರ್ವಾಂಗಗಳಲ್ಲಿ ತನ್ನ ಅದ್ವಿತೀಯವಾದ ಪ್ರಭಾವವನ್ನು ಬೀರಿ, ಸತ್ಯ ಅಹಿಂಸೆಗಳಿಂದಲೇ ಜಗತ್ತಿನೆಲ್ಲ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ ಎಂಬ ಮಾರ್ಗವನ್ನು - ಗಾಂಧಿ ಮಾರ್ಗ- ತೋರಿ ಮಹಾತ್ಮನಾಗಿ ಯುಗಪುರುಷನಾಗಿ ಬೆಳಗಿ ಯೇಸು ಕೃಷ್ಣರ ಕೊನೆಗೆ ಸದೃಶವಾದ ಮರಣವನ್ನು ಕಂಡವರು, ಎಂದೇ ಗೋವಿಂದ ಪೈಯರಿಗೆ ಗಾಂಧಿಯ ಕಡೆಯ ದಿನ ಅವರ ಇತರ ಕಾವ್ಯಗಳ ವಿವಕ್ಷೆಯೊಳಗೇ ಸೇರುವಂತಹ ವಸ್ತುವಾಗುತ್ತದೆ. ಖಂಡಕಾವ್ಯಕ್ಕೆ 'ದೇಹಲಿ' ಎಂಬ ಹೆಸರು ಮಹಾತ್ಮರುಗಳ ಮರಣವಾದ ಸ್ಥಳದಿಂದ ನಿರ್ದೇಶಿತವಾದ ಗೊಲ್ಗೊಥಾ ಪ್ರಭಾಸ ಮಾದರಿಯಲ್ಲಿ ಕೊಡಲ್ಪಟ್ಟುದು. ೧೩೩ರಷ್ಟು ಸಾಲುಗಳು ಪ್ರಕಟವಿವೆ; ಇವು ಉದ್ದೇಶಿತ ಕಾವ್ಯವಿಸ್ತಾರದ ೧/೪ ಭಾಗದಷ್ಟು ಮಾತ್ರ- ಗಾಂಧೀಜಿಯ ಕುರಿತು ಪೈಯವರು ಕಾವ್ಯರಚನೆಗೆ ತೊಡಗಿದಾಗ, ಉಳಿದ ಕೃತಿಗಳಿಗಿದ್ದಂತೆ, ಯಾವುದೇ ಆಕರ ಗ್ರಂಥವಿರಲಿಲ್ಲ. ಮತ್ತು ರಚಿತವಾಗಿರುವಷ್ಟರಿಂದಲೇ ಹೇಳುವುದಾದರೆ, ಇತರ ಖಂಡಕಾವ್ಯಗಳ ರಚನಾವಿಧಾನವನ್ನು ಇದು ಯಥಾವತ್ತಾಗಿ ಅನುಸರಿಸಿದಂತಿಲ್ಲ.

ನಾಟಕಗಳು

ಪೈಯವರಲ್ಲಿ ಚಿಕ್ಕಂದಿನಲ್ಲಿಯೆ ನಾಟಕಕಾರನ ತುಡಿತ ಇದ್ದಂತಿತ್ತು. ಆತ್ಮಕಥನದಿಂದ ತಿಳಿದು ಬರುವಂತೆ ಅವರು ಮೊದಲು ಬರೆದದ್ದು ನಾಟಕವನ್ನೇ. ಆದರೆ ಬಹಳ ಅನಂತರದಲ್ಲಿ ೧೯೩೦ರಲ್ಲಿ ಪ್ರಕಟವಾದ 'ತಾಯಿ' ಎಂಬ ಏಕಾಂಕ, ಅನುವಾದವೆಂದು ತಿಳಿದುಬಂದಿರುವುದರಿಂದ, ನಾಟಕಕಾರ ಗೋವಿಂದ ಪೈಯವರ ಪರಿಚಯಕ್ಕಾಗಿ 'ಹೆಬ್ಬೆರಳು' (೧೯೪೬) ತನಕ ಕಾಯಬೇಕಾಗುತ್ತದೆ. 'ತಾಯಿ' ಏಕಾಂಕ ಸ್ವಹಿತಚಿಂತನೆ, ಸ್ವಾರ್ಥಗಳ ಕತ್ತಲಲ್ಲಿ ಮಾತೃಪ್ರೇಮ, ತಾಯ್ತನ

ಮಸುಕುಗೊಳ್ಳುವ ಚಿತ್ರಣದಿಂದ ತಾಯಿ ಯಾರು, ಎನ್ನುವ ಕುತೂಹಲಕ್ಕೆ ಒಳಪಡಿಸುವಂಥದ್ದು.

ಮಹಾಭಾರತದಲ್ಲಿ ಬರುವ ಏಕಲವ್ಯಾಖ್ಯಾನ ಒಂದು ದುರಂತ ನಾಟಕದ ಛಾಯೆ ಉಳ್ಳದ್ದು. ಮಹಾಭಾರತದ ಪಾತ್ರಗಳೆಲ್ಲ ಮಾನವ ಸಹಜ ರಾಗ, ವಿದ್ವೇಷ, ಈರ್ಷ್ಯೆ ಇತ್ಯಾದಿ ಸ್ವಭಾವಗಳಿಂದ ಕೂಡಿದವರೇ. ಹಾಗಾಗಿ ಅವರನ್ನು ಆಗಿನ ಸಾಮಾಜಿಕ ಧಾರ್ಮಿಕ ಪರಿಸ್ಥಿತಿಯಲ್ಲೆ ಪರಿಭಾವಿಸುವುದು ಸಾಧ್ಯ. ಏಕಲವ್ಯನ ದುರಂತಕ್ಕೆ ಅವನ ಉತ್ಕಟ ಗುರುಭಕ್ತಿ, ಅರ್ಜುನನ ಮತ್ಸರ, ದ್ರೋಣನ ಕೊಟ್ಟ ಮಾತನ್ನು ಸತ್ಯವಾಗಿಸುವ ಛಲ, ಒಂದಕ್ಕೊಂದು ಹೆಣೆದು ಕಾರಣವಾಗುವಂತೆ ಕಾಣುತ್ತದೆ. ವ್ಯಕ್ತಿಗತವಾದ ಇಂಥ ಕಾರಣಗಳೇ ಅಲ್ಲದೆ, ಮಾನವ ಸಂಬಂಧಗಳಲ್ಲಿ ಇದ್ದ ಹೀನ ಭೇದಭಾವವೂ- ಆರ್ಯ ಅನಾರ್ಯ ಭೇದ ಇಲ್ಲಿ ಪ್ರವರ್ತಿಸುವುದನ್ನು ಕಾಣಬಹುದು. ವ್ಯಾಸಭಾರತದಲ್ಲಿ ಸುಳುಹುದೋರುವ ಈ ಅಂಶವನ್ನು ಪೈಯವರು 'ಹೆಬ್ಬೆರಳು' ನಾಟಕದ ಭಾಗವಾಗಿಸುತ್ತಾರೆ. ಆರ್ಯ ಅನಾರ್ಯ, ಉತ್ತಮ ಅಧಮ, ದ್ವಿಜ ದ್ವಿಜೇತರ ಜಾತಿಭೇದ- ಇವುಗಳ ಆಚರಣೆಯ ಘೋರ ಪರಿಣಾಮಗಳನ್ನು ಅರುಹುವುದೂ ನಾಟಕದ ಉದ್ದೇಶವಾಗುತ್ತದೆ. 'ಹೆಬ್ಬೆರಳು' ನಾಟಕ ಇಂಥ ಒಂದು ಸಮಸ್ಯೆಯನ್ನು ಆಖ್ಯಾನವೊಂದರ ನಿರ್ವಹಣೆಯಲ್ಲೆ ಒಳಗೊಂಡಿರುವುದು, ಅದು ನಮ್ಮ ಸಮಕಾಲೀನ ಸಮಸ್ಯೆಯೂ ಆಗಿರುವುದರಿಂದ ಪ್ರಸ್ತುತವಾಗುತ್ತದೆ.

ನಾಟಕದ ಆಶಯ ಆರ್ಯ ಅನಾರ್ಯ ಭೇದ ತೊಡೆಯಬೇಕೆನ್ನುವುದನ್ನು ಪ್ರತಿಪಾದಿಸುವುದರಲ್ಲಿದೆ-

ಹೆಬ್ಬೆರಳ ಹೊರತನ್ಯ ಬೆರಳುಗಳಪೂರ್ಣವೆಂ
ಬಂತನಾರ್ಯರ ವಿನಾ ಆರ್ಯಜಾತಿಯಪೂರ್ಣ
ವೆಂಬ ಸತ್ಯವ ಛಲಾ ತನ್ನ ತರಿದಿತ್ತ ಹೆ
ಬ್ಬೆರಳಿಂದಕಟ ಸುಟ್ಟಿ ತೋರಿಸಿದನೀ ಹಸುಳೆ!

ಎಂದು ಗೊಂದಳದವರು ಹೇಳುತ್ತಾರೆ, ಮುಖ್ಯವಾಗಿ ಗೋವಿಂದ ಪೈಯವರದ್ದು ಸಂಪ್ರದಾಯದ ಚೌಕಟ್ಟಿನಲ್ಲೆ ಸುಧಾರಣೆಯನ್ನು ಬಯಸುವ ಮನೋಧರ್ಮ. ಆರ್ಯ ಅನಾರ್ಯರು ಒಟ್ಟಾಗಬೇಕೆಂಬ, ಸೌಹಾರ್ದದಿಂದ ಭೇದವಿಲ್ಲದೆ ಬದುಕಬೇಕೆಂಬಷ್ಟೇ ಆಶಯ. ಈ ಸುಧಾರಣಾದೃಷ್ಟಿಯೇ ನಾಟಕಕ್ಕೆ ಬಿಗುಪನ್ನು ತಂದುಕೊಡಬೇಕಾಗಿದ್ದ ಸಂಘರ್ಷವನ್ನು ಇಲ್ಲವಾಗಿಸಿದೆ. ನಾಟಕ ತಿಳಿಸಿಕೊಡಬೇಕಾದ ಅರ್ಥಗಳನ್ನು ಗೊಂದಳ ವಿವರಿಸಬೇಕಾಗುತ್ತದೆ. ಇಷ್ಟಾಗಿಯೂ ಪೌರಾಣಿಕ ಕಥೆಯ ಒಳಗಡೆಯೇ ಪೈಯವರು ಮಾನವಕುಲದ ಮುಖ್ಯ ಸಮಸ್ಯೆಯೊಂದನ್ನು ಕುರಿತಿರುವುದು ಮಹತ್ವದ್ದು. ಹೆಬ್ಬೆರಳು ತನ್ನ ಸಮಾಜದ ಸದ್ಯಸ್ಥಿತಿಗೆ ಸ್ಪಂದಿಸುವ ಕೃತಿಯಾಗಿ ಮುಖ್ಯವಾಗುತ್ತದೆ.

ಗಾಂಧೀಜಿಯವರು ೧೯೪೨ರಲ್ಲಿ 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' (ಕ್ವಿಟ್ ಇಂಡಿಯಾ) ಎಂದು ಘೋಷಿಸಿದ್ದು ಪೈಯವರ ದೃಷ್ಟಿಯಲ್ಲಿ ಭಾರತ ಸ್ವಾತಂತ್ರ್ಯದ ಗಾಯತ್ರಿ ಮಂತ್ರವಾಯಿತು. ಈ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದ ಹುಬ್ಬಳ್ಳಿಯ ವಿದ್ಯಾರ್ಥಿಗಳ ಮೇಲೆ ಪೊಲೀಸಿನವರು ಗುಂಡು ಹಾರಿಸಿದಾಗ ವೀರೇಂದ್ರ ಎಂಬ ಒಬ್ಬ ವಿದ್ಯಾರ್ಥಿಯು ಮಡಿದುಹೋದ ಸುದ್ದಿಯ ಹಿನ್ನೆಲೆಯಲ್ಲಿ, 'ಚಿತ್ರಭಾನು ಅಥವಾ ೧೯೪೨' ಎಂಬ ನಾಟಕವನ್ನು ಪೈಯವರು ರಚಿಸಿದ್ದಾರೆ. ೧೯೪೨ರ ಚಳವಳಿಯಲ್ಲಿ ತೊಡಗಿದವರ ನಿಜಸ್ಫೂರ್ತಿಯ ಒಂದು ಸೆಲೆ ಇಲ್ಲಿ ಪರಿಚಯವಾಗುತ್ತದೆ. ತಾಯಿ–ಮಗ, ಪ್ರಿಯ–ಪ್ರೇಯಸಿ ಸಂಬಂಧಗಳನ್ನು ದೇಶಭಕ್ತಿ ಮೀರಿ ನಿಲ್ಲುವ ಚಿತ್ರ ಇಲ್ಲಿ ಸಿಗುತ್ತದೆ. ಮಹಾತ್ಮಾ ಗಾಂಧಿಯವರ ಅಹಿಂಸಾಮಾರ್ಗದ ಬಗ್ಗೆ ಗೌರವವಿದ್ದೂ, ದೇಶದ ಬಿಡುಗಡೆಯ ಉದ್ದೇಶದಲ್ಲಿ ಹಿಂಸಿಸಿದವರನ್ನು ಪ್ರತಿಹಿಂಸಿಸುವ ಧೋರಣೆಯೇ ಇದ್ದ ಪ್ರಬಲವಾದ ಹೋರಾಟಗಾರರ ವರ್ಗವೂ ಇತ್ತು.

ಹೆರವರೆಮಗೀವ ಪೀಡೆಗೆ ನಾವವರ ಸಾಲ
ಗಾರರಾಗದೆ ಬಡ್ಡಿ ಸಹ ಸಲಿಸಬೇಕು

ಎಂಬ ವರ್ಗದವರ ಪ್ರತೀಕವಾಗಿಯೇ ಈ ನಾಟಕದ ವೇಣುಗೋಪಾಲ ಎಂಬ ನಾಯಕನಿದ್ದಾನೆ. ತಾಯಿ ಯಶೋದೆ ೬೫ರ ಮುದುಕಿ, ಜಾಹ್ನವಿ ಸಾಕು ಮಗಳು. ವೇಣುಗೋಪಾಲನಿಗೆ ತಾಯಿ ಮತ್ತು ಜಾಹ್ನವಿಯರ ಪ್ರೇಮ ಮತ್ತು ಅವರ ಬದುಕಿಗೆ ತನ್ನ ಅನಿವಾರ್ಯತೆಯ ಅರಿವಿದ್ದೂ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುವುದರ ಹಿಂದಿರುವ ದೇಶಭಕ್ತಿಯ ತೀವ್ರತೆ ಆಗಿನ ಕಾಲಕ್ಕೆ ಸಹಜವಾದದ್ದೆ. ರಾತ್ರಿಯ ಕೇವಲ ೫ ಗಂಟೆಯ ಅವಧಿಯಲ್ಲಿ ನಡೆಯುವ ಈ ಏಕಾಂಕ ಸರಳ ಸಂವಿಧಾನವುಳ್ಳದ್ದು. ಆದರೆ ನಾಟಕಕಾರರಿಗೆ ೧೯೪೨ರ ಚಳವಳಿಯ ಚಿತ್ರ ಕೊಡುವ ಆಕಾಂಕ್ಷೆಯೂ ಇರುವುದರಿಂದ ನಾಟಕದ ಪಾತ್ರಗಳು ಮಿತಿಮೀರಿ ಮಾತನಾಡುತ್ತವೆ. ಪಾತ್ರಗಳು ಸ್ವಭಾವದಿಂದ ಸ್ವಯಂಸ್ಪಷ್ಟವಾಗುವಷ್ಟಲ್ಲದೆ, ಆಡುವ ಸ್ವಾರಸ್ಯವೇ ಆಗಿ ಕಾಣುವ ಹೆಚ್ಚಿನ ಮಾತುಗಳು ನಾಟಕವನ್ನು ಉದ್ದವಾಗಿಸಿದೆಯಲ್ಲದೆ, ಸನ್ನಿವೇಶದ ಉತ್ಕಟತೆಯನ್ನು ಸಡಿಲುಗೊಳಿಸುತ್ತವೆ.

ನೋ ನಾಟಕಗಳು

ಜಪಾನಿನ ನೋ (Noh) ನಾಟಕಗಳು ಕನ್ನಡಕ್ಕೆ ಮೊದಲು ಪರಿಚಯವಾದುದು ಪೈಯವರು ಅನುವಾದ ಮಾಡಿಕೊಟ್ಟಿರುವ ಎಂಟು ನೋ ನಾಟಕಗಳಿಂದಲೇ. ಜಪಾನಿನ ರಂಗಭೂಮಿಯಲ್ಲಿ ಆರುನೂರು ವರ್ಷಗಳ ಇತಿಹಾಸದಿಂದ ಪ್ರಸಿದ್ಧವಾಗಿರುವ ಈ ನಾಟಕ ಪ್ರಕಾರ ಪ್ರದರ್ಶನದ ಉದ್ದೇಶದಲ್ಲಿಯೇ

ರಚನೆಯಾದಂಥವು. ಸಾಹಿತ್ಯದ ಭಾಗ ಕಡಿಮೆ ಇದ್ದು ನೃತ್ಯ ಸಂಗೀತಗಳೇ ಪ್ರಧಾನವಾಗುತ್ತವೆ. ಮಾತಿಗಿಂತ ಹಾವಭಾವ, ಕೆಲವೆಡೆ ಮೌನವೇ ಇಂಗಿತಗಳನ್ನು ಧ್ವನಿಸುವ ಇದರಲ್ಲಿ ಪಾತ್ರಗಳಾಡುವ ಮಾತು ಕಡಿಮೆ; ಗದ್ಯದಲ್ಲಿಯೂ ಪದ್ಯದಲ್ಲಿಯೂ ಇರುವ ಸಾಹಿತ್ಯಭಾಗ ನಾಟಕಕ್ಕೆ ಚೌಕಟ್ಟು ಒದಗಿಸುತ್ತದೆ.

ನೋ ನಾಟಕಗಳಲ್ಲಿ ಬುದ್ಧನ ತತ್ವವನ್ನು ಪ್ರತಿಪಾದಿಸುವವುಗಳು ಹೆಚ್ಚು. ಬೋಧಿಸತ್ವರು, ದೇವತೆಗಳು, ಪ್ರೇತಗಳು, ಸತ್ತಿರುವವರ ಆತ್ಮಗಳು- ಇತ್ಯಾದಿ ಯಾವುದಾದರೂ ಅಲೌಕಿಕ ಅನ್ನಿಸುವ ಪಾತ್ರಗಳಿರುತ್ತವೆ. ಅಲೌಕಿಕ ಪಾತ್ರಗಳಿಗೆ ವಾಸ್ತವ ಸಂಬಂಧ ಕಲ್ಪಿಸುವಂತೆ, ವಾಸ್ತವ ಪ್ರಪಂಚದ ಪಾತ್ರಗಳೂ ಇರುತ್ತವೆ.

ಸುಮಾರು ೨೫೦ರಷ್ಟಿವೆಯೆಂದು ತಿಳಿದುಬರುವ ನೋ ನಾಟಕಗಳಲ್ಲಿ ಗೋವಿಂದ ಪೈಯವರು ಮಾಡಿರುವ ಅನುವಾದಗಳು ಎಂಟೇ ಆಗಿದ್ದರೂ ನೋ ನಾಟಕಗಳ ಸ್ಥೂಲರೂಪವನ್ನು ತಿಳಿಸುವಷ್ಟು ವೈವಿಧ್ಯವಾಗಿವೆ. ಅವುಗಳ ಹೆಸರು ಇಂತಿವೆ: ೧. ಕಾಯೊಯ್ ಕೊಮಾಚಿ ೨. ಸೊತೋಬಾ ಕೊಮಾಚಿ ೩. ಹಾಗೊರೋಮೊ ೪. ಕುಮಸಾಕಾ ೫. ತ್ಸುನೆಮಾಸ ೬. ಸೂಮಾಗೆಂಜಿ ೭. ಚೊರಿಯೊ ೮. ಶೋಜೋ

'ಕಾಯೊಯ್ ಕೊಮಾಚಿ' 'ಸೊತೋಬಾ ಕೊಮಾಚಿ'ಗಳು ಒನೋ ನೋ ಕೊಮಾಚಿ ಎಂಬುವವಳಿಗೆ ಸಂಬಂಧಿಸಿದ್ದು. ಅವಳು ಶೋಶೋ ಎಂಬುವನನ್ನು ಆರ್ತವಾಗಿ ಪ್ರೇಮಿಸಿಯೂ, ಆತ ಬೌದ್ಧಧರ್ಮವನ್ನು ಒಪ್ಪುವವರೆಗೆ ಜೊತೆಗೂಡದ ನಿಷ್ಠೆಯನ್ನು ಕುರಿತಿದೆ. 'ಹಾಗೊರೋಮೊ'ದಲ್ಲಿ ಅಪ್ಸರೆಯೋರ್ವಳಿಂದ ಮನುಷ್ಯರಿಗೆ ನೃತ್ಯವಿಶೇಷವೊಂದು ಕಲಿಸಲ್ಪಡುವ ಸನ್ನಿವೇಶ ಚಿತ್ರಣವಿದೆ. 'ಕುಮಸಾಕಾ'ದಲ್ಲಿ ದಾರಿಗಳ್ಳನಾಗಿದ್ದವನು ತನ್ನ ಪ್ರೇತದ ನೆಲೆಯಲ್ಲಿ 'ಚೆನ್ನಾದ ಚಿತ್ತವೃತ್ತಿ ಮತ್ತು ನೇರಾದ ಕ್ರಮಶೀಲತೆ ಬುದ್ಧನ ಭಕ್ತಿಗಿಂತಲೂ ಮೇಲು' ಎನ್ನುವುದನ್ನು ತಿಳಿಸುವ ಪಾತ್ರವಾಗಿ ಬರುತ್ತಾನೆ. 'ತ್ಸುನೆಮಾಸ'ದಲ್ಲಿ ವೀರಯೋಧನ ಆತ್ಮ ಪ್ರಕಟಗೊಂಡು ತನ್ನ ಬಾಳ್ವೆಯ ವೈಭವವನ್ನು ಮನಗಾಣಿಸುತ್ತದೆ. ಗೆಂಜಿ ಎಂಬ ಮರಕಡಕ ಸತ್ತು ಭೂತವಾಗಿರುವನಾದರೂ ಸೂಮಾ ಎಂಬ ಅವನ ಸ್ಥಳದಲ್ಲಿ, ಜೀವಿಸಿದ್ದಾಗ ಹಲವು ಸ್ಥಾನಮಾನಗಳಲ್ಲಿ ಏರಿಕೆ ಪಡೆದು ಒಂದಾಗಿ 'ಸೂಮಾಗಂಜಿ' ಅನ್ನಿಸಲ್ಪಡುವುದರ ಅನ್ವರ್ಥತೆಯನ್ನು 'ಸೂಮಾಗೆಂಜಿ' ತಿಳಿಸುತ್ತದೆ. 'ಶೋಜೋ' ಎಂಬುದರಲ್ಲಿ ಮದಿರೆಯ ಪ್ರಭಾವವನ್ನು ತಿಳಿಸಿದೆಯಾದರೆ, 'ಚೊರಿಯೊ'ದಲ್ಲಿ ಆ ಹೆಸರಿನ ಒಬ್ಬ ಸಾಮಾನ್ಯ ಪ್ರಜೆ ತನ್ನ ನಿಷ್ಠೆಗೆ ದೇವತೆಯಿಂದ ಅನುಗ್ರಹೀತವಾಗುವುದನ್ನು ವಿವರಿಸಿದೆ.

ನೋ ನಾಟಕಕ್ಕೆ ಸಂಬಂಧಿಸಿದಂತೆ ಪೈಯವರ ಅನುವಾದ ವಿಧಾನ ನಿರ್ದಿಷ್ಟವಲ್ಲ; ಪ್ರಕಾರ ಬದಲಾವಣೆ ಮಾಡದೆ ನಾಟಕದ ಸ್ವರೂಪವನ್ನು

ಉಳಿಸಿಕೊಟ್ಟಿದ್ದಾರೆ. ಆದರೆ ಗದ್ಯ ಪದ್ಯಗಳೆರಡನ್ನೂ ಗದ್ಯಾನುವಾದಗೊಳಿಸಿದ್ದಾರೆ. ಜಪಾನಿ ಭಾಷೆಯ ಕ್ಲಿಷ್ಟತೆಯನ್ನು ಮೀರುವುದಕ್ಕೆ ತಕ್ಕಮಟ್ಟಿಗೆ ನೆರವಾಗಬಹುದೆಂಬ ಭಾವನೆಯಿಂದ ಗದ್ಯವನ್ನು ಆಶ್ರಯಿಸಿರಬೇಕು. ಸಂಗ್ರಹಾನುವಾದವೇ ಪೈಯವರ ದೃಷ್ಟಿಯಿರುವಂತೆ ಕಾಣುವುದರಿಂದ, ಗದ್ಯ ಮಾಧ್ಯಮ ಒಂದು ಸೌಕರ್ಯವೂ ಆಗಿದೆ. ನೋ ನಾಟಕಗಳನ್ನು ಕನ್ನಡಕ್ಕೆ ತಂದವರಲ್ಲಿ ಅವರೇ ಮೊದಲಿಗರು ಎಂಬ ದಾಖಲೆ ಹೇಗೂ ಉಳಿಯುವಂಥದ್ದೆ. ಆ ಮೇಲೆಯೂ ಬೇರೆಯವರಿಂದ ಗಮನಾರ್ಹವಾಗಿ ನೋ ನಾಟಕಗಳನ್ನು ಕನ್ನಡಿಸುವ ಕೆಲಸವಾಗಿಲ್ಲದಿರುವುದರಿಂದ ಕನ್ನಡದ ಮಟ್ಟಿಗೆ ಈ ವಿಶಿಷ್ಟ ನಾಟಕ ಪ್ರಕಾರದ ಜೊತೆ ಪೈಯವರ ಹೆಸರು ತಾನೇ ತಾನಾಗಿ ಉಳಿದಿದೆ.

ಪ್ರಯೋಗಶೀಲತೆ

ಪ್ರಯೋಗಶೀಲತೆ ಪೈಯವರಲ್ಲಿ ಸಹಜವಾದ ಗುಣ; ಛಂದಸ್ಸಿನ ಬಳಕೆಯಲ್ಲಿ ಶಬ್ದಪ್ರಯೋಗಗಳಲ್ಲಿ ಇದು ನಿಚ್ಚಳವಾಗಿ ಮೂಡಿಬಂದಿದೆ. ಛಂದಸ್ಸಿನ ಹಳೆಮಟ್ಟು ಹೊಸಮಟ್ಟುಗಳಲ್ಲಿ ಹೊಸಗತಿಗಳನ್ನು ಅವರು ಅವಿಷ್ಕರಿಸಿದ್ದಾರೆ. ಸಾನೆಟ್‌ನಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಆದಿಪ್ರಾಸದ ಬದ್ಧತೆಯನ್ನು ನಿರಾಸಗೊಳಿಸಿದರೇ ಹೊರತು, ಲಾಲಿತ್ಯಕ್ಕಾಗಿ ಆದಿ ಅಂತ್ಯ ಒಳಪ್ರಾಸಗಳಲ್ಲಿ ವೈವಿಧ್ಯಮಯ ವಿಲಾಸವನ್ನು ಸಾಧಿಸಿದ್ದಾರೆ.

ಗೋವಿಂದ ಪೈಯವರಿಗೆ ಶಬ್ದಗಳನ್ನು ನಿಷ್ಕೃಷ್ಟತೆಯಲ್ಲಿ ಬಳಸುವುದು, ಬಳಕೆಯಿಂದ ಸರಿದು ಹೋಗುತ್ತಿರುವ ಅರ್ಥಪ್ರದ ಭಾವಪ್ರದವಾದ ಪದಗಳನ್ನು ಬರಹದಲ್ಲಿ ಮತ್ತೆ ರೂಢಿಸುವುದು, ಹೊಸಪದಗಳನ್ನು ವ್ಯಾಕರಣದ ಚೌಕಟ್ಟಿನೊಳಗೇ ಟಂಕಿಸುವುದು– ಭಾಷೆಯ ಪುನರುತ್ಥಾನದ ಭಾಗವಾಗಿಯೇ ಕಂಡಿತ್ತು. ಅವರ ಪದ್ಯ ಗದ್ಯಗಳೆರಡರಲ್ಲೂ ಇವು ಸಮೃದ್ಧವಾಗಿವೆ. ಅವರ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿಯೆ ಕೆಲವು ಮಾರ್ಗದರ್ಶಕ ಸೂತ್ರಗಳನ್ನು ಮುಂದಿರಿಸಿದ್ದರು. ಈಗ "ಗೋವಿಂದ ಪೈ ಪದ–ಪ್ರಯೋಗ ಕೋಶ" (ಸಂಪಾದಕರು: ಎ.ವಿ. ನಾವಡ, ಸಿ. ಉಪೇಂದ್ರ ಸೋಮಯಾಜಿ)ವೇ ಪ್ರಕಟಗೊಂಡಿದೆ.

'ಇಸು' ಪ್ರತ್ಯಯ ಹಚ್ಚಿ ಪ್ರಯೋಗಿಸಿ ಸಹಸ್ರಾರು ಹೊಸ ಕ್ರಿಯಾಪದಗಳನ್ನು ಸೃಷ್ಟಿಸಬಹುದೆಂದು ಅವರು ತೋರಿಸಿಕೊಟ್ಟಿದ್ದಾರೆ– ಕವನಿಸು, ಉದ್ಯಮಿಸು, ಅಂಕಿಸು, ಅಂತರಿಸು, ಉದ್ಯಾಪಿಸು, ಉದಾನಿಸು, ಉಪ್ಪಯಣಿಸು ಇತ್ಯಾದಿ. ತದ್ಧಿತ ಪ್ರತ್ಯಯಗಳನ್ನು ಹಚ್ಚಿ– ಕನ್ನಡ–ಕನ್ನಡಿಕೆ, ಗಂಡು–ಗಂಡಿಕೆ, ಕೇಳು–ಕೇಳುಗ, ನುಡಿ–ನುಡಿತ, ಎಗರು–ಎಗರಿಕೆ, ಅರ್ಥ–ಅರ್ಥವಿಕೆ – ಹೀಗೆ ಶಬ್ದ ಸಂಪತ್ತನ್ನು ಹೆಚ್ಚಿಸಿದ್ದಾರೆ. ಸಂಧಿ ಸಮಾಸಗಳನ್ನು ಮಾಡಿ ಹೊಸ ಶಬ್ದಗಳನ್ನು ನಿರ್ಮಿಸಿದ್ದಾರೆ– ಭೀಮಕಾರ್ಯ, ಒಳಕೈಸು, ಹಿಂಡುಗತ್ತಲೆ, ಕನ್ಯಾಕವಿತೆ, ಇತ್ಯಾದಿ. ಇಂಗ್ಲಿಷ್ ಸಂಸ್ಕೃತ

ಭಾಷೆಯ ನುಡಿಗಟ್ಟುಗಳಿಂದ ಪ್ರೇರಣೆ ಪಡೆದು ಅನೇಕ ನುಡಿಗಟ್ಟುಗಳನ್ನು ರಚಿಸಿದ್ದಾರೆ- ಕೆಂಪು ಬಾವುಟ ಎತ್ತು (ಅಪಾಯದ ಸೂಚನೆ), ಬೆಟ್ಟ ಈಯಿತು (ಪರ್ವತ ಪ್ರಸವ), ಬೆಕ್ಕು ಚೀಲದಿಂದ ಹೊರಕ್ಕೆ ಧುಮುಕು (ರಹಸ್ಯ ಬಯಲಾಗು) ಮೊದಲಾದುವು. ಗೋವಿಂದ ಪೈಯವರು 'ಶಬ್ದಪುರುಷ' ರೆಂಬ ಅಭಿಧಾನಕ್ಕೆ ತಕ್ಕರು. ಆಡಳಿತ, ಕಾನೂನು, ವಿಜ್ಞಾನ, ಶಾಸ್ತ್ರ, ವಾಣಿಜ್ಯ, ಉದ್ಯಮಗಳಲ್ಲಿ ಕನ್ನಡವನ್ನು ಸಂಪನ್ನಗೊಳಿಸುವಲ್ಲಿ ಗೋವಿಂದ ಪೈಯವರಿಂದ ಪ್ರೇರಣೆ ಮಾರ್ಗೋಪಾಯಗಳಿವೆ.

ಸಂಶೋಧನೆ

ಪೈಯವರು ಸಾಹಿತ್ಯ ಸಂಶೋಧನೆಗಳ ಸವ್ಯಸಾಚಿಗಳೆಂದು ಪುರಸ್ಕೃತರು. ವಿಶಿಷ್ಟವಾದ ದೈವಕೃಪೆಯುಳ್ಳವರು ಮಾತ್ರ ಅವೆರಡನ್ನೂ ನಡೆಸಿಕೊಂಡು ಹೋಗಬಹುದೆಂದೂ, ತನ್ನ ಪಾಲಿಗೆ ಅವು ಮುಳುವಾಗಿವೆಯೆಂದೂ, ಪೈಯವರು ತನ್ನ ಆತ್ಮಕಥನದಲ್ಲಿ ಹೇಳಿಕೊಂಡದ್ದುಂಟು. ಅವರೇನೂ ಆ ಕೃಪೆಯಿಂದ ಹೊರತಾದವರಲ್ಲ. ಅವರ ಸಂಶೋಧನ ಸಾಹಿತ್ಯವೇ- ಅದಕ್ಕೆ ರಾಷ್ಟ್ರೀಯ ವ್ಯಾಪ್ತಿಯೂ ಇದೆ- ಸೃಜನಶೀಲ ಬರಹಕ್ಕಿಂತ ಹೆಚ್ಚಿನದೇನೋ ಅನ್ನಿಸುವಷ್ಟಕ್ಕಿದೆ. ಆದರೂ ಪೈಯವರಲ್ಲಿ ಅವೆರಡಕ್ಕೂ ಸಮಾನವಾದ ಪ್ರೀತಿ ಸಂದಿದೆ. ಮತ್ತು ಕೇಂದ್ರದಲ್ಲಿ ಅವರೊಬ್ಬ ಸತ್ಯಶೋಧಕ. ಸಾಹಿತ್ಯವು 'ಸತ್ಯಂ ಶಿವಂ ಸುಂದರಂ' ಆಗಿರಬೇಕೆನ್ನುವ ಅವರು ಸತ್ಯಶೋಧನೆಗಾಗಿ ಸಂಶೋಧನೆಯ ಮಾರ್ಗವನ್ನು ತುಳಿಯುತ್ತಾರೆ. ಅವರ ಸಂಶೋಧನೆಯ ಫಲಿತಗಳನ್ನು ಶೋಧನೆಗೆ ಒಳಪಡಿಸಿದವರೂ ಒಂದನ್ನು ನಿಚ್ಚಳವಾಗಿ ಹೇಳುತ್ತಾರೆ: ಅವರು ತಪ್ಪು ಹೇಳಿರಬಹುದು, ಆದರೆ ಎಂದೂ ಸುಳ್ಳು ಹೇಳಿರಲಿಲ್ಲ, ಎನ್ನುವುದು. (ಡಾ. ಎಂ.ಎಂ. ಕಲ್ಬುರ್ಗಿ 'ಗೋವಿಂದ ಪೈ ಶತಮಾನ ಸ್ಮರಣೆ', ಪುಟ ೧೦೫) ಅವರ ಪರಿಶುದ್ಧ ಪ್ರಾಮಾಣಿಕತೆ ಕಾವ್ಯದ ಅನುಭವ ಸಾಮಗ್ರಿಯಲ್ಲಾಗಲೀ, ಸಂಶೋಧನ ಸಾಮಗ್ರಿಯ ಬಳಕೆಯಲ್ಲಾಗಲಿ ಎದ್ದು ಕಾಣುವ ಅಂಶವಾಗಿದೆ.

೧೯೨೬ರಿಂದ ೧೯೬೦ರವರೆಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬರೆದ ೧೫೦ಕ್ಕೂ ಮಿಕ್ಕ ಸಂಶೋಧನ ಲೇಖನಗಳು ರಾಷ್ಟ್ರಮಟ್ಟದ ಪ್ರಸಿದ್ಧ ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ, ಅಭಿನಂದನ ಗ್ರಂಥಗಳಲ್ಲಿ ಪ್ರಕಟವಾದುವು. ಇವೆಲ್ಲವನ್ನು ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ "ಗೋವಿಂದ ಪೈ ಸಂಶೋಧನ ಸಂಪುಟ" (೧೯೯೫) ಮತ್ತು "INDIANA" (೧೯೯೭) ಗ್ರಂಥಗಳಲ್ಲಿ ಸಂಪುಟಗೊಳಿಸಿದೆ.

೧೪೦೦ ಪುಟಗಳ ಬೃಹತ್ ಗ್ರಂಥ– "ಗೋವಿಂದ ಪೈ ಸಂಶೋಧನ ಸಂಪುಟ"–ದಲ್ಲಿ ಮುನ್ನುಡಿಗಳು, ಧರ್ಮ ತತ್ವಜ್ಞಾನ ಲೇಖನಗಳು, ಪುಸ್ತಕ ವಿಮರ್ಶೆ, ಇತರ ಸಂಕೀರ್ಣ ಬರಹಗಳು ಸೇರಿವೆಯಾದರೂ ಅವುಗಳ ಗಾತ್ರ ಕಡಿಮೆ. ಶುದ್ಧ ಸಂಶೋಧನ ರೀತಿಯ ಬರಹಗಳಲ್ಲಿ ಹಳಗನ್ನಡ ನಡುಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ೫೦ ಬರಹಗಳು, ಹೊಸಗನ್ನಡ ಸಾಹಿತ್ಯದ್ದು ಎರಡು ಪ್ರಬಂಧಗಳು, ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿದ ೨೧ ಲೇಖನಗಳು, ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ೨೨ ಬರಹಗಳು, ಭಾರತದ ಇತಿಹಾಸಕ್ಕೆ ಸಂಬಂಧಿಸಿದ ೧೫ ಲೇಖನಗಳು ಮತ್ತು ವಾಗರ್ಥದ ೬ ಲೇಖನಗಳು ಧರ್ಮ ತತ್ವಜ್ಞಾನಕ್ಕೆ ಸಂಬಂಧಿಸಿದ ೬ ಲೇಖನಗಳು ಮುಖ್ಯವಾದುವು. ೯೦೦ ಪುಟಗಳ INDIANA ದಲ್ಲಿ ೧೯೨೬–೫೩ರ ಅವಧಿಯಲ್ಲಿ ಪ್ರಕಟವಾದ ೨೯ ಇಂಗ್ಲಿಷ್ ಲೇಖನಗಳಿವೆ. ಚರಿತ್ರೆ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಆಸಕ್ತಿಯ ವಿಷಯಗಳಿವೆ.

ಕನ್ನಡ ಕವಿಗಳ ಕಾಲ, ದೇಶ, ಮತ, ಕೃತಿ ವಿಚಾರವಾಗಿ ೨೫ಕ್ಕೂ ಮಿಕ್ಕ ಲೇಖನದಲ್ಲಿ ಗೋವಿಂದ ಪೈಯವರ ಸಂಶೋಧನೆಯ ಕೊಡುಗೆ ಅಪಾರ ಮತ್ತು ಅಮೂಲ್ಯವಾದದ್ದು. ಪಂಪನಿಂದ ಪಾರ್ತಿಸುಬ್ಬನವರೆಗೆ ಅದರ ಚಾಚು ಇದೆ. ಕಾಲನಿರ್ಣಯದಲ್ಲಿ ಮೇಲಿನ ಗಡುವು ಕೆಳಗಿನ ಗಡುವುಗಳನ್ನು ನಿರ್ಣಯಿಸಿಕೊಂಡು ಸತಾರ್ಕಿಕ ಪುರಾವೆಗಳಿಂದ ಅವುಗಳ ಅಂತರವನ್ನು ಕಿರಿದಾಗಿಸುತ್ತಾ ನಿರ್ದಿಷ್ಟತೆಗೆ ತಲಪುವ ಅವರ ವಿಧಾನ ಶಾಸ್ತ್ರೀಯುವಾಗಿ ಕಾಣುತ್ತದೆ ಮತ್ತು "ಕಾಲನಿರ್ಣಯವೆಂದರೆ ಪೈ, ಪೈಯೆಂದರೆ ಕಾಲನಿರ್ಣಯ" ಎಂಬ ಕೊಂಡಾಟಕ್ಕೂ ಒಳಗಾಗಿದೆ. "ಕನ್ನಡ ಸಾಹಿತ್ಯ ಚರಿತ್ರೆ ಗಟ್ಟಿ ಕಾಲಾನುಕ್ರಮಣಿಕೆಯ ಮೇಲೆ ನಿಲ್ಲಲು ಪೈಯವರು ಸಲ್ಲಿಸಿರುವ ಕಾಣಿಕೆ ಬಹಳ ದೊಡ್ಡದು." (ಡಾ. ಎಂ. ಚಿದಾನಂದಮೂರ್ತಿ) ಎನ್ನುವ ಅಭಿಪ್ರಾಯ ಒಪ್ಪುವಂಥದ್ದಾಗಿದೆ.

ಚರಿತ್ರೆಗೆ ಸಂಬಂಧಿಸಿದ ಸಂಶೋಧನೆಗಳು ಚರಿತ್ರೆಯ ಪುನಾರಚನೆಯಲ್ಲಿ ಒದಗಿ ಬಂದಿರುವಂತೆ, ಧರ್ಮ ಸಂಸ್ಕೃತಿ ಕಕ್ಷೆಯೊಳಗೆ ಬರುವ ಶೋಧನಾ ಜಿಜ್ಞಾಸೆಯಲ್ಲಿ ಮೌಲಿಕ ವಿಶ್ಲೇಷಣೆ ಹೊಸ ಅರ್ಥಪರಿವೇಷಗಳು ನಿಷ್ಪನ್ನಗೊಂಡಿವೆ.

ಗೋವಿಂದ ಪೈಯವರ ಸಂಶೋಧನ ವಿಧಾನದ ವೈಶಿಷ್ಟ್ಯವೆಂದರೆ, ನಿರ್ಣಯವನ್ನು ಸಾಧ್ಯ ಆಧಾರಗಳನ್ನೆಲ್ಲ ಸಂಯೋಜಿಸಿಕೊಡುವುದರ ಮೂಲಕ ಪ್ರತೀತಗೊಳಿಸುವುದು. ಊಹೆಗಳೂ ಸತ್ಯಮುಖಿಯೇ ಆಗಿರುವುದು. ಅವರ ಸಂಶೋಧನ ಬರಹಗಳಲ್ಲಿ 'ತೋರುತ್ತದೆ' 'ಆಗಿರಬೇಕು' 'ಇದ್ದಿರಬೇಕು' 'ಇಟ್ಟುಕೊಳ್ಳಬಹುದು' 'ಪ್ರಾಯಶಃ'– ಮೊದಲಾದ ಅನುಮಾನಗಳು ಅಲ್ಲಲ್ಲಿ ಕಂಡು ಬರುವುದಾದರೂ, ಅವೆಲ್ಲವೂ ಆಧಾರಭೂತವಾಗಿಯೇ ಇರುತ್ತವೆ.

“ಆಧಾರವಿಲ್ಲದ್ದನ್ನು ಒಂದಿಷ್ಟೂ ಬರೆಯುವುದಿಲ್ಲ; ಅವಶ್ಯವಿಲ್ಲದ್ದನ್ನು ಒಂದಿಷ್ಟೂ ಹೇಳುವುದಿಲ್ಲ” ಎನ್ನುವದನ್ನು ಅವರು ವ್ರತದ ಶ್ರದ್ಧೆಯಲ್ಲಿ ಆಚರಿಸಿದವರು. ಸತ್ಯಸ್ಥಾಪನೆಗಾಗಿ ಅವರ ಪ್ರಾಮಾಣಿಕತೆಯನ್ನು ಎಲ್ಲೂ ಅನುಮಾನಿಸುವಂತಿಲ್ಲ. ತಾನು ಹೇಳಿದ್ದು ತಪ್ಪು ಎಂಬುದು ಅರಿವಾದೊಡನೆ ಅದನ್ನು ತತ್‌ಕ್ಷಣ ಒಪ್ಪಿಬಿಡುವ ಪ್ರಾಂಜಲತೆ ಅದರ ಭಾಗವೇ. ಸತ್ಯಸ್ಥಾಪನೆಗಾಗಿ ಅವರ ಛಲ ಸಾಮಗ್ರಿಸಂಗ್ರಹದ ಬಹುಳತೆಯಲ್ಲಿ, ಮೂಲ ಸಾಮಗ್ರಿಯನ್ನು ಮಾತ್ರ ನೆಚ್ಚಿಕೊಳ್ಳುವುದರಲ್ಲಿ, ಅನ್ಯಶಿಸ್ತುಗಳ ಪರಿಜ್ಞಾನವನ್ನು ಸಮರ್ಥ ದುಡಿಸಿಕೊಳ್ಳುವುದರಲ್ಲಿ ಕಾಣಬಹುದಾಗಿದೆ. ಶಾಸನಗಳು (ಪ್ರಕಟಿತ ಅಪ್ರಕಟಿತ), ನಾಣ್ಯಗಳು, ಸಾಹಿತ್ಯ ಕೃತಿಗಳು, ಹಸ್ತಪ್ರತಿಗಳು, ವಿದೇಶೀಯರು ಸಂಗ್ರಹಿಸಿ ಒದಗಿಸಿರುವ ದಾಖಲೆಗಳು, ವೇದ ಪುರಾಣ ಇತಿಹಾಸ ಗ್ರಂಥಗಳು ಜೊತೆಗೆ ಜ್ಯೋತಿಷ್ಯಶಾಸ್ತ್ರ, ಗಣಿತಶಾಸ್ತ್ರ ಮೊದಲಾದುವುಗಳನ್ನು ತರ್ಕಕ್ಕೆ, ವಿಶ್ಲೇಷಣೆಗೆ, ಆಧಾರಕ್ಕೆ ಬಳಸಿಕೊಳ್ಳುತ್ತಾರೆ. ವ್ಯಾಪ್ತ ಅಧ್ಯಯನ, ಬಹುಜ್ಞತೆ, ಬಹುಭಾಷಾಜ್ಞಾನ, ಪ್ರಖರ ಸ್ಮರಣಶಕ್ತಿ, ಗ್ರಹಣಶಕ್ತಿ, ನಿಶಿತಬುದ್ಧಿ– ಇಂಥವು ಸತ್ಯಶೋಧಕ್ಕೆ ಕೂಡಿಬಂದವುಗಳಾಗಿವೆ.

ನಾಗವರ್ಮನ ಕರ್ಣಾಟಕ ಭಾಷಾಭೂಷಣ - ೨

ಡಾ.ಎಚ್.ಎಸ್.ಅನಂತನಾರಾಯಣ

ಪೀಠಿಕೆ

ನಮಗೆ ಲಭ್ಯವಾಗಿರುವ ಕನ್ನಡ ಭಾಷೆಯ ಅತಿ ಪ್ರಾಚೀನ ವ್ಯಾಕರಣವೆಂದರೆ, "ಕರ್ಣಾಟಕ ಭಾಷಾಭೂಷಣ" ಎನ್ನಬಹುದು. ಇದರಲ್ಲಿ ವರ್ಣಿಸಿರುವ ಭಾಷೆ ಹಳೆಗನ್ನಡ. ಇದರ ರಚಯಿತ ನಾಗವರ್ಮ. ಇವನನ್ನು ಕೆಲವರು ಮೊದಲನೆಯ ನಾಗವರ್ಮನೆಂದು, ಇನ್ನು ಕೆಲವರು ಎರಡನೆಯ ನಾಗವರ್ಮನೆಂದು ಹೇಳುತ್ತಾರೆ. ನಾಗವರ್ಮನು ೧೧ನೆಯ ಶತಮಾನದ ಕಡೆಯ ಭಾಗ ಮತ್ತು ೧೨ನೆಯ ಶತಮಾನದ ಮೊದಲ ಭಾಗದಲ್ಲಿ ಇದ್ದನೆಂದು ನಿಶ್ಚಯವಾಗಿ ಹೇಳಬಹುದು. ಇವನ ವ್ಯಾಕರಣವು ದ್ರಾವಿಡ ಭಾಷಾವಿಜ್ಞಾನಿಗಳಿಗೂ ತಿಳಿದಿಲ್ಲವೆನಿಸುತ್ತದೆ; ಕಾರಣ, ಯಾರೂ ಇದನ್ನು ಹೆಸರಿಸಿಲ್ಲ. ಇದು ಸಂಸ್ಕೃತಭಾಷೆಯಲ್ಲಿ ಇರುವ ಕಾರಣ ಕನ್ನಡಲೇಖಕರ ಗಮನಕ್ಕೆ ಬಂದಂತಿಲ್ಲ. ಅದ್ದರಿಂದ ಇದರಬಗ್ಗೆ ತಿಳುವಳಿಕೆಯನ್ನು ನೀಡುವುದೇ ಈ ಲೇಖನದ ಉದ್ದೇಶ. ಇದರಲ್ಲಿ ನಾಗವರ್ಮ ಕನ್ನಡಭಾಷೆಯನ್ನು ಸಂಸ್ಕೃತದ ಸೂತ್ರ ಶೈಲಿಯಲ್ಲಿ ಬರೆದಿರುವುದು ಒಂದು ವಿಶೇಷ. ಇವನಬಗ್ಗೆ, ಇವನ ಕೃತಿಗಳಬಗ್ಗೆ, ಈಗಾಗಲೇ ಮುದ್ರಿತವಾಗಿರುವ ಲೇಖನದಲ್ಲಿ ತಿಳಿಸಲಾಗಿದೆ (ಲೋಚನ ೩೩.೧, ೨೦೧೯).

ನಾಗವರ್ಮನ ಕನ್ನಡ ವ್ಯಾಕರಣವು ೨೮೦ ಸೂತ್ರಗಳಿಂದ ಕೂಡಿದ್ದು, ಹತ್ತು ವಿಧಾನಗಳಲ್ಲಿ ವಿಂಗಡಿಸಲ್ಪಟ್ಟಿದೆ. ಅವುಗಳಲ್ಲಿ ಮೊದಲಿನ ನಾಲ್ಕು ವಿಧಾನಗಳನ್ನು ಕುರಿತು (ಅಂದರೆ, ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ) ಮೊದಲ ಲೇಖನದಲ್ಲಿ ಚರ್ಚಿಸಿದ್ದೆವು. ಪ್ರಸ್ತುತ ಲೇಖನದಲ್ಲಿ ಮುಂದಿನ ಮೂರು ವಿಧಾನಗಳನ್ನು (ಅಂದರೆ, ಶಬ್ದರೀತಿ, ಸಮಾಸ, ತದ್ಧಿತ) ಕುರಿತು ವಿವರಿಸುವ ಪ್ರಯತ್ನ ಮಾಡಿದೆ.

೫. ಶಬ್ದರೀತಿ

ಈವಿಧಾನದಲ್ಲಿ ೩೨ ಸೂತ್ರಗಳಿವೆ. ಅವುಗಳಲ್ಲಿ, ನಾಗವರ್ಮನು ಶಬ್ದಗಳ ರೂಪದಲ್ಲಿ ಆಗುವ ಮಾರ್ಪುಗಳ ಬಗ್ಗೆ ವಿವರಣೆ ನೀಡಿದ್ದಾನೆ. ಹೀಗೆ ಮಾರ್ಪಡುವ ಶಬ್ದಗಳಲ್ಲಿ ಕನ್ನಡವೇ ಆದ ಶಬ್ದಗಳ ಗುಂಪು ಒಂದು. ಇವು ಪರಿಸರಭೇದದಿಂದ ಬದಲಾವಣೆ ಹೊಂದುವುವಾಗಿವೆ. ಇನ್ನೊಂದು, ಸಂಸ್ಕೃತದಿಂದ ಪಡೆದ ಶಬ್ದಗಳು ಕನ್ನಡದಲ್ಲಿ ಯಾವ ಮಾರ್ಪಾಡನ್ನು ಪಡೆಯುತ್ತವೆ ಎಂಬುದು. ಮೊದಲಿಗೆ, ಕನ್ನಡದ ಪದಗಳನ್ನು ನೋಡೋಣ.

ಸರ್ವನಾಮಗಳೆನಿಸಿದ ಯುಷ್ಮದ್ 'ಮಧ್ಯಮ ಪುರುಷ', ಅಸ್ಮದ್ 'ಉತ್ತಮ ಪುರುಷ' ಮತ್ತು ಅನ್ಯದ್ 'ಪ್ರಥಮ ಪುರುಷ' ಎಂಬರ್ಥಗಳ ನಿನ್ನ, ಎನ್ನ, ತನ್ನ ಎಂಬ ಶಬ್ದಗಳ ಪ್ರಥಮಾ ವಿಭಕ್ತಿ ರೂಪಗಳು ಕ್ರಮವಾಗಿ ನೀನ್, ಆನ್, ತಾನ್ ಎಂದಾಗುತ್ತವೆ; ಅಂದರೆ, ಅವಕ್ಕೆ ಪ್ರಥಮಾ ವಿಭಕ್ತಿ ಪ್ರತ್ಯಯ ಸೇರಿದಾಗ (ನಿನ್ನ + ಪ್ರಥಮಾ = ನೀನ್, ಇತ್ಯಾದಿ) ಈಬದಲಾವಣೆ ಆಗುತ್ತದೆ (೫.೧ ನೀನಾನ್ತಾನ್ ಪ್ರಥಮಾ ವಿಭಕ್ತೌ), ಉದಾ. ನೀನ್ ಇರ್ದೆ, ಆಮ್ ಬಂದೆ, ತಾಮ್ ಪೋದಮ್. ಇದೇ ಮೂಲ ರೂಪಗಳು ಚತುರ್ಥೀ ವಿಭಕ್ತಿ ಪರವಾದಾಗ, ಕ್ರಮವಾಗಿ ನಿನ, ಎನ, ತನ ಎಂದಾಗುತ್ತವೆ (೫.೨ ನಿನ ಎನ ತನಾಶ್ಚತುರ್ಥ್ಯಾಸ್ತೃತೀಯತ್ವಂ ಚಾಸ್ಯಾಃ), ಉದಾ. ನಿನಗೆ, ಎನಗೆ, ತನಗೆ. ದ್ವಿವಚನ ಮತ್ತು ಬಹುವಚನವನ್ನು ಸೂಚಿಸುವಾಗ, ಈ ಸರ್ವನಾಮಗಳ ನ-ಕಾರವು ಮ-ಕಾರವಾಗುತ್ತದೆ (೫.೩ ದ್ವಿಬಹ್ವೋಃ ನಸ್ಯ ಮಃ), ಉದಾ. ನೀಮ್, ಆಮ್, ತಾಮ್; ನಿಮಗೆ, ಎಮಗೆ, ತಮಗೆ; ನಿಮ್ಮ, ಎಮ್ಮ, ತಮ್ಮ; ನಿಮ್ಮೊಳ್, ಎಮ್ಮೊಳ್, ತಮ್ಮೊಳ್.

ಅದು, ಇದು, ಉದು ಎಂಬ ಶಬ್ದಗಳ ಅಂತಿಮ ಅಕ್ಷರವು ಪುಲ್ಲಿಂಗದ ವಿವಕ್ಷೆ ಇದ್ದಾಗ ಎಲ್ಲ ವಿಭಕ್ತಿಗಳಲ್ಲೂ ವ/ತ ಎಂದಾಗುತ್ತದೆ (೫.೪ ಅದು ಇದು ಉದೂನಾಮ್ ಅಂತೇ ವತೌ ಪುಂಸಿ), ಉದಾ. ಅವಂ, ಇವಂ, ಉವಂ; ಅವನಂ, ಇವನಂ, ಉವನಂ; ಆತಂ, ಈತಂ, ಊತಂ; ಆತನಂ, ಈತನಂ, ಊತನಂ). ಅದೇರೀತಿ ಸ್ತ್ರೀಲಿಂಗದ ವಿವಕ್ಷೆಯಿದ್ದಾಗ, ಎಲ್ಲ ವಿಭಕ್ತಿಗಳಲ್ಲೂ ಇವುಗಳ ಅಂತ್ಯಾಕ್ಷರವು ವಳ್/ಕೆ ಎಂದಾಗುತ್ತವೆ (೫.೫ ವಳ್ಕೇ ಚ ಸ್ತ್ರಿಯಾಂ), ಉದಾ. ಅವಳ್, ಇವಳ್, ಉವಳ್; ಆಕೆ, ಈಕೆ, ಊಕೆ. ಇಲ್ಲಿ ಕ-ಕಾರ ಮತ್ತು ತ-ಕಾರಗಳ ಹಿಂದಿನ ಸ್ವರವು ದೀರ್ಘವಾಗುತ್ತದೆ (೫.೬ ದೀರ್ಘಃ ಕತಯೋಃ), ಉದಾ. ಆಕೆ, ಈಕೆ, ಊಕೆ; ಆತಂ, ಈತಂ, ಊತಂ. ಪರಿಸರದ ಕಾರಣ ಆಗುವ ಶಬ್ದಗಳ ಮಾರ್ಪನ್ನು ನಾಗವರ್ಮನು 'ಆದೇಶ' ಎಂದಿದ್ದಾನೆ, ವೃತ್ತಿ: ನಿನ ಎನ ತನ ಇತ್ಯೇತೇ ಆದೇಶಾ ಭವಂತಿ; ನಕಾರಸ್ಯ ಮಕಾರಾದೇಶೋ ಭವತಿ. ವರ್ಗ ಪಂಚಮಾಕ್ಷರವಾದ ಅನುನಾಸಿಕಗಳಿಗೆ ಸ್ಪರ್ಶವರ್ಣಗಳು ಪರವಾದಾಗ ಅನುಸ್ವಾರ ಆದೇಶವಾಗುತ್ತದೆ (೫.೨೨ ವರ್ಗೇ ತದ್ವರ್ಗಾಂತ್ಯಃ), ಉದಾ. ಬಿಙ್ಕಮ್ ಗೆಟ್ಟಂ > ಬಿಂಕಂ ಗೆಟ್ಟಂ, ತಾಮ್ ಚಞ್ಚಲಚಿತ್ತಂ > ತಾಂ ಚಂಚಲಚಿತ್ತಂ. ದಂತ್ಯ ಅನುನಾಸಿಕ ನ-ಕಾರವು ಣ-ಕಾರದ ಸಹಯೋಗದಿಂದ ಣತ್ವವಾಗುತ್ತದೆ (೫.೨೩ ಣೋ ನಸ್ಯ ಣೇನ), ಉದಾ. ಕಣ್ ನೆಳಲ್ > ಕಣ್ಣೆಳಲ್.

ಕಣ್ ನೀರ್ > ಕಣ್ಣೀರ್, ತಣ್ ನೀರ್ > ತಣ್ಣೀರ್. ಶಬ್ದಗಳಲ್ಲಿನ ಪ-ಕಾರವು ವಿಕಲ್ಪವಾಗಿ ಹ-ಕಾರವಾಗುತ್ತದೆ (ಸೂ.೨೪ ಪೋ ಹೋ ವಾ), ಉದಾ. ಹಲಗೆ/ಪಲಗೆ, ಹಾಸು/ಪಾಸು. ಸಮಾಸಪದಗಳ ಉತ್ತರಪದಾದಿಯಲ್ಲಿ ವ್ಯಂಜನವಿದ್ದರೆ, ಪೂರ್ವಪದದ ಡ-ಕಾರವು ಳ-ಕಾರವಾಗುತ್ತದೆ (ಸೂ.೨೮ ಳಕಾರಃ ಪದವಿಧೌ ಡಸ್ಯ ವ್ಯಂಜನೇಷು), ಉದಾ. ಕಾಡು ಕಿಚ್ಚು > ಕಾಳ್ಕಿಚ್ಚು. ಹಾಗೆಯೇ, ಪೂರ್ವಪದದ ಡ-ಕಾರವು ಅತ್ಪ್ರತ್ಯಯ ಪರವಾದಾಗ ಟ-ಕಾರವಾಗುತ್ತದೆ (ಸೂ.೨೯ ಅತಿ ಟಃ), ಉದಾ. ಆಡ್-ಅತ್ > ಆಟಂ, ನೋಡ್-ಅತ್ > ನೋಟಂ (ಅತ್ ಪ್ರತ್ಯಯದ ತ-ಕಾರ ಇತ್ ಆದ್ದರಿಂದ, ಲೋಪಿಸುತ್ತದೆ). ಸಮಾಸಪದದಲ್ಲಿ ರ-ಕಾರಕ್ಕೆ ರೇಫ ಬರುತ್ತದೆ (ಸೂ.೩೦ ರಕಾರಸ್ಯ ರೇಫಃ), ಉದಾ. ಮಾರ್ ಕೊರಳ್ > ಮಾರ್ಕೊರಳ್, ನೂರ್ ಮಡಿ > ನೂರ್ಮಡಿ. ಆದಿಯಲ್ಲಿರದ ಯ-ಕಾರ ವ-ಕಾರಗಳಿಗೆ ಸ್ವರಸಂಬಂಧ ಉಂಟಾದರೆ, ವಿಕಲ್ಪವಾಗಿ ಅವು ಕ್ರಮವಾಗಿ ಐ, ಔ ಎಂದಾಗುತ್ತವೆ (ಸೂ.೩೨ ಯವಯೋರ್ ಅನಾದಿಸ್ಥಯೋರ್ ಐಚ್, ಓಜ್ ಸ್ವರೇಣ ವಾ), ಉದಾ. ಕೈಯಿವಾರಮ್/ಕೈವಾರಮ್, ಕಾವುಜ್ಜು/ಕವುಜ್ಜು, ಅವುಜ್ಕಿದಮ್/ಔಜ್ಕಿದಮ್.

ಇನ್ನು ಸಂಸ್ಕೃತ ಪದಗಳನ್ನು ಹೇಗೆ ಕನ್ನಡಿಸಿಕೊಂಡಿದ್ದಾರೆಂಬುದನ್ನು ಗಮನಿಸೋಣ.

ಕರುಣಾ (ಸ್ತ್ರೀ), ಉಪತ್ಯಕಾ (ಸ್ತ್ರೀ), ಅಭಿಲಾಷ (ಪುಂ) ಇತ್ಯಾದಿ ಸಂಸ್ಕೃತ ಶಬ್ದಗಳು ಕೆಲವೊಮ್ಮೆ ಕನ್ನಡದಲ್ಲಿ ಲಿಂಗದಲ್ಲಿ ಅದಲುಬದಲಾಗಿ ಉಪಯೋಗವಾಗುವುದು ಕಂಡುಬರುತ್ತವೆ (ಸೂ.೭ ಸ್ತ್ರೀಪುಂಸಯೋರ್ ವ್ಯತ್ಯಾಸಃ ಕ್ವಚಿತ್), ಉದಾ. ಕರುಣಂ, ಉಪತ್ಯಕಂ, ಅಭಿಲಾಷೆ. ಅಂದರೆ, ಸ್ತ್ರೀಲಿಂಗ ಶಬ್ದಗಳು ಪುಲ್ಲಿಂಗದಲ್ಲಿ, ಹಾಗೆಯೇ, ಪುಲ್ಲಿಂಗ ಶಬ್ದಗಳು ಸ್ತ್ರೀಲಿಂಗದಲ್ಲಿ ಉಪಯೋಗವಾಗಬಹುದು. ಕಳತ್ರ 'ಹೆಂಡತಿ' ಮೊದಲಾದ ಶಬ್ದಗಳು ನಿತ್ಯವಾಗಿ, ಅಂದರೆ, ಅಪವಾದವಿಲ್ಲದೇ ಕನ್ನಡದಲ್ಲಿ ನಪುಂಸಕವೇ ಆಗಿರುತ್ತವೆ (ಸೂ.೮ ನಿತ್ಯಂ ಕಳತ್ರಾದೌ ನಪುಂಸಕತ್ವಂ), ಉದಾ. ಇದು ಕಳತ್ರಂ, ಅದು ಕೂಸು. ಈಸೂತ್ರದಲ್ಲಿ 'ಆದಿ' ಶಬ್ದದ ಪ್ರಯೋಗಮಾಡಿರುವುದರಿಂದ ಬದಲಾವಣೆ ಹೊಂದುವ ಶಬ್ದಗಳ ಪಟ್ಟಿಯನ್ನು ಪೂರ್ತಿ ಹೇಳಿಲ್ಲ ಎಂದರ್ಥ. ಸ್ತ್ರೀಲಿಂಗ ಸೂಚಕ ಆ-ಕಾರಾಂತ ಶಬ್ದಗಳು ವಿಭಕ್ತಿ ಪ್ರತ್ಯಯ ಪರವಾದಲ್ಲಿ ವಿಕಲ್ಪವಾಗಿ ಹ್ರಸ್ವ ಎ-ಕಾರಾಂತವಾಗುತ್ತವೆ (ಸೂ.೯ ಆತ ಲಘುರ್ ಏತ್), ಉದಾ. ವಸುಧಾ/ವಸುಧೆ, ಚಂದ್ರಿಕಾ/ಚಂದ್ರಿಕೆ, ವನಿತಾ/ವನಿತೆ, ದಯಾ/ದಯೆ. ಕೆಲವೊಮ್ಮೆ, ಅ-ಕಾರಾಂತವೂ ವಿಕಲ್ಪವಾಗಿ ಹ್ರಸ್ವ ಎ-ಕಾರವಾಗುತ್ತದೆ, ಉದಾ. ಅಭಿಲಾಷ/ಅಭಿಲಾಷೆ, ದರ್ಭ/ದರ್ಭೆ. ಅದೇ ಪರಿಸರದಲ್ಲಿ ಈ-ಕಾರಾಂತ ಊ-ಕಾರಾಂತ ಶಬ್ದಗಳು ವಿಕಲ್ಪವಾಗಿ ಹ್ರಸ್ವವಾಗುತ್ತವೆ (ಸೂ.೧೦ ಈದೂತೌ ಹ್ರಸ್ವೌ ಚ), ಉದಾ. ಪಕ್ಷೀ/ಪಕ್ಷಿ, ನದೀ/ನದಿ, ವಧೂ/ವಧು. ಆದರೆ, ಆ, ಈ, ಊ ಇಂದ ಕೊನೆಗಾಣುವ ಏಕಾಕ್ಷರಪದಗಳ ಅಂತ್ಯಸ್ವರವು ಹ್ರಸ್ವವಾಗುವುದಿಲ್ಲ (ಸೂ.೧೧ ನೈಕಾಕ್ಷರಪದೇ), ಉದಾ. ಜ್ಯಾ, ಶ್ರೀ, ಭ್ರೂ. ಋ-ಕಾರಾಂತ ಧಾತುಗಳ ಅಂತ್ಯ ಋ-ಕಾರಕ್ಕೆ ವಿಕಲ್ಪವಾಗಿ 'ಅರ್' ಎಂಬ ಆದೇಶವಾಗುತ್ತದೆ (ಸೂ.೧೨ ಧಾತೋಸ್ತೃಶಬ್ದಸ್ಯ

ವಾರಃ), ಉದಾ. ಕರ್ತಾರಂ/ಕರ್ತೃ, ಹೋತಾರಂ/ಹೋತೃ. ವಿಧಾತೃ ಎಂಬ ಶಬ್ದವು 'ಬ್ರಹ್ಮ' ಎಂಬರ್ಥದಲ್ಲಿ ವಿಕಲ್ಪವಾಗಿ ರಾಂತವಾಗುತ್ತದೆ (ಸೂ.೧೩ ರಾಂತೋ ವೇಧಸಿ ವಿಧಾತುಃ), ಉದಾ. ವಿಧಾತ್ರಂ/ವಿಧಾತಂ. ಇತರೆಡೆಗಳಲ್ಲಿ ಕ್ರಿಯಾಸೂಚಕ ಋ-ಕಾರಾಂತ ಧಾತುಗಳಿಗೆ 'ಅರ್' ಆದೇಶವಾಗುತ್ತದೆ (ಸೂ.೧೪ ಅರೊ'ನ್ಯತ್ರ), ಉದಾ. ಪಿತರ್, ಪಿತೃಗಳ್. ಕೆಲವೊಮ್ಮೆ, ಋ-ಕಾರಾದೇಶವೂ ಆಗುತ್ತದೆ (ಸೂ.೧೫ ತಶ್ಚ), ಉದಾ. ಮಾಂಧಾತ/ಮಾಂಧಾತೃ. ಶ್ವನ್, ಯುವನ್, ಅಧ್ವನ್ ಶಬ್ದಗಳ ಅಂತ್ಯವು 'ಆನ' ಎಂದಾಗುತ್ತದೆ (ಸೂ.೧೬ ಶ್ವಾ ಯುವಾಧ್ವಾನಾಂ ಆನಃ), ಉದಾ. ಶ್ವಾ/ಶ್ವಾನಂ, ಯುವಾ/ಯುವಾನಂ, ಅಧ್ವಾ/ಅಧ್ವಾನಂ; ಬಹುವಚನದಲ್ಲಿ, ಶ್ವಾನಂಗಳ್, ಯುವಾನರ್, ಅಧ್ವಾನಂಗಳ್. ಸಖಿ ಶಬ್ದದ ಅಂತ್ಯ ಸ್ವರವು ವಿಭಕ್ತಿ ಪರವಾದಲ್ಲಿ 'ಆಯ' ಎಂಬ ಆದೇಶವನ್ನು ಪಡೆಯುತ್ತದೆ(ಸೂ.೧೭ ಸಖ್ಯುರಾಯಃ), ಉದಾ. ಸಖಾಯಂ, ಸಖಾಯರ್. ವನ್ಸ್, ಯನ್ಸ್ ಎಂಬ ಪ್ರತ್ಯಯಾಂತ ಶಬ್ದಗಳ ಉಪಾಂತ್ಯವು ವಿಕಲ್ಪವಾಗಿ ದೀರ್ಘವಾಗುತ್ತದೆ, ಕೆಲವೆಡೆ ಅಂತ್ಯವು ಲೋಪಿಸುತ್ತದೆ (ಸೂ.೧೮ ವನ್ಸ್ ಯನ್ಸೋರ್ ಉಪಾಂತ್ಯಸ್ಯ ದೀರ್ಘೋ ವಾ ಲೋಪಃ), ಉದಾ. ವಿದ್ವನ್ಸ್/ವಿದ್ವಾಂಸಂ, ಕನೀಯಸ್/ಕನೀಯಾಂಸಂ. ಕೆಲವೆಡೆ, ಉಪಾಂತ್ಯವು ದೀರ್ಘವಾಗುವುದಲ್ಲದೆ ಅಂತ್ಯವು ಅ-ಕಾರವಾಗುವುದೂ ಕಂಡುಬರುತ್ತದೆ (ಸೂ.೧೯ ಅದಂತತಾ ಚ), ಉದಾ. ಕನೀಯಾಂಸಂ, ವಿದ್ವಾಂಸಮ್, ಶ್ರೇಯಂ/ಶ್ರೇಯಾಂಸಮ್. ವ್ಯಂಜನಾಂತ್ಯಪದವು ಅ-ಕಾರಾಂತವಾಗಬಹುದು (ಸೂ.೨೦ ವಿರಾಮೇ ವ್ಯಂಜನಸ್ಯಾಪಿ), ಉದಾ. ಸಂಪದಂ, ಮರುತಂ, ವಿಹಾಯಸಂ. ಕೆಲವೆಡೆ, ವಿಕಲ್ಪವಾಗಿ ಅಂತ್ಯವ್ಯಂಜನವು ಲೋಪಿಸಬಹುದು (ಸೂ.೨೧ ಲೋಪೋ ವಿಭಾಷಯಾ), ಉದಾ. ನಭಸ್/ನಭಮ್, ರಾಜನ್/ರಾಜಮ್, ವಾಕ್/ವಾಕ್ಕು, ಪರಿಷತ್/ಪರಿಷತ್ತು. ಸಂಸ್ಕೃತ ಶಬ್ದಗಳ ಶ-ಕಾರ ಮತ್ತು ಷ-ಕಾರಗಳಿಗೆ ಕನ್ನಡದಲ್ಲಿ ಸ-ಕಾರಾದೇಶವಾಗುತ್ತದೆ (ಸೂ.೨೫ ಶಷಯೋಸ್ಸಃ), ಉದಾ. ಶಶಿ > ಸಸಿ, ಋಷಿ > ರಿಸಿ, ಶಿಶು/ಸಿಸು. ಷಕಾರವು ರೇಫದಿಂದ ಕೂಡಿದ್ದರೆ ಅವೆರಡು ಧ್ವನಿಗಳ ಮಧ್ಯೆ ಇ-ಕಾರ ಆಗಮವಾಗಿ ಬರುತ್ತದೆ (ಸೂ.೨೬ ಸರೇಫಸಂಯೋಗೇ ತದಂತರೇ ತ್ವಿಃ), ಉದಾ. ಹರ್ಷಂ/ಹರಿಸಮ್, ಸರ್ಷಪಂ/ಸರಿಸಪಮ್. ರೇಫದಿಂದ ಕೂಡಿದ ಹ-ಕಾರವಾದರೆ, ಅವೆರಡರ ಮಧ್ಯೆ ಉ-ಕಾರ ಆಗಮವಾಗಿ ಬರುತ್ತದೆ (ಸೂ.೨೭ ಹಕಾರಸ್ಯೋತ್), ಉದಾ. ಅರ್ಹಮ್ > ಅರುಹಮ್, ಗಾರ್ಹಪತ್ಯಮ್ > ಗಾರುಹಪತ್ಯಮ್. ಶಬ್ದಗಳ ಆದಿಯ ಋ-ಕಾರವು ರಿ ಎಂದಾಗುತ್ತದೆ (ಸೂ.೩೧ ಆದೇರ್ ಋ ರಿಃ), ಉದಾ. ತೃತೀಯಮ್ > ತ್ರಿತೀಯಮ್, ಋತು > ರಿತು.

ಈ ವಿಧಾನದಲ್ಲಿ ನಾಗವರ್ಮನು ಸರ್ವನಾಮಗಳು ಪರಿಸರಭೇದದಿಂದ ತಮ್ಮ ರೂಪಗಳಲ್ಲಿ ಬದಲಾವಣೆಯನ್ನು ಹೊಂದುತ್ತವೆ ಎನ್ನುವುದನ್ನು ತಿಳಿಸಿದ್ದಾನೆ. ಆಧುನಿಕ ವ್ಯಾಕರಣದಲ್ಲಿ ಇದನ್ನು ಆಕೃತಿಮಾಗಳಲ್ಲಿ ಕಂಡುಬರುವ ಪರಸ್ಪರ ಪೂರಕ ಆಕೃತಿಗಳೆನ್ನುತ್ತಾರೆ. ಸ್ಥಾನ ನಿರ್ದೇಶಕ ಸರ್ವನಾಮಗಳಲ್ಲಿ ಕಂಡುಬರುವ ಮೂರು ಭೇದಗಳಲ್ಲಿ (ಇದು = ಹತ್ತಿರದಲ್ಲಿರುವ, ಅದು = ದೂರದಲ್ಲಿರುವ, ಉದು = ಇದು ಮತ್ತು ಅದುಗಳ ಮಧ್ಯದ ಸ್ಥಾನದಲ್ಲಿರುವ) ಇಂದು ಕೇವಲ ಅದು ಮತ್ತು ಇದು

ಉಳಿದಿವೆ. ಉದು ಎನ್ನುವುದು ಉಪಯೋಗದಲ್ಲಿಲ್ಲ. ನಾಗವರ್ಮನು ಇಲ್ಲಿ ಚರ್ಚಿಸಿರುವ ಇನ್ನೊಂದು ವಿಷಯವೆಂದರೆ ಪರಭಾಷೆಯಿಂದ ಎರವಲಾಗಿ ಪಡೆದ ಶಬ್ದಗಳು ಸ್ವೀಕರಿಸುವ ಭಾಷೆಯಲ್ಲಿ ಅದರ ವ್ಯಾಕರಣ ನಿಯಮಕ್ಕೊಳಪಟ್ಟು ಹೇಗೆ ಬದಲಾವಣೆ ಹೊಂದಿ ಉಪಯೋಗವಾಗುತ್ತವೆ ಎನ್ನುವುದು. ಆಧುನಿಕ ವ್ಯಾಕರಣದಲ್ಲಿ ಇದನ್ನು ಎರವಲುಶಬ್ದಗಳಿಗೆ ಅನ್ವಯಿಸುವ ಆಕೃತಿಮಾ ಶಾಸ್ತ್ರ ಎಂಬ ಶೀರ್ಷಿಕೆಯಡಿಯಲ್ಲಿ (ಲೋನ್ ಮಾರ್ಫಾಲಜಿ) ಚರ್ಚಿಸುತ್ತಾರೆ. ಧ್ವನಿಬದಲಾವಣೆಯ ಕೆಲವು ಸೂತ್ರಗಳೂ ಇಲ್ಲಿವೆ (ಉದಾ. ನ > ಣ; ಶ/ಷ > ಸ). ಸಮಾಸಕ್ಕೆ ಸಂಬಂಧಿಸಿದ ೫.೨೮, ೫.೨೯, ಮತ್ತು ೫.೩೦ನೆಯ ಸೂತ್ರಗಳನ್ನು ಮುಂದಿನ ಸಮಾಸವಿಧಾನದಲ್ಲಿ ಹೇಳಬಹುದಾಗಿತ್ತು.

ನಾಗವರ್ಮನ ಕಾಲಕ್ಕೆ ಪರಭಾಷೆಯೆಂದರೆ ಕೇವಲ ಸಂಸ್ಕೃತವಾಗಿತ್ತು. ಕನ್ನಡ ಮತ್ತು ಸಂಸ್ಕೃತ ಎರಡನ್ನೂ ತಿಳಿದವರು ಸಂಸ್ಕೃತದಿಂದ ಬೇಕಾದ ಶಬ್ದಗಳನ್ನು ಎರವಲಾಗಿ ಪಡೆದು ಕನ್ನಡದಲ್ಲಿ ಅವನ್ನು ಉಪಯೋಗಿಸಿದರು. ಅವು ಕನ್ನಡದಲ್ಲಿ ಹೇಗೆ ಮಾರ್ಪಟ್ಟವು ಎನ್ನುವುದನ್ನು ನಾಗವರ್ಮ ಇಲ್ಲಿ ವರ್ಣಿಸಿದ್ದಾನೆ.

೬. ಸಮಾಸ

ಆರನೆಯ ಸಮಾಸ ವಿಧಾನದಲ್ಲಿ ೪೨ ಸೂತ್ರಗಳಿವೆ. ಕನ್ನಡದಲ್ಲಿ ಕಂಡುಬರುವ ಸಮಾಸಗಳನ್ನು ನಾಗವರ್ಮ ಇಲ್ಲಿ ವಿವರಿಸಿದ್ದಾನೆ. ಅರ್ಥದಲ್ಲಿ ಪರಸ್ಪರ ಅನ್ವಯ ಹೊಂದಿರುವ ನಾಮವಾಚಕ ಶಬ್ದಗಳ ಘಟಕವನ್ನು 'ಸಮಾಸ' ಎಂದಿದ್ದಾನೆ (೬.೧ ನಾಮ್ನಾಂ ಸಮಾಸಃ ಸಂಗತಾರ್ಥಃ; ಹೋಲಿಸಿ, ಕಾತಂತ್ರ ೨.೫.೧ ನಾಮ್ನಾಂ ಸಮಾಸಃ ಯುಕ್ತಾರ್ಥಃ); ಆರು ಬಗೆಯ ಸಮಾಸಗಳನ್ನು ಲೆಕ್ಕಿಸಿದ್ದಾನೆ. ದ್ವಂದ್ವ ಸಮಾಸವನ್ನುಳಿದು ಇತರ ಎಲ್ಲ ಸಮಾಸಗಳಲ್ಲೂ ಕೇವಲ ಎರಡು ಪದಗಳಿರುತ್ತವೆ. ದ್ವಂದ್ವ ಸಮಾಸವು ಎರಡಕ್ಕಿಂತ ಹೆಚ್ಚು ಪದಗಳಿಂದ ಕೂಡಿರಬಹುದು. ವಿಭಕ್ತಿ ಪ್ರತ್ಯಯವು ಕಡೆಯ ಪದಕ್ಕೆ ಮಾತ್ರ ಸೇರುತ್ತದೆ. ಉಳಿದ ಪದಗಳ ವಿಭಕ್ತಿಗೆ ಲೋಪ ಬರುತ್ತದೆ (೬.೨ ತತ್ರಾಂತರ್ವರ್ತಿನ್ಯೋ ವಿಭಕ್ತಯಃ ಲೋಪ್ಯಾಃ; ಹೋ. ಕಾ ೨.೫.೨ ತತ್ ಸ್ಥಾಃ ಲೋಪ್ಯಾಃ ವಿಭಕ್ತಯಃ). ಪದಗಳೆರಡರಲ್ಲಿ, ಯಾವುದಾದರೊಂದು - ಪೂರ್ವಪದ ಅಥವಾ ಉತ್ತರಪದ - ಪ್ರಧಾನವಾಗಿರುತ್ತದೆ; ಅಥವಾ ಎರಡೂ ಪ್ರಧಾನವಾಗಿರುತ್ತವೆ; ಅಥವಾ ಯಾವುದೂ ಪ್ರಧಾನವಾಗಿರದೇ ಮೂರನೆಯ ಬೇರೊಂದು ಪ್ರಧಾನವಾಗಿರಬಹುದು.

ಮೊದಲಿಗೆ ನಾಗವರ್ಮನು ಸಮಾಸದ ಬಗೆಗಳನ್ನು ನಿರ್ವಚಿಸಿದ್ದಾನೆ. ಅವುಗಳನ್ನು ನಿರ್ವಚಿಸಿರುವ ಸೂತ್ರಗಳು ಸಂಸ್ಕೃತ ವ್ಯಾಕರಣಗಳಲ್ಲಿ ವೃತ್ತಿಯಲ್ಲಿನ ವಾಕ್ಯಗಳಾಗಿ ಕಂಡುಬರುತ್ತವೆ. ಉತ್ತರಪದದ ಅರ್ಥ ಪ್ರಧಾನವಾಗಿರುವ ಸಮಾಸವು 'ತತ್ಪುರುಷ' ಎನಿಸಿಕೊಳ್ಳುತ್ತದೆ (೬.೩ ಉತ್ತರಪದಾರ್ಥಪ್ರವೃತ್ತಿಃ ತತ್ಪುರುಷಃ), ಉದಾ. ಅರಸು ಮನೆ > ಅರಮನೆ, ಮಾವಿನ ಕಾಯಿ > ಮಾಜ್ಗಾಯಿ. ಸಮಾಸದ ಎರಡೂ ಪದಗಳು ಸಮಾನಾಧಿಕರಣ, ಅಂದರೆ, ಒಂದೇ ಆಶ್ರಯ, ಹೊಂದಿದ್ದರೆ ಅದು 'ಕರ್ಮಧಾರಯ' ಎನಿಸುತ್ತದೆ. ಕರ್ಮಧಾರಯ ತತ್ಪುರುಷದ ಒಂದು ಪ್ರಭೇದ (೬.೪

ಸ ಏವೈಕಾಶ್ರಯಃ ಕರ್ಮಧಾರಯಃ; ಹೋಲಿಸಿ, ಅಷ್ಟಾ. ೧.೨.೪೨ ತತ್ಪುರುಷಃ ಸಮಾನಾಧಿಕರಣಃ ಕರ್ಮಧಾರಯಃ), ಉದಾ. ಕೆಂಪಿನ ತಾವರೆ > ಕೆಂದಾವರೆ, ಕಡಿಯ ತಪಮ್ > ಕಡಿತಪಮ್. ಸಂಖ್ಯಾಪದ ಪೂರ್ವದಲ್ಲಿರುವ ಕರ್ಮಧಾರಯವೇ 'ದ್ವಿಗು' ಸಮಾಸ (೬.೫ ಸಂಖ್ಯಾದಿಶ್ಚೇತ್ ದ್ವಿಗುಃ; ಹೋ. ಅಷ್ಟಾ. ೨.೧.೫೨ ಸಜ್ಞ್ಯಾಪೂರ್ವೋ ದ್ವಿಗುಃ), ಉದಾ. ಎರಡು ಕೈ > ಇರ್ಕೈ, ಮೂರು ಲೋಕಮ್ > ಮೂಲೋಕಮ್.

ಸಮಾಸದ ಪದಗಳಲ್ಲಿ ಪೂರ್ವಪದದ ಅರ್ಥವು ಮುಖ್ಯವಾದರೆ ಅದು 'ಅವ್ಯಯೀಭಾವ' ಸಮಾಸವೆನಿಸುತ್ತದೆ (೬.೬ ಪೂರ್ವಪದಾರ್ಥಪ್ರಧಾನೋ' ವ್ಯಯೀಭಾವಃ), ಉದಾ. ಕೆಳಗಣ ಕೆರೆ > ಕೀಳ್ಕೆರೆ, ಪೊರಗಣ ಮೈ > ಪೊರಮೈ. 'ದ್ವಂದ್ವ' ಸಮಾಸದಲ್ಲಿ ಎರಡೂ/ಎಲ್ಲ ಪದಗಳ ಅರ್ಥಕ್ಕೆ ಪ್ರಾಧಾನ್ಯ ಇರುತ್ತದೆ (೬.೭ ಸರ್ವಪದಾರ್ಥಪ್ರಧಾನೋ ದ್ವಂದ್ವಃ), ಉದಾ. ಕರುಮರಿಗಳ್, ಕೈಕಾಲ್ಗಳ್. ಸಮಾಸದಲ್ಲಿನ ಎರಡು ಪದಗಳಲ್ಲಿ ಯಾವುದೊಂದೂ ಪ್ರಧಾನವಾಗಿರದೆ ಅವು ಮೂರನೆಯ ಬೇರೊಂದು ಪದವನ್ನು ಸೂಚಿಸಿದರೆ ಅದು 'ಬಹುವ್ರೀಹಿ' ಎನಿಸುತ್ತದೆ; ಇಲ್ಲಿ ಯಾವ ಪದವೂ ಮುಖ್ಯವಲ್ಲ. ಸಮಾಸದಲ್ಲಿರದ ಬೇರೊಂದು ಪದ ಪ್ರಧಾನವಾಗಿರುತ್ತದೆ (೬.೮ ಅನ್ಯಪದಾರ್ಥಪ್ರಧಾನೋ ಬಹುವ್ರೀಹಿಃ), ಉದಾ. ಕೆಮ್ಮೀಸೆಗಮ್, ಕುಸಿಗೊರಲಮ್.

ಸಮಾಸದಲ್ಲಿಯ ಎರಡು ಪದಗಳೂ ಕನ್ನಡದ ಶಬ್ದಗಳಾಗಿರಬಹುದು. ಅಥವಾ, ಒಂದುಪದ ಸಂಸ್ಕೃತ ತತ್ಸಮ ಶಬ್ದವಾಗಿದ್ದು ಇನ್ನೊಂದುಪದ ಕನ್ನಡಶಬ್ದವಾಗಿರಬಹುದು (೬.೯ ಸಮಸಂಸ್ಕೃತಂ ದೇಶೀಯಪದೇನ ಸಮಸ್ಯತೆ), ಉದಾ. ಮಾಪಾತಕಮ್, ತುರಗದಳಮ್. ಪೂರ್ವಪದವು ಉತ್ತರಪದವಾದ ಕ್ರಿಯಾಪದದೊಡನೆ ಕರ್ಮಕಾರಕ ಸಂಬಂಧದಲ್ಲಿರಬಹುದು (೬.೧೦ ಕಾರಕಂ ಪರೇಣ ಸಮರ್ಥಕ್ರಿಯಾಪದೇನ), ಉದಾ. ತೆರೆದಿಟ್ಟಂ, ಸೆರೆಯಿದ್ದಂ.

ಮುಂದಿನ ಕೆಲವು ಸೂತ್ರಗಳಲ್ಲಿ ನಾಗವರ್ಮನು ಸಮಾಸಗಳಲ್ಲಿ ಆಗುವ ಸಾಮಾನ್ಯ ಬದಲಾವಣೆಗಳನ್ನು ಹೇಳಿದ್ದಾನೆ. ಪೂರ್ವಪದ ಅ–ಕಾರಾಂತವಾಗಿದ್ದರೆ, ಎರಡೂ ಪದಗಳ ಮಧ್ಯೆ ಮ–ಕಾರ ಆಗಮವಾಗಿ ಬರುತ್ತದೆ (೬.೧೧ ಅಕಾರಾಂತಾನ್ಮಃ), ಉದಾ. ಮನಮ್ಗೊಳ್ಗುಮ್ (ಮನ – ಮ್ – ಗೊಳ್ಗುಮ್), ಕಸಮಿಟ್ಟಂ. ಪೂರ್ವಪದವು ವಿಶೇಷಣವಾಗಿದ್ದು, ಉತ್ತರಪದವು ವಿಶೇಷ್ಯವಾಗಿದ್ದಾಗ, ಪೂರ್ವಪದದ ಉಪಾಂತ್ಯಸ್ವರಸಹಿತ 'ಅವಯವ' ಅಥವಾ ಭಾಗವು ಲೋಪಿಸುತ್ತದೆ (೬.೧೨ ವಿಶೇಷ್ಯೋತ್ತರಪದೇ ಪೂರ್ವಪದಸ್ಯೋಪಾಂತ್ಯ ಸ್ವರಾದೇರ್ಲೋಪಃ), ಉದಾ. ಕರಿಯ ಮಡು > ಕಾರ್ಮಡು (ಇಲ್ಲಿ, ಇ–ಕಾರ ಉಪಾಂತ್ಯಸ್ವರ, 'ಇಯ' ಎಂಬ ಅವಯವ ಲೋಪಿಸುತ್ತದೆ) ಒಳ್ಳಿತು ಗುಣಮ್ > ಒಳ್ಗುಣಮ್. ಪೂರ್ವಪದದ ಉಪಾಂತ್ಯಸ್ವರವು ಇ–ಕಾರವಾಗಿದ್ದರೆ ಸಮಾಸಪದದಲ್ಲಿ ಅದು ಹ್ರಸ್ವ ಎ–ಕಾರವಾಗುತ್ತದೆ (೬.೧೩ ಇಕಾರಸ್ಯೇದ್ಧ್ರಸ್ವಃ), ಉದಾ. ಪಿರಿಯ ಮರಮ್ > ಪೆರ್ಮರಮ್, ಬಿಳಿಯ ಮುಗಿಲ್ > ಬೆಳ್ಮುಗಿಲ್. ಕೆಲವೆಡೆ, ಇ–ಕಾರವು ಹ್ರಸ್ವ ಎ–

ಕಾರವಾಗದಿರುವುದೂ ಉಂಟು (೬.೧೪ ನ ಚ ಕ್ವಚಿತ್), ಉದಾ. ಬಿಳುಪು ಮೊನೆ > ಬಿಳ್ಮೊನೆ. ಉತ್ತರಪದ ಸ್ವರಾದಿಯಾದರೆ, ಪೂರ್ವಪದದ ಗುರುವಾಗಿರದ ಸ್ವರವು ದೀರ್ಘವಾಗುತ್ತದೆ (೬.೧೫ ಸ್ವರಾದೌ ದೀರ್ಘಸ್ತ್ವಗುರೋಃ), ಉದಾ. ಕರಿಯ ಅಡವಿ > ಕಾರಡವಿ. ಉತ್ತರಪದವು ಸ್ವರಾದಿಯಾಗಿದ್ದು ಸಮಾಸದ ಪೂರ್ವಪದದ ಉಪಾಂತ್ಯಸ್ವರಸಹಿತ ಅವಯವಕ್ಕೆ ಲೋಪಬಂದರೆ ಅದರ ಪೂರ್ವದಲ್ಲಿನ [ಣ, ಟ, ಳ, ನ, ತ] ಎಂಬ ವ್ಯಂಜನಗಳು ದ್ವಿತ್ವವಾಗುತ್ತವೆ (೬.೧೬ ಣಟಳನತಾನಾಮ್ ದ್ವಿರ್ಭಾವಃ), ಉದಾ. ಒಳಿತು ಉಣಿಸು > ಒಳ್ಳುಣಿಸು, ಕಿತ್ ಅಡಿ > ಕಿತ್ತಡಿ.

ಕಡಿದು, ನಿಡಿದು ಎಂಬ ಶಬ್ದಗಳು ಪೂರ್ವಪದವಾಗಿದ್ದು ಉತ್ತರಪದವು ಸ್ವರಾದಿಯಾಗಿದ್ದರೆ, ಪೂರ್ವಪದದ ಉಪಾಂತ್ಯಸ್ವರಸಹಿತ ಅವಯವ ಲೋಪವಾಗಿ, ಪೂರ್ವದ ವ್ಯಂಜನಕ್ಕೆ ಟ-ಕಾರ ಆದೇಶವಾಗುತ್ತದೆ (೬.೧೭ ಕಡಿದು ನಿಡಿದು ದ್ವಯಸ್ಯಾದ್ಯೇಕಸ್ವರಪರಸ್ಯ ಟಃ), ಉದಾ. ಕಡಿದು ಆಳ್ > ಕಟ್ಟಾಳ್, ನಿಡಿದು ಒಡಲ್ > ನಿಟ್ಟೊಡಲ್. ನಡು ಶಬ್ದದಲ್ಲಿನ ಡ-ಕಾರಕ್ಕೆ ಟ-ಕಾರ ಆದೇಶವಾಗುತ್ತದೆ (೬.೧೮ ನಡೋಶ್ಚ), ಉದಾ. ನಡು ಇರುಳ್ > ನಟ್ಟಿರುಳ್. ಸ್ವರಾದಿಯಿರುವ ಪದ ಉತ್ತರಪದವಾಗಿದ್ದರೆ, ಕಿರಿದು ಶಬ್ದದಲ್ಲಿನ ಅವಯವ ಲೋಪವಾಗಿ, ಪೂರ್ವದ ವ್ಯಂಜನಕ್ಕೆ ತ-ಕಾರ ಆದೇಶವಾಗುತ್ತದೆ (೬.೧೯ ಕಿರಿದೋಸ್ ತಃ), ಉದಾ. ಕಿರಿಯ ಆಟಮ್ > ಕಿತ್ತಾಟಮ್. ಉತ್ತರಪದ ವ್ಯಂಜನಾದಿಯಾಗಿದ್ದು, ಪೂರ್ವಪದ ಕಡಿದು, ನಿಡಿದು, ಕಿರಿದು ಎಂಬ ಪದಗಳಲ್ಲಿ ಒಂದಾದರೆ, ಅವುಗಳ ಅವಯವ ಲೋಪವಾಗಿ ಉ-ಕಾರಾಂತವಾಗುತ್ತವೆ (೬.೨೦ ತೇಷಾಂ ಉದಂತತ್ವಂ ವ್ಯಂಜನೇಷು), ಉದಾ. ಕಡಿಯ ಕುದುರೆ > ಕಡುಗುದುರೆ, ಕಿರಿದು ಗೆಜ್ಜೆ > ಕಿರುಗೆಜ್ಜೆ. ಪೊಸತು ಮೊದಲಾದ ಪೂರ್ವಪದಗಳ ಉಪಾಂತ್ಯಸ್ವರಸಹಿತ ಅವಯವ ಲೋಪವಾಗಿ, ಅ-ಕಾರಾಂತವಾಗುತ್ತದೆ (೬.೨೧ ಪೊಸತ್ವಾದೀನಾಂ ಅದಂತತ್ವಂ ನಿಪಾತ್ಯತೇ), ಉದಾ. ಪೊಸತು ಸುಗ್ಗಿ > ಪೊಸಸುಗ್ಗಿ, ಎಳದು ಮಾವು > ಎಳಮಾವು, ಒಳಗು ಕೈ > ಒಳಗೈ. (ಪೊಸತ್ವಾದಿಯಲ್ಲಿ ಪೊಸತು, ಪಳದು, ಯಳದು, ಪೊರಗು, ವಳಗು, ಇತ್ಯಾದಿ ಪದಗಳು ಸೇರಿವೆ). ಉತ್ತರಪದ ವ್ಯಂಜನಾದಿ ಆದರೆ, ಕೆಚ್ಚನೆ, ಪಚ್ಚನೆ, ಬೆಚ್ಚನೆ ಎಂಬ ಪೂರ್ವಪದಗಳ ಚ-ಕಾರಸಹಿತ ಅವಯವಕ್ಕೆ ಮ-ಕಾರಾದೇಶ ಆಗುತ್ತದೆ (೬.೨೨ ಕೆಚ್ಚನೆ ಪಚ್ಚನೆ ಬೆಚ್ಚನೆ ಶಬ್ದಾನಾಂ ಚಾದೇರ್ ಮತ್ವಮ್), ಉದಾ. ಕೆಚ್ಚನೆಯ ತಳಿರ್ > ಕೆನ್ದಳಿರ್ (ಕೆಮ್ ತಳಿರ್ > *ಕೆನ್ ತಳಿರ್ > ಕೆನ್ದಳಿರ್), ಬೆಚ್ಚನೆಯ ನೀರ್ > ಬೆನ್ನೀರ್, ಪಚ್ಚನೆಯ ತಲೆ > ಪನ್ದಲೆ. ವ್ಯಂಜನಾದಿಯ ಉತ್ತರಪದವಿದ್ದರೆ ಕೆಚ್ಚನೆ ಇತ್ಯಾದಿ ಪೂರ್ವಪದಗಳಿಗೆ ಸು-ಕಾರಾದೇಶವೂ ಆಗುತ್ತದೆ (೬.೨೩ ಸ್ವಂತತಾ ಚ), ಉದಾ. ಕೆಚ್ಚನೆಯ ಕಲ್ಲು > ಕಿಸುಗಲ್ಲು, ಬೆಚ್ಚನೆಯ ಸುಯ್ > ಬಿಸುಸುಯ್; ಕೆಲವೊಮ್ಮೆ ಸು-ಕಾರ ಆಗದಿರುವ ಸಂದರ್ಭಗಳೂ ಉಂಟು, ಉದಾ. ಪಚ್ಚನೆಯ ಓಲೆ > ಪಚ್ಚೋಲೆ. ಹಿಂದಿನ ಸೂತ್ರದಂತೆ ಸು-ಕಾರಾದೇಶವಾದಾಗ, ಐಚ್ಛಿಕವಾಗಿ ಏ-ಕಾರಕ್ಕೆ ಇ-ಕಾರ ಆದೇಶವಾಗುತ್ತದೆ (೬.೨೪ ಏಕಾರೇ ವಿಭಾಷ ಇಕಾರಃ), ಉದಾ. ಕೆಚ್ಚನೆಯ ಕಣಿಗಿಲೆ > ಕಿಸುಕಣಿಗಿಲೆ; ಕೆಲವೊಮ್ಮೆ, ಏ-ಕಾರಾದೇಶವೂ ಆಗುತ್ತದೆ, ಉದಾ. ಕೆಚ್ಚನೆಯ ಉರಿ > ಕೇಸುರಿ.

ಮುಂದಿನ ಸೂತ್ರಗಳಲ್ಲಿ, ನಾಗವರ್ಮನು ಸಮಾಸಗಳ ವಿಶಿಷ್ಟ ಬದಲಾವಣೆಗಳನ್ನು ವಿವರಿಸಿದ್ದಾನೆ. ತತ್ಪುರುಷ ಸಮಾಸದಲ್ಲಿ ಪೂರ್ವಪದಾಂತ್ಯಕ್ಕೆ ಲೋಪವೂ, ವಿಕಲ್ಪದಿಂದ ಸಂದರ್ಭೋಚಿತ ಆಗಮವೂ ಸಂಭವಿಸುತ್ತದೆ (೬.೨೫ ತತ್ಪುರುಷೇ ಪೂರ್ವಪದಾಂತ್ಯ ಲೋಪಃ ಪ್ರಾಯೋ ಯಥೋಚಿತಾಗಮಶ್ಚ), ಉದಾ. ಅರಸು ಗಿಣಿ > ಅರಗಿಣಿ, ಅರಸು ಮನೆ > ಅರಮನೆ. 'ಎಲ್ಲ' ಶಬ್ದವು ಪೂರ್ವಪದವಾಗಿದ್ದಲ್ಲಿ ಅದರ ಅಂತ್ಯ ಅ-ಕಾರಕ್ಕೆ ದೀರ್ಘಾದೇಶವಾಗುತ್ತದೆ; ಕೆಲವೊಮ್ಮೆ ಆಗದಿರುವುದೂ ಉಂಟು (೬.೨೬ ಎಲ್ಲಸ್ಯ), ಉದಾ. ಎಲ್ಲ/ಎಲ್ಲಾ ರತ್ನಂಗಳ್, ಎಲ್ಲಧನಮ್. ಬಹುವ್ರೀಹಿ ಸಮಾಸದಲ್ಲಿ ಸಮಸ್ತಪದವು ಅ-ಕಾರಾಂತವಾಗುತ್ತದೆ (೬.೨೭ ಬಹುವ್ರೀಹಾವದಂತೇ), ಉದಾ. ಕೆಜ್ಜಣ್ಣಮ್. ಬಹುವ್ರೀಹಿಯಲ್ಲಿ 'ಇಲ್ಲ' ಎಂಬ ಪೂರ್ವಪದದಕ್ಕೆ 'ಇಲಿ' ಎಂಬಾದೇಶವಾಗುತ್ತದೆ (೬.೨೮ ಇಲ್ಲಸ್ಯೇಲಿಃ), ಉದಾ. ಪಲ್ಲಿಲ್ಲದ ಬಾಯಮ್ > ಪಲ್ಲಿಲಿವಾಯಮ್. ದ್ವಿಗು ಸಮಾಸದಲ್ಲಿ ಸಂಖ್ಯಾಪದದ ಉಪಾಂತ್ಯ ವ್ಯಂಜನದಿಂದ ಕೂಡಿದ ಅಕ್ಷರವು ಲೋಪಿಸುತ್ತದೆ (೬.೨೯ ದ್ವಿಗೌ ಸಂಖ್ಯಾವಾಚಿನಾಂ ಉಪಾಂತ್ಯವ್ಯಂಜನಾದೇರ್ ಲೋಪಃ), ಉದಾ. ನಾಲ್ಕು ದೆಶೆ > ನಾಲ್ದೆಶೆ, ಮೂರು ಲೋಕಮ್ > ಮೂಲೋಕಮ್. 'ಒಂದು' ಎಂಬ ಪೂರ್ವಪದವು 'ಓರ್' ಎಂಬಾದೇಶವನ್ನು ಪಡೆಯುತ್ತದೆ (೬.೩೦ ಏಕಾರ್ಥವಾಚಿಕಸ್ಯೌರಂತಃ), ಉದಾ. ಒಂದು ನುಡಿ > ಓರ್ನುಡಿ, ಒಂದು ತಲೆ > ಓರ್ತಲೆ. ದ್ವಿಗು ಸಮಾಸದಲ್ಲಿ 'ಎರಡು' ಎಂಬ ಪೂರ್ವಪದವು 'ಇರ್' ಎಂಬಾದೇಶವನ್ನು ಪಡೆಯುತ್ತದೆ (೬.೩೧ ಇರಾದೇಶದ್ವ್ಯರ್ಥಸ್ಯ), ಉದಾ. ಇರ್ವ್ವಕ್ಕಮ್ ಗಣ್ಡರ್. 'ಮೂರು' ಎಂಬ ಶಬ್ದ ಪೂರ್ವಪದವಿದ್ದು ಕ-ವರ್ಗ ಪ-ವರ್ಗ ವ್ಯಂಜನಾದಿಯ ಉತ್ತರಪದ ಪರವಾದರೆ, ಅವುಗಳ ಮಧ್ಯೆ ಅದೇ ವರ್ಣ ಆಗಮವಾಗಿ ಬರುತ್ತದೆ; ಹಾಗೂ ಪೂರ್ವಪದದ ಆದಿಸ್ವರವು ಹ್ರಸ್ವವಾಗುತ್ತದೆ (೬.೩೨ ಕಪವರ್ಗಯೋಸ್ ತ್ರಯಾಖ್ಯಸ್ಯ ತಾವಾಗಮೌ ಭವತಃ), ಉದಾ. ಮೂರು ಕೊಡೆ > ಮುಕ್ಕೊಡೆ, ಮೂರು ಮಡಿ > ಮುಮ್ಮಡಿ. ಕೆಲವೆಡೆ, ಮೊದಲವರ್ಣ ಹ್ರಸ್ವವೂ ಆಗುವುದಿಲ್ಲ; ಉತ್ತರಪದದ ಆದಿವ್ಯಂಜನಕ್ಕೆ ದ್ವಿತ್ವವೂ ಬರುವುದಿಲ್ಲ, ಉದಾ. ಮೂರು ಗಾವುದಮ್ > ಮೂಗಾವುದಮ್. 'ಮೂರು' ಮೊದಲಾದ ಸಂಖ್ಯಾವಾಚಿ ಪೂರ್ವಪದಗಳ ಉಪಾಂತ್ಯ ವ್ಯಂಜನವು ವ್ಯಂಜನಾದಿ ಇರುವ ಉತ್ತರಪದ ಪರವಾದರೆ ಲೋಪಿಸುತ್ತದೆ (೬.೩೩ ತ್ರ್ಯಾದೀನಾಮ್ ವ್ಯಂಜನೇಷ್ವೇವ), ಉದಾ. ಮೂರು ಲೋಕಮ್ > ಮೂಲೋಕಮ್; ಉತ್ತರಪದ ಸ್ವರಾದಿಯಾಗಿದ್ದರೆ ಲೋಪವಾಗುವುದಿಲ್ಲ. ಉದಾ. ಮೂರು ಅಡಿ > ಮೂರಡಿ, ಮೂರು ಆನೆ > ಮೂರಾನೆ. 'ಆರು' ಎಂಬ ಸಂಖ್ಯಾವಾಚಿ ಪೂರ್ವಪದದ ಉಪಾಂತ್ಯವ್ಯಂಜನವು ಹಿಂದಿನ ಸೂತ್ರದಲ್ಲಿ ಹೇಳಿರುವಂತೆ ಉತ್ತರಪದ ವ್ಯಂಜನಾದಿ ಇದ್ದಾಗ ಲೋಪಿಸುವುದಿಲ್ಲ. ಆದರೆ, ಆದಿ ಆ-ಕಾರವು ಹ್ರಸ್ವವಾಗುತ್ತದೆ (೬.೩೪ ನ ಷಡರ್ಥವಾಚಕಸ್ಯಾದೇರ್ ಹ್ರಸ್ವಃ), ಉದಾ. ಆರು ತಿಙ್ಗಳ್ > ಅರುದಿಙ್ಗಳ್. 'ಏಳು' ಎಂಬ ಸಂಖ್ಯಾವಾಚಿ ಪೂರ್ವಪದದ

ಅಂತ್ಯಸ್ವರ ಲೋಪವಾದಲ್ಲಿ, ಪೂರ್ವಸ್ವರವು ಹ್ರಸ್ವವಾಗುತ್ತದೆ (೬.೩೫ ಸಪ್ತಾರ್ಥಾಭಿಧಾಯಿನಶ್ಚ), ಉದಾ. ಏಳು ಮೊದಲ್ > ಎಳ್ಮೊದಲ್, ಏಳು ಪೊರೆ > ಎಳ್ಪೊರೆ. 'ಒಂಭತ್ತು' ಎಂಬ ಶಬ್ದ ಪೂರ್ವಪದ, 'ಹತ್ತು' ಎಂಬ ಉತ್ತರಪದ ಆಗಿದ್ದರೆ, ಪೂರ್ವಪದವು 'ತೊಂಭ' ಎಂಬಾದೇಶವನ್ನು ಪಡೆಯುತ್ತದೆ (೬.೩೬ ನವಾಖ್ಯಾಯಾಸ್ ತೊಂಭ ಸಂಜ್ಞಿ ಹತ್ತೌ), ಉದಾ. ಒಂಭತ್ತು ಹತ್ತು > ತೊಂಭತ್ತು. ಪೂರ್ವಪದ ಒಂಭತ್ತು ಆಗಿ ಉತ್ತರಪದ 'ನೂರು' ಎಂದಿದ್ದರೆ, ಪೂರ್ವಪದಕ್ಕೆ 'ಒಂಭೈ' ಎಂದಾದೇಶವಾಗುತ್ತದೆ (೬.೩೭ ಒಂಭೈ ಶತೇ), ಉದಾ. ಒಂಭತ್ತು ನೂರು > ಒಂಭೈನೂರು. ಹಾಗೆಯೇ, ಸಹಸ್ರ ಎಂಬರ್ಥದ ಶಬ್ದ ಉತ್ತರಪದವಾದಲ್ಲಿ ಪೂರ್ವಪದಕ್ಕೆ 'ಒಂಭೈ' ಎಂಬಾದೇಶವಾಗುತ್ತದೆ (೬.೩೮ ಸಹಸ್ರೇ ಚ), ಉದಾ. ಒಂಭತ್ತು ಸಾಸಿರಮ್ > ಒಂಭೈಸಾಸಿರಮ್. ಸಂಸ್ಕೃತದ ದಶ 'ಹತ್ತು' ಎಂಬರ್ಥದ ಶಬ್ದ ಪೂರ್ವಪದವಾಗಿದ್ದು, ಸಹಸ್ರ 'ಸಾವಿರ' ಎಂಬರ್ಥದ ಪದ ಪರವಾದಲ್ಲಿ, ಪೂರ್ವಪದಕ್ಕೆ 'ಪಯಿನ್' ಎಂಬಾದೇಶ ಬರುತ್ತದೆ (೬.೩೯ ದಶಾಖ್ಯಾಯಾಃ ಪಯಿನ್), ಉದಾ. ಪಯಿನ್ಸಾಸಿರಮ್. ಹತ್ತು '೧೦' ಎಂಬ ಪೂರ್ವಪದ 'ಒಂದು', 'ಎರಡು' ಎಂಬ ಶಬ್ದ ಉತ್ತರಪದವಾಗಿದ್ದಲ್ಲಿ 'ಪನ್ನ್' ಎಂಬಾದೇಶವನ್ನು ಪಡೆಯುತ್ತದೆ (೬.೪೦ ಪನ್ನೈಕದ್ವ್ಯರ್ಥಯೋಃ), ಉದಾ. ಪನ್ನೊಂದು, ಪನ್ನೆರಡು. ಇತರೆಡೆಯಲ್ಲಿ, ಅಂದರೆ, ಮೂರು '೩', ನಾಲ್ಕು '೪' ಎಂಬುವು ಉತ್ತರಪದವಾದರೆ ಹತ್ತು ಎಂಬ ಶಬ್ದಕ್ಕೆ 'ಪದಿ' ಎಂಬಾದೇಶವಾಗುತ್ತದೆ (೬.೪೧ ಅನ್ಯತ್ರ ಪದಿಃ), ಉದಾ. ಪದಿಮೂರು, ಪದಿನಾಲ್ಕು. ಸ್ವರಾದಿಯಾದ ಸಂಖ್ಯಾವಾಚಿ ಶಬ್ದಗಳು ಪರವಾದರೆ, ಹತ್ತು ಎಂಬ ಪೂರ್ವಪದಕ್ಕೆ 'ಪದಿ' ಎಂಬಾದೇಶವೂ ಎರಡೂ ಪದಗಳ ನಡುವೆ ನ-ಕಾರ ಆಗಮವೂ ಸಂಭವಿಸುತ್ತವೆ (೬.೪೨ ಸ್ವರಾದೌ ನಾಗಮಃ), ಉದಾ. ಪದಿನೈದು, ಪದಿನೇಳು. ಕೆಲವೆಡೆ, ವಿಕಲ್ಪದಿಂದ ಮೇಲೆ ಹೇಳಿದ ಆದೇಶವಾಗದಿರುವುದೂ ಉಂಟು, ಉದಾ. ಪತ್ತೊಂಭತ್ತು. ಅವ್ಯಯೀಭಾವ ಸಮಾಸದ ವೈಶಿಷ್ಟ್ಯವೇನನ್ನೂ ಹೇಳಿಲ್ಲ.

ಸಮಾಸಗಳ ಹೆಸರು ಮತ್ತು ಅವುಗಳ ನಿರ್ವಚನವನ್ನು ಸಂಸ್ಕೃತದಿಂದ ಪಡೆದುಕೊಂಡಂತಿದೆ. ಆದರೆ, ಸಂಸ್ಕೃತದಲ್ಲಿ ಕಂಡುಬರುವ ಕೆಲವು ಪ್ರಭೇದಗಳು (ಉದಾ. ಪ್ರಾದಿಸಮಾಸ, ನಞ್ ತತ್ಪುರುಷ, ಇತ್ಯಾದಿ) ಕನ್ನಡದಲ್ಲಿಲ್ಲ. ಸಮಾಸಗಳಲ್ಲಿ ತತ್ಪುರುಷ ಮತ್ತು ದ್ವಂದ್ವ ಸಮಾಸಗಳು ದ್ರಾವಿಡಮೂಲದವೆನ್ನಬಹುದು. ಬಹುಶಃ ಅವ್ಯಯೀಭಾವ ಮತ್ತು ಬಹುವ್ರೀಹಿ ಸಮಾಸಗಳು ದ್ರಾವಿಡ ಮೂಲದವುಗಳಲ್ಲ. ಇವು ಸಂಸ್ಕೃತದ ಮಾದರಿಯಲ್ಲಿ ರಚಿತವಾದವುಗಳು. ಬಹುವ್ರೀಹಿ ಸಂಸ್ಕೃತಕ್ಕೆ ವಿಶೇಷವಾದ ಸಮಾಸ ಎನ್ನಬಹುದು ಮತ್ತು ಇದು ಸಂಸ್ಕೃತವನ್ನು ಇತರ ಇಂಡೋ-ಯೂರೋಪಿಯನ್ ಭಾಷೆಗಳಿಂದ ಬೇರೆ ಮಾಡುತ್ತದೆ. ದ್ವಂದ್ವ ಮತ್ತು ಅವ್ಯಯೀಭಾವ ಸಮಾಸಗಳು ಸಂಸ್ಕೃತದಲ್ಲೂ ಭಾರತೀಯ ಪರಂಪರೆಯಲ್ಲಿ ಬೆಳೆದುಬಂದವಾಗಿವೆ.

೭. ತದ್ಧಿತ

ವಾಕ್ಯದ ಎರಡು ಮುಖ್ಯ ಅಂಶಗಳೆಂದರೆ, ಆಖ್ಯಾತ ಮತ್ತು ನಾಮ. ಇವೆರಡರಲ್ಲಿ ಯಾವುದಕ್ಕೆ ಪ್ರಾಥಮ್ಯ ನೀಡಬೇಕೆಂಬ ವಿಚಾರದಲ್ಲಿ ಮತಭೇದವಿದೆ. ನೈಯಾಯಿಕರಿಗೆ ನಾಮ ಪ್ರಧಾನವಾದರೆ, ವೈಯಾಕರಣರಿಗೆ ಆಖ್ಯಾತ ಮುಖ್ಯ. ಆಖ್ಯಾತಗಳಿಗೆ ಕೃತ್ ಪ್ರತ್ಯಯವನ್ನು ಸೇರಿಸುವುದರಿಂದ 'ಕೃದಂತಗಳು' ಅಥವಾ ಪ್ರಾಥಮಿಕ ನಾಮಗಳು ಸಿದ್ಧವಾಗುತ್ತವೆ (ನಿರುಕ್ತ ೧.೧೨ ನಾಮಾನ್ಯಾಖ್ಯಾತಜಾತಾನಿ). ವಿಭಕ್ತಿ ಪ್ರತ್ಯಯವಲ್ಲದ್ದು ಕೃತ್ ಪ್ರತ್ಯಯ. ಈರೀತಿಯಾಗಿ ಸಿದ್ಧವಾದ ಪ್ರಾಥಮಿಕ ನಾಮಗಳಿಗೆ ಮತ್ತೆ ಪ್ರತ್ಯಯ ಸೇರಿಸಿದರೆ 'ತದ್ಧಿತಾಂತಗಳು' ದೊರಕುತ್ತವೆ. ಪಾಣಿನಿಯಾಗಲೀ ಕಾತಂತ್ರಕಾರನಾಗಲೀ ತದ್ಧಿತಾಂತವನ್ನು ನಿರ್ವಚಿಸುವುದಿಲ್ಲ. ಅದನ್ನೇ ಅನುಸರಿಸಿ ನಾಗವರ್ಮನೂ ತದ್ಧಿತಾಂತಕ್ಕೆ ನಿರ್ವಚನವನ್ನು ನೀಡಿಲ್ಲ. ಪಾಣಿನಿ ಅದನ್ನು ಕುರಿತು ವಿವರಿಸುವಾಗ ತದ್ಧಿತಾಃ (೪.೧.೭೬) ಎಂದು ಅಧಿಕಾರಸೂತ್ರವನ್ನು ಕೊಟ್ಟು ಯಾವಯಾವ ತದ್ಧಿತ ಪ್ರತ್ಯಯಗಳನ್ನು ಸೇರಿಸುವುದರಿಂದ ತದ್ಧಿತಾಂತ ರೂಪಗಳನ್ನು ಪಡೆಯಬಹುದೆಂದೂ, ಅವುಗಳ ಅರ್ಥವೇನೆಂಬುದನ್ನೂ ತಿಳಿಸಿದ್ದಾನೆ. ನಾಗವರ್ಮನೂ ಹಾಗೆಯೇ ಕನ್ನಡದಲ್ಲಿ ಪ್ರಾಥಮಿಕ ನಾಮಗಳಿಗೆ ಸೇರುವ ಪ್ರತ್ಯಯಗಳನ್ನು ಮತ್ತು ಅವುಗಳ ಅರ್ಥವನ್ನು ನೀಡಿದ್ದಾನೆ.

ತದ್ಧಿತಪ್ರತ್ಯಯಗಳು: ೧. ಇಗ – ಅದು ಆಮನುಷ್ಯನ ಕಸುಬು, ವ್ಯವಹಾರ, ಕಲೆ, ಕೆಲಸ, ಆಫೀಸು, ಅಧಿಕಾರ, ಎಂಬ ಅರ್ಥಗಳಲ್ಲಿ ಲಿಂಗಕ್ಕೆ –ಇಗ ಪ್ರತ್ಯಯವು ಸೇರುತ್ತದೆ (೭.೧ ತದ್ ಅಸ್ಯ ಪಣ್ಯಮ್ ಶಿಲ್ಪಮ್ ನಿಯೋಗಸ್ಚೇತ್ಯಸ್ಮಿನ್ನಿಗಃ; ಹೋ.ಅಷ್ಟಾ.೪.೪.೫೫ ಶಿಲ್ಪಮ್), ಉದಾ. ತಂಬುಲಿಗಮ್, ದವಸಿಗಮ್ (ಕಸುಬು), ಪಟಶಾಲಿಗಮ್, ತೆಲ್ಲಿಗಮ್ (ಕಲೆ), ಬಾಣಸಿಗಮ್, ಕೊಟಾರಿಗಮ್ (ಆಫೀಸು). ಅದನ್ನು 'ತಿಳಿಯುತ್ತಾನೆ' ಅಥವಾ 'ಅಭ್ಯಾಸಮಾಡುತ್ತಾನೆ' ಎಂಬರ್ಥದಲ್ಲಿ ಕೂಡ – ಇಗ ಪ್ರತ್ಯಯವು ಲಿಂಗಕ್ಕೆ ಸೇರಿಸಲ್ಪಡುತ್ತದೆ (೭.೨ ತದ್ ವೇತ್ತ್ಯಧೀತೇ ವಾ; ಹೋ. ಅಷ್ಟಾ.೪.೨.೫೯ ತದಧೀತೇ ತದ್ವೇದ), ಉದಾ. ಜೋಯಿಸಿಗಮ್, ಸಿದ್ಧಾಂತಿಗಮ್. ಕೆಲವೆಡೆ 'ಹಾಗೆ ಆಚರಿಸುತ್ತಾನೆ' ಎಂಬರ್ಥದಲ್ಲಿ ಸಹ –ಇಗ ಪ್ರತ್ಯಯ ಸೇರುತ್ತದೆ, ಉದಾ. ಸುಜ್ಜಿಗಮ್ (= ಸುಜ್ಜಮ್ ಆಚರತಿ).

೨. ಇಚ – 'ಅಲ್ಲಿ ಹುಟ್ಟಿದನು' ಎಂಬರ್ಥದಲ್ಲಿ –ಇಚ ಪ್ರತ್ಯಯವೂ ವಿಕಲ್ಪವಾಗಿ ಕೆಲವೆಡೆ –ಇಗ ಪ್ರತ್ಯಯವೂ ಕಂಡುಬರುತ್ತದೆ (೭.೩ ಇಚಸ್ ತತ್ರ ಜಾತೇ ಭಾವೇ ವಾ; ಹೋ. ಅಷ್ಟಾ ೪.೩.೨೫ ತತ್ರ ಜಾತಃ), ಉದಾ. ಪೊಳಲಿಚಮ್ (= ಪೊಳಲೊೞ್ ಪುಟ್ಟಿದಾತಮ್), ಕರಹಡಿಚಮ್ (= ಕರಹಡ ದೇಶದೊೞ್ ಪುಟ್ಟಿದಾತಮ್). ವಿಕಲ್ಪವಾಗಿ, ಪೊಳಲಿಗಮ್.

೩. ವಳ, ವಳ್ಳ – 'ಇಲ್ಲಿ ಅವನು ಅಧಿಕಾರಿ' ಎಂಬರ್ಥದಲ್ಲಿ –ವಳ/–ವಳ್ಳ ಎಂಬ ಪ್ರತ್ಯಯಗಳು ಉಪಯೋಗವಾಗುತ್ತವೆ (೭.೪ ವಳ ವಳ್ಳೌ ತತ್ರಾಧಿಕೃತಿ),

ಉದಾ. ಮಡಿವಳಮ್/ ಮಡಿವಳ್ಳಮ್, ಸೆಜ್ಜವಳಮ್/ ಸೆಜ್ಜವಳ್ಳಮ್. (ಇವನ್ನು ಒಂದೇ ಪ್ರತ್ಯಯದ ಎರಡು ರೂಪಗಳೆನ್ನಬಹುದು).

೪. ಕಾರ – 'ವ್ಯಾಪಿಸು/ಆಸಕ್ತಿಹೊಂದಿರು' ಎಂಬರ್ಥದಲ್ಲಿ –ಕಾರ ಪ್ರತ್ಯಯವು ಸೇರುತ್ತದೆ (೭.೫ ವ್ಯಾಪೃತೇ ಪ್ರವಣೇ ಚ ಕಾರಃ), ಉದಾ. ಆಟಗಾರಮ್, ಅರಮನೆಕಾರಮ್.

೫. ಅದು ಅವನ 'ವೈಶಿಷ್ಟ್ಯ' ಎಂಬರ್ಥದಲ್ಲಿ –ವಂತ ಪ್ರತ್ಯಯವು ಕಂಡುಬರುತ್ತದೆ (೭.೬ ತದಸ್ಯಾಸ್ತೀತಿ ವಂತಃ), ಉದಾ. ಸಿರಿವಂತಮ್, ಗುಣವಂತಮ್.

೬. 'ಹೋಲಿಕೆ' ಅಥವಾ 'ಉಪಮಾನ' ಎಂಬರ್ಥದಲ್ಲಿ –ವೋಲ್ ಎಂಬ ಪ್ರತ್ಯಯ ಸೇರುತ್ತದೆ (೭.೭ ಉಪಮಾನಾರ್ಥೇ ವೋಲ್), ಉದಾ. ಮನುವೋಲ್ ಯಜ್ಞಮ್; ಕೆಲವೊಮ್ಮೆ –ಅಂತೆ ಎಂಬ ಪ್ರತ್ಯಯ ಸೇರುತ್ತದೆ, ಉದಾ. ಕರಿಯಂತೆ ಭದ್ರಗುಣಮ್. –ವೋಲ್ ಪ್ರತ್ಯಯವು ವಿಕಲ್ಪದಿಂದ ಹ್ರಸ್ವವಾಗುತ್ತದೆ (೭.೮ ಹ್ರಸ್ವೋ ವಾ), ಉದಾ. ಹರಿವೋಲ್/ಹರಿವೊಲ್. ಅಕಾರಾಂತ ಶಬ್ದಗಳಿಗೆ ಸೇರುವ –ವೋಲ್ ಎಂಬ ಪ್ರತ್ಯಯಕ್ಕೆ ಮೊದಲು ನ–ಕಾರಾಗಮವೂ, ವೋಲ್ ಎಂಬುದರ ವ–ಕಾರಕ್ಕೆ ಬ–ಕಾರಾದೇಶವೂ ಬರುತ್ತದೆ (೭.೯ ಅಕಾರಾಂತಾನ್ನಾಗಮೋ ಬಶ್ರುತಿಶ್ಚ), ಉದಾ. ನಿಗಳಂಬೋಲ್, ಚಂದ್ರಂಬೋಲ್ ಬೆಳಗಿತು.

೭. ಎಣಿಕೆಯ 'ಮುಕ್ತಾಯವನ್ನು' ತಿಳಿಸುವಲ್ಲಿ –ಅನೆಯ ಎಂಬ ಪ್ರತ್ಯಯ ಉಪಯೋಗವಾಗುತ್ತದೆ (೭.೧೦ ಸಂಖ್ಯಾಯಾಃ ಪೂರಣೇ ಅನೆಯಃ), ಉದಾ. ಪದಿನಾಲ್ಕನೆಯವಮ್. ವೃತ್ತಿಯಲ್ಲಿ ನಾಗವರ್ಮ ಪೂರಣವನ್ನು 'ನಿರ್ದಿಷ್ಟವಾಚಕ' ಎನ್ನುತ್ತಾನೆ.

೮. 'ಒಂದುಸಲ', 'ಎರಡುಸಲ', ಇತ್ಯಾದಿ ಅರ್ಥದಲ್ಲಿ –ಮೆ ಪ್ರತ್ಯಯ ವಿಕಲ್ಪವಾಗಿ ಬರುತ್ತದೆ (೭.೧೧ ವಾರಾರ್ಥೇ ಮೆ ವಾ), ಉದಾ. ಒರ್ಮೆ, ಇರ್ಮೆ, ಮೂಮೆ.

೯. ಅದರ 'ಭಾವ' ಎಂಬರ್ಥದಲ್ಲಿ –ಕೆ, –ಪು ಎಂಬೆರಡು ಪ್ರತ್ಯಯಗಳು ಸೇರುತ್ತವೆ (೭.೧೨ ಭಾವಾರ್ಥೇ ಕೆ ಪು), ಉದಾ. ಕಾಣ್ಕೆ, ಪೊರಳ್ಕೆ; ನುಣ್ಪು, ಕೆಂಪು. ಇವು ಭಾವನಾಮವಾಚಕಗಳು.

೧೦. 'ಜೀವದ' ವಿಷಯದಲ್ಲಿ ಭಾವಾರ್ಥ ಸೂಚಿಸುವಾಗ –ಇಕೆ, –ರ್ಕು, –ಮೆ, –ತನ ಎಂಬ ನಾಲ್ಕು ಪ್ರತ್ಯಯಗಳು ಸೇರುತ್ತವೆ (೭.೧೩ ಚೇತನೇಷ್ವಿಕೇರ್ಕುಮೇತನಾನಿ), ಉದಾ. ಮಾನಸಿಕೆ, ಸೊರ್ಕು, ಪೇರ್ಮೆ, ಬಡತನಮ್.

೧೧. ಕ್ರಿಯಾವಾಚಿ ಧಾತುಗಳಿಗೆ -ಅತ್ (=ಅ) ಪ್ರತ್ಯಯ ಸೇರುತ್ತದೆ (೭.೧೪ ಕ್ರಿಯಾರ್ಥಾದ್ಧಾತೋರ್ ಅತ್), ಮತ್ತು ಅತಿಟ ಎಂಬ ಹಿಂದೆ ಹೇಳಿದ ಸೂತ್ರದಂತೆ (೫.೨೯) ಧಾತುವಿನ ಡ-ಕಾರಕ್ಕೆ -ಟಕಾರವೂ ಆಗುತ್ತದೆ, ಉದಾ. ಆಡ್ - ಆಟಮ್, ಕೂಡ್ - ಕೂಟಮ್.

೧೨. ಅದು, ಇದು, ಏನ್ ಎಂಬ ಮೂರು ಶಬ್ದಗಳಿಗೆ 'ಅಳತೆ' ಎಂಬರ್ಥದಲ್ಲಿ -ನಿತು ಪ್ರತ್ಯಯ ಸೇರುತ್ತದೆ (೭.೧೫ ಅದು ಇದು ಏನ್ಭ್ಯಃ ಪ್ರಮಾಣೇ ನಿತು), ಉದಾ. ಅದು, ಅನಿತು; ಇದು, ಇನಿತು; ಏನ್, ಎನಿತು.

೧೩. ಪ್ರಕಾರ (=ರೀತಿ, ಬಗೆ) ಮತ್ತು ಕಾಲ (=ಸಮಯ) ಎಂಬರ್ಥದಲ್ಲಿ ಕ್ರಮವಾಗಿ ತು, ದು ಎಂಬ ಪ್ರತ್ಯಯಗಳು ಬರುತ್ತವೆ (೭.೧೬ ಪ್ರಕಾರಕಾಲಾರ್ಥೇ ತು ದು), ಉದಾ. ಅಂತು, ಇಂತು, ಎಂತು; ಅಂದು, ಇಂದು, ಎಂದು.

೧೪. ಅದು ಅವನ ಶೀಲ (=ಸ್ವಭಾವ) ಎಂಬರ್ಥದಲ್ಲಿ -ಅಳಿ ಎಂಬ ಪ್ರತ್ಯಯ ಸೇರುತ್ತದೆ (೭.೧೭ ಅಳಿಸ್ತಾಚ್ಛೀಲ್ಯೇ; ಹೋ. ಅಷ್ಟಾ.೪.೪.೬೧ ಶೀಲಮ್), ಉದಾ. ಓದಾಳಿ, ಮಾರಾಳಿ.

೧೫. ಅದೇ ಅರ್ಥದಲ್ಲಿ ಆಶಬ್ದಗಳಿಗೆ -ಕುಳಿ ಎಂಬ ಪ್ರತ್ಯಯವೂ ಸಾಧ್ಯ (೭.೧೮ ಕುಳಿಶ್ಚ), ಉದಾ. ಓದುಕುಳಿ, ಅಞ್ಜುಕುಳಿ.

೧೬. ಅದನ್ನು 'ಮಾಡುತ್ತಾನೆ' ಎಂಬರ್ಥದಲ್ಲಿ -ಗಾರ ಪ್ರತ್ಯಯದ ಉಪಯೋಗವಾಗುತ್ತದೆ (೭.೧೯ ತತ್ಕರೋತೀತ್ಯಸ್ಮಾದ್ ಗಾರಃ), ಉದಾ. ಕಂಚುಗಾರಮ್, ಬಳೆಗಾರಮ್, ಕುಂಭಗಾರಮ್. ಉಕಾರಾಂತವಾದ ಶಬ್ದಗಳಿಗೆ -ಗಾರ ಪ್ರತ್ಯಯ ಸೇರಿದಾಗ ವಿಕಲ್ಪವಾಗಿ ನಕಾರಾಗಮವಾಗುತ್ತದೆ (೭.೨೦ ಉದಂತಾನ್ನಾಗಮೋ ಬಹುಳಮ್), ಉದಾ. ಸೊಂಪುಗಾರಮ್/ ಸೊಂಪುಂಗಾರಮ್, ಜೂಜುಗಾರಮ್. ಸಂಸ್ಕೃತದ -ಕಾರ ಪ್ರತ್ಯಯವೂ ಕನ್ನಡದಲ್ಲಿ ಕಂಡುಬರುತ್ತದೆ (೭.೨೧ ಅಪಭ್ರಂಶೇ'ಪ್ಯೇವಮ್ ಕಾರಸ್ಯ). ಅಪಭ್ರಂಶವನ್ನು ವೃತ್ತಿಯಲ್ಲಿ 'ಕರ್ಣಾಟಕಭಾಷೆ' ಎಂದಿದ್ದಾನೆ.

ಕನ್ನಡದಲ್ಲಿ ಸ್ತ್ರೀಲಿಂಗವನ್ನು ಹೇಳುವಲ್ಲಿ -ಗಾರ ಪ್ರತ್ಯಯದ ಮುಂದೆ -ಇತಿ ಎಂಬ ಪ್ರತ್ಯಯ ಸೇರುತ್ತದೆ (೭.೨೨ ಸ್ತ್ರಿಯಾಮ್ ಇತಿ ಚ), ಉದಾ. ಬಳೆಗಾರಿತಿ, ಬಾಣಸಿಗಿತಿ. ಕೆಲವೆಡೆ ಪ್ರತ್ಯಯದ ಇ-ಕಾರಕ್ಕೆ ಲೋಪ ಬರುತ್ತದೆ, ಉದಾ. ಆಳುಗಾರ್ತಿ, ಮಡಿವಳ್ತಿ. ಕೆಲವೆಡೆ ಎರಡು ರೂಪಗಳೂ ಕಂಡುಬರುತ್ತವೆ, ಉದಾ. ಒಕ್ಕಲಿತಿ/ ಒಕ್ಕಲಿಗಿತ್ತಿ.

ಸ್ತ್ರೀಲಿಂಗದಲ್ಲಿ ಗುಣವಾಚಕ ಶಬ್ದಗಳಿಗೆ -ಅಳ್ ಮತ್ತು -ಎ ಎಂಬ ಪ್ರತ್ಯಯಗಳು ಸೇರುತ್ತವೆ (೭.೨೩ ಅಳೇ ಚ ಗುಣವಚನೇಭ್ಯಃ), ಉದಾ. ನಲ್ಲಳ್, ಇನಿಯಳ್; ಸೀತಗೆ, ಚತುರೆ.

ಇ-ಕಾರಾಂತ ಹಾಗೂ ಉ-ಕಾರಾಂತ ಶಬ್ದಗಳು ಪುಲ್ಲಿಂಗ ಮತ್ತು ಸ್ತ್ರೀಲಿಂಗದಲ್ಲಿ ವಿಕಲ್ಪದಿಂದ ಸಮಾನರೂಪವನ್ನು ಪಡೆಯುತ್ತವೆ (೭.೨೪ ಇದುದಂತಃ ಪುಂಸಿ ವಾ), ಉದಾ. ನಾಣಿಲಿ, ಮಾತಾಳಿ, ಸಾದು, ಪಾರು. ಕೆಲವೊಮ್ಮೆ ವ್ಯಂಜನಾಂತವೂ ಆಗುತ್ತದೆ, ಉದಾ. ಮರುಳ್.

ವೀಪ್ಸಾ 'ಪ್ರತಿಯೊಂದು', ಅನುಕರಣ 'ಅದರಂತೆ ಮಾಡುವಿಕೆ', ಆಭೀಕ್ಷ್ಣ್ಯ 'ಪುನರುಚ್ಚಾರಣೆ', ಕ್ರಿಯಾಸಮಭಿಹಾರ, ಸಾಮೀಪ್ಯ ಮತ್ತು ಚಾಪಲ್ಯ ಎಂಬರ್ಥಗಳಲ್ಲಿ ನಾಮವಾಚಿಶಬ್ದಗಳು ದ್ವಿರ್ಭಾವವನ್ನು ಪಡೆಯುತ್ತವೆ (೭.೨೫ ವೀಪ್ಸಾನುಕರಣಾಭೀಕ್ಷ್ಣ್ಯ ಕ್ರಿಯಾಸಮಭಿಹಾರ ಸಾಮೀಪ್ಯ ಚಾಪಲ್ಯಾದೌ), ಉದಾ. (ಕ್ರಮವಾಗಿ) ಊರೂರು, ಮನೆಮನೆ; ಘೋಘೋರ್ಮರನೆ, ಘಳಿಘಳಿಲನೆ; ನೋಡುನೋಡು, ತಿಳಿಸುತಿಳಿಸು; ನಡೆನಡೆಯೆಂದು ನುಡಿವರ್; ಕೆಳಕೆಳಗೆ; ಒಪ್ಪಿಸೊಪ್ಪಿಸು.

ಈ ವಿಧಾನದ ಕಡೆಯ ಸೂತ್ರದಲ್ಲಿ, ಹಿಂದೆ ಸಮಾಸವಿಧಾನದಲ್ಲಿ ಹೇಳಿದ ಲೋಪಾದಿ ಕಾರ್ಯಗಳು ತದ್ಧಿತದಲ್ಲೂ ನಡೆಯುತ್ತವೆ ಎಂದಿದ್ದಾನೆ (೭.೨೬ ಅತ್ರಾದಿ ಲೋಪಾದಿಕಮ್ ಸಮಾಸವತ್).

ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ೪೦೦೦ ಸೂತ್ರಗಳಿದ್ದು, ತದ್ಧಿತಾಂತಗಳನ್ನು ವಿವರಿಸಲು ಪಾಣಿನಿ ೧೧೧೦ ಸೂತ್ರಗಳನ್ನು ಉಪಯೋಗಿಸಿದ್ದಾನೆ. ಇದರೊಡನೆ ಹೋಲಿಸಿದಾಗ ನಾಗವರ್ಮನ ವ್ಯಾಕರಣದಲ್ಲಿ ೨೮೦ ಸೂತ್ರಗಳಿದ್ದು ತದ್ಧಿತಗಳನ್ನು ಕೇವಲ ೨೬ ಸೂತ್ರಗಳಲ್ಲಿ ಹೇಳಲಾಗಿದೆ. ಸಂಸ್ಕೃತದಲ್ಲಿ ತದ್ಧಿತ ಪ್ರತ್ಯಯಗಳು ಸೇರಿದಾಗ ಮೂಲನಾಮಪದದ ಆದಿಸ್ವರವು ವೃದ್ಧಿಯನ್ನು ಪಡೆಯುತ್ತದೆ (೭.೨.೧೧೭ ತದ್ಧಿತೇಷ್ವಚಾಮ್ ಆದೇಃ, ೧೧೪ ... ವೃದ್ಧಿಃ), ಉದಾ. ರಘು : ರಾಘವ, ಶಿವ : ಶೈವ, ಭೂತ : ಭೌತಿಕ). ೧.೧.೧ ವೃದ್ಧಿರ್ ಆದೈಚ್ ಎಂಬ ಸೂತ್ರದಲ್ಲಿ ಪಾಣಿನಿಯು ಆ, ಐ, ಔ ಎಂಬುವಕ್ಕೆ ವೃದ್ಧಿಸಂಜ್ಞೆಯನ್ನು ಹೇಳಿದ್ದಾನೆ. ಕನ್ನಡದಲ್ಲಿ ತದ್ಧಿತಗಳು ಮೊದಲಸ್ವರಕ್ಕೆ ವೃದ್ಧಿಯನ್ನು ಪಡೆಯುವುದಿಲ್ಲ.

ಕನ್ನಡದ ತದ್ಧಿತ ಪ್ರತ್ಯಯಗಳಲ್ಲಿನ -ಇಗ ಎಂಬುದು ಪ್ರಾಯಃ ಸಂಸ್ಕೃತದ ಲೌಕಿಕ, ಧಾರ್ಮಿಕ, ಇತ್ಯಾದಿ ಪದಗಳಲ್ಲಿ ತೋರಿಬರುವ -ಇಕ ಪ್ರತ್ಯಯದ ತದ್ಭವ ಆಗಿರಬಹುದು. ಸಂಸ್ಕೃತದಿಂದ ಈರೀತಿಯ ತದ್ಧಿತರೂಪಗಳನ್ನು ಎರವಲು ಪಡೆದು ಅದರಲ್ಲಿರುವ -ಇಕ ಪ್ರತ್ಯಯವನ್ನು ಗುರುತಿಸಿ ನಂತರ ಕನ್ನಡಶಬ್ದಗಳಿಗೂ ಅದನ್ನು ಸೇರಿಸಿ ಉಪಯೋಗಿಸಿರಬಹುದು. ಹಾಗೆಯೇ, ಸಂಸ್ಕೃತದ ಕುಂಭಕಾರ, ಸ್ವರ್ಣಕಾರ ಮೊದಲಾದ ಪದಗಳಲ್ಲಿನ -ಕಾರ ಪ್ರತ್ಯಯದಿಂದ ಕನ್ನಡದಲ್ಲಿ ತತ್ಸಮ -ಕಾರ ಪ್ರತ್ಯಯವೂ, ಬಳೆಗಾರ, ಕಂಚುಗಾರ ಮೊದಲಾದವುಗಳಲ್ಲಿ ಕಾಣಬರುವ ತದ್ಭವರೂಪ -ಗಾರ ಪ್ರತ್ಯಯವೂ ಬೆಳೆದುಬಂದಿರಬಹುದು. ಕನ್ನಡದ ಸಿರಿವಂತ, ಗುಣವಂತ, ಇತ್ಯಾದಿ ಪದಗಳಲ್ಲಿನ -ವಂತ ಪ್ರತ್ಯಯಕ್ಕೆ ಸಂಸ್ಕೃತದ ಭಾಗ್ಯವಂತ, ಧನವಂತ ಎಂಬಲ್ಲಿನ -ವಂತ ಪ್ರತ್ಯಯ ಮೂಲವಾಗಿರಬಹುದು. ಸಂಸ್ಕೃತದ ಸ್ತ್ರೀ

ಪ್ರಾಕೃತದಲ್ಲಿ ಇತ್ಥೀ ಎಂದಾಯಿತು. ಇದು ನಂತರ ಕನ್ನಡದಲ್ಲಿ ಇತಿ ರೂಪದಿಂದ ತೋರಿ ಪ್ರತ್ಯಯವಾಗಿ ಬಳೆಗಾರಿತಿ, ವಕ್ಕಲಿತಿ ಎಂಬಲ್ಲಿ ಸ್ತ್ರೀವಾಚಿ ಪದಗಳನ್ನು ಸೂಚಿಸುತ್ತದೆ. ಪ್ರತ್ಯಯಗಳನ್ನೇ ನೇರವಾಗಿ ಒಂದುಭಾಷೆಯಿಂದ ಇನ್ನೊಂದು ಭಾಷೆಗೆ ಎರವಲು ಪಡೆಯುವುದು ಕಂಡುಬಂದಿಲ್ಲ. ಪದಗಳನ್ನು ಪಡೆದು ಅದರಲ್ಲಿ ಪ್ರತ್ಯಯ ಇದೆಯೆಂದು ಗುರುತಿಸಿದರೆ ಆಗ ಆಪ್ರತ್ಯಯವನ್ನು ಸ್ವೀಕರಿಸಿದ ಭಾಷೆಯ ಶಬ್ದಗಳಿಗೂ ಸೇರಿಸಿ ಉಪಯೋಗಮಾಡುತ್ತಾರೆ. ಹೀಗೆ ಸಂಸ್ಕೃತ ವ್ಯಾಕರಣದ ಪ್ರಭಾವ ನಾಗವರ್ಮನ ಕರ್ಣಾಟಕ ಭಾಷಾಭೂಷಣದ ಮೇಲೆ ಸಾಕಷ್ಟು ಕಂಡುಬರುತ್ತದೆ.

ಆಕರಗ್ರಂಥಗಳು

೧. ನಾಗವರ್ಮನ ಕರ್ಣಾಟಕ ಭಾಷಾಭೂಷಣ, ಎಲ್. ರೈಸ್ (ಸಂ). ಮೈಸೂರು ಸರ್ಕಾರದ ಮುದ್ರಣಾಲಯ. ಬೆಂಗಳೂರು. ೧೮೮೪.

೨. ಶರ್ವವರ್ಮನ ಕಾತಂತ್ರ ಸೂತ್ರಪಾಠ

೩. ಕಾಶಿಕಾ, ವಾಮನ ಮತ್ತು ಜಯಾದಿತ್ಯ (ಸಂ). ಚವ್ಖಂಬಾ ಸಂಸ್ಕೃತ ಸೀರೀಸ್. ಬನಾರಸ್ ಸಿಟಿ. ೧೦೮೭.

ಹಲ್ಮಿಡಿ : ಶಾಸನೋಲ್ಲೇಖಗಳು, ಸ್ಥಳನಾಮ

◈

ಡಾ. ಎನ್.ಎಸ್. ತಾರಾನಾಥ

ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿರುವ ಒಂದು ಸಣ್ಣ ಹಳ್ಳಿ ಹಲ್ಮಿಡಿ. ಬೇಲೂರಿನಿಂದ ಚಿಕ್ಕಮಗಳೂರಿಗೆ ಹೋಗುವ ಮುಖ್ಯರಸ್ತೆಯ ಪಶ್ಚಿಮಕ್ಕೆ ಇದು ಎರಡು ಮೈಲಿ ದೂರದಲ್ಲಿದೆ. ಅಲ್ಲಿರುವ ಯಗಚಿ ನದಿಗೆ ಸೇರುವ ಹಳ್ಳವೊಂದರ ಬಲದಂಡೆಯ ಮೇಲಿದೆ. ಹಿಂದೆ ಆ ಊರನ್ನು ಸುತ್ತುವರಿದಿದ್ದ ಮಣ್ಣಿನ ಕೋಟೆ ಒಂದಿತ್ತು. ಈಗ ಅದು ಇಲ್ಲ. ಗ್ರಾಮದ ಮಧ್ಯದಲ್ಲಿ ಅಷ್ಟೇನೂ ಪ್ರಾಚೀನವಲ್ಲದ ಒಂದು ವೀರಭದ್ರ ದೇವಾಲಯವಿದೆ. ಈ ಹಳ್ಳಿಯಲ್ಲಿ ಸುಮಾರು 450 ಮನೆಗಳಿವೆ. ಈ ಹಳ್ಳಿಯ ಜನಸಂಖ್ಯೆ ಸುಮಾರು 1400. ಇಂದಿನ ಜನರಲ್ಲಿ ಕೆಲವರು ತಮ್ಮ ಹಳ್ಳಿಯ ಹೆಸರನ್ನು ಹನ್ಮಿಡಿ, ಹನುಮಿಡಿ, ಹನುಂಡಿ ಎನ್ನುತ್ತಾರೆ.

ಹಲ್ಮಿಡಿಯಲ್ಲಿ ಮೂರು ಶಾಸನಗಳು ದೊರೆತಿವೆ. ಒಂದು ಅದೇ ಊರಿನ ವೀರಭದ್ರ ದೇವಾಲಯದ ಬಳಿ ಬಿದ್ದಿರುವ 1707ರ ಶಿಲಾಶಾಸನ. ಇದು ಮಾದಿಗೌಡನೆಂಬಾತನನ್ನು ಉಲ್ಲೇಖಿಸುತ್ತದೆ (ಎ.ಕ. IX, ಮೈಸೂರು, 1990, ಬೇಲೂರು, 237). ಮತ್ತೊಂದು ತ್ರುಟಿತ ಬರಹದ ವೀರಗಲ್ಲು. 1277ರ ಈ ಶಾಸನದಲ್ಲಿ ಐದು ಸಾಲುಗಳಿವೆ. ಬೀರಯ್ಯನ ಮಗ ದೊರೆಯ್ಯನ ಬೀರಗಲ್ಲನ್ನು ಬೊಮ್ಮಯ ಸಾಹಿಣಿಯ ಮಗ (ಈತನ ಹೆಸರು ಲುಪ್ತವಾಗಿದೆ) ಪ್ರತಿಷ್ಠಾಪಿಸಿದ್ದಾನೆ (ಎ.ಕ. IX, ಮೈಸೂರು, 1990, ಬೇಲೂರು 235). ಈ ಎರಡು ಶಾಸನಗಳಿಗಿಂತ ಪ್ರಾಚೀನವಾದ ಕ್ರಿ.ಶ. 450ರ ಒಂದು ಶಾಸನವಿದೆ. ಇದು ವೀರಭದ್ರ ದೇವಾಲಯದ ಮುಂದೆ ದೊರೆತ ಶಿಲಾಲೇಖವಾಗಿದೆ. ಇದೊಂದು ಫಲಕ ಶಾಸನ. ಮೋಟುಕಂಬವೊಂದರ ಮೇಲೆ ದೊರೆತಿದ್ದರಿಂದ ಇದನ್ನು ಕೆಲವರು ಸ್ತಂಭಶಾಸನವೆಂದೂ ಗುರುತಿಸಿದ್ದಾರೆ. ಎಂ.ಎಚ್. ಕೃಷ್ಣ ಅವರಿಗೆ ದೊರೆತ ಈ ಶಿಲಾಲೇಖ ಹಲ್ಮಿಡಿಶಾಸನ ಎಂದೇ ಹೆಸರಾಗಿದೆ (ಮೈ.ಆರ್.ಇ., 1936 ಪುಟ 73–

81; ಎ.ಕ. IX, ಮೈಸೂರು, 1990, ಬೇಲೂರು 236). ಕನ್ನಡ ಭಾಷೆ – ಸಾಹಿತ್ಯಗಳ ಅತ್ಯಂತ ಪ್ರಾಚೀನ ಶಾಸನವೆಂದು ಇದರ ಖ್ಯಾತಿ. ಈ ಶಾಸನದಲ್ಲೇ ಹಲ್ಮಿಡಿಯ ಉಲ್ಲೇಖವಿದೆ. ವಿಜಅರಸನೆಂಬ ವೀರಪುರುಷ ಪಲ್ಲವರನ್ನು ಎದುರಿಸಿ ಹೋರಾಡಿ ಕದಂಬರಿಗೆ ಗೆಲವು ತಂದುಕೊಟ್ಟ. ಅದಕ್ಕಾಗಿ ಅವನಿಗೆ ವೀರದತ್ತಿಯಾಗಿ ಪಲ್ಮಡಿ ಮತ್ತು ಮೂಟಿವಳ್ಳಿ ಎಂಬ ಎರಡು ಗ್ರಾಮಗಳನ್ನು ನೀಡಲಾಯಿತು. ಕೇಕಯ ಪಲ್ಲವರಂ ಕಾದು ಎಱಿದು ಪೆತ್ತಜಯನ್ ಆ ವಿಜಅರಸಂಗೆ ಬಾಳ್ಗಟ್ಟು ಪಲ್ಮಡಿಉಂ ಮೂಟಿವಳ್ಳಿಉಂ ಕೊಟ್ಟಾರ್ ಎಂದು ಇದನ್ನೇ ಮೂಲಶಾಸನದಲ್ಲಿ ಹೇಳಿದೆ. ಇಂದಿನ ಹಲ್ಮಿಡಿಯೇ ಅಂದಿನ ಪಲ್ಮಡಿ.

ಹಲ್ಮಿಡಿ : ಶಾಸನೋಲ್ಲೇಖಗಳು

ಹಲ್ಮಿಡಿಯ ಉಲ್ಲೇಖ ಆ ಶಾಸನದಲ್ಲಿ ಮಾತ್ರವಲ್ಲದೆ ಆಮೇಲಿನ ಶಾಸನಗಳಲ್ಲೂ ಇದೆ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಒಂದು ಪಾಠದಲ್ಲಿ ಕೆಲವನ್ನು ಗಮನಿಸಿದ್ದಾರೆ (ಕನ್ನಡ ಶಾಸನ ಅಧ್ಯಯನ, ಬ್ಲಾಕ್ 31, ಕೋಸ್ X, 2005, ಪು. 4). ಐದರಿಂದ ಹದಿನಾರನೆಯ ಶತಮಾನದವರೆಗೆ ಶಾಸನಗಳಲ್ಲಿ ಹಲ್ಮಿಡಿಯು ಉಲ್ಲೇಖಗೊಂಡಿದೆ. ರಾಜವಂಶಗಳ ಹಿನ್ನೆಲೆಯಲ್ಲಿ ಈ ಉಲ್ಲೇಖಗಳನ್ನು ನೋಡಬಹುದು.

ಕದಂಬರ ರಾಜನಾದ ಕಾಕುಸ್ಥವರ್ಮನ ಮಗ ಮೊದಲನೆಯ ಕೃಷ್ಣವರ್ಮ (ಕ್ರಿ.ಶ. 470–495). ಈತನ ಮರಿಮಗ ಇಮ್ಮಡಿ ಕೃಷ್ಣವರ್ಮ (ಕ್ರಿ.ಶ. 545–573). ಈತನ ಕಾಲದ ಬೆನ್ನೂರು ತಾಮ್ರಶಾಸನ ಒಂದು ದಾನಶಾಸನ. ಸತ್ಯತಪಃಸ್ವಾಧ್ಯಾಯನೂ, ಛಾಂದೋಗ್ಯ ಪಾರಗನೂ, ಬ್ರಹ್ಮಯಜ್ಞ ಪರಾಯಣನೂ ಆದ ಭವಸ್ವಾಮಿಗೆ ಹಲ್ಮಿಡಿ ಗ್ರಾಮದಲ್ಲಿ ರಾಜಭಾಗದ ದಶಬಂಧವನ್ನೂ, ಆರು ನಿವರ್ತನ ಭೂಮಿಯನ್ನೂ ಕೊಟ್ಟುದನ್ನು ಇದು ಹೀಗೆ ತಿಳಿಸುತ್ತದೆ : ಭವಸ್ವಾಮಿನೇ ಸೇಂದ್ರಕ ವಿಷಯಾಂತರ್ಗತೇ ಪಲ್ಮಡಿಗ್ರಾಮೇ ರಾಜಭಾಗ ದಶಬಂಧಂ ತಥೈವ ಷಟ್ ನಿವರ್ತನಂ ಪ್ರದತ್ತವಾನ್ (ಎ.ಕ. IX, ಮೈಸೂರು, 1990, ಬೇಲೂರು 231). ಕಾಕುಸ್ಥವರ್ಮನ ಅನಂತರದ ಒಂದು ಶತಮಾನದ ನಂತರವೂ, ಕೃಷ್ಣವರ್ಮನ ಕಾಲದಲ್ಲಿ ಹಲ್ಮಡಿ ಕದಂಬರ ಆಳ್ವಿಕೆಯಲ್ಲಿತ್ತೆಂದು ಇದರಿಂದ ವಿದಿತವಾಗುತ್ತದೆ. ಆದರೆ ಅದು ಸೇಂದ್ರಕ ವಿಷಯ (=ರಾಜ್ಯ)ದಲ್ಲಿತ್ತು. ಹಲ್ಮಿಡಿ ಶಾಸನೋಕ್ತ ಸೇಂದ್ರಕರು ಇನ್ನೂ ಕದಂಬರ ಸಾಮಂತರಾಗಿದ್ದರು. ಅವರು ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಪ್ರಾಂತಾಧಿಪತಿಗಳಾಗಿದ್ದರು. ಪ್ರಸ್ತುತ ಶಾಸನದಂತೆ ಧನದಾನ, ಭೂದಾನಗಳೆರಡೂ ಹಲ್ಮಿಡಿ ಸ್ಥಳದಲ್ಲೇ ಆಗಿವೆ. ಇದು ಹಲ್ಮಿಡಿಯ ಪ್ರಾಮುಖ್ಯದ ಸೂಚಕ. ಅಷ್ಟೇ ಅಲ್ಲದೆ ಹಲ್ಮಿಡಿಯ ರಾಜಾದಾಯ ಹೆಚ್ಚಿತ್ತೆಂದೂ, ಕ್ಷೇತ್ರವು ವಿಸ್ತಾರವಾಗಿತ್ತೆಂದೂ ಊಹಿಸಬಹುದು.

ಈಗ ಗಂಗ ಅರಸರ ಶಾಸನಗಳ ಉಲ್ಲೇಖಗಳು. ಗಂಗ ಅರಸರ ಶಾಸನಗಳಲ್ಲಿ ಹಲ್ಮಿಡಿಯು ಮೂರ್‍ನಾಲ್ಕು ಬಾರಿ ಉಲ್ಲೇಖಗೊಂಡಿದೆ. ಗಂಗರು ಪ್ರಬಲಿಸುತ್ತಿದ್ದಂತೆ

ಕದಂಬರು ತಮ್ಮ ಆಳ್ವಿಕೆಯ ಆಧಿಪತ್ಯಗಳ ಉಳಿವಿಗಾಗಿ ಅವರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದರು. ಗಂಗರ ತಡಂಗಾಲದ ಮಾಧವನ ಮಗ ಅವಿನೀತ (ಕ್ರಿ.ಶ. 466–495). ಕದಂಬರ ಮೊದಲನೆಯ ಕೃಷ್ಣವರ್ಮನ (ಕ್ರಿ.ಶ. 470–495) ಸಹೋದರಿಯನ್ನು ಈತ ಮದುವೆಯಾಗಿದ್ದ. ಹೀಗಾಗಿ ಕದಂಬರಿಗೆ ಬಂಧುಗಳಾಗಿದ್ದ, ಸಮಕಾಲಿಕ ಸ್ಪರ್ಧಿಗಳಾಗಿದ್ದ ಗಂಗರಿಗೆ ಹಲ್ಮಿಡಿಯ ಸಂಬಂಧ – ಸಂಪರ್ಕಗಳಿತ್ತು ಎನಿಸುತ್ತದೆ. ಗಂಗ ಶ್ರೀಪುರುಷನ ಜಲಗಾರ ದಿಬ್ಬದ ಶಾಸನದ ಕಾಲ ಕ್ರಿ.ಶ. ಏಳನೆಯ ಶತಮಾನ. ಇದರಲ್ಲಿ ಪಲ್ಮಿಡಿಯರ ಎಮ್ಮೆಯರು ಪಡೆದುದು ಎಂದಿದೆ. (ಎ.ಕ., XXIV, ಮೈಸೂರು, 2009, ತುಮ. 31). ಇದರ ತರುವಾಯದ ಉಲ್ಲೇಖ ಕ್ರಿ.ಶ. 899 ರ ಗಂಗರಾಚಮಲ್ಲನ ಚಿಕ್ಕಮಗಳೂರಿನ ಶಿಲಾಶಾಸನದಲ್ಲಿದೆ. ಇದರಲ್ಲಿ ಗಂಗದೊರೆ ನೀಡಿದ ಕೊಡುಗೆಯನ್ನು ನಾಳ್ಗಾಮುಂಡ ಬಿಯಳ, ಪಿರಿಯ ಮುಗಳಿಯ ಕೊಮರಯ್ಯ, ಬೆಣ್ಣೆಯೂರ ದೇವಗಣ, ಉಪ್ಪರವಳ್ಳಿಯ ಚಾಮಯ್ಯ – ಈ ಎಲ್ಲರೊಂದಿಗೆ ಪಲ್ಮಾಡಿಯ ಮಂದಮ್ಮನೂ ದಾನ ಪಡೆದಿದ್ದಾನೆ (ಎ.ಕ. XI, ಮೈಸೂರು, 1998, ಚಿಕ್ಕಮ. 3). ಪಲ್ಮಡಿ ಇಲ್ಲಿ ಪಲ್ಮಾಡಿ ಆಗಿದೆ.

ಗಂಗ ಎರೆಯಪ್ಪನ ಎಂದರೆ – ಇಮ್ಮಡಿ ನೀತಿಮಾರ್ಗನ (ಕ್ರಿ.ಶ. 907–919) ಶಾಸನದಲ್ಲಿ ಹಲ್ಮಿಡಿಯ ಉಲ್ಲೇಖವಿಲ್ಲ. ಆದರೆ ಮೂಳಿವಳ್ಳಿಯ ಉಲ್ಲೇಖವಿದೆ. ಮುಗುಳವಳ್ಳಿಯಲ್ಲಿ – ಎಂದರೆ ಹಲ್ಮಡಿಗೆ ಸಮೀಪವಾದ ಚಿಕ್ಕಮಗಳೂರು – ನಡೆದ ಒಂದು ಘಟನೆಯನ್ನು ಇದು ಉಲ್ಲೇಖಿಸುತ್ತದೆ. ಆಸಂದಿನಾಡಿನಲ್ಲಿ ನಡೆದ ಯುದ್ಧಕ್ಕೆ ಮೂಳಿವಳ್ಳಿಯ ಮಾದಿವರ್ಮನನ್ನು ಕಳಿಸಲಾಗಿದೆ. ಆತನ ಹೋರಾಟವನ್ನು ಮೆಚ್ಚಿ ಆತನಿಗೆ ವೀರದತ್ತಿ ನೀಡಿದೆ. ಸ್ವಾಮಿಹಿತಕಾರನ್, ಏಜಿಪೋಗೆ ...., ಮೆಚ್ಚಿ ಪೆರ್ಮಾನಡಿಯುಂ ಎರೆಯಪ್ಪನುಂ ಮೂೞುವಳ್ಳಿಯ ಮಾದಿವರ್ಮಂಗೆ ಕಲ್ನಾಡುಗೊಟ್ಟರ್ (ಎ.ಕ. XI, ಮೈಸೂರು 1998, ಚಿಕ್ಕಮ. 99). ವಿಜ ಅರಸನಿಗೆ ಹಲ್ಮಿಡಿ ಮತು ಮೂಟಿವಳ್ಳಿಗಳನ್ನು ಬಾಳ್ಗಟ್ಟು ವೀರದತ್ತಿಯಾಗಿ ನೀಡಿತ್ತು. ಈಗ ಮೂಳಿವಳ್ಳಿಯ ಒಬ್ಬ ವೀರಯೋಧ ಅದನ್ನೇ ಹೋಲುವ ದತ್ತಿಗೆ ಪಾತ್ರನಾಗಿದ್ದಾನೆ. ಮುಂದಿನ ಶತಮಾನಗಳಲ್ಲಿ ಬೊಮ್ಮಯ ಸಾಹಿಣಿಯ ಮಗ ಹಲ್ಮಿಡಿಯಲ್ಲಿ ಒಂದು ವೀರಗಲ್ಲನ್ನು ನೆಡಿಸುವುದನ್ನು ಇಲ್ಲಿ ಸ್ಮರಿಸಬಹುದು. ಇವು ಹಲ್ಮಿಡಿ – ಮೂಟಿವಳ್ಳಿಗಳ ಕುಗ್ಗದ ಶೌರ್ಯದ ದನಿ ಎನ್ನಬಹುದು. ಮುಂದಿನ ಗಂಗ ಶಾಸನದ ಉಲ್ಲೇಖ ಇಮ್ಮಡಿ ಬೂತುಗನ ಕಾಲದ್ದು (ಕ್ರಿ.ಶ. 935–960). ಕಲಿಗಂಗನು ಆಳುತ್ತಿದ್ದಾಗ ಉಪ್ಪರವಳ್ಳಿಯ ಹನಿಗಂಗೆ ಒಂದು ದಾನ ಕೊಡಲಾಗುತ್ತದೆ. ಅದಕ್ಕೆ ಇತರರೊಂದಿಗೆ ಪಲ್ಮಾಡಿಯ ಅಮ್ಮಾಳೆ ಮೂಟಿವಳ್ಳಿಯ ನಲ್ಲೂರಿನ ಮಾಗುಡ ಸಾಕ್ಷಿಗಳಾಗಿದ್ದಾರೆ (ಎ.ಕ. XI, ಮೈಸೂರು, 1998, ಚಿಕ್ಕಮ 38). ಈ ಶಾಸನದಲ್ಲಿ ಹಲ್ಮಿಡಿ ಮತ್ತು ಮೂಟಿವಳ್ಳಿ ಎರಡೂ ಜೊತೆಯಾಗಿ ಉಲ್ಲೇಖಗೊಂಡಿವೆ. ಗಂಗರ ಶಾಸನಗಳಲ್ಲಿ ಹಲ್ಮಿಡಿಯ ಕೊನೆಯ ಉಲ್ಲೇಖ ಇದೇ. ಗಂಗರ ಕಾಲದಲ್ಲಿ ಹಲ್ಮಿಡಿ ಗಣ್ಯ ಆಡಳಿತ ಕೇಂದ್ರವಾಗಿ, ಪ್ರಮುಖ ಪ್ರದೇಶವಾಗಿ ಮುಂದುವರಿದಿದ್ದು ಇವುಗಳಿಂದ ದ್ಯೋತಕ. ಮುಂದಿನ ರಾಷ್ಟ್ರಕೂಟ ರಾಜವಂಶದ ಶಾಸನಗಳಲ್ಲಿ ಹಲ್ಮಿಡಿಯ ಉಲ್ಲೇಖವಿಲ್ಲ.

ಕಲ್ಯಾಣ ಚಾಲುಕ್ಯರಲ್ಲಿ ಆರನೆಯ ವಿಕ್ರಮಾದಿತ್ಯ ಅಪ್ರತಿಮ ಅರಸ (ಕ್ರಿ.ಶ. 1076–1126). ಆತನ ಕಾಲದ ಒಂದು ಶಾಸನದಲ್ಲಿ ಹಲ್ಮಿಡಿಯ ಉಲ್ಲೇಖವಿದೆ. ವಿಕ್ರಮಾದಿತ್ಯನ ಪರವಾಗಿ ಮಸಣಯ್ಯ ಎಂಬಾತ ಹೋರಾಡಿದ್ದಾನೆ. ಈ ಕಾಳಗವನ್ನು ಹಲಾಮಿಡಿಯ ಬಿಜಗೇದ ಬವರ ಎಂದಿದೆ (ಎ.ಕ. VIII, ಮೈಸೂರು, 1984, ಹಾಸನ 12). ವಿಕ್ರಮಾದಿತ್ಯ ಮತ್ತು ಅವನ ಮಾಂಡಲಿಕ ಹೊಯ್ಸಳ ವಿಷ್ಣುವರ್ಧನರ ನಡುವಣ ಯುದ್ಧವಿದು ಎಂದು ಈ ಶಾಸನ ಸಂಪುಟದ ಸಂಪಾದಕರು ತರ್ಕಿಸಿದ್ದಾರೆ. ಹಲ್ಮಿಡಿಯ ಬವರವೆಂಬ ಮಾತು ಮತ್ತೆ ಆ ಗ್ರಾಮದ ವೀರತನದ ಪ್ರತೀಕ. ಅನೇಕ ಶತಮಾನಗಳು ಸರಿದರೂ ಕಾಳಗದ ಉಮೇಯ ಹಲ್ಮಿಡಿಯನ್ನು ತೊರೆದಿಲ್ಲ.

ವಿಜಯನಗರದ ಸಂಗಮ ವಂಶದ ಅರಸ ಮೊದಲನೆಯ ದೇವರಾಯ. ಈತನ ಕಾಲದ (ಕ್ರಿ.ಶ. 1406–1422) ದತ್ತಿಯಲ್ಲಿ ಹಲುಮಿಡಿಯಿಂದ ಕೆಳಗೆ ಎಂದು ಮೇರೆಸೂಚಕವಾಗಿ, ಹಲ್ಮಿಡಿ ಗ್ರಾಮನಾಮವು ಬಳಕೆಯಾಗಿದೆ (ಎ.ಕ. XI, ಮೈಸೂರು, 1998, ಮೂಡಿ 54). ಮುಂದೆ ಹದಿನಾರನೆಯ ಶತಮಾನದ ಶೃಂಗೇರಿಯ ಪಾರ್ಶ್ವನಾಥ ಬಸದಿಯ ಅನಂತನಾಥ ಪ್ರತಿಮೆಯ ಪೀಠದ ಕೆಳಗೆ ಹೀಗೆ ಬರೆದಿದೆ : ಹಲುಮಿಡಿಯ ದೇವಿಸೆಟ್ಟಿಯ ಮಗ ದೇವಣ್ಣಸೆಟ್ಟಿ ಸಿಂಗೇರಿಯ ಬಸ್ತಿಯಲಿ ಪಾದಪೂಜೆ ಮಾಡಿ ಪುಣ್ಯವನು ಉಪಾರ್ಜಿಸಿಕೊಂಡ (ಎ.ಕ. XI, ಮೈಸೂರು, 1998, ಶೃಂಗೇರಿ 27). ವಿಜಯನಗರದ ಕಾಲದ ಹೊತ್ತಿಗೆ ಹಲ್ಮಿಡಿಯು ವರ್ತಕರ ನಿವಾಸಕ್ಕೆ ಎಡೆಯಾಗಿದ್ದುದು ಇದರಿಂದ ಸ್ಪಷ್ಟ. ಆ ಗ್ರಾಮದಲ್ಲಿ ಜೈನರು ಈ ಹೊತ್ತಿಗೆ ಪ್ರಾಯಃ ವಾಸಿಸುತ್ತಿದ್ದರು.

ಒಂದು ಗಣ್ಯ ಆಡಳಿತ ಕೇಂದ್ರವಾಗಿ, ವೀರರ ಬೀಡಾಗಿ, ವರ್ತಕರ ನೆಲೆಯಾಗಿ ಅನಂತರದ ಕಾಲದಲ್ಲಿ ಹಲ್ಮಿಡಿ ಸಾಗಿರುವುದನ್ನು ಈ ಶಾಸನೋಲ್ಲೇಖಗಳು ಮನದಟ್ಟು ಮಾಡುತ್ತವೆ. ವಿಜಅರಸನು ಪಡೆದ ವೀರದತ್ತಿಯು ಒಂದು ಅಗಣ್ಯವೂ ಅನಾಮಧೇಯವೂ ಆದ ಕುಗ್ರಾಮವೇನಲ್ಲ. ಹಲ್ಮಿಡಿಯೊಂದಿಗೆ ತಮ್ಮ ಹೆಸರನ್ನು ಸೇರಿಸಿಕೊಳ್ಳುವುದು ಅನಂತರ ಕಾಲದ ಜನರಿಗೆ ಹೆಮ್ಮೆಯ ಸಂಗತಿಯಾಗಿತ್ತು.

ಹಲ್ಮಿಡಿ : ಸ್ಥಳನಾಮ

ಪಲ್ಲವರ ಮೇಲೆ ಕಾಳಗವಾಡಿ ಜಯವನ್ನು ತಂದುಕೊಟ್ಟ ವಿಜಅರಸನಿಗೆ ವೀರದತ್ತಿಯಾಗಿ ಕೊಟ್ಟ ಗ್ರಾಮಗಳ ಹೆಸರು ಮೂಲಶಾಸನದಲ್ಲಿರುವಂತೆ ಪಲ್ಮಡಿ ಮತ್ತು ಮೂಟಿವಳ್ಳಿ. ಈ ಗ್ರಾಮದ ಇಂದಿನ ಜನರ ಉಚ್ಚಾರಣೆಯಲ್ಲಿ ಪಲ್ಮಡಿ ಎಂಬುದು ಹಲ್ಮಡಿ > ಹಲ್ಮಿಡಿ > ಹನ್ಮಿಡಿ > ಹನುಂಡಿ ಆಗಿದೆ. ಇದನ್ನು ಗಮನಿಸಿರುವ ಎಂ. ಚಿದಾನಂದಮೂರ್ತಿಗಳು ಇದನ್ನೇ ಗ್ರಾಮನಾಮವೆಂದು ಭಾವಿಸಿದ್ದಾರೆ; ತಮ್ಮೊಂದು ಲೇಖನದ ಶೀರ್ಷಿಕೆಯಲ್ಲಿಯೂ ಬಳಸಿದ್ದಾರೆ. ಹನ್ಮಿಡಿ ಎಂದೇ ಕರೆಯಬೇಕು ಎಂಬುದು ಅವರ ಅಭಿಮತ (ಹನ್ಮಿಡಿ ಶಾಸನದ ಎಲ್ಲಭಟರಿ, ಎಲ್ಲಮ್ಮ? ಪ್ರಕೃತಿ – ಸಂಸ್ಕೃತಿ, ಬೆಂಗಳೂರು, 2015, ಪು. 436–438). ಆದರೆ

ಮೂಲಶಾಸನದಲ್ಲಿ ಪಲ್ಮಡಿ ಎಂದೇ ಇದೆ. ಅನಂತರದ ಶಾಸನಗಳಲ್ಲಿ ಪಲ್ಮಡಿ, ಪಲ್ಮಾಡಿ, ಹಲುಮಿಡಿ, ಹಲಾಮಿಡಿ ಎಂದು ಲಕಾರ ಘಟಿತವಾಗಿಯೇ ಪದವಿದೆ. ಆದ್ದರಿಂದ ಪಲ್ಮಡಿ > ಪಲ್ಮಿಡಿ ಎಂಬುದೇ ಸರಿ. ಲಿಂಗಣ್ಣ > ನಿಂಗಣ್ಣ, ಲೊಕ್ಕಿಯಬ್ಬೆ – ನೊಕಿಯಬ್ಬೆ, ಲೋಟಿಸು > ನೋಟಿಸು, ಲಗ್ನ > ನಗ್ನ ಆದಂತೆ ಪಲ್ಮಿಡಿ > ಹನ್ಮಿಡಿ ಆಗಿರಬಹುದು. ಇದೇನಿದ್ದರೂ ಪಲ್ಮಡಿಯ ಅರ್ಥ, ನಿಷ್ಪತ್ತಿಗಳು ಮಾತ್ರ ಕುತೂಹಲಕರ.

ಪಲ್ಮಡಿ ಎಂಬುದು ಶಾಸನದಲ್ಲಿನ ಮೂಲರೂಪ. ಇದೇ ಒಂದೆಡೆ ಪಲ್ಮಾಡಿ ಎಂದೂ ಉಲ್ಲೇಖಗೊಂಡಿದೆ. ಪಲ್ಮಡಿ ಎಂಬುದು ದಕ್ಷಿಣ ಕನ್ನಡದ ಬಾಯಡಿ, ಪೆಲತ್ತಡಿ, ಕುಕ್ಕುತ್ತಡಿ ಎಂಬುವನ್ನೂ ಪಲ್ಮಾಡಿ ಎಂಬುದು ಕಲ್ಮಾಡಿ, ಹೆಜ್ಮಾಡಿ, ಇರ್ಮಾಡಿ ಎಂಬುವನ್ನೂ ನೆನಪಿಸುತ್ತವೆ. ಕರ್ನಾಟಕದ ಗ್ರಾಮಸೂಚಿಯಂತೆ ಚಿಕ್ಕಮಗಳೂರಿನಲ್ಲಿಯೇ ಅಂಗಡಿ, ನೆರಡಿ, ತನುಡಿ, ಬಿನ್ನಡಿ, ಬಲೇಕಡಿ ಎಂಬುವೂ, ಹಾಸನ ಜಿಲ್ಲೆಯಲ್ಲಿ ಇಬ್ಬಡಿ, ಹುರುಡಿ, ಕಲ್ಯಾಡಿ ಎಂಬುವೂ ಗ್ರಾಮನಾಮಗಳಾಗಿ ಇವೆ. ಈ ಎರಡೂ ಜಿಲ್ಲೆಗಳು ಹಲ್ಮಿಡಿಗೆ ಸಮೀಪವಾದವು. ಇದೇನಿದ್ದರೂ ಪಲ್ಮಡಿ ಎಂಬುದನ್ನು ಪಲ್ + ಮಡಿ ಎಂದೂ, ಪಲ್ಮಾಡಿ ಎಂಬುದನ್ನು ಪಲ್ + ಮಾಡಿ ಎಂದೂ ವಿಭಜಿಸಬಹುದಾಗಿದೆ–ಮಡಿ, – ಮಾಡಿ ಎಂಬುವು ತುಳುನಾಡಿನಲ್ಲಿ ಇಂದಿಗೂ ಇರುವ ಸ್ಥಳನಾಮದ ವಾರ್ಗಿಕಗಳು. ಈ ಎರಡೂ ವಾರ್ಗಿಕಗಳು– ಮಾಡ ಎಂಬುದರಿಂದ ಬಂದಿವೆ. ಎತ್ತರವಾದದ್ದು, ಬೆಟ್ಟ, ದಿಬ್ಬ ಎಂಬರ್ಥವೇ ಈ– ಮಡಿ –ಮಾಡಗಳಿಗಿವೆ. ಹಲ್ಮಿಡಿಯು ಬೆಟ್ಟದ ಮೇಲೆ ಅಲ್ಲದಿದ್ದರೂ ತುಸು ಎತ್ತರದ ಪ್ರದೇಶದಲ್ಲಿದೆ. ಆದರೆ–ಮಡಿ, –ಮಾಡಿ ಎಂಬ ಸ್ಥಳನಾಮ ವಾರ್ಗಿಕಗಳು ಹಾಸನ, ಚಿಕ್ಕಮಗಳೂರುಗಳಲ್ಲಿ ಕಾಣುತ್ತಿಲ್ಲ. ಬದಲಿಗೆ ಅಂಗಡಿ, ನೆರಡಿ, ಇಬ್ಬಡಿ, ಹುರುಡಿ ಎಂಬವುಗಳಲ್ಲಿ–ಅಡಿ ಎಂಬುದೇ ಗೋಚರವಾಗುತ್ತಿದೆ. – ಮಡಿ, – ಮಾಡ ಎಂದು ಸ್ವೀಕರಿಸಿದರೆ ಪೂರ್ವಾರ್ಧವು ಪಲ್ ಎಂದಾಗುತ್ತದೆ. ಪಲ್ ಎಂಬುದಕ್ಕೆ ಹಲ್ಲು, ದಂತ ಎಂಬ ಅರ್ಥವನ್ನುಳಿದು ಬೇರೆ ಅರ್ಥಗಳಿಲ್ಲ. ಆದರೆ ಅದು ಇಲ್ಲಿಗೆ ಸಂಗತವಾಗುವುದಿಲ್ಲ. ಹಾಗಾಗಿ ಪಲ್ಮಡಿಯನ್ನು ಪಲ್ + ಮಡಿ ಎಂದು ವಿಭಜಿಸುವುದು ಸರಿ ಹೊಂದುವುದಿಲ್ಲ.

ಇದನ್ನುಳಿದರೆ ಪಲ್ಮಡಿಯನ್ನು ಪಲ್ಮ + ಅಡಿ ಎಂದು ವಿಭಜಿಸಬೇಕಾಗುತ್ತದೆ. – ಅಡಿ ಎಂಬುದು ಕೂಡ ತುಳುವಿನಲ್ಲಿ ಸ್ಥಳನಾಮದ ಒಂದು ವಾರ್ಗಿಕ. ಹೀಗೆಂದೇ ತುಳು ನಿಘಂಟುವಿನಲ್ಲಿ ಗುರುತಿಸಿದೆ (ತುಳು ನಿಘಂಟು, 1. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ, 1988, ಪು. 64). ನದಿ, ತೊರೆಗಳ ಸಮೀಪದಲ್ಲಿರುವ ಪ್ರದೇಶವನ್ನು –ಅಡಿ/–ಆಡಿ ಎಂದು ತುಳುವಿನಲ್ಲಿ ಗುರುತಿಸಲಾಗುತ್ತದೆ (ಎ ಗ್ಲಾಸರಿ ಆಫ್ ಪ್ಲೇಸ್‌ನೇಮ್ ಎಲಿಮೆಂಟ್ಸ್ ಇನ್ ತುಳು ಅಂಡ್ ಕನ್ನಡ : ರಘುಪತಿ ಕೆಮ್ತೂರು, ಜನವಾದಿ ಪ್ರಕಾಶನ, ಗುಂಡ್ಮಿ, 1989, ಪು. 4). ಹಲ್ಮಿಡಿ ಗ್ರಾಮದ ಸಮೀಪದಲ್ಲಿ ಯಗಚಿ ನದಿ ಇದೆ; ಅದಕ್ಕಿಂತ ಹೆಚ್ಚಾಗಿ ಆ ಗ್ರಾಮದಲ್ಲಿ ಒಂದು ಪಕ್ಕ ಬೆನಕನ ಹೊಳೆ, ಮತ್ತೊಂದು ಪಕ್ಕ ಬಿರಂಜಿ ಹೊಳೆ ಇವೆ.

ಅಂತಿಮವಾಗಿ ಈ ಎರಡೂ ಯಗಚಿ ನದಿಗೆ ಸೇರುತ್ತವೆ. ಮಳೆಗಾಲದಲ್ಲಿ ಇಂದಿಗೂ ತುಂಬಿ ಹರಿಯುವ ಇವು ಊರಿನವರಿಗೆ ನೀರಿನ ಆಸರೆ. ನೀರಿನ ತೊರೆ, ಹಳ್ಳವೆಂಬ ಅರ್ಥದ ಈ ಉತ್ತರಾರ್ಧದ ವಾರ್ಗಿಕವನ್ನು - ಅಡಿ < -ಆಡಿ ಎಂದು ಭಾವಿಸುವುದೇ ಸೂಕ್ತ. ತುಳು ಸ್ಥಳನಾಮ ವಿವೇಚನೆ ಇಲ್ಲಿ ಸಂಗತವೇ ಎಂದರೆ, ತುಳು ಮತ್ತು ಕನ್ನಡ ಜ್ಞಾತಿಭಾಷೆಗಳು. ಅಲ್ಲದೆ ಈ ಶಾಸನದ ಮುಖ್ಯ ವ್ಯಕ್ತಿಗಳಲ್ಲಿ ಒಬ್ಬ ದಾನ ಪಶುಪತಿ. ಈತನ ವಿಶೇಷ ಸ್ತುತಿ ಶಾಸನದಲ್ಲಿದೆ. ಈತ ಅಳುಪರಸ್ವಾಮಿ (ಅಳಪಗಣ ಪಶುಪತಿಯಾ). ದಕ್ಷಿಣ ಕನ್ನಡ, ಅಳುಪರು, ತುಳುಗಳ ನಡುವಣ ಗಾಢ ಸಂಬಂಧ ಎಲ್ಲರಿಗೂ ಗೊತ್ತೇ ಇದೆ. ಹಲ್ಮಿಡಿಯ ಸಮೀಪದ ಚಿಕ್ಕಮಗಳೂರು, ಹಾಸನಗಳಲ್ಲಿ - ಅಡಿ ಎಂದು ಕೊನೆಯಾಗುವ ಗ್ರಾಮಗಳಿರುವುದನ್ನು ಈ ಹಿಂದೆಯೇ ನೋಡಿದ್ದೇವೆ.

ಪೂರ್ವಾರ್ಧವನ್ನು ಪಲ್ ಎಂದು ಭಾವಿಸುವುದಾದರೆ ಅದಕ್ಕೆ ದಂತ-ರದನ-ದಶನ ಎಂಬವುಗಳ ಹಲ್ಲು ಎಂಬರ್ಥ ಬಿಟ್ಟರೆ ಬೇರೆ ಮುಖ್ಯಾರ್ಥವಿಲ್ಲ. ಅದು ಇಲ್ಲಿಗೆ ಹೊಂದಿಕೆಯಾಗದ ಅರ್ಥ. ಇದು ಒಂದು ನಾಮವಾಚಕದ ಅಥವಾ ಗುಣವಾಚಕದ ಕುಗ್ಗಿದ ರೂಪವೆನಿಸುತ್ತದೆ. ಕೆಲವು ವರ್ಷಗಳ ಹಿಂದೆ ಹಲ್ಮಿಡಿಗೆ ನಾನು ಭೇಟಿಯಿತ್ತಿದ್ದೆ. ಅಲ್ಲಿ ಗಂಗೆಗೌಡ ಎನ್ನುವವರೊಂದಿಗೆ ಮಾತಾಡಿದ್ದೆ. ತಮ್ಮ ಮನೆಯಲ್ಲಿದ್ದ ಒಂದು ಉದ್ದವಾದ ಹಳೆಯ ಖಡ್ಗವನ್ನು ಅವರು ನನಗೆ ತೋರಿಸಿದ್ದರು. ಜತೆಗೆ ಹಲ್ಮಿಡಿಯಲ್ಲಿರುವ 450 ಮನೆಗಳಲ್ಲಿ 150 ಮನೆಗಳು ತಿಗಳರವು, ಎಂದರೆ ತಮಿಳರವು ಎಂದರು. ಈ ಜನದಲ್ಲಿ ಬಹುಮಂದಿ ಧರ್ಮರಾಯನ ಕರಗಕ್ಕೆ ನಡೆದುಕೊಳ್ಳುತ್ತಾರೆ. ತಾವು ಕಂಚಿಯಿಂದ ಬಂದವರು ಎಂದೂ ಹೇಳಿಕೊಳ್ಳುತ್ತಾರೆ. ಕೆಲವರು ತಮಿಳುನಾಡಿಗೆ ಹೋಗಿಬರುವ ವಾಡಿಕೆಯೂ ಇದೆ. ಇದು ಸಹಜವಾಗಿಯೇ ತಮಿಳುನಾಡಿನ ಹಿನ್ನೆಲೆಯತ್ತ ಬೆರಳು ಮಾಡುತ್ತದೆ. ಪಲ್ಲವ ಎಂಬುದೇ ಪಲ್ಲಮ ಎಂದಾಗಿ ಪಲ್ಮ ಆಗಿದೆ ಎನಿಸುತ್ತದೆ. 'ವ' ಕಾರವು ಕನ್ನಡದಲ್ಲಿ ಅನುನಾಸಿಕವಾಗಿ ಉಚ್ಚಾರವಾಗುವುದುಂಟು (ಅನುನಾಸಿಕಮುಂ ಯವಲಮನ್ ಅನನಾಸಿಕಮುಂ ದಲ್ ಎಂಬರ್ ಶಮದ. : ಸೂ. 19). 'ವ-ಮ'ಗಳ ಪರಸ್ಪರ ಪರಿವರ್ತನೆಯೂ ಇದೆ (ಬೆಮರ್ > ಬೆವರ್, ಚಿಮುಟು > ಚಿವುಟು, ತಾಮರೆ > ತಾವರೆ, ನಾಲ್ಮಡಿ > ನಾಲ್ವಡಿ). ನೆಲವತ್ತಿ ಎಂಬುದರಲ್ಲಿಯ 'ವ' ಕಾರ, ನ್ಯಾಮತಿ ಎಂದಾಗುವಾಗ 'ಮಕಾರ'ವಾಗುತ್ತದೆ. ದೇವಪ್ಪ > ದೇಮಪ್ಪ, ದೇವಿಗನಪುರ > ದೇಮಿಗನಪುರ ಎಂಬಲ್ಲಿ 'ವ' ಕಾರ 'ಮ' ಕಾರವಾಗಿದೆ. ತಮಿಳಿನಲ್ಲಿ ವತುವೆ > ಮದುವೆ, ಕವಿದಲ್ > ಕಮಿದಲ್ (ರಾಶಿಹಾಕು), ವಿಂಚುದಲ್ > ಮಿಂಚುದಲ್ (ಮೀರುವುದು), ಎಂಬಲ್ಲಿ ವಕಾರ ಮಕಾರವಾಗಿರುವ ತಮಿಳು ಕಾವ್ಯಪ್ರಯೋಗಗಳಿವೆ ಎನ್ನುತ್ತಾರೆ, ಎಚ್. ಚೆನ್ನಕೇಶವ ಅಯ್ಯಂಗಾರ್ (ಶಬ್ದಮಣಿದರ್ಪಣ, ಮದರಾಸು ವಿಶ್ವವಿದ್ಯಾನಿಲಯ, 1973, ಅವತರಣಿಕೆ, ಪು. 78-79). ಇವುಗಳ ಹಿನ್ನೆಲೆಯಲ್ಲಿ ವಕಾರವು ಮಕಾರವಾಗಿದೆ ಎಂಬುದು ಸಾಧಿತವಾಗುತ್ತದೆ. ಹೀಗಾಗಿ ಪಲ್ಲವ > ಪಲ್ಲಮ ಆಗಿ, ಅದೇ ಆ ಬಳಿಕ ಪಲ್ಮ ಆಗಿದೆ. ಪಲ್ಮ + ಅಡಿ = ಪಲ್ಮಡಿ ಎಂಬುದು ಪಲ್ಮಡಿಯ ವಿಭಜಿತ ರೂಪ. ಪಲ್ಲವ + ಅಡಿ, ಪಲ್ಲವಡಿ > ಪಲ್ಲಮಡಿ > ಪಲ್‌ಮಡಿ > ಪಲ್ಮಡಿ ಎಂದಾಗಿರಬೇಕು.

ಮೂಲತಃ ಪಲ್ಲವರು ಕರ್ನಾಟಕದಲ್ಲಿದ್ದರು ಎಂದೂ ಶಾತವಾಹನರ ಉತ್ತರಾಧಿಕಾರಿಗಳಾಗಿ ಬಳ್ಳಾರಿ, ಚಿತ್ರದುರ್ಗಗಳನ್ನಲ್ಲದೆ ಬನವಾಸಿ, ಶಿವಮೊಗ್ಗ ಪ್ರಾಂತಗಳನ್ನು ಆಳುತ್ತಿದ್ದರು ಎಂದೂ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ (ಎಸ್.ಶ್ರೀಕಂಠಶಾಸ್ತ್ರಿ : ಪಲ್ಲವರು ಮತ್ತು ಕರ್ಣಾಟಕ, ಕರ್ಣಾಟಕ ಪರಂಪರೆ, ಬೆಂಗಳೂರು, 1992, ಪು. 160–61; ಬಿ.ಆರ್. ಗೋಪಾಲ್ : ಕರ್ಣಾಟಕ ಚರಿತ್ರೆಯ ಸಂಕ್ಷಿಪ್ತ ಅವಲೋಕನ, ಕ.ಅ.ಸಂ, ಕ.ಸಾ.ಚ., 1, ಮೈಸೂರು, 1974, ಪುಟ 310). ಕದಂಬರು ಬರುವ ಮುನ್ನ ಕರ್ನಾಟಕದ ಕೆಲವು ಭಾಗಗಳು ಪಲ್ಲವರ ವಶದಲ್ಲಿದ್ದು, ಮಯೂರವರ್ಮ ಇವನ್ನು ಸ್ವಸಾಹಸದಿಂದ ತನ್ನ ವಶಮಾಡಿಕೊಂಡ; ಪ್ರೇಹಾರದವರೆಗಿನ ವಿಸ್ತಾರವಾದ ರಾಜ್ಯವನ್ನು ಪಡೆದ; ಪಲ್ಲವರಿಂದಲೇ ಅಭಿಷಿಕ್ತನಾದ; ಇದನ್ನೇ ತಾಳಗುಂದ ಶಾಸನದಲ್ಲಿ ಹೀಗೆ ಹೇಳಿದೆ : ಪ್ರೇಹಾರಾಂತಂ ಅನನ್ಯ ಸಂಚರಣ ಸಮಯಸ್ಥಿತಾಂ ಭೂಮಿಂ ಏವಧಚ, ಪಟ್ಟಬಂಧ ಸಂಪೂಜಾಂ ಕರಪಲ್ಲವೈಃ ಪಲ್ಲವೈಃ ಧೃತಾಮ್ (ಬಾ.ರಾ. ಗೋಪಾಲ್ : ಬನವಾಸಿ ಕದಂಬರು, ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ, ಶಿರಸಿ, 1983, ಪು. 8–9). ಹೀಗಾಗಿ ಕರ್ನಾಟಕದಲ್ಲಿ ಪಲ್ಲವರ ನೆಲೆಗಳಿದ್ದವು. ಕರ್ನಾಟಕದ ರಾಜಕೀಯದಲ್ಲಿ, ವಿಶೇಷವಾಗಿ ಗಂಗ ಅರಸರೊಂದಿಗೆ ಪಲ್ಲವರ ಸಂಪರ್ಕ ನಿಕಟವಾಗಿತ್ತು. ಹಲ್ಮಿಡಿ ಶಾಸನದ ಕಾಲದ ಹೊತ್ತಿಗೆ ಗಂಗರಾಜ್ಯವನ್ನು ಆಳುತ್ತಿದ್ದವನು ತಡಂಗಾಲದ ಮಾಧವ (ಕ್ರಿ.ಶ. 430–466). ಈತನನ್ನು ಸಿಂಹಾಸನಕ್ಕೆ ಏರಿಸಿದವನು ಪಲ್ಲವರ ಸ್ಕಂದವರ್ಮ (ನೋಡಿ. : ಬಿ. ಷೇಕ್ ಅಲಿ : ಹಿಸ್ಟರಿ ಆಫ್ ದಿ ವೆಸ್ಟರ್ನ್ ಗಂಗಾಸ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1976, ಪು. 53).

ಮುಂದೆ ಬಂದ ಗಂಗಶಿವಮಾರ (ಕ್ರಿ.ಶ. 711) ತನ್ನನ್ನು ಶಿವಮಾರ ನಾಮಧೇಯಂ ಪಲ್ಲವ ಯುವರಾಜಸ್ಯ ಪ್ರಿಯತನಯಾಖ್ಯಾಂ ಎಂದೇ ಕರೆದುಕೊಳ್ಳುತ್ತಾನೆ. ಅಷ್ಟೇ ಅಲ್ಲ ಕೆರೆಗೋಡನ್ನು ಪಲ್ಲವತಟಾಕ ಎಂದು ಮರುನಾಮಕರಣ ಮಾಡುತ್ತಾನೆ. (ಪಲ್ಲವ ತಟಾಕಮಿತಿ ಗ್ರಾಮಸ್ಯ ನಾಮಧೇಯಂ ಕೃತ್ವಾ : ಎ.ಕ., VII, ಮೈಸೂರು, 1979, ಮಂಡ್ಯ, 35). ಇದಲ್ಲದೆ ಪಲ್ಲಗೆರೆ, ತಳಿರೂರ್ (ಎ.ಕ., V, ಮೈಸೂರು, 1976, ಕೃನ. 77, ಎ.ಕ. X, ಮೈಸೂರು, 1997, ಅರಸೀ 129, 161, ಇ.) ಎಂಬವೂ ಇವೆ. ಈ ತಳಿರೂರ್ ನೀರ್ಗುಂದ ನಾಡೊಳಗಿನ ಪಲ್ಲವಗ್ರಾಮ ನಾಮಧೇಯಮಾದ ತಳಿರೂರೇ ಆಗಿದೆ (ಅರಸೀ. 161). ಪಲ್ಲವರ ಬೀಡು ಕರ್ನಾಟಕದಲ್ಲಿತ್ತೆನ್ನಲು ಇವು ಸಾಕ್ಷಿ. ಕರ್ನಾಟಕದಲ್ಲಿ ತಮಗೆ ದೃಢವಾದ ನೆಲೆಯಿಲ್ಲದೆ ಹೋಗಿದ್ದರೆ ಪಲ್ಲವರು ಇಲ್ಲಿನ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಗಂಗವಾಡಿ, ನೊಳಂಬವಾಡಿ, ರಟ್ಟವಾಡಿ, ಸಿಂದವಾಡಿ, ಬಾಣವಾಡಿ ಎಂಬವು ಆಯಾ ರಾಜವಂಶಗಳ ಆಳ್ವಿಕೆಯಲ್ಲಿದ್ದ ಪ್ರದೇಶಗಳ ಹೆಸರುಗಳು. ಹೀಗೆಯೇ ಪಲ್ಲವರ ಆಳ್ವಿಕೆಯ ಪ್ರದೇಶ ಪಲ್ಲವಡಿ, ಪಲ್ಲಮಡಿ, ಪಲ್ಮಡಿ ಆಗಿದೆ. ಅಥವಾ ಪಲ್ಲವವಾಡಿ ಎಂದೇ ಇದ್ದು, ಅದೇ ಪಲ್ಲವವಾಡಿ > ಪಲ್ಲಮವಾಡಿ > ಪಲ್ಮವಾಡಿ > ಪಲ್ಮಾಡಿ ಆಗಿರಬಹುದು. ಗಂಗವಾಡಿ > ಗಂಗಡಿ, ರಟ್ಟವಾಡಿ > ರಟ್ಟಡಿ ಆದಂತೆ

ಪಲ್ಲಮವಾಡಿ > ಪಲ್ಮವಾಡಿ > ಪಲ್ಮಡಿ ಆಗಿರಬಹುದು. ತುಳುವಿನಲ್ಲಿ -ಪಾಡಿ ಎಂಬುದಕ್ಕೆ ಸಣ್ಣ ಕಾಡು, ಕಾಡಿನಿಂದ ಆವೃತವಾದ ಪ್ರದೇಶ ಎಂದೂ ಅರ್ಥವಿದೆ (ರಘುಪತಿ ಕೆಮ್ತೂರು : ಪೂರ್ವೋಕ್ತ, ಪು. 64). ಚಿಕ್ಕಮಗಳೂರು ಪ್ರಾಂತ, ಬೇಲೂರು ಪ್ರಾಂತ ಒಂದು ಕಾಲಕ್ಕೆ ಕಾಡಿನಿಂದ ಆವೃತ್ತವಾಗಿತ್ತೆಂಬುದನ್ನು ಇಲ್ಲಿ ನೆನೆಯಬಹುದು. ಮುಗಳಿ, ಹಲಸಿನಬಾಳು, ಮಾವನೂರು, ಬೇಲೂರು - ಈ ಎಲ್ಲವೂ ಹಲ್ಮಿಡಿಗೆ ಸಮೀಪದಲ್ಲಿರುವ ಸಸ್ಯ ಸಂಬಂಧವಾದ ಹೆಸರಿನ ಪ್ರದೇಶಗಳು. ಚಿಗುರು ಎಂಬ ಇನ್ನೊಂದು ಅರ್ಥದ ಪಲ್ಲವ ಎಂಬುದಾದರೂ ಸಸ್ಯ ಸಂಬಂಧಿಯೇ; ಈ ಮಂಡಲಕ್ಕೆ ಅನುಗುಣವಾದುದೇ. ಹಾಗಾಗಿ ಪಲ್ಮಡಿಯ 'ಪಲ್ಮ'ದಲ್ಲಿ ಪಲ್ಲವರ ಮಿಡುಕಾಟವೇ ಹೆಚ್ಚಿರುವಂತಿದೆ.

ಹಲ್ಮಿಡಿಯೊಂದಿಗೆ ವಿಜಅರಸನಿಗೆ ದೊರೆತ ಇನ್ನೊಂದು ಹಳ್ಳಿಯ ಹೆಸರು ಮೂಟಿವಳ್ಳಿ. ಈ ಹೆಸರಿನ ಉತ್ತರಾರ್ಧದ ವಾರ್ಗಿಕವಾದ -ವಳ್ಳಿಯು ಪಳ್ಳಿಯಿಂದ ಬಂದಿದೆ ಎಂಬುದು ನಿಶ್ಚಿತ. ಮೂಟಿ ಎಂಬುದಕ್ಕೆ ಅಂಗಹೀನತೆ ಎಂಬುದೇ ಪ್ರಸಿದ್ಧಾರ್ಥ. ಆದರೆ ಅದು ಇಲ್ಲಿಗೆ ಹೊಂದುವುದಿಲ್ಲ. ರಿಕ್ತ, ಶೂನ್ಯ ಎಂಬರ್ಥಗಳೂ ಮೂಟಿಕ್ಕೆ ಇವೆ. ಮೂಟಿ > ಮೂಟಿ = ಬಯಲು ಪ್ರದೇಶ ಎಂಬರ್ಥದಿಂದ ಇದು ರೂಪುಗೊಂಡಿರಬಹುದು. ಅಥವಾ ಚಿಕ್ಕಮಗಳೂರು ಪ್ರಾಂತದಲ್ಲಿ ಮೂಡಿಗೆರೆ, ಮೂಡಲಗೆರೆ, ಮೂಡನಹಳ್ಳಿ ಎಂಬುವು ಹೆಚ್ಚಾಗಿ ಕಾಣುತ್ತವೆ. ಮೂಡವಳ್ಳಿಯೇ ಮೂಟಿವಳ್ಳಿ ಆಗಿದೆ ಎನಿಸುತ್ತದೆ. ಕಾಡು + ಕಿಚ್ಚು = ಕಾಟ್ಕಿಚ್ಚು, ನಾಡ + ಕಡೆ = ನಾಟ್ಕಡೆ ಎಂಬಲ್ಲಿ ಡಕಾರ ಟಕಾರವಾದಂತೆ, ಮೂಡ + ಪಳ್ಳಿ = ಮೂಟಿವಳ್ಳಿ ಎಂಬಲ್ಲಿ ಡಕಾರ ಟಕಾರವಾಗಿದೆ. ಇದು ಇನ್ನೂ ಹೆಚ್ಚು ಶೋಧಿತವಾಗಬೇಕಾಗಿದೆ.

ಚಿತ್ರದುರ್ಗದ ರೂವಾರಿ ಬರಮಣ್ಣನಾಯಕ

◈

ಡಾ. ಬಿ. ರಾಜಶೇಖರಪ್ಪ

ಕರ್ನಾಟಕದ ಸುಪ್ರಸಿದ್ಧ ಐತಿಹಾಸಿಕ ಸ್ಥಳಗಳಲ್ಲಿ ಚಿತ್ರದುರ್ಗವೂ ಒಂದೆಂಬುದು ಎಲ್ಲರಿಗೂ ತಿಳಿದ ಸಂಗತಿ. ಇದನ್ನು ಆಳಿದ ಪಾಳೆಯಗಾರರು 'ಚಿತ್ರದುರ್ಗದ ಪಾಳೆಯಗಾರರು' ಎಂದು ಹೆಸರಾಗಿದ್ದಾರೆ. ಶೌರ್ಯ, ಸಾಹಸ, ದೈವಶ್ರದ್ಧೆ, ಸರ್ವಧರ್ಮಸಮಭಾವನೆ, ವಿವಿಧ ದೇವಾಲಯ ಮಠ ಕೆರೆ ಹೊಂಡ ಬಾವಿ ಕೋಟೆ ಮುಂತಾದುವುಗಳ ನಿರ್ಮಾಣ – ಇವುಗಳಿಂದ ಇವರ ಚರಿತ್ರೆ ಉಲ್ಲೇಖನೀಯವಾಗಿದೆ. ಶಾಸನಗಳಿಂದ, ವಂಶಾವಳಿ–ಕೈಫಿಯತ್ತುಗಳಿಂದ ತಿಳಿದುಬರುವಂತೆ ಚಿತ್ರದುರ್ಗ ಸಂಸ್ಥಾನವನ್ನು ಸುಮಾರು ೨೩೧ ವರ್ಷ ಆಳಿದ ೧೬ ಜನ ಪಾಳೆಯಗಾರರಲ್ಲಿ ೧೩ನೆಯವನಾಗಿ ಬರುವವನೇ ಬರಮಣ್ಣನಾಯಕ. ಇವನನ್ನು ಬಿಚ್ಚುಗತ್ತಿ ಬರಮಣ್ಣನಾಯಕ ಎಂದು ಕರೆಯುವುದು ರೂಢಿ. ಈಚೆಗೆ ಭರಮಣ್ಣನಾಯಕ ಎಂಬ ಶಬ್ದ (ನಾಮರೂಪ) ಹೆಚ್ಚು ಚಲಾವಣೆಯಲ್ಲಿದ್ದರೂ ಶಾಸನಗಳಲ್ಲಿ ಬರಮಣ್ಣನಾಯಕ ಎಂಬ ಶಬ್ದ(ರೂಪ)ವೇ ಇರುವುದರಿಂದ ಇಲ್ಲಿ ಆ ಶಬ್ದ(ರೂಪ)ವನ್ನೇ ಇಟ್ಟುಕೊಳ್ಳಲಾಗಿದೆ.

ಕ್ರಿ.ಶ.೧೬೮೯ರಿಂದ ೧೭೨೧ರವರೆಗೆ ಆಳಿದ ಬರಮಣ್ಣನಾಯಕ ಈ ಪಾಳೆಯಗಾರರಲ್ಲೇ ಶೇಷ್ಠ ದೊರೆ ಎಂದು ಹೆಸರಾಗಿದ್ದಾನೆ. ಇವನ ಕಾಲದಲ್ಲಿ ಬಹುಸಂಖ್ಯೆಯ ಕಾಳಗಗಳು, ಗಡಿಘರ್ಷಣೆಗಳು, ಅನ್ಯಾಕ್ರಮಣಗಳು ನಡೆದವಾದರೂ, ಬಹುಸಂಖ್ಯೆಯಲ್ಲಿ ವಿವಿಧ ಬಗೆಯ ನಿರ್ಮಾಣಕಾರ್ಯಗಳೂ ನಡೆದಿವೆ ಎನ್ನುವುದು ವಿಶೇಷವೇ ಸರಿ. ಇವನ ಕಾಲದಲ್ಲಿ ಆದ ಆ ಎಲ್ಲ ನಿರ್ಮಾಣಗಳನ್ನು ಗಮನಿಸಿದರೆ, ಬಹುದೊಡ್ಡ ಸಂಸ್ಥಾನಗಳ ದೊರೆಗಳಿಗಿಂತ ಯಾವ ರೀತಿಯಲ್ಲೂ ಕಡಮೆಯಲ್ಲದ ಸಾಧನೆ ಇವನ ಕಾಲದಲ್ಲಾಗಿರುವುದು

ಕಂಡುಬರುತ್ತದೆ. ಅವನ ಅವಧಿಯ ವಿವಿಧ ನಿರ್ಮಾಣಗಳ ಪಂಕ್ತಿಯಲ್ಲಿ ಮಠಗಳು, ಕೋಟೆ-ಕೊತ್ತಲಗಳು, ಗಡಿಕೋಟೆಗಳು, ಕೋಟೆಬಾಗಿಲುಗಳು, ಕೆರೆಗಳು, ಹೊಂಡಗಳು, ಬಾವಿಗಳು, ಶೃಂಗಾರತೋಟಗಳು, ತೋಪುಗಳು, ದೇವಸ್ಥಾನಗಳು, ವಿವಿಧ ಬಗೆಯ ಮಂಟಪಗಳು, ಉಪ್ಪರಿಗೆ, ದೇವಸ್ಥಾನದ ಸುತ್ತುಭವಂತಿ, ವಿಗ್ರಹಗಳು, ಉಯ್ಯಾಲೆಕಂಬ-ದೀಪಮಾಲೆಕಂಬಗಳು, ಅರಮನೆಗಳು, ಚಾವಡಿಗಳು, ಬೊಕ್ಕಸದ ಮನೆಗಳು, ಗುಡ್ಡೆಗುಡಿಗಳು – ಇವೇ ಮುಂತಾದವುಗಳನ್ನು ನೋಡಿದರೆ ಆಶ್ಚರ್ಯವೇ ಆಗಬಹುದು. ಈ ನಿರ್ಮಾಣಗಳಲ್ಲಿ ಕೆಲವಕ್ಕೆ ಬಹುಶಃ ದೊರೆಯ ಇಷ್ಟದಂತೆ, ಹೆಚ್ಚಾಗಿ ದೇವರುಗಳ ಹೆಸರುಗಳನ್ನೂ ಇನ್ನು ಕೆಲವಕ್ಕೆ ಪಾಳೆಯಗಾರ ಮನೆತನದವರ ಹೆಸರುಗಳನ್ನೂ ಇಟ್ಟಿರುವುದನ್ನು ಗಮನಿಸಬಹುದು. ಆ ವಿವಿಧ ನಿರ್ಮಾಣಗಳನ್ನು ಇಲ್ಲಿ ಒಂದೊಂದಾಗಿ ನೋಡಬಹುದು.

ಮಠಗಳು

ವೀರಶೈವ ಧಾರ್ಮಿಕ ಚರಿತ್ರೆಯಲ್ಲಿ 'ಶೂನ್ಯಪೀಠ' ಎಂಬ ಪರಿಗಣನೆಯನ್ನೂ ಪ್ರಖ್ಯಾತಿಯನ್ನೂ ಹೊಂದಿರುವ ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠ ದಕ್ಷಿಣ ಭಾರತದ ಪ್ರಮುಖ ಮಠಗಳಲ್ಲೊಂದು. ಇದನ್ನು ಹಿಂದೆ ಮುರಿಗೆಮಠ, ಮುರುಗಿಮಠ, ಮಹಾಮಠ, ಬೃಹನ್ಮಠ ಎಂದು ಮುಂತಾಗಿ ಕರೆಯಲಾಗಿದೆ. ಈ ಮಠ ಚಿತ್ರದುರ್ಗದಲ್ಲಿ ನೆಲೆಗೊಂಡದ್ದು ಬರಮಣ್ಣನಾಯಕನ ಕಾಲದಲ್ಲಿಯೆ. ಅವನು ಶುಕ್ಲ ಸಂವತ್ಸರದ (೧೬೮೯ರ) ವಿಜಯದಶಮಿ ದಿನದಂದು ಪಟ್ಟಾಭಿಷಿಕ್ತನಾದ ಮೇಲೆ ಮಾಡಿದ ಪ್ರಥಮ ಯೋಜನಾತ್ಮಕ ಕಾರ್ಯವೆಂದರೆ ಮೇಲುದುರ್ಗದಲ್ಲಿ, ಸಂಪಿಗೆಸಿದ್ಧೇಶ್ವರ ದೇವಸ್ಥಾನದ ಪಕ್ಕದಲ್ಲಿ, ಮುರಿಗೆ ಶಾಂತವೀರ (೧ನೆಯ ಮುರಿಗೆ) ಸ್ವಾಮಿಗಳಿಗೆ ಕಲ್ಲುಮಠ ಕಟ್ಟುವುದಕ್ಕೆ ಆರಂಭ ಮಾಡಿದ್ದು. ಈ ಕೆಲಸದ ಉಸ್ತುವಾರಿಗೆ ಅವನು ನೇಮಿಸಿದ್ದು ಮೊದಲಿಗೆ ದಳವಾಯಿಯಾಗಿ ಆಮೇಲೆ 'ಸರ್ವಾಧಿಕಾರಿ'ಯಾಗಿ(ಪದೋನ್ನತಿ ಪಡೆದಿ)ದ್ದ ಭರಮಪ್ಪನಂಥ ಪ್ರಮುಖನನ್ನು. ಅವನು ಅದೇ ಸಂವತ್ಸರದಲ್ಲಿ (೧೬೮೯ರಲ್ಲಿ) ಈ ಮಠ ಕಟ್ಟುವುದಕ್ಕೆ ಆರಂಭ ಮಾಡಿದನು. ಚಿತ್ರದುರ್ಗದ ಬೆಟ್ಟದ ಮೇಲಿರುವ ಅತ್ಯಂತ ದೊಡ್ಡ ಪ್ರಾಚ್ಯವಸ್ತು ಸ್ಮಾರಕವೆನಿಸಿರುವ ಇದು ಬರಮಣ್ಣನಾಯಕನ ಒಂದು ವಿಶಿಷ್ಟ ಕೊಡುಗೆ.

ತ್ರಿಶತಷಷ್ಟಿ (೩೬೦) ಅಂಕಣಗಳಿಂದ ಕೂಡಿದ್ದ ಮೇಲುದುರ್ಗದ ಆ ಮಠ ಅವನ ಅರಮನೆಗೆ ತುಂಬ ಹತ್ತಿರದಲ್ಲಿತ್ತು ಎಂದು ಶ್ರೀಮಠಕ್ಕೆ ಸಂಬಂಧಿಸಿದ ೧೯ನೆಯ ಶತಮಾನದ 'ಮಹಾಲಿಂಗೇಂದ್ರ ವಿಜಯ' ಮತ್ತು 'ನಿರಂಜನವಂಶ ರತ್ನಾಕರ' ಎಂಬ ಕೃತಿಗಳು ಹೇಳುವುದು ಗಮನಾರ್ಹವಾಗಿದೆ. ಮುರಿಗೆ ಶಾಂತವೀರರಲ್ಲಿ ತುಂಬ ಭಕ್ತಿಯಿಟ್ಟಿದ್ದ ಬರಮಣ್ಣನಾಯಕನಿಗೆ ಸ್ವಾಮಿಗಳ ಮಠ ಅರಮನೆಗೆ ಹತ್ತಿರದಲ್ಲಿದ್ದರೆ ತಾನು ಮತ್ತು ತನ್ನ ಕುಟುಂಬದವರು ಸ್ವಾಮಿಗಳ ದರ್ಶನ-ಆಶೀರ್ವಾದಗಳನ್ನು

ಪಡೆಯಲು ಹೆಚ್ಚು ಅನುಕೂಲವೆಂದು ಹಾಗೆ ಮಾಡಿಸಿರುವ ಸಾಧ್ಯತೆ ಇದೆ. ಈ ಅಂಶವನ್ನು ಮನಸ್ಸಿಗೆ ತೆಗೆದುಕೊಂಡರೆ, ಮೇಲುದುರ್ಗದ ಮಠದ ಹತ್ತಿರವೇ ಇರುವ, ಈಗ 'ಟಂಕಶಾಲೆ' 'ಪಾಳೆಯಗಾರರ ಕಚೇರಿ' ಎಂದು ಮುಂತಾಗಿ ಕರೆಯುವ, ಮಣ್ಣಿನ ದೊಡ್ಡ ಗೋಡೆಗಳ ಕಟ್ಟಡ-ಸಂಕೀರ್ಣವೇ ಬರಮಣ್ಣನಾಯಕನ ಅರಮನೆ ಎನಿಸುತ್ತದೆ. ಹಾಗಾಗಿ ಪುರಾತತ್ವ ಇಲಾಖೆಯವರು ಅದರ ರಕ್ಷಣೆಯ ಬಗ್ಗೆ ಇನ್ನಷ್ಟು ಹೆಚ್ಚಿನ ಕಾಳಜಿ ತೆಗೆದುಕೊಳ್ಳಬೇಕಾಗಿದೆ.

ಈ ಮಠದ ಜೊತೆಗೆ ಬರಮಣ್ಣನಾಯಕ ಮುರಿಗೆಸ್ವಾಮಿಗಳಿಗಾಗಿ ಮಾಡಿಸಿದ ಇನ್ನೊಂದು ಮಠ (ದಾವಣಗೆರೆ ರಸ್ತೆಯಲ್ಲಿ ಈಗಲೂ ಇರುವ) 'ದೊಡ್ಡ ಕಲ್ಲುಮಠ'. ಈ ಕಟ್ಟಡದ ಕಾರ್ಯ(-೧೭೦೩ರ ಜುಲೈ ೫ರಂದು ಮುರಿಗೆ ಶಾಂತವೀರರು ಲಿಂಗೈಕ್ಯರಾಗುವ ಪೂರ್ವದಲ್ಲಿ ಪ್ರಾರಂಭವಾದದ್ದು, ಅವರ ತರುವಾಯ-) ಹೇವಿಳಂಬಿ ಸಂವತ್ಸರದ (ಕ್ರಿ.ಶ. ೧೭೧೭ರ) ವರೆಗೂ ನಡೆದು ತಿಂಗಳು ೧೧ಕ್ಕೆ ಮುಗಿಯಿತು ಎಂದು ದಾಖಲೆಗಳು ಹೇಳುತ್ತವೆ. ಆಗಿನ್ನೂ ಬಹುಶಃ ಅದು ಚಿಕ್ಕ ಕಟ್ಟಡವಿದ್ದು ಅದರ ರಚನೆ ನಡೆದ ಒಟ್ಟು ಕಾಲವನ್ನು (೧೧ ತಿಂಗಳು ಎಂದು) ಹಾಗೆ ಹೇಳಿರಬಹುದೆಂದು ಕಾಣುತ್ತದೆ. ಅನಂತರದಲ್ಲಿ ಆ ಕಟ್ಟಡ ಸಾಕಷ್ಟು ವಿಸ್ತರಣೆ ಮತ್ತು ಬದಲಾವಣೆಯನ್ನು ಪಡೆದಿರಬೇಕು. ಚಿತ್ರದುರ್ಗದ ಬೆಟ್ಟದ ಕೆಳಗಿರುವ ಪ್ರಾಚ್ಯವಸ್ತು ಸ್ಮಾರಕಗಳಲ್ಲೇ ಅತ್ಯಂತ ದೊಡ್ಡದೆನಿಸಿರುವ ಇದು ಕೂಡಾ ಬರಮಣ್ಣನಾಯಕನ ಇನ್ನೊಂದು ವಿಶೇಷ ಕೊಡುಗೆಯೆಂದೇ ಹೇಳಬೇಕು.

ಹಾಗೆಯೇ ಅಧಿಕಾರಿ ಅಪ್ಪರಸಯ್ಯ ಎಂಬುವನು ಮಠದ ಬಳಿ ಎರಡು ತೋಪುಗಳನ್ನು ಮಾಡಿಸಿದನೆಂದು ದಾಖಲೆಗಳಲ್ಲಿ ಹೇಳಿರುವುದು ಈ ಮಠದ ಬಳಿಯಲ್ಲಿ ಮಾಡಿಸಿದವುಗಳೇ ಇದ್ದಿರಬೇಕು.

ಇದೇ ದೊರೆಯ ಅವಧಿಯಲ್ಲಿ ಆದ ಇನ್ನೊಂದು ಮಠ (ಬಹುಶಃ ಒಬ್ಬ ಪಾರುಪತ್ಯಗಾರನಾಗಿದ್ದ) ಶೆಟ್ಟರ ಅಯ್ಯಣ್ಣ ಮಾಡಿಸಿದ ಅಯ್ಯಣ್ಣನ ಮಠ. ಅದರ ಬಳಿ ಒಂದು ಕಟ್ಟೆಯನ್ನು ಮಾಡಿಸಿದವನೂ ಅವನೇ. ಚಿತ್ರದುರ್ಗದಲ್ಲಿ ಈಗ ಅಯ್ಯಣ್ಣನಪೇಟೆ ಎಂದು ಕರೆಯುವ ರಸ್ತೆ ಇವನ ಹೆಸರಿಂದ ಬಂದದ್ದಿರಬೇಕು. ಆ ಮಠ ಮತ್ತು ಕಟ್ಟೆ ಯಾವುವೆಂಬುದು ಈಗ ಅಸ್ಪಷ್ಟವಾಗಿದೆ. ಗೋನೂರು ರಸ್ತೆಯಲ್ಲಿರುವ ವೆಂಕಟರಮಣ ಸ್ವಾಮಿ ದೇವಸ್ಥಾನದ ಪೂರ್ವಕ್ಕೆ ಜಮೀನಿನಲ್ಲಿ ಕಲ್ಲಿನ ಕಟ್ಟೆಯೊಂದರ ಮೇಲೆ ಪಾಳೆಯಗಾರರ ಕಾಲದ ಶೈಲಿಯ ಕಲ್ಲಿನ ಸುಂದರವಾದ ಕಂಬಗಳೂ ಭಾವಣಿಯೂ ಇದ್ದ ಒಂದು ಮಂಟಪವೂ ಅದರ ಬದಿಯಲ್ಲೇ ಮನೆಯನ್ನು ಹೋಲುತ್ತಿದ್ದ ನಾಡಹೆಂಚಿನ ಒಂದು ಸಾಧಾರಣ ಹಳೆಯ ಕಟ್ಟಡವೂ ಈಗ್ಗೆ ಕೆಲವು ವರ್ಷಗಳ ಹಿಂದೆ ಇದ್ದುವು. ಆ ಮಂಟಪವನ್ನು 'ಶೆಟ್ಟರ ಗದ್ದಿಗೆ' ಎಂದೂ ಅದರ ಬಳಿಯ ಕಟ್ಟಡವನ್ನು 'ಮಠ' ಎಂದೂ ಕರೆಯಲಾಗುತ್ತಿತ್ತು. ಇವಕ್ಕೆ

ಸಮೀಪ ಇರುವ ವೆಂಕಟರಮಣಸ್ವಾಮಿ ದೇವಾಲಯ ಇದೇ ಬರಮಣ್ಣನಾಯಕನ ಕಾಲದಲ್ಲಿಯೇ ಆಗಿರುವುದನ್ನು ಗಮನಿಸಿದರೆ ಶೆಟ್ಟರ ಅಯ್ಯಣ್ಣ ಕಟ್ಟಿಸಿದ್ದ ಮಠ ಮತ್ತು ಕಟ್ಟೆ ಇವೇ ಇದ್ದಿರಬೇಕು. ಇಲ್ಲಿಯ ಕಟ್ಟೆಮಂಟಪದ ಗದ್ದಿಗೆ ಯಾರಾದರೂ ಸ್ವಾಮಿಗಳದ್ದೋ, ಅಯ್ಯಣ್ಣನದೋ ಅಥವಾ ಇನ್ನಾರದ್ದೋ ತಿಳಿಯದು.

ಇವಲ್ಲದೆ, ಬರಮಣ್ಣನಾಯಕ ಬಾಗೂರು ಪರದೇಶಿ ಎಂಬುವನ ಮೂಲಕ ದುರ್ಗದಲ್ಲಿ ಮಾಡಿಸಿದ್ದು ಈಶ್ವರನ ಗುಡಿ, ಹುಲಿಗೊಂದಿಯಲ್ಲಿ ಮಾಡಿಸಿದ್ದು ನೆಲಗವಿಮಠ ಎಂತಲೂ ತಿಳಿಯುತ್ತದೆ. ಆ ಈಶ್ವರನ ಗುಡಿ ಯಾವುದೆಂಬುದು ನಿರ್ದಿಷ್ಟವಿಲ್ಲದಾದರೂ ಚಿತ್ರದುರ್ಗದಲ್ಲಿ ಆನೆಬಾಗಿಲ ಬಳಿ ಚಿಕ್ಕಪೇಟೆಯಲ್ಲಿರುವ ಪಾತಾಳೇಶ್ವರ ದೇವಾಲಯ ಭೂಮಟ್ಟದ ಕೆಳಗೆ ಅಂದರೆ ನೆಲದಡಿಯಲ್ಲಿದ್ದು 'ನೆಲಗವಿಮಠ'ವನ್ನು ನೆನಪಿಗೆ ತರುವುದರಿಂದ ಮತ್ತು ಅದು ಅಯ್ಯಣ್ಣನಪೇಟೆಗೆ ತುಂಬ ಹತ್ತಿರವೂ ಇರುವುದರಿಂದ ಅಯ್ಯಣ್ಣ ಮಾಡಿಸಿದ ಈಶ್ವರನ ಗುಡಿ ಇದೇ ಆಗಿದ್ದಿರಬಹುದೇ ಎಂದು ಸಂದೇಹವಾಗುತ್ತದೆ.

ಚಿತ್ರದುರ್ಗದ ಬಳಿಯ ಹುಲಿಗೊಂದಿ ಪ್ರದೇಶದಲ್ಲಿ ಈಗ 'ಅಂಕಳಸ್ವಾಮಿ ಮಠ' ಎಂದು ಕರೆಯುವ ಮಠವೇ ಹುಲಿಗೊಂದಿಯ ಆ ನೆಲಗವಿಮಠ ಎಂಬಲ್ಲಿ ಅನುಮಾನವಿಲ್ಲ. ಈ ಬಾಗೂರು ಪರದೇಶಿ ಕ್ರಿ.ಶ. ೧೭೧೫ರಲ್ಲಿ ತೀರಿದನೆಂದು ದಾಖಲೆಗಳು ಹೇಳುವುದರಿಂದ ಆ ಮಠದ ನಿರ್ಮಾಣ ಅದಕ್ಕೆ ಮುಂಚೆಯೇ ಆದದ್ದು ಎಂದು ತಿಳಿಯಬೇಕಾಗುತ್ತದೆ. ಈಗಾಗಲೇ ತಿಳಿದಿರುವಂತೆ, ಇದು ಕ್ರಿ.ಶ. ೧೪ನೆಯ ಶತಮಾನದ ಕಾಲಕ್ಕಾಗಲೇ 'ವೀರೇಶ್ವರದೇವರ ಮಠ' ಎಂಬುವ ಮಠವಾಗಿದ್ದು ಅನಂತರದಲ್ಲಿ ಬಹುಶಃ ಅನೂರ್ಜಿತ ಸ್ಥಿತಿಯಲ್ಲಿದ್ದುದನ್ನು ಬರಮಣ್ಣನಾಯಕ ಊರ್ಜಿತಗೊಳಿಸಿ ವಿಸ್ತರಣೆ ಮಾಡಿಸಿರಬೇಕು. ಮುಂದೆ ಕೆಲಕಾಲದಲ್ಲಿ ಅದು ಮತ್ತೆ ಅನೂರ್ಜಿತಗೊಂಡು, ಆಮೇಲೆ ೧೯ನೆಯ ಶತಮಾನದಲ್ಲಿ ಅಂಕಳ(ಲಿ) ಸ್ವಾಮಿಗಳ ಕಾಲಕ್ಕೆ ಮತ್ತೆ ಊರ್ಜಿತಗೊಂಡು ಮುರಿಗೆ ಮಠದ ಶಾಖಾಮಠವಾಗಿ, ೨೦ನೆಯ ಶತಮಾನದ ಆರಂಭ ಕಾಲದವರೆಗೂ ಅದು ಸಾಗಿಬಂತು. (ವಿವಿಧ ಕಾರ್ಯಾರ್ಥವಾಗಿ ಚಿತ್ರದುರ್ಗಕ್ಕೆ ಬಂದುಹೋಗುತ್ತಿದ್ದ ಜನ ಇದರಲ್ಲಿ ಆಶ್ರಯ ಪಡೆಯುತ್ತಿದ್ದರು. ಆ ಕಾಲಕ್ಕೆ 'ಮುರಿಗೆಸ್ವಾಮಿ ನೋಟ; ಅಂಕಳಸ್ವಾಮಿ ಊಟ' ಎಂಬ ಗಾದೆಯೇ ಪ್ರಚಲಿತವಾಗಿತ್ತು ಎಂದು ಜನ ಹೇಳುತ್ತಾರೆ). ೨೦ನೆಯ ಶತಮಾನದ ಆರಂಭದವರೆಗೂ ಇದರಲ್ಲಿ ಸ್ವಾಮಿಗಳು ಇದ್ದು, ಜಾಗೃತ ಸ್ಥಾನವಾಗಿದ್ದ ಇದು ಮತ್ತೆ ಅನೂರ್ಜಿತ ಸ್ಥಿತಿಯನ್ನು ಮುಟ್ಟಿದೆ.

ಬರಮಣ್ಣನಾಯಕನ ಕಾಲದಲ್ಲಿ ಉನ್ನತಾಧಿಕಾರದಲ್ಲಿದ್ದ ಗುಂಟನೂರು ಮಲ್ಲಪ್ಪ ನರಸಪ್ಪಯ್ಯ ಇವರು ಹಟ್ಟಿ(ನಾಯಕನಹಟ್ಟಿ)ಯಲ್ಲಿ ತಿಪ್ಪೇರುದ್ರಸ್ವಾಮಿಯ ಸಮಾಧಿಮಠವನ್ನು ನಿರ್ಮಿಸಿದರು. ಇದು ಈಗಲೂ ಆ ಊರ ಹೊರಅಂಚಿನಲ್ಲಿ

'ಹೊರಮಠ' ಎಂದು ಕರೆಯುವ, ಗುಂಬಜಿನ ಆಕಾರದ ಗೋಪುರ ಇರುವ, ಪಾಳೆಯಗಾರರ ಕಾಲದ ಶೈಲಿಯ ಕೆತ್ತನೆಯ ಕಂಬಗಳು ಇರುವ ಕಟ್ಟಡ ಎಂಬಲ್ಲಿ ಸಂದೇಹವಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ, ಅಷ್ಟೇ ಏಕೆ, ಕರ್ನಾಟಕದಲ್ಲೇ ಹೆಸರಾದ ನಾಯಕನಹಟ್ಟಿಯ ಆರಾಧ್ಯ ಪುರುಷ ತಿಪ್ಪೇರುದ್ರಸ್ವಾಮಿ. ಇವರು ೧೫ನೆಯ ಶತಮಾನದ ಕೊನೆ ಅಥವಾ ೧೬ನೆಯ ಶತಮಾನದ ಆದಿಭಾಗದಲ್ಲಿದ್ದಂತೆ ಕಾಣುತ್ತದೆ. ಚಾರಿತ್ರಿಕ ದಾಖಲೆಗಳಲ್ಲಿ ಇವರ ಕುರಿತು ಕಾಣುವ ಮಹತ್ತ್ವದ ಉಲ್ಲೇಖವೆಂದರೆ ಈ ಸಮಾಧಿಮಠವನ್ನು ಕುರಿತದ್ದೇ ಆಗಿದೆ. ೧೬ನೆಯ ಶತಮಾನದಿಂದ ಪ್ರಾಯಃ ಸರಳವಾಗಿ ಇದ್ದ ತಿಪ್ಪೇರುದ್ರಸ್ವಾಮಿಗಳ ಸಮಾಧಿಗೆ ಅದೂ ಸುಮಾರು ೨ ಶತಮಾನಗಳ ತರುವಾಯದಲ್ಲಿ ಒಂದು ದೇವಾಲಯದ ಸ್ವರೂಪದ ರಚನೆ ಆದದ್ದು, ಆ ಕಾಲಕ್ಕಾಗಲೇ ಚಾಲ್ತಿಗೆ ಬಂದಿದ್ದ ಇಸ್ಲಾಮಿಕ್ ವಾಸ್ತುಶೈಲಿಯ ಗುಂಬಜಿನ ಆಕಾರದ ಗೋಪುರ ಮೇಲೆ ಆದದ್ದು, ಚಿತ್ರದುರ್ಗದ ದೊರೆ ಬರಮಣ್ಣನಾಯಕನ ಕಾಲದಲ್ಲಿ ಎಂದು ವ್ಯಕ್ತವಾಗುತ್ತದೆ.

ಕಟ್ಟಡ ರಚನೆಯಲ್ಲಿ ಅರ್ಥಾತ್ ವಾಸ್ತುಶೈಲಿಯಲ್ಲಿ ಅನೇಕ ಪ್ರಯೋಗಗಳು ನಡೆದು, ವಿಜಯನಗರದ ಕಾಲಕ್ಕಾಗಲೇ ಭಾರತೀಯ ವಾಸ್ತು ಶೈಲಿಯ ಜೊತೆಗೆ ಇಸ್ಲಾಮಿಕ್ ವಾಸ್ತು ಶೈಲಿ ಸಮ್ಮಿಳನಗೊಂಡ ಒಂದು ಸಮನ್ವಯ ಶೈಲಿ ರೂಢಿಗೆ ಬಂದು, ಅದು ಎಲ್ಲರಿಂದ ಅಂಗೀಕೃತವಾಗಿತ್ತು. ಸಮಾಧಿ ಮಠ ಅಂಥ ಶೈಲಿಯಲ್ಲಿ ರಚನೆಗೊಂಡಿರುವ ಬಗೆಗೆ ಅರಿಯದೆ ಕೆಲವರು ಅದನ್ನು ಹೈದರಾಲಿ ಕಟ್ಟಿಸಿರಬೇಕು, ಟಿಪ್ಪು ಸುಲ್ತಾನ್ ಕಟ್ಟಿಸಿರಬೇಕು ಎಂದೆಲ್ಲ ಹೇಳುವುದುಂಟು. ಅದಕ್ಕೆ ಹೊಂದುವಂತೆ, ಮಕ್ಕಳಿಲ್ಲದ ಹೈದರಾಲಿಗೆ ತಿಪ್ಪೇರುದ್ರಸ್ವಾಮಿಯ ಅನುಗ್ರಹದಿಂದ ಮಗ ಹುಟ್ಟಿದನೆಂತಲೂ ಅವನಿಗೆ 'ತಿಪ್ಪ' ಎಂದು ಕರೆದ ಹೆಸರೇ ಮುಂದೆ 'ಟಿಪ್ಪು' ಎಂದಾಯಿತೆಂದೂ ಕಥೆಯೊಂದನ್ನು ಜೋಡಿಸಿ ಹೇಳುವುದೂ ಉಂಟು. ಆದರೆ ಅದು ನಿಜವಲ್ಲ ಎಂಬುದನ್ನಿಲ್ಲಿ ಹೇಳಬೇಕಾಗಿದೆ.

ಕೋಟೆ ಕೊತ್ತಲಗಳು, ಬಾಗಿಲುಗಳು

ದುರ್ಗದ ಕೋಟೆ ಮತ್ತು ಗಡಿಕೋಟೆಗಳು: ಬರಮಣ್ಣನಾಯಕನ ಕಾಲದಲ್ಲಿ ಆದ ಕೋಟೆಗಳ ನಿರ್ಮಾಣ ಕಾರ್ಯ ಸಣ್ಣದೇನಲ್ಲ. ಚಿತ್ರದುರ್ಗದ ಕೋಟೆಯ ಸುತ್ತುಗಳಲ್ಲಿ ಕೆಲವನ್ನು ಬಲಪಡಿಸಿದ್ದಲ್ಲದೆ, ಕೆಲವೆಡೆ ಹೊಸದಾಗಿ ಬಾಗಿಲುಗಳನ್ನು ಸಹ ಮಾಡಿಸಲಾಯಿತು. ಹಾಗೇ ಕೆಲವು ಗ್ರಾಮಗಳಿಗೆ ಕೋಟೆಗಳನ್ನು ಸಹ ನಿರ್ಮಾಣ ಮಾಡಲಾಯಿತು. ಆ ಎಲ್ಲ ನಿರ್ಮಾಣ ಕಾರ್ಯಗಳ ಬಗ್ಗೆ ದಾಖಲೆಗಳು ಹೇಳುವ ಅಂಶಗಳನ್ನು ಹೀಗೆ ಸಂಗ್ರಹಿಸಬಹುದು:

ಇವನ ಕಾಲದಲ್ಲಿ ಆದ ಗಡಿಕೋಟೆಗಳಲ್ಲಿ ಆಲೂರು ಗ್ರಾಮದ ಕೋಟೆಯೂ ಒಂದು. ಅದು (ಈಗ ದಾವಣಗೆರೆ ತಾಲೂಕಿನಲ್ಲಿ) ಅಣಜಿಯ ಪಕ್ಕ ಇರುವ ಊರು. ಇದನ್ನು ಆಂಗೀರಸ ಸಂವತ್ಸರದಲ್ಲಿ (೧೭೯೨ರಲ್ಲಿ) ಕಟ್ಟಿಸಲಾಯಿತು. ಇದನ್ನು ಕಟ್ಟುವಾಗ್ಗೆ ಚಿತ್ರದುರ್ಗ ನಾಯಕರ ವೈರಿಗಳಾದ ಹರಪನಹಳ್ಳಿಯ ಕಡೆಯವರು ಹೆಚ್ಚುಕಡಿಮೆ ಪ್ರತಿದಿನ ದಂಡು ತಂದು, ಕೋಟೆಹಾಕಲು ಬಿಡದೆ, ಹೊಡೆದಾಟಕ್ಕೆ ತೊಡಗಿದರು. ಆಗ ಕೆಲವರ ಹತ್ಯೆ ಕೂಡಾ ಆಗಿ ಅವರ ರಕ್ತ ಕೋಟೆ ಕಟ್ಟುವ ಕೆಸರಲ್ಲಿ ಸೇರಿಹೋಯಿತು. ಹೀಗಾಗಿ ರಕ್ತದ ಕೆಸರನ್ನು ಕೋಟೆಯ ತರಕ್ಕೆ ಹಾಕಿದ್ದಲ್ಲದೆ ಗೋಡೆಗಳಿಗೂ ಅದೇ ಕೆಸರನ್ನೇ ಬಳಸಿದ್ದರಿಂದ ರಕ್ತದ ಕೆಸರಲ್ಲೇ ಕೋಟೆ ಕಟ್ಟಿದಂತಾಯಿತು. ಆಮೇಲೆ ಶತ್ರುಗಳು ಹಿಮ್ಮೆಟ್ಟಿದರು; ಕೋಟೆಯ ಸಮಗ್ರ ಕಾಮಗಾರಿಯೂ ಮುಗಿಯಿತು. ಆಗ ಹೊಸದಾಗಿ ಒಂದು ಬಾವಿಯನ್ನು ತೆಗೆಸಿ, ನೂತನ ಗ್ರಾಮ ನಿರ್ಮಾಣ ಕಾಲಕ್ಕೆ ಮಾಡುವ ಪದ್ಧತಿಯಂತೆ ಗ್ರಾಮಕ್ಕೆ ಹುಗ್ಗಿ ಹೊಯ್ಯಿಸಿ, ಒಂದಷ್ಟು ಕಾಲುದಳವನ್ನು ಕಾವಲಿಗೆ ಅಲ್ಲಿಡಲಾಯಿತು.

ಇದರ ಜೊತೆಯಲ್ಲೇ ಕಟ್ಟಿಸಿದ ಇನ್ನೊಂದು ಕೋಟೆ ಬೇತೂರು ಗ್ರಾಮದ್ದು. ಅದನ್ನು ಕಟ್ಟಿಸುವ ಉಸ್ತುವಾರಿಗೆ ಓಬಳಪ್ಪ ಎಂಬ ಅಧಿಕಾರಿಯ ಮಗ ವೆಂಕಣ್ಣ ಎಂಬುವನನ್ನು ನೇಮಿಸಲಾಯಿತು.

ಬರಮಣ್ಣನಾಯಕ ವಿರೋಧಿ ಸಂವತ್ಸರದಲ್ಲಿ (೧೭೭೯ರಲ್ಲಿ) ಇಟ್ಟಿಗೆಹಳ್ಳಿ ಅರಳಿಕಟ್ಟೆ ಗ್ರಾಮಗಳನ್ನು ಗೆದ್ದಾಗ, ಆ ಇಟ್ಟಿಗೆಹಳ್ಳಿ ಗ್ರಾಮಕ್ಕೆ ಒಂದು ಕೋಟೆಯನ್ನು ಕಟ್ಟಿಸಿ, ಆ ಗ್ರಾಮಕ್ಕೆ ಬಸವನಕೋಟೆ ಎನ್ನುವ ಹೊಸ ಹೆಸರನ್ನಿಡಲಾಯಿತು. ಅರಳಿಕಟ್ಟೆಗೆ ಸಹ ಕೋಟೆ ಹಾಕಿಸಿ ಅದಕ್ಕೆ ಸಿದ್ದಯ್ಯನಕೋಟೆ ಎನ್ನುವ ಹೆಸರನ್ನು ಕರೆಯಲಾಯಿತು. ಇವೆರಡೂ ಗಡಿಕೋಟೆಗಳಾಗಿದ್ದುವು.

ಇವಲ್ಲದೆ ಸಿದ್ದವ್ವನದುರ್ಗದಲ್ಲೂ ಆಲಗಟ್ಟದಲ್ಲೂ ಸಹ ಗಡಿಕೋಟೆಗಳು ನಿರ್ಮಾಣವಾದುವು. ಕಾಲಿನ್ ಮೆಕೆಂಜಿ ಸಂಗ್ರಹಿಸಿದ ದಾಖಲೆಯೊಂದರಲ್ಲಿ ಬರಮಣ್ಣನಾಯಕ ಮೊಳಕಾಲ್ಮುರುವಿನ ಬಳಿಯ ಬೆಟ್ಟದ ಒಂದೂರಿಗೆ ಕೋಟೆ ಹಾಕಿಸಿ, ಅದಕ್ಕೆ ಭೈರವನದುರ್ಗ ಎಂದು ನಾಮಕರಣ ಮಾಡಿದನೆಂದು ಹೇಳಿದೆ.

ಕೊತ್ತಲಗಳು-ಬಾಗಿಲುಗಳು: ಚಿತ್ರದುರ್ಗದ ನೆಲ್ಲಿಕಾಯಿಸಿದ್ದಪ್ಪನ ಗುಡ್ಡದ ಕೊತ್ತಲು, ಪಚ್ಚೆ ಕಣುಮೆಯ ದೊಡ್ಡ ಕೊತ್ತಲು ಅಥವಾ ಬೇರೆ ಕೊತ್ತಲೆ ಸುತ್ತು, ಜೊತೆಗೆ ಸಂತೆಬಾಗಿಲ ಸುತ್ತಿನ ಕೋಟೆ ಇವನ್ನೂ ಸಹ ಮಾಡಿಸಲಾಯಿತು. ಇವಲ್ಲದೆ, ಕೆಲವು ಕಡೆ ಕೋಟೆಗೆ ಬಾಗಿಲುಗಳನ್ನು ಇಡಿಸಲಾಯಿತು. ಏಕನಾಥಮ್ಮನ ಗುಡಿ ಬಳಿಯಣ ಕೋಟೆಸುತ್ತಿನ ಬಾಗಿಲು (ಈಗ 'ಅಜ್ಜಿಬಾಗಿಲು' ಎಂದು ಕರೆಯುವ ಬಾಗಿಲು), ಹಿಡಿಂಬೇಶ್ವರನ ಸುತ್ತಿನ ಕೋಟೆಯ ಊರಬಾಗಿಲು

('ಭೂತನಾಥನಬಾಗಿಲು' ಎನ್ನುವ ಬಾಗಿಲು), ಒನಕೆಕಂಡಿ ಬಾಗಿಲ ಸುತ್ತು ಹಾಗೂ ಅಲ್ಲಿಯ ಹನುಮಂತದೇವರ ದೇವಸ್ಥಾನ ಇವು ಹಿಂದೆ ತಿಮ್ಮಣ್ಣನಾಯಕನ ಕಾಲದಲ್ಲೇ (೧೭೪೬-೧೭೬೮) ಆಗಿದ್ದರೂ, ಬರಮಣ್ಣನಾಯಕನ ಕಾಲದಲ್ಲಿ ಒನಕೆಕಂಡಿ ಸುತ್ತಿಗೆ ಒಂದು ಬಾಗಿಲನ್ನೂ ಹನುಮನಬಾಗಿಲು ಎಂಬ ಇನ್ನೊಂದು ಬಾಗಿಲನ್ನೂ ಮಾಡಿಸಲಾಯಿತು.

ಹಿಡಿಂಬೇಶ್ವರದ ಸುತ್ತಿನ ಕೋಟೆಬಾಗಿಲಿಗೆ ಹಾಕಿಸಿದ ಕದಗಳು ಹಿಂದೆ ರಂಗಪಟ್ಟಣಕ್ಕೆ ಹಾಕಿಸಿದ್ದ ಊರಬಾಗಿಲ ಕದಗಳಾಗಿದ್ದುವು. (ಈ ರಂಗಪಟ್ಟಣ ಚಿತ್ರದುರ್ಗ ತಾಲೂಕಿನ ಮಾನಂಗಿ ಗ್ರಾಮದ ಉತ್ತರದಲ್ಲಿ ಬೇಚರಕ್ ಆಗಿರುವ ಊರು; ಚಿತ್ರದುರ್ಗದ ಪಾಳೆಯಗಾರರು ಚಿತ್ರದುರ್ಗಕ್ಕೆ ಬಂದ ಆರಂಭದಲ್ಲಿ ಕಟ್ಟಿದ್ದರೆಂದು ದಾಖಲೆಗಳು ಹೇಳುವ ಒಂದು ಊರು. ಮಾನಂಗಿ ಗ್ರಾಮದ ಉತ್ತರಕ್ಕೆ ಆಂಜನೇಯ ದೇವಸ್ಥಾನದ ಬಳಿ ಕೆಲವು ಹೊಲಗಳಲ್ಲಿ ಬಿದ್ದಿದ್ದ ಭಾರೀಗಾತ್ರದ ಕಲ್ಲುಗಳು ಹಿಂದೆ ಅಲ್ಲಿದ್ದ ರಂಗಪಟ್ಟಣದ ಕೋಟೆಯ ಕಲ್ಲುಗಳು ಎಂದು ಜನ ಹೇಳುತ್ತಿದ್ದುದನ್ನು ನಾನು ಕ್ಷೇತ್ರಕಾರ್ಯಕ್ಕೆ ಹೋದಾಗ ಜನ ಹೇಳುತ್ತಿದ್ದುದನ್ನು ಕೇಳಿದ್ದೆ. ಈಚೆಗೆ ಆ ಕಲ್ಲುಗಳೂ ಕಾಣೆಯಾಗಿವೆ). ಇವುಗಳ ಜೊತೆಗೆ ಚಿಕ್ಕಣ್ಣನಾಯಕನ ಅರಮನೆ ಸುತ್ತಿನ ಬಾಗಿಲನ್ನು ಸಹ ಮಾಡಿಸಲಾಯಿತು.

೧೭೧೧ರಲ್ಲಿ (ಶಕ ೧೬೩೩ರ ಖರ ಸಂವತ್ಸರದಲ್ಲಿ), ಬರಮಣ್ಣನಾಯಕನ ಅಪ್ಪಣೆಯಂತೆ ಬೊಕ್ಕಸದ ತಿಮ್ಮಪ್ಪನ ಪಾರುಪತ್ಯದಲ್ಲಿ, ಗೋಸೀಕೆರೆಯ ಜಲಧಿಗೌಡ ಎಂಬುವನ ಮಗ ಚಿಕ್ಕಣ್ಣ ಎಂಬುವನು ಅಲ್ಲಿ ಕೋಟೆ, ಕೊತ್ತಳ, ಅಗಳು(ಕಂದಕ) ಇವನ್ನು ಮಾಡಿಸಿದನು. ಇದು ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ. ಈ ಮೇಲಿನ ಉದಾಹರಣೆಗಳಿಂದ ಬರಮಣ್ಣನಾಯಕ ಗಡಿಕೋಟೆಗಳಿಗೆ ಕೊಟ್ಟಷ್ಟೇ ಗಮನವನ್ನು ಗ್ರಾಮಗಳ ಕೋಟೆಗಳಿಗೂ ನೀಡಿದ್ದ ಎಂದು ವ್ಯಕ್ತವಾಗುತ್ತದೆ.

ಕೆರೆಗಳು

ಬರಮಣ್ಣನಾಯಕನ ಕಾಲದಲ್ಲಿ ಸುಮಾರು ೨೦ಕ್ಕೂ ಹೆಚ್ಚು ಕೆರೆಗಳು ಆದಂತೆ ದಾಖಲೆಗಳು ವಿವರ ನೀಡುತ್ತವೆ. ಅವುಗಳಲ್ಲಿ ಕೆಲವು ಕೆರೆಗಳು ಹೊಸದಾಗಿ ಆದವು ಇದ್ದರೂ ಇನ್ನೆಷ್ಟೋ ಕೆರೆಗಳು ತುಂಬ ಹಿಂದಿನ ಕಾಲದಲ್ಲೇ ಆದ ಕೆರೆಗಳಿದ್ದು, ಬರಮಣ್ಣನಾಯಕನ ಅವಧಿಯಲ್ಲಿ ಅವು ಜೀರ್ಣೋದ್ಧಾರಗೊಂಡಿರುವಂತೆ ಕಾಣುತ್ತದೆ. ಜೀರ್ಣೋದ್ಧಾರವೂ ಒಂದು ರೀತಿಯಲ್ಲಿ ಹೊಸರಚನೆಯೇ ಎಂಬ ಭಾವನೆಯಲ್ಲಿ ಹಾಗೆ ದಾಖಲಿಸಿರಬೇಕು. ಬರಮಣ್ಣನಾಯಕನ ಅತ್ಯಂತ ಪ್ರಶಂಸನೀಯ ಕೊಡುಗೆಯೆಂದರೆ ಈ ಕೆರೆಗಳ ಕೊಡುಗೆಯೇ. ಅಂದಿನ ಕಾಲದ ಪದ್ಧತಿಯಂತೆ ಕೆರೆಗಳನ್ನು ಸಾಮಾನ್ಯವಾಗಿ ದೇವರುಗಳ ಹಾಗೂ ದೊರೆಗಳ, ಅವರ ನಾಗತಿಯರ, ಅವರ ಮಕ್ಕಳ ಹೆಸರಿಂದ ಕರೆದಿರುವುದನ್ನು ನೋಡಬಹುದು.

ಈ ದೊರೆಯ ಕಾಲದಲ್ಲಿ ಆದಂತೆ ಹೇಳಲಾದ (ಬಹುದೊಡ್ಡ) ಕೆರೆಗಳಲ್ಲಿ ಒಂದು ಭೀಮಸಮುದ್ರದ ಕೆರೆ. ಇದನ್ನು ಆ ಹೆಸರಿಂದ ಕರೆಯುವ ಮುನ್ನ ಹೊಲತಿಹಾಳ ಕೆರೆ ಎಂದು ಕರೆಯಲಾಗುತ್ತಿತ್ತು. ಹೊಲತಿಹಾಳು ಗ್ರಾಮವನ್ನು ತೆಗೆದು, ಅದಕ್ಕೆ ಭೀಮಸಮುದ್ರ ಎಂದು ಹೆಸರಿಟ್ಟು, ಅಲ್ಲಿದ್ದ ಹಳೆಯ ಕೆರೆಯನ್ನು ಬಿಚ್ಚಿಸಿ, ವ್ಯಯ ಸಂವತ್ಸರದಲ್ಲಿ (೧೭೦೬ರಲ್ಲಿ) ದೊಡ್ಡ ಕೆರೆ ಕಟ್ಟಲಾಯಿತು. ಆದರೆ ಶಾಸನದಿಂದ ತಿಳಿದುಬರುವಂತೆ ೧೨ನೆಯ ಶತಮಾನದಲ್ಲಿಯೇ ಆ ಕೆರೆ ಅಸ್ತಿತ್ವದಲ್ಲಿತ್ತು. ಆಗ ಅದನ್ನು 'ಹೊನ್ನುಂದದ ಹಿರಿಯಕೆರೆ' ಎಂದು ಕರೆಯಲಾಗುತ್ತಿತ್ತು. ಇದರಿಂದ ಆ ಕೆರೆ ತುಂಬ ಹಳೆಯದಿದ್ದು, ಬರಮಣ್ಣನಾಯಕನ ಕಾಲಕ್ಕೆ ಅನೂರ್ಜಿತ ಸ್ಥಿತಿಯಲ್ಲಿದ್ದುದನ್ನು ಅವನು ಪುನರುಜ್ಜೀವನಗೊಳಿಸಿರುವುದು ಸ್ಪಷ್ಟ. ಪುನರುಜ್ಜೀವನವೂ ಸಣ್ಣ ಕೆಲಸವೇನಲ್ಲ; ಹೊಸ ನಿರ್ಮಾಣದಂತೆ ಅದು ಕೂಡಾ ಮಹತ್ತ್ವದ್ದೇ. ಅದನ್ನು ಅವನು ಮಾಡಿಸಿದ್ದಾನೆ.

ಮೇಲುದುರ್ಗದಿಂದ ಹೊರಭಾಗದಲ್ಲಿ ಬರಮಣ್ಣನಾಯಕ ಮಾಡಿಸಿದ ಒಂದು ಕೆರೆ ದೇಮವ್ವನಕೆರೆ (ದ್ಯಾಮವ್ವನಕೆರೆ), ಇನ್ನೊಂದು ರಂಗಯ್ಯನಕೆರೆ. ಈ ದೇಮವ್ವನಕೆರೆ ದೇಮವ್ವನಹಳ್ಳಿ(ದ್ಯಾಮವ್ವನಹಳ್ಳಿ)ಯ ಬಳಿ ಈಗಲೂ ಇರುವ ದೊಡ್ಡಕೆರೆಯೇ ಇರಬೇಕು. ದೇಮವ್ವನನ್ನು 'ಅವ್ವ ದೇಮವ್ವ' ಎಂದು ದಾಖಲೆಗಳು ವಿಶೇಷಿಸಿ ಹೇಳಿರುವುದರಿಂದ ಆಕೆ ಬರಮಣ್ಣನಾಯಕನ ತಾಯಿಯೆಂದು ತಿಳಿಯಬೇಕಾಗುತ್ತದೆ. ಹಾಗೆಯೇ ಬರಮಣ್ಣನಾಯಕನ ತಂದೆ ಮದಕೇರಿನಾಯಕ ಎಂದು ಶಾಸನಗಳಲ್ಲಿ ಹೇಳಿದೆಯಾದರೂ ಅದು ಕೇವಲ ವಂಶಾನುಪೂರ್ವಿಯನ್ನು ಹೇಳುವ ಕ್ರಮದಲ್ಲಿ ಹೇಳಿರುವ ಮಾತು ಮಾತ್ರ. ಏಕೆಂದರೆ, ಆ ಮದಕೇರಿನಾಯಕ ಅವನ ಜನ್ಮದಾತ ತಂದೆಯಲ್ಲ. ಅವನ ಜನ್ಮದಾತ ತಂದೆ ಕಸ್ತೂರಿರಂಗಪ್ಪ ನಾಯಕ ಎಂದು (ಹಿರಿಯೂರು ತಾಲೂಕು ಉಪ್ಪಳಗೆರೆಯ) ಒಂದು ಶಾಸನದಲ್ಲಿರುವುದನ್ನು ಸಂಶೋಧಕರು ತೋರಿಸಿಕೊಟ್ಟಿದ್ದಾರೆ. ಆದ್ದರಿಂದ ರಂಗಯ್ಯನಕೆರೆ ಎಂಬುದು ಅವನ ಜನ್ಮದಾತ ತಂದೆಯ ಹೆಸರಲ್ಲಿ ಮಾಡಿಸಿದ ಕೆರೆ ಆಗಿರಬೇಕು. ಆದರೆ, ಅದು ಆದದ್ದು ಎಲ್ಲಿ ಎಂಬುದು ಈಗ ನಿರ್ದಿಷ್ಟವಿಲ್ಲ.

ಇವನ ಕಾಲದಲ್ಲಿ ಆದ ಇತರ ಕೆರೆಗಳೆಂದರೆ, ಮುರಿಗೆಸ್ವಾಮಿ ಮಠದ ಬಳಿಯ ಎರಡು ಕೆರೆ (ಇವುಗಳಲ್ಲಿ ಮಠದ ಮುಂದಿನದನ್ನು 'ಅರಸಿನಕೆರೆ' ಎಂದೂ ಹಿಂದಿನದನ್ನು 'ಮಠದಕೆರೆ' ಎಂದೂ ಈಚಿನ ರೆವಿನ್ಯೂ ದಾಖಲೆಗಳಲ್ಲಿ ಕರೆದಿದೆ), ಆಲಗಟ್ಟದ ಕೋಟೆಯ ಬಳಿಯ ಹುಚ್ಚವ್ವನಾಗತಿ ಕೆರೆ, ಮಾಯಿಕೊಂಡದ ಬಳಿಯ ಇಟ್ಟಿಗೆಹಳ್ಳಿ ಕೆರೆ, ಇಸಾಮುದ್ರದ ಬಳಿಯ ಭರಮಸಾಗರದ ಕೆರೆ, ಜಗಲೂರು ಸೀಮೆಯ ಭರಮಸಾಗರದ ಕೆರೆ, ಚಿತ್ರಹಳ್ಳಿ ಸೀಮೆಯ ಹಾವಿನಶಿರವರದ(?) ಅಥವಾ ಹಂಗವಾರದ ಕೆರೆ, ಕೆಸರಹಳ್ಳಿ ಬಳಿಯ ಕಣಿವೆಗೆ ಹಾಕಿಸಿದ ಎರಡು

ಕೆರೆಗಳಲ್ಲಿ ಒಂದು ಮೆದಕೇರಿನಾಯಕರ ಕೆರೆ (ಮೆದಕೇರಿನಾಯಕನಕೋಟೆ ಕೆರೆ), ಇನ್ನೊಂದು ಕಸ್ತೂರಿರಂಗಪ್ಪನಾಯಕರ ಕೆರೆ (ಕಸ್ತೂರಿರಂಗಪ್ಪನಾಯಕನಕೋಟೆ ಕೆರೆ). ಅರಲಗೋಡು ತೆಗೆದು ಮಾಡಿಸಿದ ಕೆರೆಯೇ ಮೇದಕೇರಿನಾಯಕರ ಕೆರೆ. ಇವಲ್ಲದೆ, ಅಣಜಿ ಕೆರೆ, ಜಂಪಣ್ಣನಾಯಕರಕೋಟೆಯ ಕೆರೆ, ಹನ್ನೇಹಾಳು ಬಳಿಯ ಚಿಕ್ಕಸಿದ್ದವ್ವನಾಗತಿ ಕೆರೆ, ಹಾಗೇ ಚಿಕ್ಕಸಿದ್ದವ್ವನಹಳ್ಳಿಯ ಬಳಿ ಇನ್ನೊಂದು ಕೆರೆ, ಕುರುಬರಹಳ್ಳಿ ಬಳಿ ಚಿಕ್ಕಪಾಲವ್ವನ ಕೆರೆ – ಇವು ಸಹ ಆ ಕಾಲದಲ್ಲೇ ಆದವು.

ಬರಮಣ್ಣನಾಯಕನಷ್ಟೇ ಅಲ್ಲದೆ, ಅವನಸೇವೆಯಲ್ಲಿದ್ದ ಕೆಲವರು ಪ್ರಮುಖರು ಸಹ ಕೆಲವು ನಿರ್ಮಾಣ ಕಾರ್ಯಗಳನ್ನು ಮಾಡಿದ್ದಾರೆ. ಅವರಲ್ಲಿ ಲಿಂಗಪ್ಪ ಸಾಹೇಬ ಕಟ್ಟಿಸಿದ್ದು ದೇಮವ್ವನಹಳ್ಳಿಯ ಬಳಿಯ ಒಂದು ಕೆರೆ; ಮರಗಲ್ಲಯ್ಯ ಮಾಡಿಸಿದ್ದು ಮಾಚಿಕೆರೆಯ ಬಳಿಯ ಒಂದು ಕೆರೆ.

ಹೊಂಡಗಳು–ಬಾವಿಗಳು

ಹೊಂಡಗಳು: ಬರಮಣ್ಣನಾಯಕನ ಕಾಲದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕೆರೆಗಳ ನಿರ್ಮಾಣ ಮತ್ತು ಹಳೆಯ ಕೆರೆಗಳ ಜೀರ್ಣೋದ್ಧಾರ ಆದಂತೆ, ಅನೇಕ ಹೊಸ ಹೊಂಡಗಳ ನಿರ್ಮಾಣ ಕೂಡಾ ಆದದ್ದು ತಿಳಿಯುತ್ತದೆ. ಅವನು ಮಾಡಿಸಿದ ಹೊಂಡಗಳೆಂದರೆ, ಸಿದ್ದಯ್ಯ–ರಂಗಯ್ಯನ ಹೊಂಡ, ಕರೆಕಲ್ಲು ಹೊಂಡ, ಹನುಮನ ಹೊಂಡ. ಇವು ಮೇಲುದುರ್ಗದಲ್ಲಿ ಮಾಡಿಸಿದ ಹೊಂಡಗಳಾದರೆ, ದುರ್ಗದ ಕೆಳಗೆ ಮಾಡಿಸಿದವು ಉಚ್ಚಂಗಮ್ಮನ ಹೊಂಡ ಮತ್ತು ಸಂತೆಹೊಂಡ. ಕಾಲಕ್ರಮದಲ್ಲಿ ಸಿದ್ದಯ್ಯ–ರಂಗಯ್ಯನಹೊಂಡವು ಗೋಪಾಲಸ್ವಾಮಿ ಹೊಂಡ ಎಂತಲೂ ಕರೆಕಲ್ಲುಹೊಂಡವು ಅಕ್ಕನ ಹೊಂಡ ಎಂತಲೂ ಉಚ್ಚಂಗಮ್ಮನಹೊಂಡ (ಉಚ್ಚಂಗಿಹೊಂಡ)ವು ಸಿಹಿನೀರುಹೊಂಡ ಎಂತಲೂ ಹೆಸರಾಗಿವೆ.

ತಂಗಿಯ ಹೊಂಡದ ಬದಿಯಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದ ಎದುರಿಗೆ, ಆ ಹೊಂಡದ ದಡದಲ್ಲಿರುವ ಕಲ್ಲಿನ ದೀಪದಕಂಬದಲ್ಲಿ ಈಗ್ಗೆ ಕೆಲವು ವರ್ಷಗಳ ಹಿಂದೆ ಹೊಸದಾಗಿ ದೊರೆತ, ನಾನು ಓದಿದ ಸುಮಾರು ೧೭–೧೮ನೆಯ ಶತಮಾನದ ಶಾಸನದಲ್ಲಿ ಇಲ್ಲಿಯ ಹೊಂಡಗಳನ್ನು ಬನಶಂಕರಿ ಮತ್ತು ಹನುಮಂತದೇವರ ಮಜರಿಕೆರೆ ಎರಡು ಎಂದು ಕರೆದಿರುವುದಲ್ಲದೆ, ಇವನ್ನು ಮಾಡಿಸಿದವನು ಮಜರಿ ಲಕಿಮಿನಾಯಕನ ಮಗನಾದ ತುರುಓಬಯ್ಯನ ಮಗ ಗವಿಓಬಯ್ಯ ಎಂದಿದೆ. ಇದರಿಂದ ಈ ಹೊಂಡಗಳೆರಡೂ ಹಿಂದೆಯೇ ಆದವುಗಳಿದ್ದು, ಬರಮಣ್ಣನಾಯಕ ಅವನ್ನು ಜೀರ್ಣೋದ್ಧಾರ ಮಾಡಿರುವಂತೆ ಕಾಣುತ್ತದೆ. ಉಚ್ಚಂಗಿ ಹೊಂಡ ಮಾತ್ರ ಈ ದೊರೆಯ ಕಾಲದಲ್ಲೇ ಆದದ್ದೆಂದು ತಿಳಿಯಬಹುದು.

ಸಿದ್ದಯ್ಯ-ರಂಗಯ್ಯನ ಹೊಂಡ ಮೂಲತಃ ಸಂಪಿಗೆಸಿದ್ಧೇಶ್ವರ ದೇವರಿಗೆ (ಬಹುಶಃ ಇದರ ಜಲವು ಪೂಜೆ ಮತ್ತು ಅಭಿಷೇಕಕ್ಕೆ) ಮೀಸಲಾಗಿದ್ದರಿಂದಲೋ ಏನೋ ಹಿಂದೆ 'ಸಿದ್ದಯ್ಯನ ಹೊಂಡ' ಎಂಬ ಹೆಸರನ್ನು ಹೊಂದಿತ್ತು. (ಈಗಲೂ ಅದರ ಉತ್ತರದ ಕಲ್ಲುಬಾಗಿಲಿನ ಹಣೆಪಟ್ಟಿಯಲ್ಲಿ ಸೂರ್ಯ-ಚಂದ್ರ ಸಮೇತ ಶಿವಲಿಂಗ-ನಂದಿಗಳ ಉಬ್ಬುಶಿಲ್ಪಗಳಿರುವುದನ್ನು ನೋಡಬಹುದು). ಅದಕ್ಕೂ ಹಿಂದೆ ಸುತ್ತಮುತ್ತ ಹೂಲಿಯಗಿಡಗಳು ಇದ್ದದ್ದರಿಂದಲೋ ಏನೋ 'ಹೂಲಿಯಬಾವಿ' ಎಂಬ ಹೆಸರನ್ನು ಹೊಂದಿತ್ತು. ಈ ಸಿದ್ದಯ್ಯನ ಹೊಂಡವನ್ನು ಬರಮಣ್ಣನಾಯಕನು ಜೀರ್ಣೋದ್ಧಾರ ಮಾಡಿದಂತೆ ಕಾಣುತ್ತದೆ. ಗೋಪಾಲಸ್ವಾಮಿ ದೇವರಿಗೆ ರಂಗನಾಥಸ್ವಾಮಿ ಓಬಳದೇವರು ಎಂದೂ ಹೆಸರು ಕರೆದಿರುವುದುಂಟು. ಒಂದು ಕಾಲಕ್ಕೆ ಇಲ್ಲಿ ಕೆಳಗಡೆ ತೋಟದ ಬಳಿ ಇದ್ದ ಗೋಪಾಲಸ್ವಾಮಿ ದೇವರಿಗೆ (ಈಗಿರುವ ಪಶ್ಚಿಮದ ಕಡೆಯ) ಮೇಲಿನ ಸ್ಥಳದಲ್ಲಿ ಬರಮಣ್ಣನಾಯಕ ದೇವಾಲಯವನ್ನು ಕಟ್ಟಿಸಿ ದೇವರನ್ನು ಅಲ್ಲಿ ಪ್ರತಿಷ್ಠಾಪಿಸಿದ ಮೇಲೆ, (ಇದರ ಜಲ ಅದಕ್ಕೂ ಸಲ್ಲುವಂತಾಗಿ), ಎರಡೂ ದೇವರ ಹೆಸರಿನಿಂದ ಸಿದ್ದಯ್ಯ-ರಂಗಯ್ಯನ ಹೊಂಡ ಎಂದಾಗಿ, ಆಮೇಲೆ 'ಸಿದ್ಧರಂಗಯ್ಯನ ಹೊಂಡ' ಎಂದು ಕರೆಯಲಾಯಿತಾದರೂ ಆತರುವಾಯ ಗೋಪಾಲಸ್ವಾಮಿ ಹೊಂಡ ಎಂದೇ ಇದು ಹೆಸರಾಗಿದೆ.

ಬರಮಣ್ಣನಾಯಕನ ಸೇವೆಯಲ್ಲಿದ್ದ ದಳವಾಯಿ ಚುಕ್ಕಣ್ಣ ಚೋಳಗಟ್ಟದ (ಈಗಿನ ಚೋಳಗುಡ್ಡದ) ಬಳಿ ಮಾಡಿಸಿದ್ದ ಹೊಂಡ ಈಗಲೂ ಇದ್ದು ಅದನ್ನು 'ದಳವಾಯಿ ಹೊಂಡ' ಎಂತಲೇ ಕರೆಯಲಾಗುತ್ತಿದೆ. ಹಾಗೇ ಪಾರುಪತ್ಯಗಾರ ಚಿಕ್ಕನರಸಪ್ಪ ವೆಂಕಟರಮಣ ದೇವಸ್ಥಾನದ ಬಳಿ ಎರಡು ಹೊಂಡಗಳನ್ನು ಮಾಡಿಸಿದ. ಅವುಗಳಲ್ಲಿ ಒಂದು ಮಾತ್ರ ಈಗ ಉಳಿದಿದ್ದು ಸುಸ್ಥಿತಿಯಲ್ಲಿದೆ.

ಬಾವಿಗಳು: ಬರಮಣ್ಣನಾಯಕನ ಕಾಲದಲ್ಲಿ ಆದ ಬಾವಿಗಳ ನಿರ್ಮಾಣದ ಹೆಚ್ಚು ವಿವರಗಳು ಲಭ್ಯವಿಲ್ಲ. ಅವನ ಸೇವೆಯಲ್ಲಿ ಉನ್ನತಾಧಿಕಾರದಲ್ಲಿದ್ದ ಗುಂಟನೂರು ಮಲ್ಲಪ್ಪ ನರಸಪ್ಪಯ್ಯನವರು ದುರ್ಗದ ಊರ ಹೊರಗೆ ಪೂರ್ವದಿಕ್ಕಿನಲ್ಲಿ ತಮ್ಮ ತಾಯಿಯ ಹೆಸರಿನಲ್ಲಿ 'ನಾಗವ್ವನಬಾವಿ' ಎಂಬ ಬಾವಿಯನ್ನೂ ಅಲ್ಲೇ 'ಸಂಧ್ಯಾಮಂಟಪ' ಎಂಬ ಮಂಟಪವನ್ನೂ ಮಾಡಿಸಿದರು. ಹಾಗೇ ಬೊಕ್ಕಸದ ತಿಮ್ಮಪ್ಪ ಮೇಲುದುರ್ಗದಲ್ಲಿ ಒನಕೆಕಂಡಿ ಬಾಗಿಲ ಬಳಿ ಒಂದು ಬಾವಿಯನ್ನು ಮಾಡಿಸಿದನು; ಚಿಕ್ಕನರಸಪ್ಪ ವೆಂಕಟರಮಣಸ್ವಾಮಿ ದೇವಸ್ಥಾನದ ಬಳಿ ಒಂದು ಬಾವಿಯನ್ನು ಸಹ ಮಾಡಿಸಿದನು. ಅವುಗಳ ಹೆಸರು ಲಭ್ಯವಿಲ್ಲ.

ಶೃಂಗಾರತೋಟಗಳು-ತೋಪುಗಳು

ವಿಷ್ಣು-ಲಕ್ಷ್ಮಿ, ಶಿವ-ಪಾರ್ವತಿಯರ, ಇಲ್ಲವೆ ಅವರಿಗೆ ಸಂಬಂಧಿಸಿದ, ದೇವರುಗಳ ಪೂಜೆಯ ಶೃಂಗಾರಕ್ಕೆ ಬಳಸುವ ಹೂವಿನ ತೋಟಗಳೇ 'ಶೃಂಗಾರತೋಟ'ಗಳು. ಬರಮಣ್ಣನಾಯಕನ ಕಾಲದಲ್ಲಿ ಶೃಂಗಾರತೋಟ ಎಂಬ ಹೆಸರಿನ ಎರಡು ತೋಟಗಳು ಆದದ್ದು ತಿಳಿದುಬರುತ್ತದೆ. ಅವುಗಳಲ್ಲಿ ಒಂದು ಮೇಲುದುರ್ಗದ ಮೇಲೆ ಆದದ್ದಾದರೆ, ಇನ್ನೊಂದು ಕೆಳಗೆ ಆದದ್ದು. ಆದರೆ ಅವುಗಳನ್ನು ಮಾಡಿದ ನಿರ್ದಿಷ್ಟ ಜಾಗಗಳು, ವರ್ಷಗಳು ದಾಖಲೆಗಳಲ್ಲಿ ದೊರೆಯುವುದಿಲ್ಲ.

ಈ ದೊರೆಯ ಕಾಲದಲ್ಲಿ ಉನ್ನತಾಧಿಕಾರದಲ್ಲಿದ್ದ ಗುಂಟನೂರು ಮಲ್ಲಪ್ಪ ನರಸಪ್ಪಯ್ಯನವರು ಈಹಿಂದೆ ಹೇಳಿದಂತೆ ದುರ್ಗದ ಊರ ಹೊರಗೆ, ಪೂರ್ವದಿಕ್ಕಿನಲ್ಲಿ ತಾಯಿಯ ಹೆಸರಲ್ಲಿ ಒಂದು ನಾಗವ್ವನಬಾವಿ, ಅದರ ಜೊತೆಗೆ ಮಲ್ಲಪ್ಪನಬಾವಿ ಎಂಬ ಇನ್ನೊಂದು ಬಾವಿ- ಹೀಗೆ ಎರಡು ಬಾವಿಗಳನ್ನೂ ಸಂಧ್ಯಾಮಂಟಪ ಎಂಬ ಮಂಟಪದ ಜೊತೆಗೆ ಒಂದು ತೋಪನ್ನೂ ಮಾಡಿಸಿದರು. ಹಿಂದೆಯೇ ಹೇಳಿದಂತೆ ಅಪ್ಪರಸಯ್ಯ ಎಂಬುವವನು ಮಠದ ಬಳಿ ಎರಡು ತೋಪು ಮಾಡಿಸಿದ್ದಾಗಿ ತಿಳಿಯುತ್ತದೆ. ಆ ಮಠ ಯಾವುದೆಂಬುದನ್ನು ದಾಖಲೆಗಳಲ್ಲಿ ಹೆಸರಿಸಿಲ್ಲ. ಅದು ಬಹುಶಃ ಮುರುಗಿ ಮಠ ಇದ್ದಿರಬೇಕು. ಪಾರುಪತ್ಯಗಾರ ಚಿಕ್ಕನರಸಪ್ಪ ವೆಂಕಟರಮಣಸ್ವಾಮಿ ದೇವಸ್ಥಾನ ಮಾಡಿದಾಗ ಅಲ್ಲೇ ಒಂದು ತೋಪು ಸಹ ಮಾಡಿಸಿದನು.

ದೇವಸ್ಥಾನಗಳು

ಬರಮಣ್ಣನಾಯಕನ ಕಾಲದಲ್ಲಿ ಕೆಲವು ದೇವಸ್ಥಾನಗಳು ಚಿತ್ರದುರ್ಗ ಮತ್ತು ಇತರ ಸ್ಥಳಗಳಲ್ಲಿ ನಿರ್ಮಾಣಗೊಂಡುವು, ಹಲವು ದೇವಾಲಯಗಳು ಜೀರ್ಣೋದ್ಧಾರಗೊಂಡುವು.

ಪ್ರಮೋದೂತ ಸಂವತ್ಸರದಲ್ಲಿ, ತನ್ನ ಪಟ್ಟವಾದ ಮರುವರ್ಷದಲ್ಲಿ (ಅಂದರೆ ೧೬೯೦ರಲ್ಲಿ), ಬರಮಣ್ಣನಾಯಕನು ಬೋಬೂರು (ಬಬ್ಬೂರು) ಗ್ರಾಮದಲ್ಲಿ ರಂಗಧಾಮ (ರಂಗನಾಥ) ದೇವಸ್ಥಾನವನ್ನು ಕಟ್ಟಿಸಿದನು. ಚಿಕ್ಕಬಳ್ಳಾಪುರದ ಯಂಗಟಪತಯ್ಯ ಎಂಬುವನು ಅದರ ನಿರ್ಮಾಣಕಾರ್ಯ ನಿರ್ವಹಿಸಿದನೆಂದೂ ಸ್ಥಳೀಯ ಗೌಡರು ಸಾಕ್ಷಿಯಾಗಿದ್ದರೆಂದೂ ಆ ದೇವಸ್ಥಾನದ ನವರಂಗದಲ್ಲಿ ನೆಲಕ್ಕೆ ಹಾಕಿರುವ ಕಲ್ಲುಚಪ್ಪಡಿಯಲ್ಲಿಯ ಶಾಸನದಿಂದ ವ್ಯಕ್ತಪಡುತ್ತದೆ. (ಈ ಶಾಸನವನ್ನು ಬಿ.ಎಲ್.ರೈಸ್ ಅವರು ೧೯೦೩ರಲ್ಲಿ ಪ್ರಕಟಿಸಿದಾಗ, ಈ ಶಾಸನ ಬರಮಣ್ಣನಾಯಕನದೆಂದಾಗಲಿ ಇದು ಆ ದೇವಾಲಯ ಕಟ್ಟಿಸಿದ್ದನ್ನು ಹೇಳುತ್ತದೆ

ಎಂದಾಗಲಿ ಗುರುತಿಸಿರಲಿಲ್ಲ. ಈಚಿನ ವರ್ಷಗಳಲ್ಲಿ ಇದನ್ನು ನಾನು ಮರುಪರಿಶೀಲಿಸಿದಾಗ, ರೈಸ್ ಅವರು ತ್ರುಟಿತವೆಂದು ತೋರಿಸಿದ್ದ ಪಾಠವನ್ನು ಓದಲು ಸಾಧ್ಯವಾಗಿ ಈ ಎಲ್ಲ ಅಂಶಗಳು ತಿಳಿದುಬಂದುವು).

ನೀರತಡಿ ಎಂಬ ಗ್ರಾಮದ ಶಾಸನದಲ್ಲಿ ಹೇಳಿರುವ ವಿವರವೊಂದು ಹೀಗಿದೆ: ಹಿಂದೊಮ್ಮೆ ಡಿಳ್ಳಿ ಸುಲ್ತಾನನ (ಅಂದರೆ ಔರಂಗಜೇಬನ) ಕಡೆಯ ಒಂದು ತುಕಡಿ ಬಂದು ನೀರತಡಿ ಗ್ರಾಮದಲ್ಲಿ ನಾಶಪಡಿಸಿದ್ದ, ತನ್ನ ಪೂರ್ವಿಕರು ಕಟ್ಟಿಸಿದ್ದ ಅಹೋಬಲ ನಾರಸಿಂಹ (ರಂಗನಾಥ) ಸ್ವಾಮಿಯ ದೇವಾಲಯವನ್ನು ಶಕ ೧೬೧೯ರಲ್ಲಿ (ಕ್ರಿ.ಶ. ೧೬೯೮ರಲ್ಲಿ) ಬರಮಣ್ಣನಾಯಕ ಜೀರ್ಣೋದ್ಧಾರ ಮಾಡಿದ್ದಲ್ಲದೆ, ಅದರ ವಿಗ್ರಹವನ್ನು ಸಹ ಮತ್ತೆ ಹೊಸದಾಗಿ ಮಾಡಿಸಿದನು ಮತ್ತು ಆ ದೇವರಿಗಾಗಿ ಹತ್ತಿರದಲ್ಲೇ ಇರುವ ಎಮ್ಮೆಹಟ್ಟಿ ಗ್ರಾಮವನ್ನು ದಾನವಾಗಿ ನೀಡಿದನು. ಈ ಸಂಗತಿ ನೀರತಡಿಯ ಶಾಸನದಿಂದ ವ್ಯಕ್ತವಾಗುತ್ತದೆ.

೧೬೯೮ರಲ್ಲಿ ಚಿತ್ರದುರ್ಗದ ಪೇಟೆಯಲ್ಲಿ ಏಕನಾಥಮ್ಮನ ಪಾದದ ಗುಡಿಯನ್ನು ಕಟ್ಟಲಾಯಿತು. ಹಾಗೇ ಅಮ್ಮನವರಿಗೆ ರಥೋತ್ಸವ ಬಂಡಿಸಿಡಿ ಸಹ ನಡೆದುವು. ಸಿಡಿ ಆಡುವವರಿಗೆ ದೊರೆ ಕೆಲವು ವಿಶೇಷ ಸವಲತ್ತುಗಳನ್ನು ನೀಡಿದ್ದನು; ಹಿತ್ತಾಳೆಯ ಚೌಡಿಕೆಗಳನ್ನು ಸಹ ಮಾಡಿಸಿಕೊಟ್ಟಿದ್ದನು.

ಈಗ ಚಿತ್ರದುರ್ಗದ ಹೃದಯಭಾಗದಲ್ಲಿರುವ ನೀಲಕಂಠೇಶ್ವರ ದೇವಾಲಯವನ್ನು ಇದೇ ದೊರೆಯ ಕಾಲದಲ್ಲಿ ದುರ್ಗದ ಪೇಟೆಯಲ್ಲಿ ಕಟ್ಟಲಾಯಿತು. ಇವನ ಕಾಲದಲ್ಲಿ ಚಿತ್ರದುರ್ಗದಲ್ಲಿ ಬಹುಶಃ ಪ್ರಪ್ರಥಮವಾಗಿ ಆದ ದೇವಾಲಯ ಇದೇ ಎಂದು ಕಾಣುತ್ತದೆ. ಅದು ಆದದ್ದು ೧೭೦೬ರಲ್ಲಿ.

೧೭೦೮ರಲ್ಲಿ ಭೀಮಸಮುದ್ರದ ಕೆರೆ ಏರಿಯ ಬಳಿ ಭೀಮೇಶ್ವರನ ಗುಡಿ, ತನ್ನ ಮಗಳು ಕಾಟಮ್ಮ ನಾಗತಿ ಹೆಸರಿನಲ್ಲಿ ದುರ್ಗದಲ್ಲಿ ವೆಂಕಟರಮಣ ಸ್ವಾಮಿ ದೇವಸ್ಥಾನ ಇವನ್ನು ಕಟ್ಟಿಸಲಾಯಿತು. ವೆಂಕಟರಮಣಸ್ವಾಮಿ ದೇವಸ್ಥಾನವನ್ನು ಮೊದಲಿಗೆ ಚಿಕ್ಕನರಸಪ್ಪ ಕಟ್ಟಿಸಿದ್ದಕ್ಕೆ ದೊರೆ ಭೋಗಮಂಟಪದ ಗುಡಿಯನ್ನೂ ಒಂದು ಕಲ್ಲುಬಾಗಿಲ ಮಂಟಪವನ್ನೂ ಸೇರ್ಪಡೆ ಮಾಡಿದನು. ಆದರೆ ಕುಮಾರಿ ಕಾಟಮ್ಮ ನಾಗತಿ ೧೭೦೯ರಲ್ಲಿ ನಿಧನಳಾದಳು. ೧೭೧೫ರಲ್ಲಿ ಈ ದೇವಸ್ಥಾನದ ವಿವಿಧ ಸೇವೆಯ ವೆಚ್ಚಕ್ಕಾಗಿ ದುರ್ಗದ ಉತ್ತರದಲ್ಲಿರುವ ಪಿಳ್ಳೇಕೆರೇನಹಳ್ಳಿ ಗ್ರಾಮವನ್ನು ದೊರೆ ದಾನವಾಗಿ ನೀಡಿದನೆಂದು ಆ ಗ್ರಾಮದಲ್ಲಿರುವ ಶಿಲಾಶಾಸನವೊಂದು ತಿಳಿಸುತ್ತದೆ.

೧೭೦೮ರಲ್ಲಿ ಈ ದೊರೆ ಮೇಲುದುರ್ಗದ ಮೇಲೆ ಗೋಪಾಲಕೃಷ್ಣ ದೇವರ ಗುಡಿಯನ್ನು ಮಾಡಿಸಿದನು. ಈ ದೇವರು ಮೊದಲಿಗೆ ಇಲ್ಲೇ ಕೆಳಗೆ ಶೃಂಗಾರತೋಟದ ಬಳಿಯಲ್ಲಿತ್ತು. ಇಲ್ಲೇ ಮೇಲೆ ದೇವಾಲಯ ಕಟ್ಟಿಸಿ ದೇವರ

ಪ್ರಾಣಪ್ರತಿಷ್ಠೆ ಮಾಡಿಸಲಾಯಿತು. ೧೭೧೭ರಲ್ಲಿ ದುರ್ಗದಲ್ಲಿ ಚಂದ್ರಶೇಖರ ದೇವಸ್ಥಾನ, ಕಾಳಹಸ್ತೀಶ್ವರ ದೇವಸ್ಥಾನ ಇವನ್ನೂ ಕಟ್ಟಿಸಲಾಯಿತು. ಬೆಟ್ಟದ ಮೇಲೆ ಸಂಪಿಗೆಸಿದ್ಧೇಶ್ವರನ ಗುಡಿಯಲ್ಲಿ ಪಲ್ಲಕ್ಕಿ ಚಾವಡಿ, ಏಕನಾಥಮ್ಮನ ಉಚ್ಚಾಯ ಕೂರಿಸುವ ಗಾಳಿಮಂಟಪ, ಉಚ್ಚಂಗಮ್ಮನ ದೇವಸ್ಥಾನ, ಅದರ ಉಪ್ಪರಿಗೆ ಮತ್ತು ಭವಂತಿ, ಆ ದೇವರ ವಿಗ್ರಹ ಇವನ್ನೂ ಸಹ ಮಾಡಿಸಲಾಯಿತು.

ಬರಮಣ್ಣನಾಯಕನ ಕಾಲದಲ್ಲಿ ಆದ ಪುಟ್ಟ ಇನ್ನೊಂದು ಗುಡಿ ಎಂದರೆ ನಾಗರದೊಣೆ ಪ್ರಾಣಲಿಂಗನ ಗುಡಿ.

ಇವನ ಕಾಲದಲ್ಲೇ ದಳವಾಯಿ ಚುಕ್ಕಣ್ಣ ಚೋಳಗಟ್ಟದ ಬಳಿ ಈಶ್ವರನ ದೇವಸ್ಥಾನ ಮಾಡಿಸಿದ್ದಲ್ಲದೆ, (ಹೊಸದುರ್ಗ ತಾಲ್ಲೂಕಿನ ಪ್ರಸಿದ್ಧ ಕ್ಷೇತ್ರವಾಗಿರುವ) ಹಾಲರಾಮೇಶ್ವರ ದೇವಸ್ಥಾನದ ಮುಂದೆ ಉಯ್ಯಾಲೆ ಕಂಬ, ಚುಕ್ಕಣ್ಣನಹಳ್ಳಿಯಲ್ಲಿ ಹನುಮಂತದೇವರ ದೇವಸ್ಥಾನ ಮತ್ತು ಈಶ್ವರ ದೇವಸ್ಥಾನ, ಇವನ್ನು ಸಹ ಮಾಡಿಸಿದನು. ಇವನು ಅಣಿಜೆಯ ಕುರುಬರ ಗೌಡ ಲಕ್ಕಣ್ಣನ ಮಗ ಎಂದು ಸಹ ದಾಖಲೆಗಳಲ್ಲಿ ಹೇಳಿದೆ.

ಗುಂಟನೂರು ಮಲ್ಲಪ್ಪ ನರಸಪ್ಪಯ್ಯನವರು ಮೇಲುದುರ್ಗದಲ್ಲಿ ಕಾಶಿವಿಶ್ವೇಶ್ವರನ ದೇವಸ್ಥಾನ ಮತ್ತು ಅದೇ ಹಾಲರಾಮೇಶ್ವರದ ಬಳಿ ಗಂಗಾದೇವಿ ಗುಡಿ ಇವನ್ನು ಮಾಡಿಸಿದರು. ಈ ನರಸಪ್ಪಯ್ಯ ಕುಟುಂಬ ಸಮೇತ ಕಾಶಿಗೆ ಯಾತ್ರೆ ಹೋಗಿ, ಅಲ್ಲಿ ಬರಮಣ್ಣನಾಯಕನ ಹೆಸರಲ್ಲಿ ಒಂದು ಉಪ್ಪರಿಗೆಯನ್ನು ಮಾಡಿಸಿದ ಎಂದು ದಾಖಲೆಗಳು ತಿಳಿಸುತ್ತವೆ. ಕಾಶಿಯಲ್ಲಿ ಅದು ಎಲ್ಲಿತ್ತು? ಈಗಲೂ ಅದು ಉಳಿದುಬಂದಿದೆಯೇ?– ಈ ಬಗ್ಗೆ ಪರಿಶೋಧನೆ ಅಗತ್ಯವಿದೆ.

ಪಾರುಪತ್ಯಗಾರ ಪಂಡರಹಳ್ಳಿ ದಾಸಣ್ಣ ಎಂಬುವನು ಪಂಡರಹಳ್ಳಿ(ಬೆಟ್ಟದಲ್ಲಿ) ರಂಗ(ನಾಥ)ಸ್ವಾಮಿ ದೇವಸ್ಥಾನವನ್ನು ಮಾಡಿಸಿದನು. ಈಗ್ಗೆ ಕೆಲವು ವರ್ಷಗಳ ಹಿಂದೆ ಆ ದೇವಸ್ಥಾನದ ಹಿಂಭಾಗದಲ್ಲಿರುವ ಬಂಡೆಯಲ್ಲಿ ನನಗೆ ದೊರೆತ ಕನ್ನಡದ ದೊಡ್ಡ ಅಕ್ಷರಗಳ ಒಂದು ಪಂಕ್ತಿಯ ಒಂದು ಶಾಸನ ದಾಸಣ್ಣ ಅದನ್ನು ಮಾಡಿಸಿದ್ದನ್ನು ಸಮರ್ಥಿಸುತ್ತದೆ.

ಹೀಗೇ ಮರಗಲ್ಲಯ್ಯ ಎಂಬಾತ ಮಾಚಿಕೆರೆಯಲ್ಲಿ ಬಸವಣ್ಣದೇವರ ಮತ್ತು ಹನುಮಂತದೇವರ ದೇವಸ್ಥಾನಗಳನ್ನು ಮಾಡಿಸಿದನು. ಕಳ್ಳಹುಣಿಚೆ ದೇಮಣ್ಣನು ಆಲಗಟ್ಟದಲ್ಲಿ ಕೋಟೆರಂಗಧಾಮು ದೇವಸ್ಥಾನ, ಕಳ್ಳಹುಣಿಚೆಯಲ್ಲಿ ಹನುಮಂತದೇವರ ದೇವಸ್ಥಾನ, ಇವನ್ನು ಮಾಡಿಸಿದನು. ಹಿಂದೆ ಹೇಳಿದ ಬಾಗೂರು ಪರದೇಶಿ ಹುಲಿಗೊಂದಿಯಲ್ಲಿ ನೆಲಗವಿಮಠ ಮಾಡಿಸಿದ ಕಾಲಕ್ಕೆ (೧೭೧೫ರಲ್ಲಿ)

ಈಶ್ವರನ ಗುಡಿಯನ್ನು ಸಹ ಮಾಡಿಸಿದನು. ಅದು ಯಾವುದು ಎಂದು ಈಗ ನಿರ್ದಿಷ್ಟವಾಗಿ ತಿಳಿಯದು. ಬೊಕ್ಕಸದ ತಿಮ್ಮಪ್ಪ ಎಂಬುವನು ಕೆಳಗೋಟೆಯಲ್ಲಿ ಬಸವಣ್ಣನ ಗುಡಿಯನ್ನು ಮಾಡಿಸಿದನು.

ಮಲ್ಲರಾಯ ಎಂಬುವನು ಏಕನಾಥೆಮ್ಮನ ದೇವಸ್ಥಾನದ ವಿಸ್ತರಣೆ ಅಥವಾ ಜೀರ್ಣೋದ್ಧಾರ; ಸಿದ್ಧೇಶ್ವರ ಗುಡಿಯ ಉಪ್ಪರಿಗೆ, ಎರಡು ಉಯ್ಯಾಲೆಕಂಬ ಮತ್ತು ದೀಪಮಾಲೆಕಂಬ ಇವುಗಳ ಜೀರ್ಣೋದ್ಧಾರ ಇವನ್ನು ಮಾಡಿಸಿದನು. ಇದೇ ಸಿದ್ಧೇಶ್ವರ ದೇವಸ್ಥಾನದಲ್ಲಿ ದೊಡ್ಡಮಲ್ಲಿ(?) ದೇವತೆಯ ದೇವಸ್ಥಾನ ಸಹ ಮಾಡಿದ್ದಾಗಿ ಹೇಳಲಾಗಿದೆ. ಇದು ಯಾವುದೆಂಬುದು ನಿರ್ದಿಷ್ಟವಿಲ್ಲ. ಈ ದೇವರಿಗೆ ಅಮೃತಪಡಿ, ನಂದಾದೀವಿಗೆ, ಪಾತ್ರ, ವಾಲಗ, ಹುವ್ವಿನತೋಟ ಇವನ್ನು ಸಹ ನೀಡಲಾಯಿತು.

ಇದೇ ಸಿದ್ಧೇಶ್ವರ ದೇವಸ್ಥಾನದಲ್ಲಿ ಸಿದ್ದಾಪುರದ ಗೌಡ ಬಸವಣ್ಣನ ಗುಡಿಯೊಂದನ್ನು ಮಾಡಿಸಿದ. ಅದು ಈಗಲೂ ಇರುವ ನಂದಿಯ ಚಿಕ್ಕಗುಡಿ ಆಗಿರಬೇಕು. ಇವನು ಹಿಡಿಂಬೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಸಹ ಮಾಡಿದಂತೆ ಕಾಣುತ್ತದೆ.

ಅರಮನೆಗಳು-ಚಾವಡಿಗಳು

ಬರಮಣ್ಣನಾಯಕನ ಕಾಲದಲ್ಲಿ ಅನೇಕ ಅರಮನೆಗಳು ನಿರ್ಮಾಣಗೊಂಡುವು. ದಾಖಲೆಗಳು ಆ ವಿವರಗಳನ್ನು ಹೀಗೆ ಕೊಡುತ್ತವೆ:

ಅವನ ಕಾಲದಲ್ಲಿ ಆದ ಅರಮನೆಗಳೆಂದರೆ ಚಿಕ್ಕ ಅರಮನೆ ಒಂದು, ಅವ್ವ ದೇಮವ್ವನ ಅರಮನೆ ಒಂದು, ತಂಗಿ ಭರಮವ್ವನ ಅರಮನೆ ಒಂದು, ದೊಡ್ಡ ಅರಮನೆ ಒಂದು. ಮೇಲೆ ಹೇಳಿದ ಅವ್ವ ದೇಮವ್ವ ದೊರೆಯ ತಾಯಿ ಇದ್ದಿರಬೇಕೆಂದು ಹಿಂದೆಯೇ ಹೇಳಲಾಗಿದೆ. ಆಕೆ ೧೭೭೦ಲರಲ್ಲಿ ದೈವಾಧೀನಳಾದಳು ಎಂದು ದಾಖಲೆಗಳು ಹೇಳುವುದರಿಂದ ಆಮುಂಚೆಯೇ ಆ ಅರಮನೆಯ ನಿರ್ಮಾಣವಾಗಿತ್ತು ಎಂಬುದು ಸ್ಪಷ್ಟ. ಈಗ ಮಹಾರಾಣಿ ಪದವಿಪೂರ್ವ ಕಾಲೇಜು ಇರುವ ಬಳಿ ದ್ಯಾಮವ್ವ ನಾಗತಿ ಅರಮನೆ ಎಂಬ ಹೆಸರಿನ ಕಟ್ಟಡವೊಂದು ಇದ್ದುದಾಗಿಯೂ ಅದನ್ನು ಕೆಲಕಾಲ ಟಿಪ್ಪು ಅರಮನೆ ಎಂದು ಕರೆಯಲಾಗುತ್ತಿತ್ತೆಂದೂ ಆಮೇಲೆ ಅದನ್ನು ಒಂದು ಸರ್ಕಾರಿ ಕಚೇರಿಯಾಗಿ ಬಳಸಿಕೊಳ್ಳಲಾಯಿತೆಂದೂ ಹಂಚಿನ ಭಾವಣಿಯ ಅದು ತುಂಬಾ ಶಿಥಿಲಸ್ಥಿತಿಯಲ್ಲಿದ್ದುದರಿಂದ ಆಮೇಲೆ ಕೆಡವಿಸಿ ಅದರ ಮರಮುಟ್ಟುಗಳನ್ನು ಹರಾಜುಮಾಡಲಾಯಿತೆಂದೂ ತಿಳಿದುಬರುತ್ತದೆ. ಇತರ ಅರಮನೆಗಳ ಬಗೆಗೆ ಸದ್ಯಕ್ಕೆ ಏನೂ ತಿಳಿಯದು.

ಅವಲ್ಲದೆ, ಕೆಲವು ಚಾವಡಿಗಳೂ ಆಗ ನಿರ್ಮಾಣಗೊಂಡುವು: ಅವು ಯಾವುವೆಂದರೆ, ಸದರ ಚಾವಡಿ ಮತ್ತು ಕುಮಾರ ಚಾವಡಿ. ಇವುಗಳ ಜೊತೆಗೆ, ಈರಗಾರರು ಮಾಡಿದ ಚಾವಡಿಗಳು: ರಣಮಂಡಲದ ದುರ್ಗದ ಮೇಲೆ ಎದುರು ಚಾವಡಿ ಮತ್ತು ಟೆಂಕಮುಖದ ಚಾವಡಿ.

ಈ ನಿರ್ಮಾಣಗಳ ಜೊತೆಗೆ, ಒಂದು ದೊಡ್ಡ ಬೊಕ್ಕಸದ ಮನೆಯನ್ನು ಸಹ ಮಾಡಿಸಲಾಯಿತು.

ಗುಡ್ಡೆಗುಡಿಗಳು

ಪಾಳೆಯಗಾರರ ಕಾಲದಲ್ಲಿ ಸಮಾಧಿಯನ್ನು 'ಗುಡ್ಡೆ' ಎಂದೂ ಸಮಾಧಿಗುಡಿಯನ್ನು 'ಗುಡ್ಡೆಗುಡಿ' ಎಂದೂ ಕರೆಯಲಾಗುತ್ತಿತ್ತು. ಬರಮಣ್ಣನಾಯಕನ ಹಿರಿಯ ಪತ್ನಿ ಬಾಣದ ದೊಡ್ಡಸಿದ್ದವ್ವನಾಗತಿಯ ಹಿರಿಯ ಮಗನಾಗಿದ್ದ ಜಂಪಣ್ಣನಾಯಕ ಅಥವಾ ದೊಡ್ಡಜಂಪಣ್ಣ ವಿವಾಹವಾದ ಕೆಲಕಾಲದ ಅನಂತರ (೧೭೧೧ರಲ್ಲಿ) ಮೈಲಿಬೇನೆಯಿಂದ ಮೃತನಾದಾಗ ಬರಮಣ್ಣನಾಯಕನು ಅವನಿಗೆ ಒಂದು ಗುಡ್ಡೆಗುಡಿಯನ್ನು ಮಾಡಿಸಿದನು. (ಈ ಜಂಪಣ್ಣನಾಯಕನ ಬಗ್ಗೆ ಇಲ್ಲಿ ಒಂದು ವಿಶೇಷ ಸಂಗತಿಯನ್ನು ಹೇಳಲೇಬೇಕು. ಮೈಲಿಬೇನೆಯಿಂದ ಅಕಾಲಿಕ ಮರಣಕ್ಕೆ ತುತ್ತಾದ ಇವನ ಬಗೆಗೆ ಶೋಕಗೀತೆಯ ರೂಪದ ಜನಪದಗೀತೆಗಳು ಹುಟ್ಟಿವೆ. ಹಿರಿಯ ಮಗನಾದ ಇವನು ಬದುಕಿದ್ದಿದ್ದರೆ, ಬರಮಣ್ಣನಾಯಕನ ತರುವಾಯ ದೊರೆಯಾಗುತ್ತಿದ್ದವನು ಹಿರೆಮೆದಕೇರಿನಾಯಕನಲ್ಲ, ಇವನು. ಆದರೆ ಅದು ಸಾಧ್ಯವಾಗಲಿಲ್ಲ, ಇತಿಹಾಸ ಬೇರೊಂದು ತಿರುವನ್ನು ತೆಗೆದುಕೊಂಡಿತು). ಹಾಗೇ (೧೭೦೮ರಲ್ಲಿ) ಮೃತಳಾದ ಅವ್ವ ದೇಮವ್ವನ ಗುಡ್ಡೆಗುಡಿ, ಕಾಟಪ್ಪನಾಯ್ಕನ ಗುಡ್ಡೆಗುಡಿ ಇವನ್ನು ಸಹ ಮಾಡಿಸಲಾಯಿತು. ಈ ಕಾಟಪ್ಪನಾಯಕ ನಿರ್ದಿಷ್ಟವಾಗಿ ಯಾರು ಎಂಬುದು ಸ್ಪಷ್ಟವಿಲ್ಲ. ಹಾಗೇ ಯಾರ ಯಾರ ಗುಡ್ಡೆಗುಡಿಗಳನ್ನು ಎಲ್ಲೆಲ್ಲಿ ಮಾಡಿಸಲಾಯಿತು? ಅವು ಈಗಲೂ ಇವೆಯೆ? – ಎಂಬುದೂ ಸದ್ಯಕ್ಕೆ ತಿಳಿಯದು.

ಗ್ರಾಮಗಳ ನವೀಕರಣ ಮತ್ತು ನವಗ್ರಾಮಗಳ ರಚನೆ

ದಾಖಲೆಗಳಲ್ಲಿ ಹೇಳಿರುವಂತೆ ಪಾಳೆಯಗಾರರ ಕಾಲದಲ್ಲಿ ಕೆಲವು ಹಳೆಯ ಗ್ರಾಮಗಳನ್ನು ತೆಗೆದು ಅಲ್ಲಿ ಹೊಸಗ್ರಾಮಗಳನ್ನು ಮಾಡಲಾಯಿತು. ಅವಕ್ಕೆ ಹೊಸ ಹೆಸರುಗಳನ್ನು ಇಡಲಾಯಿತು. ಹಾಗೇ ಹೊಸದಾಗಿಯೂ ಕೆಲವು ಗ್ರಾಮಗಳನ್ನು ಮಾಡಲಾಯಿತು. ಅವಕ್ಕೂ ಹೊಸ ಹೆಸರುಗಳನ್ನು ಇಡಲಾಯಿತು. ಈ ಬದಲಾವಣೆಗಳಿಗೆ ನಿರ್ದಿಷ್ಟ ಕಾರಣ ತಿಳಿಯದು. ಇಂಥ ಕೆಲವು ಗ್ರಾಮಗಳು ಬರಮಣ್ಣನಾಯಕನ ಕಾಲದಲ್ಲೂ ಅಸ್ತಿತ್ವಕ್ಕೆ ಬಂದುವು:

ಹೊಲತಿಹಾಳು ಎಂಬ ಹಳೆಯ ಗ್ರಾಮವನ್ನು ತೆಗೆದು ಅಲ್ಲಿ ಹೊಸದಾಗಿ ಗ್ರಾಮನಿರ್ಮಾಣಮಾಡಿ ಅದಕ್ಕೆ ಭೀಮಸಮುದ್ರ ಎಂದು ಹೆಸರಿಡಲಾಯಿತು. ಒಡವು ಬೇಲಾಳು ಈ ಗ್ರಾಮಗಳನ್ನು ಸಹ ಮುರಿದು ಹೊಸದಾಗಿ ನಿರ್ಮಿಸಲಾಯಿತು. ಅರಲಗೋಡನ್ನು ಮರಿದು ಮೆದಕೇರಿನಾಯ್ಕನಕೋಟೆ ಗ್ರಾಮವನ್ನು ಮಾಡಲಾಯಿತು. ಜಂಪಣ್ಣನಾಯಕನ ಕೋಟೆ, ಚಿಕ್ಕಸಿದ್ದವ್ವನಹಳ್ಳಿ, ಕುರುಬರಹಳ್ಳಿ ಗ್ರಾಮಗಳು ಸಹ ಹೊಸದಾಗಿ ಅಸ್ತಿತ್ವ ಪಡೆದುವು.

ಪಾರುಪತ್ಯಗಾರ ಸಿದ್ಧರಾಮಣ್ಣ ನವಿಲುಕಲ್ಲು ಎನ್ನುವ ಗ್ರಾಮಕ್ಕೆ ಬರಮಣ್ಣನಾಯಕನದುರ್ಗ ಎನ್ನುವ ಹೊಸ ಹೆಸರನ್ನು ಇಟ್ಟನು. ಅರಕೆರೆ, ಹೊಸಹಳ್ಳಿ ಗ್ರಾಮಗಳನ್ನು ತೆಗೆಸಿಹಾಕಿ, ರಂಗವ್ವನಹಳ್ಳಿಯನ್ನು ನಿರ್ಮಿಸಲಾಯಿತು.

ಆಧಾರಸೂಚಿ

೧. ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು – ಸಂ: ಡಾ. ಬಿ. ರಾಜಶೇಖರಪ್ಪ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೭.

೨. ಎಪಿಗ್ರಾಫಿಯ ಕರ್ನಾಟಿಕ ಸಂಪುಟ ೧೧ – ಸಂ: ಬಿ.ಎಲ್. ರೈಸ್, ಮೈಸೂರು ಸರ್ಕಾರ, ಬೆಂಗಳೂರು, ೧೯೦೩.

೩. ಮಹಾಲಿಂಗೇಂದ್ರ ವಿಜಯ – ಸಂ: ಡಾ. ಎಲ್. ಬಸವರಾಜು, ಶ್ರೀ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೭೧.

೪. ನಿರಂಜನವಂಶ ರತ್ನಾಕರ– ಭಾಗ ೧, ಸಂ. ಫ.ಗು. ಹಳಕಟ್ಟಿ, ವಿಜಾಪುರ, ೧೯೩೨.

ಅರ್ಹದ್ದಾಸನ ಅಟ್ಟಮತಂ

◈

ಡಾ॥ ಕೆ. ನಳಿನಿ ವೆಂಕಟೇಶ್

ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸದಲ್ಲಿ ೧೩-೧೪ನೆಯ ಶತಮಾನಗಳಲ್ಲಿ ಬಂದ ಕವಿ ಪರಂಪರೆಯಲ್ಲಿ ಕನ್ನಡಕ್ಕೆ ಚಿರಂತನವಾದ ಬೆಲೆಯುಳ್ಳ ಶಾಸ್ತ್ರ ಗ್ರಂಥಗಳನ್ನೂ ಶಾಸ್ತ್ರ ಪ್ರಧಾನವಾದ ಕಾವ್ಯಗಳನ್ನೂ ನೀಡಿದ್ದಾರೆ. ಅದೇ ಕಾಲಮಾನದಲ್ಲಿ ಬಂದ ಅರ್ಹದ್ದಾಸ ಎಂಬ ಕವಿಯು 'ಅಟ್ಟಮತಂ' ಎಂಬ ಶಾಸ್ತ್ರಗ್ರಂಥವನ್ನು ರಚಿಸಿದ್ದಾನೆ. ಈತನು ಜೈನಕವಿ ಕಾಲ ಸುಮಾರು ಕ್ರಿ.ಶ. ೧೩೦೦.

ಈ ಗ್ರಂಥದಲ್ಲಿ ಮಳೆ ಬರುವುದು, ಬಾರದಿರುವುದು, ಅದರ ಕಾರಣಗಳು ಬೆಳೆಯ ವಿಚಾರಗಳು, ಭೂಮಿಯಲ್ಲಿ ಎಲ್ಲಿ ನೀರು ದೊರಕುತ್ತದೆ, ಭಾವಿಯನ್ನು ಎಷ್ಟು ಆಳ ತೋಡಿದರೆ ಎಷ್ಟು ನೀರು ದೊರೆಯುತ್ತದೆ ಇತ್ಯಾದಿ ಮಳೆಗೆ ಹಾಗೂ ನೀರಿಗೆ ಸಂಬಂಧ ಪಟ್ಟ ಎಲ್ಲ ರೀತಿಯ ವಿಷಯಗಳನ್ನೂ ಪ್ರತಿಪಾದಿಸಿದ್ದಾನೆ.

ಕವಿಯು ಅಟ್ಟ, ಅಟ್ಟಗಾಂಕ, ಅಟ್ಟವೆಡಂಗ, ಅಟ್ಟಯ, ಅಟ್ಟಣ್ಣ ಇತ್ಯಾದಿಯಾಗಿ ತನ್ನನ್ನು ನಿರ್ದೇಶಿಸಿಕೊಂಡಿದ್ದಾನೆ. ಅಕ್ಷರ ಪ್ರಿಯ, ಸಮ್ಯಕ್ತ್ವರತ್ನಾಕರ, ಜಿನಧರ್ಮ ವತ್ಸಲ, ನಯಬಂಧು ಎಂದು ಮುಂತಾಗಿ ತನ್ನನ್ನು ಕುರಿತು ಹೇಳಿಕೊಂಡಿದ್ದಾನೆ. ಇವುಗಳಲ್ಲಿ ಕೆಲವು ಅವನ ಬಿರುದೂ ಇರಬಹುದು. ಆದರೂ 'ಅಕ್ಷರ ಪ್ರಿಯ' ಎಂಬುದು ಅವನ ಬಿರುದೋ ಅಥವಾ ತನ್ನ ಆಸಕ್ತಿಯನ್ನು ಕುರಿತೋ ಹೇಳಿಕೊಂಡಿರಬಹುದು, ಆದರೂ 'ಅಕ್ಷರ ಪ್ರಿಯ' ಎಂದು ಹೇಳಿಕೊಂಡಿರುವುದು ವಿಶೇಷವೆಂದೇ ಹೇಳಬೇಕು.

ಈ ಗ್ರಂಥದಲ್ಲಿ ೧೨ ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯವು ದೀರ್ಘವಾಗಿದ್ದು ಮಂಗಳಾಚರಣೆ. ಪಂಚಪರಮೇಷ್ಠಿಗಳ ಸ್ತುತಿ, ಯಕ್ಷ ಯಕ್ಷಿಯರ

ಸ್ತುತಿ, ಸರಸ್ವತಿ ಸ್ತುತಿ ಇದೆ. ಮತ್ತು ತನ್ನ ವಂಶಾವಳಿಯನ್ನು ದೀರ್ಘವಾಗಿ ಹೇಳಿದ್ದಾನೆ.

ಕವಿಯ ಮೂಲಪುರುಷ ಕಾಡಮರಸ. ಈತನ ಕಾಲ ಸು.ಕ್ರಿ.ಶ. ೯೬೧. ಈತನ ವಂಶಾವಳಿಯಲ್ಲಿ ಬಂದವನೇ ಈ ಗ್ರಂಥದ ರಚನಕಾರನಾದ ಜಟ್ಟ ಕವಿ.

ಈ ಕೃತಿಯಲ್ಲಿ ಸ್ಥಾವರ ಜಂಗಮಗಳಿಗೆ ಮಳೆ ಮತ್ತು ನೀರಿನ ಅವಶ್ಯಕತೆ. ಮಳೆಯ ಉತ್ಪತ್ತಿ. ಪೂರ್ವದ ಶಾಸ್ತ್ರಗ್ರಂಥಗಳು. ಮಳೆಯ ಕುರುಹನ್ನು ಹೇಳುವುದು. ದಶಧಾತುಗಳ ವರ್ಷೋತ್ಪತ್ತಿ, ಧೂತಲಕ್ಷಣ ಫಲ ಇತ್ಯಾದಿಗಳನ್ನು ಹೇಳುತ್ತಾನೆ.

ಸರಸ್ವತಿಯ ಸ್ತುತಿ

"ನಿಜ ಮಹಿಮೋತ್ತಮೆಯಾದ, ಮೃದುಪಾದಯುಗಳೆಯಾದ ವಾಗ್ವರ್ಥವು ನನ್ನ ಚಿತ್ತದಲ್ಲಿ ನಿಂತು ಮಳೆಯ ಉತ್ಪತ್ತಿ ಲಕ್ಷಣಗಳನ್ನು ನಮಗೆ ದಯೆಯಿಂದ ಸೂಚಿಸು" ಎಂದು ಸರಸ್ವತಿಯನ್ನು ಕವಿ ಬೇಡಿಕೊಳ್ಳುತ್ತಾನೆ.

'ಪುಸಿವರ ಶೂಲಂ' ಎಂದು ಹೆಸರು ಪಡೆದ 'ಅಭಯಾಂಬುಧಿ' ಎನಿಸಿದ ಜಟ್ಟನು ತನ್ನ ಮಗಳಾದ ಚಂದ್ರಲೇಖೆಗೆ 'ಮೇಘಾಡಂಬರ'ದಲ್ಲಿ ಅತಿಶಯೋಕ್ತಿಯಿಂದ ಕೂಡಿರಲು, ಆಕೆಗೆ ತಿಳಿಯುವಂತೆ ಕನ್ನಡದಲ್ಲಿ ಹೇಳಿದ್ದಾನೆ. ಈ ಮೇಘಾಡಂಬರದಲ್ಲಿ ಮಳೆಯ ಕುರುಹನ್ನು ಕ್ರಮವಾಗಿ ದಿನವೂ ಪ್ರೀತಿಯಿಂದ, ಪರೀಕ್ಷಿಸಿ ಹೇಳಿದರೆ ಅದು ಸತ್ಯವಾಗುತ್ತದೆ. ಅಂದರೆ ತನ್ನ ಪೂರ್ವಾಚಾರ್ಯರು ಹೇಳಿದುದನ್ನು ಹಾಗೆಯೇ ಹೇಳಿದೆ, ಅದನ್ನು ಪರೀಕ್ಷಿಸಿ ನಂತರ ನಿರೂಪಿಸಿದ್ದಾನೆ.

'ಪುರಾಣಾಚಾರ್ಯರು, ಅನಿಂದಿತ ಗುಣರ್' ಆದಂತಹ ವಿದ್ವಾಂಸರು ಹೇಳಿದ ಮಳೆಗಳ ಕುರುಹನ್ನು, ಚಂದಿರಭಟ್ಟನ ದಯದಿಂದ ಸ್ವಲ್ಪವೂ ಸಂದೇಹವಿಲ್ಲದಂತೆ ತಿಳಿಯಬೇಕು. ಅತಿಶಯವಾದ ರತ್ನೋಜ್ವಲ ಸಂಹಿತೆ, ಧನಕೀರ್ತಿ, ವರಹ ಮಿಹಿರ ಸ್ಮೃತಿ, ಗರ್ಗ್ಬಾಚಾರ್ಯರ ಗ್ರಂಥಗಳನ್ನು ತನ್ನ ಗ್ರಂಥಕ್ಕೆ ಆಧಾರವಾಗಿ ಪಡೆದಿದ್ದಾನೆ. ಅವರನ್ನು ವಿನಯವಾಗಿ ಸ್ಮರಿಸಿಕೊಳ್ಳುತ್ತಾನೆ. ಆದರೂ ಹಿಂದೆ ಹೇಳಿದಂತೆ ಅವುಗಳನ್ನು ಕುರುಡಾಗಿ ಅನುಸರಿಸದೆ ಮಳೆಯ ಕುರುಹನ್ನು ತಾನೂ ಪರೀಕ್ಷಿಸಿ, ಅದನ್ನು 'ಪೊಸತು ಮಾಡಿ' ಕನ್ನಡದಲ್ಲಿ ಹೇಳುತ್ತಾನೆ.

ಮಳೆ ಬರುತ್ತದೆ ಎಂಬುದನ್ನು ತಿಳಿಯಬೇಕಾದರೆ ಯಾವ ಯಾವ ಅಂಶಗಳನ್ನು ಗಮನಿಸಬೇಕು ಎಂಬುದನ್ನು ಹೇಳುತ್ತಾನೆ. ಈ ಭಾಗದಲ್ಲಿ ಹಲವಾರು ವಸ್ತುಗಳ- ಅಂದರೆ ಮಸೆದ ಆಯುಧಗಳು ತುಕ್ಕುಹಿಡಿಯುವುದು, ಸುಂಟರಗಾಳಿ ಬೀಸುವುದು ಇತ್ಯಾದಿ. ಪ್ರಾಣಿಗಳಾದ ತಗುಣೆ, ನಾಯಿ, ಹಾವುಗಳ ಸಂಕುಲ ಇವುಗಳಲ್ಲಿ ಆಗುವ ಬದಲಾವಣೆಗಳು. ಪಿಂಗಲಿ, ಪೋದಗೆ ಶಕುನದ ಶಕುನ ಈ ಪ್ರಾಣಿಗಳ

ಚಲನವಲನಗಳು ಇತ್ಯಾದಿಗಳಿಂದ ಮಳೆ ಬರುವ ಹಾಗೂ ಬಾರದಿರುವುದನ್ನು ತಿಳಿಯುವ ವಿಧಾನಗಳು. ಪ್ರಾಕೃತಿಕವಾಗಿ ಆಗುವ ಬದಲಾವಣೆ, ಸ್ವಭಾವಗಳಿಂದ ಅರಿಯುವ ವಿಧಾನಗಳನ್ನು ಹೇಳಿದ್ದಾನೆ.

ಛಾಯಾಚಕ್ರ

ಗಾಳಿಯು ಯಾವ ದಿಕ್ಕಿನಿಂದ ಬೀಸುತ್ತದೆ ಎಂಬುದನ್ನು ತಿಳಿಯಲು ರೈತನೇ ಒಂದು ಸರಳ ಪ್ರಯೋಗವನ್ನು ಮಾಡುವುದು ಹೇಗೆಂದು ವರ್ಣಿಸುತ್ತಾನೆ. ಇಂದ್ರ, ಕುಬೇರ, ಸಂಕರ ದಿಶೆಯಿಂದ ಗಾಳಿ ಬೀಸಿದರೆ ಒಳ್ಳೆಯ ಮಳೆಯಾಗುತ್ತದೆ. ವರುಣ ದಿಕ್ಕಿನಿಂದ ಗಾಳಿ ಬೀಸಿದರೆ ಅಲ್ಪವೃಷ್ಟಿ, ಅನಿಲ, ಅಗ್ನಿ ಮಂಡಲದಿಂದ ಸುವೃಷ್ಟಿಯಾಗುತ್ತದೆ. ನೈರುತ್ಯದಲ್ಲಿ ಮಳೆ ಇಲ್ಲ.

ಆಷಾಢ ಪೂರ್ಣಿಮೆಯ ಪೂರ್ವಯಾಮದಲ್ಲಿ ಶ್ರಾವಣ ಮಾಸದಿಂದ ಕಾರ್ತಿಕ ಮಾಸದವರೆಗೂ ಬಲವಾದ ಗಾಳಿ ಬೀಸಲು, ಆ ಜಾವದ ತಿಂಗಳುಗಳಲ್ಲಿ ಮಳೆ ಬರುತ್ತದೆ. ಗಾಳಿಯು ಎಡದಿಂದ ಬೀಸಿದರೆ ಮಳೆ ಬರುವುದಿಲ್ಲ. ಹೀಗೆ ಮೋಡಕಟ್ಟಿ ಮಳೆ ಬರುವ ಮೊದಲು ಗಾಳಿಯ ಚಲನೆ ಎಷ್ಟು ಮುಖ್ಯ ಎಂಬುದನ್ನು ತೋರಿಸಿದ್ದಾನೆ.

ಪ್ರಯೋಗ :– ಒಂದು ಮೊಳ ಬಟ್ಟೆಯನ್ನು ತೆಗೆದುಕೊಂಡು, 'ಜನಸಂಖ್ಯಾ ಹಸ್ತ' ಎಂದರೆ ೨೪ ಹಸ್ತ ಅಳತೆಯ ಕೋಲಿನ ತುದಿಯಲ್ಲಿ ಕಟ್ಟಬೇಕು. ಈ ಬಾವುಟವನ್ನು ಹುಣ್ಣಿಮೆಯ ಪೂರ್ವಯಾಮದಲ್ಲಿ ಬಾವುಟದಿಂದ ಗಾಳಿಯು ಯಾವ ದಿಕ್ಕಿನಿಂದ ಬೀಸುತ್ತದೆ ಎಂಬುದನ್ನು ತಿಳಿಯಬೇಕು.

ಆಲ, ಇಪ್ಪೆ, ಗೇರು, ಅರಳಿ, ಅದಿರ್ಮುತ್ತೆ, ಹಾಲೆ, ಮುತ್ತ, ಮೊಲ್ಲೆ ಇತ್ಯಾದಿ ಮರಗಿಡಗಳು ಚೆನ್ನಾಗಿ ಚಿಗುರಿ ಹೂಕಾಯಿಗಳನ್ನು ಬಿಟ್ಟರೆ ನಾನಾ ವಿಧವಾದ ಧಾನ್ಯಗಳು ಸಮೃದ್ಧವಾಗಿ ಬೆಳೆಯುತ್ತದೆ.

ಭೂಜಾತ ಫಲದಲ್ಲಿ ನಾನಾ ವಿಧವಾದ ಧಾನ್ಯಗಳನ್ನು ಹೆಸರಿಸುತ್ತಾನೆ. ಕೆಂಪಾದ ಅಶೋಕವೃಕ್ಷದ ಚಿಗುರಿನ ಶೋಭೆ, ಬತ್ತ, ಆಲ, ಸಜ್ಜೆ, ಸಿರಿಸ, ಗೋಧಿ, ನೇರಳೆ, ಎಳ್ಳು, ತೊಗರಿ, ಕರ್ವು, ಜೋಳ ಹೀಗೆ.

ವೈಢೂರ, ಬೆಳ್ಳಿ, ಬಂಗಾರ, ವಜ್ರ ಇತ್ಯಾದಿಗಳು ವೃದ್ಧಿಸುತ್ತವೆ.

ಕುದುರೆ, ಕುರಿ, ಆನೆ, ಗೋವುಗಳು ವೃದ್ಧಿಯಾಗುತ್ತದೆ. ರಾಜ, ಮಂತ್ರಿ, ಬ್ರಾಹ್ಮಣ, ವೈಶ್ಯ, ಗಾಣಿಗ, ಬಡಗಿ ಮೊದಲಾದ ೫ ಬಗೆಯ ಕೆಲಸಗಾರರು ಇವರುಗಳ ಏಳಿಗೆಯಾಗುತ್ತದೆ. ಹೀಗೆ ಮಳೆಯಿಂದ ಆಗುವ ಉಪಯೋಗಗಳು ಹಲವಾರು.

ಪ್ರಕೃತಿಯ ಚಕ್ರ ಪೂರ್ಣಗೊಳ್ಳುತ್ತದೆ. ಒಂದನ್ನು ಬಿಟ್ಟು ಒಂದು ಇರಲಾರದು ಎಂಬುದನ್ನು ಕವಿ ಹೇಳುತ್ತಾನೆ.

ಇಷ್ಟೆ ಅಲ್ಲದೆ ಅಡವಿಯ ವೃಕ್ಷಗಳು ಹೂಬಿಟ್ಟು ಕಾಯಿ-ಹಣ್ಣಾದರೆ ಧಾನ್ಯಗಳು ಕೆಡುವುದಿಲ್ಲ ಎಂದು ಹೇಳುತ್ತಾನೆ.

೧. ಭೂಮಿಯಿಂದಾಗುವ ಉತ್ಪಾತ

೨. ಮೋಡದಿಂದಾಗುವ ಉತ್ಪಾತ

೩. ಗ್ರಹಗಳಿಂದಾಗುವ ಉತ್ಪಾತ

ಇಲ್ಲಿ ಕವಿ ಒಂದು ಮಾತನ್ನು ಹೇಳುತ್ತಾನೆ.

ಸ್ಥಾವರ ಜಂಗಮಗಳು ಆತ್ಮಗುಣಗಳನ್ನು ಬಿಟ್ಟು ವಿಕೃತ ಗುಣಗಳಿಂದ ಕೂಡಿದ್ದರೆ ಸಾವು ಕೇಡುಗಳಲ್ಲದೆ ಹಲವು ವಿಧದ ಪರಿಭವಗಳುಂಟಾಗುತ್ತವೆ ಎನ್ನುತ್ತಾನೆ. ಇಲ್ಲಿ ಮನುಷ್ಯನ ಸ್ವಭಾವ ಒಳ್ಳೆಯತನ, ಕೆಟ್ಟತನ ಕೂಡ ಪ್ರಕೃತಿಯ ಮೇಲೆ ಪರಿಣಾಮ ಬೀರುತ್ತದೆ ಎಂಬುದಾಗಿ ಹೇಳುತ್ತಾನೆ.

ಅಂತರಿಕ್ಷೋತ್ಪಾತದಲ್ಲಿ ರಾತ್ರಿಯಲ್ಲಿ ಕಾಮನಬಿಲ್ಲು ಕಾಣುವುದು, ನಡುರಾತ್ರಿಯಲ್ಲಿ ಧೂಮಕೇತು ಕಾಣುವುದು, ಬಾಲದ ಮೀನು ಹರಿಯುವುದು ಉತ್ಪಾತಗಳು.

ದಿವ್ಯೋತ್ಪಾಕದಲ್ಲಿ ಸೂರ್ಯಚಂದ್ರರನ್ನು ಹಸಿರು ಪ್ರಭಾವಳಿ ಆವರಿಸಿದ್ದರೆ ಮಳೆಯಾಗುತ್ತದೆ. ಬೇರೆ ಬಣ್ಣದಲ್ಲಿ ಪ್ರಭಾವಳಿಯಿದ್ದರೆ ಭಯ ಮಾಡುತ್ತದೆ.

ಇಂದ್ರಧನು ಲಕ್ಷಣದಲ್ಲಿ ಬಿಳಿ, ಹಸಿರು, ಕೆಂಪು, ಹಳದಿ ಬಣ್ಣದ ಬೆಳಕಿನಿಂದ ಕೂಡಿದ ಇಂದ್ರಧನು ಇದ್ದು ಮೋಡಗಳು ಸೇರಿದ್ದರೆ ಜೋರಾದ ಮಳೆ ಬರುವುದು.

ಮಿಂಚುಗಳ ಲಕ್ಷಣದ ವಿವರ.

ರಟ್ಟನು ನಾಲ್ಕು ರೀತಿಯ ಮಿಂಚುಗಳನ್ನು ವಿವರಿಸುತ್ತಾನೆ. ಅವುಗಳಲ್ಲಿರುವ ಬಣ್ಣದ ವ್ಯತ್ಯಾಸವನ್ನು ಹೇಳಿ, ಮಳೆ ಎಷ್ಟು ಪ್ರಮಾಣದಲ್ಲಿ ಬರುತ್ತದೆ ಎಂಬುದನ್ನು ಹೇಳುತ್ತಾನೆ.

ಮಿಂಚಿನ ಬಣ್ಣ ಕಪ್ಪಾಗಿದ್ದೆ	-	ಭೀಕರ ಕ್ಷಾಮ ಬರುತ್ತದೆ.
ಮಾಸಲು ಕೆಂಪು ವರ್ಣವಿದ್ದರೆ	-	ಗಾಳಿ ಬೀಸುತ್ತದೆ.
ಅರುಣರಾಗವಾದರೆ	-	ಕ್ಷಾಮ ಬರುತ್ತದೆ.
ಕನಕವರ್ಣವಾದರೆ	-	ಒಳ್ಳೆಯ ಮಳೆ ಬರುತ್ತದೆ.

ಮಳೆಯ ಲಕ್ಷಣಗಳು

ಯಾವ ಯಾವ ದಿಕ್ಕಿನಿಂದ ಮಿಂಚು ಬಂದರೆ ಮಳೆ ಬರುವುದಿಲ್ಲ ಎಂದು ಹೇಳುತ್ತಾನೆ. ಹಾಗೆಯೇ ಆಗ್ನೇಯ, ದಕ್ಷಿಣ, ನೈರುತ್ಯ ಹಾಗೂ ವಾಯುವ್ಯ ದಿಕ್ಕುಗಳಾದ ಮಳೆ ಬರುವುದಿಲ್ಲ. ಮಿಕ್ಕ ನಾಲ್ಕು ದಿಕ್ಕುಗಳಿಂದ ಮಿಂಚಿದರೆ ಮಳೆ ಬರುತ್ತದೆ. (ಮಿಂಚಿನಲ್ಲಿ ಹೀಗೆ ವೈವಿಧ್ಯಮಯವಾದ ಬಣ್ಣಗಳು ಇರುತ್ತವೆ ಎಂಬ ಅಂಶ ನಮ್ಮ ಗಮನಕ್ಕೆ ಬರುವುದಿಲ್ಲ). ಕವಿ ಪ್ರಕೃತಿಯನ್ನು ಎಷ್ಟು ಸೂಕ್ಷ್ಮವಾಗಿ ಅವಲೋಕಿಸಿದ್ದಾನೆ ಎಂಬುದ ತಿಳಿಯುತ್ತದೆ.

'ಮೇಘದ ಪ್ರಥಮ ಗರ್ಭಲಕ್ಷಣಂ' ವಿಭಾಗದಲ್ಲಿ, ಮೇಘದ ಪ್ರಥಮಗರ್ಭಕ್ಕೆ ಸಂಬಂಧಿಸಿದಂತೆ ಹಲವಾರು ರೀತಿಯ ಮಳೆಯ ಬಗೆಗೆ ಹೇಳುತ್ತಾನೆ. ನಂತರ ಮಳೆಯ ಬಗೆಗೆ ಹೇಳುತ್ತಾನೆ. ನಂತರ ಮಳೆಯ ಪ್ರಮಣದ ಬಗೆಗೆ ಈ ರೀತಿ ಹೇಳುತ್ತಾನೆ.

ಅದರ ಅಳತೆ ಹೀಗಿದೆ :– ೧೬ ಕುಡಿತೆಗಳ ನೀರಿನ ಪ್ರಮಾಣ ಸೇರಿದರೆ ಒಂದು ಕೊಳಗ. ಇಂತಹ ನಾಲ್ಕು ಕೊಳಗಗಳು ಸೇರಿದರೆ ಒಂದು ದ್ರೋಣ ಸಂಖ್ಯೆ. ಈ ಅಳತೆಯಲ್ಲಿ ವಿವಿಧ ಮಳೆಗಳ ಪ್ರಮಾಣಗಳನ್ನು ಹೇಳುತ್ತಾನೆ.

ಮುಂದೆ ಪರಿವೇಷ ಮೊದಲಾದ ದಶಧಾತುಗಳು, ಅಮಾವಾಸ್ಯೆಯಲ್ಲಿ ಉಂಟಾಗುವ ಲಕ್ಷಣಗಳು, ಇಲ್ಲಿ ಕಾಲಕ್ಕೆ ಸಂಬಂಧಿಸಿದಂತೆ ಅಂದರೆ ಆಯಾ ಮಾಸಗಳ ಅಮಾವಾಸ್ಯೆಗಳಲ್ಲಿ ಬೀಳುವ ಮಳೆಯ ಬಗೆಗೆ ಹೇಳುತ್ತಾನೆ.

ಅಟ್ಟಕವಿಯು ಮಳೆ ಬರುವ ಅಥವಾ ಬಾರದೆ ಇರುವ ಬಗೆಗೆ ಮಾತ್ರ ಹೇಳುವುದಿಲ್ಲ. ಮಳೆ ಬಂದು ಬೆಳೆಯಾದರೆ, ಆ ಪದಾರ್ಥಗಳ ವಿಷಯ ಮಾತ್ರ ಹೇಳುವುದಿಲ್ಲ. ಯಾವ ಯಾವ ಮಾಸಗಳಲ್ಲಿ ಶೇಖರಿಸಿರುವುದನ್ನು ಯಾವಾಗ ಮಾರಬೇಕು ಎಂಬುದನ್ನು ವಿವರವಾಗಿ ಪ್ರತಿಯೊಂದು ಪದಾರ್ಥವನ್ನು ಹೆಸರಿಸಿ ತಿಳಿಸುತ್ತಾನೆ.

ಆಷಾಢ ಅಮಾವಾಸ್ಯೆಯಲ್ಲಿ ಧ್ಯಾನಗಳು, ಫಲಗಳು, ತೈಲ, ಮಧು, ತುಪ್ಪ ಗಂಧ ಇವುಗಳಲ್ಲಿ ೨ ತಿಂಗಳಲ್ಲಿ ಮಾರಬೇಕು. ಶ್ರಾವಣದಲ್ಲಿ : ಚಿನ್ನ, ಬೆಳ್ಳಿ, ಮಣಿ, ಮೌಕ್ತಿಕ, ವಸ್ತ್ರ, ಕುದುರೆ– ಇವುಗಳನ್ನು ೫ನೇ ಮಾಸದಲ್ಲಿ ಮಾರಬೇಕು.

ಭಾದ್ರಪದದಲ್ಲಿ : ಲೋಹ, ಚವರಿ, ಕಬ್ಬಿಣ– ೩ನೆಯ ತಿಂಗಳಲ್ಲಿ ಮಾರಬೇಕು.

ಆಶ್ವಯುಜ : ಮಣಿ, ನೂಲು, ಸೆಣಬು, ಕಂಬಳಿ, ಕುಂಕುಮ, ಕುಸುಬೆ–೬ನೆಯ ತಿಂಗಳಲ್ಲಿ ಮಾರಿದರೆ ಎರಡರಷ್ಟು ಲಾಭ ಬರುತ್ತದೆ ಎಂದು ಹೇಳುತ್ತಾನೆ.

ಹೀಗೆ ಫಾಲ್ಗುಣ ಮಾಸದವರೆಗೂ ಹೇಳುತ್ತಾನೆ. ಅಷ್ಟೇ ಅಲ್ಲದೆ ಹೀಗೆ ಹೇಳಿದ ಅಮಾವಾಸ್ಯೆಗಳಲ್ಲಿ ಪಾಪಿಗಳೊಂದಿಗೆ ಸೇರಿದರೆ ಮಳೆ ಕಡಿಮೆಯಾಗುತ್ತದೆ. ಪಾಪೇತರರೊಂದಿಗೆ ಇದ್ದರೂ, ಕೋಪಿಸಿಕೊಳ್ಳಬಾರದು, ಕೋಪವು ಕೆಟ್ಟದು ಎಂದು ಹೇಳುತ್ತಾನೆ. ಎಲ್ಲಿಯೂ ನೀತಿಯನ್ನು ಮೀರಬಾರದು ಎಂಬುದು ಕವಿಯ ಕಳಕಳಿ.

ಅಮಾವಾಸ್ಯೆಯ ಪರಿವೇಷದಂತೆಯೇ, ಹುಣ್ಣಿಮೆಯ ಪರಿವೇಷವನ್ನು ಹೇಳುತ್ತಾನೆ.

'ಮುಗಿಲ್ಗಳ ನಾಮಾಧ್ಯಾಯಂ' ಅಧ್ಯಾಯದಲ್ಲಿ ಕಾರ್ಮುಗಿಲ್ಗಳು ಆಳುವ ದೇಶಗಳ ಹೆಸರು ಹೇಳುತ್ತಾನೆ.

ತುಹಿನಗಿರಿಯಿಂದ ಗಂಗೆಯವರೆಗೆ, ಮುಂದಾಕಿನಿಯಿಂದ ಗಂಗೆಯವರೆಗೆ ಮಳೆ ಸುರಿಸುವ ಮೇಘಗಳಿಗೆ ಬ್ರಾಹ್ಮಣವೆಂದು ಹೆಸರಿಸಿದ್ದಾನೆ.

ಕೆಂಪಾದ ಜಾಜಿ ಬಣ್ಣದ ಮೇಘ ಮಂಡಲದಿಂದ ಗರ್ಜಿಸಿ, ಮಿಂಚಿನಿಂದ ಕೂಡಿದ ಕ್ಷತ್ರಿಯ ಮೇಘದಿಂದ ಮಳೆಯಾಗುತ್ತದೆ.

ವಿಂಧ್ಯಗಿರಿಯಿಂದ ಗೋದಾವರಿಯವರೆಗೆ ಆನೆ, ಮಕರವನ್ನು ಹೋಲುವ ವೈಶ್ಯ ಮೇಘಗಳಿಂದ ವೃಷ್ಟಿ ಕರೆಯುತ್ತದೆ.

ಗೋದಾವರಿಯಿಂದ ಲಂಕೆಯವರೆಗೆ ಶೂದ್ರ ಘನವು ಮಳೆ ಸುರಿಸುತ್ತದೆ. ಹೀಗೆ ಹದಿನೈದು (೧೫) ಬಗೆಯ ಮೋಡಗಳಿಂದ ಮಳೆ ಬರುವುದನ್ನು ಜಟ್ಟನು ವರ್ಣಿಸುತ್ತಾನೆ. ಕವಿಯ ವಿಶೇಷವೆಂದರೆ ತಾನು ವಾಸಿಸುವ ಸುತ್ತಲಿನ ಪರಿಸರವನ್ನು ಮಾತ್ರ ಹೇಳುತ್ತಿಲ್ಲ. ಇಡೀ ಭಾರತ ಭೂಮಿಯ ಹವಾ ವೈಪರೀತ್ಯವನ್ನು ಕುರಿತು ಹೇಳುತ್ತಾನೆ.

ಬಿಳಿಯ ಮುಗಿಲ್ಗಳ ಪಟ್ಟಿಯ
ತೊಳೆಯಂ ಪುಂಜಿಸಿದ ಮಾಟಕ್ಕೆಯಿಂದಂಬಂರದೊಳ್
ತೊಳತೊಳಗುವ ಮಿಂಚಿಂದಂ
ದಿಳೆಯೊಳ್ ಜಲಪ್ರಳಯಮಪ್ಪಿನಂ ಮಟಿಕೊಳ್ಳುಂ

ಹೀಗೆ ಕಾವ್ಯಾತ್ಮಕವಾಗಿ ಬರೆಯುತ್ತಾನೆ.

ಹಂಸೆಯ ಸಂಕುಳದಂದದ ಮೇಘ, ಗಿಳಿಗಳ ಬಣ್ಣದ, ವಟಫಲಗಳ ಬಣ್ಣದ, ಹುಲ್ಲುಗಳ ಹೊಸ ಬಣ್ಣದ, ಹುಲ್ಲುಗಳ ಹೊಸ ಬಣ್ಣದ, ಆಲದಮರದ ರೀತಿಯ ವಿಶಾಲತೆಯ ಹೊಂದಿದ ಮೇಘವು ಮಳೆಯನ್ನು ಸುರಿಸುತ್ತದೆ. ಇಷ್ಟೆಲ್ಲ ಹೋಲಿಕೆಗಳನ್ನು ನಮಗೆ ಗೊತ್ತಿರುವ ಬಣ್ಣಗಳು, ತಿಳಿದಿರುವ ಪದಾರ್ಥಗಳು, ವೃಷ ಹೀಗೆ ನಿರೂಪಿಸುತ್ತಾನೆ. ಮೋಡಗಳಲ್ಲೂ ಇಷ್ಟೊಂದು ವೈವಿಧ್ಯತೆ ಇದೆ, ವಿವಿಧ

ಆಕಾರಗಳು ಹಾಗೂ ಬಣ್ಣಗಳಿವೆ. ಆ ಮೂಲಕ ಅದಕ್ಕೊಂದು ಸೌಂದರ್ಯವಿದೆ ಎಂಬುದನ್ನು ನಮ್ಮ ಗಮನಕ್ಕೆ ತರುತ್ತಾನೆ.

ಹನ್ನೊಂದನೆಯ ಅಧ್ಯಾಯದಲ್ಲಿ "ಜೀವಾವಾಪ ಸಂಧಾನ"ವು ದೀರ್ಘವಾಗಿದೆ. ನೀರಧಾರೆಗಳ ಸ್ವರೂಪದಿಂದ ಹಿಡಿದು, ಎಷ್ಟು ಆಳ ಬಾವಿಯನ್ನು ತೋಡಿದರೆ ಎಷ್ಟು ಪ್ರಮಾಣದ ನೀರು ದೊರೆಯುತ್ತದೆ ಎಂಬುದನ್ನು ದೀರ್ಘವಾಗಿ ವಿವರಿಸಿದ್ದಾನೆ. ಖಚಿತವಾದ ಅಳತೆಗಳನ್ನು ಹೇಳುತ್ತಾನೆ. ಬಾವಿಯ ಸುತ್ತಲೂ ಹೇಗೆ ಶುದ್ಧವಾಗಿ ಇಡಬೇಕು, ನೀರು ರುಚಿಕರವಾಗಿರುವಂತೆ ಮಾಡುವ ವಿಧಾನ, ಬಾವಿಯ ಸಮೀಪದಲ್ಲಿ ಇರಬಾರದ ಮರಗಳು, ಭೂಮಿಯೊಳಗಿನ ಅರೆಕಲ್ಲನ್ನು ಮೃದುವಾಗಿಸಿ ಒಡೆಯುವ ಕ್ರಮ, ಉಳಿ ಮೊದಲಾದ ಕಲ್ಲು ಒಡೆಯುವ ಆಯುಧಗಳಿಗೆ ನೀರೂಡುವ ಕ್ರ-ಹೀಗೆ ಎಲ್ಲವನ್ನೂ ವಿವರಿಸಿದ್ದಾನೆ. ಅಂದರೆ ಒಂದು ಬಾವಿ ತೋಡಿ ನೀರು ಬಂದರೆ ಮಾತ್ರ ಸಾಲದು. ಅದನ್ನು ಜೋಪಾನವಾಗಿ ನೋಡಿಕೊಳ್ಳಬೇಕಾದ ವಿಧಾನವನ್ನು ಸಹ ಹೇಳಿದ್ದಾನೆ. ಆ ಸೂಚನೆಗಳು ಇಂದಿಗೂ ಸಹ ಪ್ರಸ್ತುತವಾಗಿದೆ.

ಕೇವಲ ಬಾವಿ ತೋಡಿದಾಕ್ಷಣ ಕೆಲಸ ಮುಗಿಯಲಿಲ್ಲ. ಅದನ್ನು ಹೇಗೆ ರುಚಿಕರವಾಗಿ ಮಾಡಬೇಕು ಎಂಬ ಬಗೆಯನ್ನೂ ತಿಳಿಸಿದ್ದಾನೆ. ನೆಲ್ಲಿ ಚೆಟ್ಟು, ಅಸಿತಾಂಜನ, ಮುತ್ತೆ ಇಪ್ಪೆ, ಚೆಲ್ಲಗೊಟ್ಟಿ (ಕತಕ ಬೀಜ), ಪೊಸ ಸೀರೆಯ ಬಿತ್ತಿನೊಳಾದ ಬೂದಿ ಇವುಗಳನ್ನು ಬಾವಿಯ ನೀರಿನಲ್ಲಿ ಬೆರೆಸಿದರೆ ನೋರು ಅಮೃತೋಪಮವಾಗುತ್ತದೆ ಎಂದು ಬಾವಿಯ ನೀರನ್ನು ರುಚಿಕರ ಮಾಡುವ ವಿಧಾನವನ್ನು ತಿಳಿಸುತ್ತಾನೆ.

ಮಾವು, ಬಕುಳ, ತಿಲಕ, ಪುನ್ನಾಗ ಇತ್ಯಾದಿ ಹಲವು ಮರಗಳು ಬಾವಿಯಿಂದ ದೂರವಿರಬೇಕು. ಮತ್ತಿ, ಮುತ್ತುಗ. ಬದರಿ ಇತ್ಯಾದಿ ಕೆಲವು ವೃಕ್ಷಗಳು ಬಾವಿಗೆ ಹತ್ತಿರವಾಗಬೇಕು ಎಂದು ಹೇಳುತ್ತಾನೆ.

ಹೀಗೆ ಬಾವಿಯ ಅನೇಕ ಉಪಯೋಗಗಳು, ಅದನ್ನು ಬಳಸುವ ವಿಧಾನ, ರಕ್ಷಸಿಕೊಳ್ಳಬೇಕಾದ ಅವಶ್ಯಕತೆ ಹೀಗೆ ಎಲ್ಲವನ್ನೂ ತಿಳಿಸುತ್ತಾನೆ. ಕವಿ ಅಟ್ಟನು ಮಳೆಯ ವಿಚಾರಗಳನ್ನು ಹೇಳುವಾಗ ಮಳೆ ಬರುವುದು ಅಥವಾ ಬಾರದೆ ಇರುವುದನ್ನು ಮಾತ್ರ ಹೇಳುವುದಿಲ್ಲ. ವ್ಯವಸಾಯಕ್ಕೆ ಸಂಬಂಧ ಪಟ್ಟಂತೆ ಯಾವ ಯಾವ ಮಳೆ ಬಂದಾಗ ಯಾವ ಯಾವ ಬೀಜವನ್ನು ಬಿತ್ತಬೇಕು. ಬೆಳೆ ಬೆಳೆಯ ಬೇಕು ಎಂಬುದನ್ನು ತಿಳಿಸುತ್ತಾನೆ. ಬೆಳೆ ಬಂದ ಮೇಲೆ ವರ್ತಕರು ಯಾವ ರೀತಿಯಲ್ಲಿ ಶೇಖರಿಸಬೇಕು. ಅದನ್ನೂ ಯಾವಾಗ ಲಾಭದೊಂದಿಗೆ ಮಾರಾಟ ಮಾಡಬೇಕು, ಎಂಬುದನ್ನು ಹೇಳುತ್ತಾನೆ. ಅಲ್ಲದೆ ಲೋಹಗಳು, ಮರಮುಟ್ಟುಗಳು, ಚಿನ್ನ, ಬೆಳ್ಳಿ, ಮಣಿ, ರತ್ನಗಳು, ಇತ್ಯಾದಿಗಳನ್ನು ಕುರಿತು ವ್ಯಾಪಾರದ ಗುಟ್ಟುಗಳನ್ನು

ತಿಳಿಸುತ್ತಾನೆ. ಪ್ರಾಣಿಪಕ್ಷಿಗಳು, ಸಕಲ ಜೀವರಾಶಿಗಳಿಗೆ ಮಳೆ ಹೇಗೆ ಅತ್ಯವಶ್ಯಕ ಹಾಗೂ ಉಪಯುಕ್ತ ಎಂಬುದನ್ನು ತಿಳಿಸುತ್ತಾನೆ. ಅಂದರೆ ಹೀಗೆ ಇಡೀ ಸಮಾಜದ ಒಳಿತಿನ ಕಡೆಗೆ ಅವನು ದೃಷ್ಟಿ ಹರಿಸುತ್ತಾನೆ.

ಮೋಡಗಳ ಹೆಸರು ಇಡುವಿಕೆಯಲ್ಲಿ ಅವನ ಸೌಂದರ್ಯ ಪ್ರಜ್ಞೆಯನ್ನು ಕಾಣಬಹುದು. ಹಾಗೆಂದು ಅತಿ ಕಾವ್ಯಾತ್ಮಕವಾಗಿ ಅಥವಾ ಅದೇ ಪ್ರಧಾನವಾಗದಂತೆ ಕೃತಿಯನ್ನು ನಿರ್ವಹಿಸಿದ್ದಾನೆ. ಅವನ ಅಧ್ಯಯನ ವ್ಯಾಪ್ತಿಯು ಬೆರಗುಗೊಳಿಸುತ್ತದೆ.

ಕವಿ ಜಟ್ಟನ ಇಡೀ ಕೃತಿಯನ್ನು ಅಧ್ಯಯನ ಮಾಡಿದಾಗ ಕೆಲವು ಪ್ರಮುಖ ಅಂಶಗಳನ್ನು ಗಮನಿಸಬಹುದು. ಈ ಲೇಖನದ ಮಿತಿಯಲ್ಲಿ ಎಲ್ಲವನ್ನು ಹೇಳುವುದು ಕಷ್ಟ.

ಕವಿಯು ಒಂದು ಪದ್ಯದಲ್ಲಿ ಒಂದು ವಿಷಯವನ್ನು ಹೇಳಿ ಮುಂದಿನ ಪದ್ಯದಲ್ಲಿ ವಿವರಣೆಯನ್ನು ಕೊಡುವುದಿಲ್ಲ. ಅದಕ್ಕೆ ಬದಲಾಗಿ ಪ್ರತಿಯೊಂದು ಪದ್ಯದಲ್ಲಿಯೂ ಒಂದೊಂದೇ ವಿಷಯಕ್ಕೆ ಒತ್ತುಕೊಟ್ಟು, ನಿಖರವಾಗಿ ನಿರೂಪಿಸುತ್ತಾನೆ. ಇಲ್ಲಿ ಊಹೆಗಾಗಲೀ ವರ್ಣನೆಗಾಗಲೀ ಅವಕಾವಿಲ್ಲ. ಅಲಂಕಾರಗಳಿಗೆ ಅವಕಾಶವಿಲ್ಲ ಎಂದರೂ, ಕೆಲವೊಂದು ಹೋಲಿಕೆಗಳನ್ನು ಕೊಟ್ಟು ವಿಷಯವನ್ನು ಹೇಳುತ್ತಾನೆ. ಮಿಂಚಿನ ಬಣ್ಣಗಳಿರಬಹುದು. ಮೋಡಗಳ ಆಕಾರಗಳಿಗೆ ಹೋಲಿಕೆಗಳನ್ನು ಕೊಡುತ್ತಾನೆ. ತಾನು ಹೇಳುವುದನ್ನು ನೀರಸವಾಗದಂತೆ. ಶುಷ್ಕವಾಗದಂತೆ ಹೇಳುವ ಕಲೆ ಅವನಿಗೆ ಸಿದ್ಧಿಸಿದೆ. ಅದನ್ನು ಅವನು ಛಂದೋವೈವಿಧ್ಯದಿಂದ ಸಾಧಿಸಿದ್ದಾರೆ. ಪಂಪ, ರನ್ನರಂಥವರೂ ಬಳಸದೇ ಇದ್ದ ಅಪರೂಪದ ಛಂದಸ್ಸನ್ನು ಬಳಸಿದ್ದಾನೆ. ಉದಾ: ಪಡ್ಜಳಿ, ಮಂಗಳಂ ಹೀಗೆ ರಗಳೆಯನ್ನು ತುಂಬ ಸಮರ್ಥವಾಗಿ ಉಪಯೋಗಿಸಿಕೊಂಡಿದ್ದಾನೆ.

ಉಪಯೋಗಿಸಿರುವ ಛಂದಸ್ಸು : ಖ್ಯಾತ ಕರ್ನಾಟಕಗಳು, ಕಂದ, ರಗಳೆ, ತ್ರಿವಿದಿ, ಪಿರಿಯಕ್ಕರ, ತ್ರಿವಿಧಿ-ತ್ರಿಪದಿ ಎರಡೂ ಪ್ರಯೋಗವಿದೆ. ಸ್ವಲ್ಪ ಅಪರೂಪ ಎನ್ನಬಹುದಾದ ಛಂದಸ್ಸು; ಮಂಗಳಂ, ಮಣಿವಿಭೂಷಣಂ, ತೋಟಕಂ, ಸ್ವಾಗತಂ, ಪಡ್ಜಳಿ*

ಪಡ್ಜಳಿಯನ್ನು 'ದಂಡಕದ ಹಾಗೆ ಓದುವಣ' ಎನ್ನುತ್ತಾನೆ.

ಬೇರೆ ಚಂಪೂ ಕಾವ್ಯಗಳಲ್ಲಿ ಪಿರಿಯಕ್ಕರವು ಛಂಧೋ ವೈವಿಧ್ಯಕ್ಕಾಗಿ ಅಲ್ಲೊಂದು ಇಲ್ಲೊಂದು ಬಂದರೆ, ಜಟ್ಟ ಮತದಲ್ಲಿ ಚಂಪಕ, ಉತ್ಪಲ ಇತ್ಯಾದಿ ಛಂದಸ್ಸಿನ ಬಳಕೆಯಂತೆಯೇ ಅದಕ್ಕೆ ಸಮಸಮವಾಗಿ ಪಿರಿಯಕ್ಕರವೂ ಬಳಕೆಯಾಗಿದೆ.

*ಪಡ್ಜಳಿ. ಪಡ್ಡಳಿ ಷಡ್ಡಳಿ ಇವೆಲ್ಲವೂ ಒಂದೇ ಛಂದಸ್ಸಿನ ಬೇರೆ ಬೇರೆ ಶಬ್ದರೂಪಗಳೆ?(ಸಂ)

'ಪಡ್ಡಳಿ' ಎಂಬ ಛಂದಸ್ಸು ಪ್ರಯೋಗವಾಗಿ, ಅದನ್ನು ಓದುವ ರೀತಿಯನ್ನೂ ಕವಿ ಸೂಚಿಸಿರುವುದು ವಿಶೇಷವಾಗಿದೆ. ನಿಯತವಾದ ಗುಣಗಳಿಂದ ಕೂಡಿ, ಪಾದ ವಿಭಾಗವಿಲ್ಲದೆ ದಂಡಾಕಾರವಾಗಿರುವ ಶಬ್ದರಚನಾ ವಿಶೇಷವು ದಂಡಕವೆನಿಸುವುದು" (ಕನ್ನಡ ಕೈಪಿಡಿ-ಪು. ೧೦೩) ಆದರೆ ಇಲ್ಲಿ ಪಡ್ಡಳಿಯನ್ನು ರಗಳೆಯಂತೆಯೇ ಓದಬಹುದು ಎನಿಸುತ್ತದೆ. ಇದನ್ನು ೮ನೆಯ ಅಧ್ಯಾಯದಲ್ಲಿ 'ಮೇಘಗಳ ಆಕಾರಂಗಳ್' ಅನ್ನು ವರ್ಣಿಸಲು 'ಪಡ್ಡಳಿ' ಬಳಕೆಯಾಗಿದೆ.

ಇಡೀ ಕೃತಿಯ ಛಂದಸ್ಸನ್ನು ಪರಿಶೀಲಿಸಿದಾಗ ಚಂಪೂರೂಪದಲ್ಲಿಯೇ ರಚನೆಯಾಗಿದೆ ಎನ್ನಿಸುತ್ತದೆ. ಚಂಪೂ ರಚನೆಯಲ್ಲಿ ಗದ್ಯವು ಕೃತಿಯ ಮೂರನೆ ಒಂದು ಭಾಗವನ್ನು ಆವರಿಸಿಕೊಂಡಿರುತ್ತದೆ. ದೇಸೀ ಛಂದಸ್ಸಾದ ತ್ರಿಪದಿ, ಪಿರಿಯಕ್ಕರವು ಛಂದೋ ವೈವಿಧ್ಯಕ್ಕಾಗಿ ಅಲ್ಲೊಂದು ಇಲ್ಲೊಂದು ಕಾಣಿಸುತ್ತದೆ.

ಆದರೆ 'ಅಟ್ಟಮತ' ಗ್ರಂಥದಲ್ಲಿ ಗದ್ಯವು ಇಲ್ಲವೇ ಇಲ್ಲವೆಂಬಷ್ಟು ಕಡಿಮೆ. "ಇನ್ನು ಪುಣ್ಣಿಮೆಯ ಲಕ್ಷಣ ಪೇಟ್ವೆಂ ಎಂದು ಅಧ್ಯಾಯಗಳ ಪ್ರಾರಂಭದಲ್ಲಿ, ನಿರೂಪಿತವಾಗಿರುವ ವಿಷಯಗಳನ್ನು ಸೂಚಿಸಲು ಮಾತ್ರವೇ ಗದ್ಯ ಬಳಕೆಯಗಿದೆ." ಈ ಬಗೆಗೆ ರಂ.ಶ್ರೀ. ಮುಗಳಿಯವರು ಈ ರೀತಿ ಹೇಳುತ್ತಾರೆ. "ಕಂದಂಗಳ್ ಪಲವಾಗಿರೆ ಸುಂದರವೃತ್ತಂಗಳಕ್ಕರಂ ಚವುಪದಿ ಮತ್ತಂದಲ್ಗೀತಿಕೆ ತಿವದಿಗಳಂ ದಂಬೆತ್ತೆಸೆಯ ಪೇಟ್ದೊಡದು ಚಿತ್ತಾಣಂ" (ಕ.ಮಾ., ೧-೩೫)ಎಂಬ ಚಿತ್ತಾಣದ ಲಕ್ಷಣಕ್ಕೆ ಇದು ಬಹುಮಟಿಗೆ ಸರಿಹೋಗುವಂತಿದೆ" ಎನ್ನುತ್ತಾರೆ (ಕನ್ನಡ ಸಾಹಿತ್ಯ ಚರಿತ್ರೆ ಪು. ೧೯೪)

ಈ 'ಅಟ್ಟಮತ' ಗ್ರಂಥವು ಹೇಗೆ ವಿಶಿಷ್ಟವಾಗಿದೆ? ಏಕೆ ವಿಸಿಷ್ಟವಾಗಿದೆ ಇಂದಿಗೂ ಇದು ಪ್ರಸ್ತುತವಾಗಿದೆಯೆ? ಎಂಬ ಹಲವಾರು ಪ್ರಶ್ನೆಗಳು ನಮ್ಮನ್ನು ಕಾಡಬಹುದು. ಈ ಪ್ರಶ್ನೆಗಳಿಗೆ ಇಡೀ ಗ್ರಂಥವೇ ಉತ್ತರ ಎಂದರೆ ಅತಿಶಯೋಕ್ತಿಯಲ್ಲ. ಕವಿಯು ತನ್ನ ಪೂರ್ವಾಚಾರ್ಯರು ಹೇಳಿರುವುದನ್ನು ಮಾತ್ರ ಕನ್ನಡದಲ್ಲಿ ಹೇಳದೆ, ತನ್ನ ಸ್ವಂತ ಅನುಭವಗಳನ್ನು ಮೇಳೈಸಿ ನಿರೂಪಿಸಿದ್ದಾನೆ.

ವೈಜ್ಞಾನಿಕವಾಗಿ, ಖಚಿತವಾದ ಲೆಕ್ಕಾಚಾರ ಮಾಡಿ ಅಳತೆಗಳನ್ನು ಹೇಳುತ್ತಾನೆ. ಸರಳವಾದ ಆದರೆ ನಿರ್ದಿಷ್ಟವಾದ ಪ್ರಯೋಗಗಳನ್ನು ಹೇಳುತ್ತಾನೆ. ನೆರಳು-ಬೆಳಕುಗಳ ಬಗೆಗೆ ಮಾಹಿತಿ ಕೊಡುತ್ತಾನೆ. ನಿರ್ದಿಷ್ಟವಾದ ಬಣ್ಣಗಳ ಮಿಂಚುಗಳ ಗುಣಾವಗುಣಗಳನ್ನು ಹೇಳುತ್ತಾನೆ. ನಾನಾ ವಿಧವಾದ ಕಾಮನಬಿಲ್ಲುಗಳ ಬಗೆಗೆ ಹೇಳುತ್ತಾನೆ.

ಮಳೆಯು ಜನಜೀವನಕ್ಕೆ, ಇಡೀ ಪ್ರಪಂಚದ ಆಗುಹೋಗುಗಳಿಗೆ ಎಷ್ಟು ಮುಖ್ಯವೋ, ಪ್ರಮುಖವೋ ಅದನ್ನು ನಿರೂಪಿಸಿರುವ ಈ ಕೃತಿಯೂ ಅಷ್ಟೇ ಪ್ರಸ್ತುತವಾಗಿದೆ.

ಮತ್ತೊಂದು ಮುಖ್ಯ ಸಂಗತಿಯೆಂದರೆ ಮಳೆಯನ್ನು ಕುರಿತ ಕನ್ನಡದ ಮೊಟ್ಟಮೊದಲ ಗ್ರಂಥ ಎಂಬುದು. (ಲೋಕೋಪಕಾರದಲ್ಲಿ ಮಳೆಯನ್ನು ಕುರಿತ ಮಾಹಿತಿ ಇಲ್ಲ. ಕೇವಲ ಬಾವಿಯ ವಿಚಾರ ಮಾತ್ರ ಇದೆ. ಜಟ್ಟನು ಇದನ್ನು ಗಮನಿಸಿರುವ ಸಾಧ್ಯತೆ ಇದೆ.)

ಇದು ಹವಾಮಾನವನ್ನು ಕುರಿತ ವಿಶೇಷ ಕೃತಿಯಾಗಿದೆ. ಇಂದಿಗೂ ರೈತನು ಈ ಕೃತಿಯಲ್ಲಿ ಬರುವ ಅನೇಕ ಅಂಶಗಳನ್ನು ಗುರುತಿಸುತ್ತಾರೆ. ಕವಿ ಜನಪದ ನಂಬಿಕೆಗಳನ್ನೂ, ಮಳೆಯ ಬಗೆಗಿನ ಜನರ ಪರಿಶೀಲನೆಗಳನ್ನೂ ತನ್ನ ಕೃತಿಯಲ್ಲಿ ಬಳಸಿಕೊಂಡಿದ್ದಾನೆ. ಈ ಕೃತಿಯ ಜನಪ್ರಿಯತೆಗೆ ದೊರೆತಿರುವ ಹಲವಾರು ಹಸ್ತಪ್ರತಿಗಳೇ ಸಾಕ್ಷಿಯಾಗಿದೆ. ಹಾಗೂ ಇದರ ವ್ಯಾಪಕತೆಯನ್ನು ಸೂಚಿಸುತ್ತದೆ. ಲೋಕಕ್ಕೆ ಉಪಕಾರವಾಗುವಂತೆ ಈ ಗ್ರಂಥ ರಚನೆಯಾಗಿದೆ.

ಪರಶುರಾಮನ ಭೂಮಿ - ಹೈವ

◈

ಅತ್ತಿ ಮುರುಡು ವಿಶ್ವೇಶ್ವರ

೧೯೦೦ ರಾಷ್ಟ್ರಬಂಧು ಯುಗಾದಿ ಸಂಚಿಕೆಯಲ್ಲಿ ಶ್ರೀ ಪಂಜೆ ಮಂಗೇಶರಾಯರು ಬರೆದ 'ಬೀಳಗಿಯ ಕೆಲವು ಶಾಸನಗಳು' ಎಂಬ ಲೇಖನ ಪ್ರಕಟವಾಗಿದ್ದು, ಅದರಲ್ಲಿ ಅವರು ನೀಡಿರುವ ಹೈವೆಯ ದಿಗ್ದರ್ಶನವನ್ನು ಡಾ. ಸದಾನಂದ ನಾಯಕರು ತಮ್ಮ 'ಸಾಹಿತ್ಯ, ಸಂಶೋಧನೆ ಮತ್ತು ಸಮಾಲೋಚನೆ' ಗ್ರಂಥದಲ್ಲಿ ಉದ್ಧರಿಸಿಕೊಟ್ಟಿರುವರು. ಪಂಜೆಯವರ ದಿಗ್ದರ್ಶನವು ಇಂತಿದೆ.

"ಬೀಳಗಿಯು ಮುಂಬೈ ಸಂಸ್ಥಾನದ ಕರಾವಳಿ ಜಿಲ್ಲೆಯಾದ ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನಲ್ಲಿ, ಸಮುದ್ರದ ತೀರದಿಂದ ಸುಮಾರು ೩೫ಮೈಲು ದೂರ ಕುಮಾಟಾ-ಸಿದ್ಧಾಪುರ ರಸ್ತೆಯ ಮೇಲೆ ಇದೆ. ಬೀಳಗಿಯಿಂದ ೫ ಮೈಲು ದೂರಕ್ಕೆ ಸಿದ್ದಾಪುರ; ಸಿದ್ದಾಪುರದಿಂದ ೨೫ ಮೈಲು ಪೂರ್ವಕ್ಕೆ ಹೋದರೆ, ಮೈಸೂರು ಸಂಸ್ಥಾನದಲ್ಲಿ ಹಿಂದಿನ ಇಕ್ಕೇರಿ ಅಥವಾ ಕೆಳದಿ ಅರಸರ ಮುಖ್ಯ ಪಟ್ಟಣವಾಗಿದ್ದ ವಂಶಪುರವನ್ನು ಮುಟ್ಟಬಹುದು. ಬೀಳಗಿಯಿಂದ ಸುಮಾರು ೨೦ಮೈಲು ನೈಋತ್ಯಕ್ಕೆ ಗೇರುಸಪ್ಪೆ (ಭಲ್ಲಾತಕೀ ಪುರ); ಗೇರುಸಪ್ಪೆಯಿಂದ ತೆಂಕಲು ಸುಮಾರು ೧೦ ಮೈಲುಗಳೊಳಗೆ ಹಾಡು ಹಳ್ಳಿ (ಸಂಗೀತ ಪುರ); ಹಾಡುಹಳ್ಳಿಯಿಂದ ೮ಮೈಲು ಪಶ್ಚಿಮಕ್ಕೆ ಕಡಲು ಕರೆಯಲ್ಲಿ ಭಟ್ಟಕಳ; ಭಟ್ಟಕಳದಿಂದ ಉತ್ತರಕ್ಕೆ ಹೊನ್ನಾಪುರ ಬಂದರು; ಈ ಸ್ಥಳಗಳನ್ನು ಗುರುತಿಸಿ ನೆನಪಿಟ್ಟುಕೊಂಡರೆ ಮುಂಚಿನ ಹೈಗನಾಡಿನ ತಿಳಿದಂತಾಗುತ್ತದೆ."

ಇದು ಸುಮಾರು ಎಂಟು ದಶಕಗಳ ಹಿಂದೆ ದಿ. ಪಂಜೆಯವರು ಕಲ್ಪಿಸಿದ ಹೈವನಾಡಿನ ಪರಿಚಯ.

ಹೈವದೇಶದ ಕುರಿತು ವಿಚಾರ ಮಾಡತೊಡಗಿದಾಗ ಅನುಷಂಗಿಕವಾಗಿ ಮನಸ್ಸಿಗೆ ಬರುವುದೆಂದರೆ ಸಪ್ತಕೊಂಕಣಗಳು. ಸಪ್ತ ಕೊಂಕಣದೊಂದಿಗೇ ಬರುವುದು ಪರಶುರಾಮ ಭೂಮಿ. ಯಾಕೆಂದರೆ ಹೈವವು ಸಪ್ತಕೊಂಕಣಗಳಲ್ಲಿ ಒಂದಾಗಿದೆ ಮತ್ತು ಕೊಂಕಣಪಟ್ಟಿಯು ಪರಶುರಾಮ ಭೂಮಿಯಾಗಿದೆ. ಇವುಗಳ ಮೊತ್ತ ಮೊದಲ ಉಲ್ಲೇಖವು ನಮಗೆ ಕಂಡು ಬರುವದು -'ಉತ್ತರ- ಸಹ್ಯಾದ್ರಿಖಂಡ' ಎಂಬ ಪುರಾಣಗ್ರಂಥದಲ್ಲಿ. 'ಉತ್ತರ ಸಹ್ಯಾದ್ರಿಖಂಡ' ಬಿಟ್ಟರೆ ಇನ್ನುಳಿದ ಪುರಾಣಗಳಲ್ಲಿ ಸಪ್ತಕೊಂಕಣಗಳ ಉಲ್ಲೇಖವು ನಮಗೆ ಸಿಗುವುದಿಲ್ಲವೆಂದು ಪಂಡಿತರು ಹೇಳುತ್ತಾರೆ. ಅನಂತರದ ಕಾಲದಲ್ಲಿ ಶಾಸನಗಳಲ್ಲಿ, ಸಾಹಿತ್ಯಗಳಲ್ಲಿ ಸಪ್ತಕೊಂಕಣ ಕಂಡುಬರುತ್ತದೆ.

ಕೊಂಕಣೋತ್ಪತ್ತಿಯ ಕಥನ-

ಕೊಂಕಣವು ಹೇಗೆ ಉಂಟಾಯಿತು? ಉತ್ತರ ಸಹ್ಯಾದ್ರಿ ಖಂಡವು ವರ್ಣಿಸಿದ ಪ್ರಕಾರ ಪರಶುರಾಮನು ಮಹಾಯಜ್ಞವನ್ನು ಮಾಡುತ್ತಾನೆ. ಯಜ್ಞದಲ್ಲಿ ಭೂಮಿಯನ್ನು ಕಶ್ಯಪರಿಗೆ ದಾನ ಕೊಡುತ್ತಾನೆ. ದಾನ ಪಡೆದ ಕಶ್ಯಪರು, ಪರಶುರಾಮನಲ್ಲಿ 'ದಾನ ಮಾಡಿದ ಭೂಮಿಯಲ್ಲಿ ನೆಲೆಸುವುದು ನ್ಯಾಯವಲ್ಲ' ಎಂಬರ್ಥದ ಮಾತನಾಡಿದಾಗ ಪರಶುರಾಮನು ದಕ್ಷಿಣದ ಸಹ್ಯಾದ್ರಿಗೆ ಬರುತ್ತಾನೆ. ಸಹ್ಯಶೃಂಗದ ಮೇಲೆ ನಿಂತು ತನ್ನ ನೆಲೆಗಾಗಿ ಜಾಗವನ್ನು ಬಿಟ್ಟುಕೊಡಲು ಸಮುದ್ರವನ್ನು ಕೇಳಿದಾಗ ಸಮುದ್ರಪತಿಯು ಪರಶುರಾಮನಿಗೆ ಅವನ ಪರಶುವನ್ನು ಬೀಸಿ ಎಸೆಯಲು ಹೇಳಿದ ಆಗ ಭಾರ್ಗವನು ಸಹ್ಯಶೃಂಗದ ಮೇಲೆ ನಿಂತು ಕೊಡಲಿಯನ್ನು ಬೀಸಿ ಕಡಲಿನತ್ತ ಎಸೆಯುತ್ತಾನೆ-

ಆಗ-

"ಅವಸರ್ಪತ್ತ್ರವೃದ್ಧಾಂಬು ನದೀವ ಶರದಾಗಮೇ।" (ಉ.ನ.ಕಂ.೧-೩೬)
ಉಬ್ಬರ ಜಲರಾಶಿಯು ಹಿಂದಕ್ಕೆ ಸರಿಯಿತು. ಭೂಮಿಯು ಕಾಣಿಸಿತು.
ಹೀಗೆ ಕಾಣಿಸಿದ ನೆಲದ ಪರಿಚಯವನ್ನು ಪುರಾಣವು ವಿವರಿಸಿದೆ

"ಪೂರ್ವೇ ಸಹ್ಯಗಿರಿಶ್ಚಾಸೀತ್ ಪಶ್ಚಿಮೇ ಜಲದಿಸ್ವಯಮ್ ॥೩೬॥ ಅಧ್ಯಾಯ-೧
ಉತ್ತರೇ ಸೀಮಭೂತಾಭೂತ್ ಸ್ವಯಂ ನಾಸಾ ತ್ರಯಂಬಯಕಃ।
ದಕ್ಷಿಣೇ ಸೀಮಭೂತಾಯಾ ಚಾಸೀತ್ ಕನ್ಯಾಕುಮಾರಿಕಾ॥೩೭॥" ಅಧ್ಯಾಯ-೧

ಪೂರ್ವದಲ್ಲಿ ಸಹ್ಯಾದ್ರಿ, ಪಶ್ಚಿಮದಲ್ಲಿ ಕಡಲು, ಉತ್ತರಕ್ಕೆ ನಾಸಿಕತ್ರ್ಯಂಬಕ. ದಕ್ಷಿಣಕ್ಕೆ ಕನ್ಯಾಕುಮಾರಿ ಈ ಭೂಮಿಯ ಮೇರೆಗಳಾಗಿವೆ. ಇದನ್ನೇ ಪರಶುರಾಮಕ್ಷೇತ್ರ, ಪರಶುರಾಮಭೂಮಿ ಎಂದು ಕರೆಯುತ್ತಾರೆ. ಪರಶುರಾಮ ಭೂಮಿಯ ಉದ್ದವೆಷ್ಟು? ಅಗಲವೆಷ್ಟು? ಅದೇ ಪುರಾಣವು ವಿವರಿಸಿದೆ-

"ಸಹ್ಯಪರ್ವತಮಾರಭ್ಯ ಯೋಜನ ತ್ರಿತಯಾವಧಿ।
ಕನ್ಯಾಕುಮಾರೀಚೈಕತ್ರ ನಾಸಿಕಾತ್ರ್ಯಂಬಕಃ ಪರಃ॥೪೦॥
ಸೀಮಾರೂಪೇಣ ವಿದ್ಯೇತ ದಕ್ಷಿಣೋತ್ತರತಃ ಶುಭಾ।
ಯೋಜನ ತ್ರಿಶತಾಯಾಮಂ ಯೋಜನತ್ರಯಮಂತರಮ್" ॥೪೧॥

ಅಧ್ಯಾಯ-೧

ಸಹ್ಯಗಿರಿಯಿಂದ ಮೂರು ಯೋಜನದವರೆಗೆ, ಕನ್ಯಾಕುಮಾರಿಯಿಂದ ನಾಸಿಕಾತ್ರ್ಯಂಬಕದವರೆಗೆ ಇದರಗಡಿಯೆಂದು ತಿಳಿಯಬೇಕು. ಇದು ದಕ್ಷಿಣೋತ್ತರವಾಗಿ ಮೂರುನೂರು ಯೋಜನ ಮತ್ತು ಪೂರ್ವ ಪಶ್ಚಿಮವಾಗಿ ಮೂರು ಯೋಜನವಾಗಿದೆ. ಯೋಜನ ಎಂಬ ಮಾನವು ಆರುಮೈಲುಗಳದ್ದಾಗಿರುತ್ತದೆ. ಒಂದು ಮೈಲಿಗೆ ೧.೬೦೯ ಕಿಲೋಮೀಟರುಗಳಾಗಿರುತ್ತದೆ. ಆಧುನಿಕ ಮಾನದ ಪ್ರಕಾರ ಹೇಳುವುದಾದರೆ ಪರಶುರಾಮಭೂಮಿ ಅಥವಾ ಕೊಂಕಣ ಪಟ್ಟಿಯು ಸಹ್ಯಪಾದದಿಂದ ೨೭.೮೬೨ಕಿ.ಮೀ. ಅಗಲ ಮತ್ತು ೨,೭೮೬.೦೦ಕಿ.ಮೀ ಉದ್ದವಿರುವ ಭೂಭಾಗವೆಂದಾಗುತ್ತದೆ. ಕೊಂಕಣಪಟ್ಟಿಯನ್ನು ಪರಶುರಾಮನು ಏಳುಭಾಗಗಳಾಗಿ ವಿಂಗಡಿಸಿದ. ಅದರಿಂದ ಇದು ಸಪ್ತಕೊಂಕಣ ಎಂದು ಹೆಸರು ಪಡೆಯಿತು.

"ತಂದೇಶಂ ಪಾರ್ಥಿವೇಂದ್ರೋಸೌ ಬಿಭೇದೇ ಸಪ್ತಧಾ ಪುನಃ।
ಖರಾಟಂ ಚ ವರಾಟಂ ವ ಮರಾಟಂ ಕೊಂಕಣಂ ತಥಾ॥೪೨॥
ಹವಿಗಂ, ತೌಳವಂ ಚಾಥ ಕೇರಳಂ ಚೇತಿ ಸಪ್ತಕಮ್ । (ಉ.ನ.ಕಾಂ. ಅ-೧)

ಹೆಸರುಗಳಲ್ಲಿ ಕಾಣದ ಏಕರೂಪತೆ-

ಇಲ್ಲಿಯವರೆಗೆ ನೋಡಿದ ಹಾಗೆ ಉತ್ತರ-ಸಹ್ಯಾದ್ರಿ-ಖಂಡದ ಪ್ರಕಾರ ಕೊಂಕಣ ಸಪ್ತಕದ ಹೆಸರುಗಳು-೧) ಖರಾಟ ೨) ವರಾಟ ೩) ಮರಾಟ ೪) ಕೊಂಕಣ ೫) ಹವಿಗ ೬) ತೌಳವ ಮತ್ತು ೭) ಕೇರಳ ಈ ರೀತಿಯಾಗಿವೆ.

ಆದರೆ ಶಾಸನಗಳಲ್ಲಿ-೧) ಕಿರಾತ ೨) ವಿರಾಟ ೩) ಮರಾಠ ೪) ಕೊಂಕಣ ೫) ಹೈಗ ೬) ತುಳುವ ಮತ್ತು ೭) ಕೇರಳ ಎಂದು ಬರುತ್ತವೆ. (Kanara Gazetteer Par II P-೨೪ E.N)

"ಪ್ರಪಂಚ ಹೃದಯ" ಎಂಬ ಗ್ರಂಥದ ಪ್ರಕಾರ-
"ಸಾ ಪ್ರಸಿದ್ಧತರಾ ಸಹ್ಯಪಾದೇ ಪರಶುರಾಮಭೂಮಿಃ।
ಕೂಪಕ-ಕೇರಲ-ಮೂಷಿಕ-ಆಲುಪ-ಪಶು-ಕೊಂಕಣ
ಪರಕೊಂಕಣಭೇದೇನ, ದಕ್ಷಿಣೋತ್ತರಾಯಾಮೇನ ಚ ವ್ಯವಸ್ಥಿತಾ।"

ಅಂದರೆ ಸಹ್ಯಪಾದದಲ್ಲಿ ದಕ್ಷಿಣೋತ್ತರವಾಗಿರುವ ಪರಶುರಾಮ ಭೂಮಿಯು ೧) ಕೂಪಕ ೨) ಕೇರಳ ೩) ಮೂಷಿಕ ೪) ಆಳುಪ ೫) ಪಶು ೬) ಕೊಂಕಣ ೭) ಪರಕೊಂಕಣವೆಂಬ ಭೇದದಿಂದ ಪ್ರಸಿದ್ಧವಾಗಿದೆ.

ಸಹ್ಯಾದ್ರಿಕಾಂಡದಲ್ಲಿ ಸಪ್ತಕೊಂಕಣದ ಹೆಸರುಗಳು–೧) ಕೇರಳ ೨) ತುಲುಂಗ ೩) ಹೈವ ೪) ಸೌರಾಷ್ಟ್ರ ೫) ಕರಹಾಟ ೬) ಕರ್ನಾಟಕ ಮತ್ತು ೭) ಕೊಂಕಣ ಎಂದಿರುವುದಾಗಿ ಡಾ. ಸದಾನಂದ ನಾಯಕರು ದಾಖಲಿಸಿರುವರು. (Sahyadrikand, cb VI, ೪೬–೪೭ P ೩೬)

ಈ ಪ್ರಕಾರ ಕೊಂಕಣ ಸಪ್ತಕದ ಹೆಸರುಗಳಲ್ಲಿ ಭಿನ್ನತೆಯಿರುವುದನ್ನು ಕಾಣಬಹುದಾಗಿದೆ. ಇವುಗಳಲ್ಲಿ ಹವೀಗ, ಹೈಗ, ಪಶು, ಹೈವ ಇವು ಸಮಾನಾರ್ಥಕವಾಗಿದ್ದು ನಿರ್ದಿಷ್ಟ ಪ್ರದೇಶವಾಚಿಯಾಗಿದೆ. ಪ್ರಪಂಚಹೃದಯದ 'ಪಶು' ಎಂಬುದು:– ಪಶು–ಪಶುಕ–ಪಯಿಕ–ಹೈಗ (ಹೈವ) ಎಂದಿದರ ನಿಷ್ಪತ್ತಿಯನ್ನು ಮಾನ್ಯ ಶ್ರೀ ಗೋವಿಂದ ಪೈ ಅವರು ಪ್ರಸ್ತಾಪಿಸಿರುವರು.

ಡಾ. ಬಿ.ಎ. ಸಾಲೆತೊರೆ ಅಭಿಮತ

ಇದೇ ಸಂದರ್ಭದಲ್ಲಿ ವಿಖ್ಯಾತ ಸಂಶೋಧನ ಪಂಡಿತ ಡಾ. ಸಾಲೆತೊರೆಯವರು ಸಪ್ತಕೊಂಕಣದ ವಿಷಯದಲ್ಲಿ ವ್ಯಕ್ತಪಡಿಸಿದ ಅಭಿಮತವೇನೆಂಬುದನ್ನು ನೋಡೋಣ. ಸಪ್ತಕೊಂಕಣದ ವರ್ಣನೆಯು ಸಹ್ಯಾದ್ರಿಖಂಡವಲ್ಲದೆ ಬೇರೆ ಯಾವ ಪುರಾಣಗಳಲ್ಲಿಯೂ ಕಂಡು ಬರುವುದಿಲ್ಲ. ಮಹಾಕವಿ ಕಾಳಿದಾಸನೂ ಅವುಗಳನ್ನು ಉಲ್ಲೇಖಿಸಿರುವುದಿಲ್ಲ, ಆದುದರಿಂದ ಅವುಗಳ ಕಲ್ಪನೆಯು ಕಾಳಿದಾಸನಿಗಿಂತ ಇತ್ತೀಚಿನದಾಗಿದೆ ಎಂದು ಡಾ. ಸಾಲೆತೊರೆ ಹೇಳುತ್ತಾರೆ. (ನೋಡಿ–Ancient Karnatak p–೨೮)

ಸಪ್ತಕೊಂಕಣಗಳಲ್ಲಿ ಒಂದಾದ ಹೈವನಾಡಿನ ವಿಷಯಕ್ಕೆ ಬಂದಾಗ, ಕೊಂಕಣಪಟ್ಟಿಯು ಸಹ್ಯಪಾದದಲ್ಲಿ ದಕ್ಷಿಣೋತ್ತರ ಹಬ್ಬಿಕೊಂಡಿರುವ ಪ್ರದೇಶವೆಂಬುದು ಗಮನದಲ್ಲಿಡಬೇಕಾದ ಸಂಗತಿಯಾಗಿರುತ್ತದೆ. ಶಾಸನಗಳಲ್ಲಿ ಹೈವೆಯ ಉಲ್ಲೇಖವಿರುವ, ಮೊತ್ತಮೊದಲನೆಯ ಶಾಸನವೆಂದರೆ ಸುಮಾರು ಏಳನೆಯ ಶತಮಾನದ ಕಂಪ್ಲಿಯ ಶಾಸನ. ಕಂಪ್ಲಿಯು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನಲ್ಲಿರುವ ಹಳ್ಳಿ. ಈ ವಿಷಯವನ್ನು ನನ್ನ ಗಮನಕ್ಕೆ ತಂದವರು ಕರ್ನಾಟಕ ವಿ.ವಿ.ಯ ಪ್ರಾಕ್ತನ ಶಾಸ್ತ್ರಜ್ಞ, ದಿ. ಡಾ. ಎಚ್. ಆರ್. ರಘುನಾಥ ಭಟ್ಟರು ಇದಕ್ಕೆ ಪೂರ್ವದಲ್ಲಿ "ಪಯ್ವೆಗುಂದದಚ್ಚೆ"ಯನ್ನು ಉಲ್ಲೇಖಿಸಿರುವ ಕ್ರಿ.ಶ. ೯೧೧ರ ಶಾಸನವೇ ಹೈವೆಯನ್ನು ಕಂಡರಿಸಿದ ಮೊದಲ ದಾಖಲೆಯೆಂದು ತಿಳಿಯಲಾಗಿದ್ದಿತು.

ಹೈವೆ ೫೦೦

ಶಾಸನಗಳಲ್ಲಿ ಹೈವೆ ೫೦೦ರ ಉಲ್ಲೇಖ ಅನೇಕ ಸಲ ಬಂದಿರುವುದನ್ನು ಕಣಬಹುದು. ಈ ೫೦೦ಎಂಬುದು ಸೂಚಿಸುತ್ತಿರುವುದೇನನ್ನು? ಶಾಸನಗಳು, ಹೈವೆ ೫೦೦, ಬನವಾಸಿ ಪನ್ನಿರ್ಚ್ಛಾಸಿರ, (೧೨೦೦) ಸಾಂತಳಿಗೆ ಸಾಯಿರ (೧೦೦೦) ಕೊಂಕಣ ೯೦೦ ಹೀಗೆ ನಾಡಿನ ಹೆಸರಿನ ಮುಂದೆ ಸಂಖ್ಯೆಗಳನ್ನು ದಾಖಲಿಸುತ್ತವೆ. ಈ ಸಂಖ್ಯೆಗಳು ಆಯಾ ನಾಡು ಅಂದು ಒಳಗೊಂಡಿರುವ ಕಂದಾಯ ನಿರೂಪಿತ ಗ್ರಾಮಗಳ ಸೂಚಕ. ಹೈವನಾಡು ಎಂಬುದು ಐದುನೂರು ಗ್ರಾಮಗಳನ್ನೊಳಗೊಂಡ ಭಾಗ ಎಂದು ಅರ್ಥೈಸಲು ಅಭ್ಯಂತರವೇನೂ ಇಲ್ಲ. ವರ್ತಮಾನದ ಎಣಿಕೆಯಲ್ಲಿ ಹೇಳುವುದಾದರೆ ಇಂದಿನ ನಾಲ್ಕೈದು ತಾಲೂಕುಗಳಿಗೆ ಸರಿಹೊಂದಬಹುದಷ್ಟೆ. ಇಲ್ಲಿಯವರೆಗೆ ಅವಲೋಕಿಸಿದಂತೆ–

೧) ಉತ್ತರಸಹ್ಯಾದ್ರಿಖಂಡವೇ ಸಪ್ತಕೊಂಕಣಗಳನ್ನು ವರ್ಣಿಸಿದ ಮೊದಲ ಮತ್ತು ಆದಿಮಗ್ರಂಥ. ಕೊಂಕಣೋತ್ಪತ್ತಿ, ಕೊಂಕಣದ ಮೇರೆಗಳು, ಅದರ ಉದ್ದಗಲಗಳ ಅಳತೆ ಮುಂತಾದವುಗಳ ವಿವರಗಳನ್ನು ಇದು ಸ್ಪಷ್ಟವಾಗಿ ಉಲ್ಲೇಖಮಾಡುತ್ತದೆ.

೨) "ಪ್ರಪಂಚಹೃದಯ"ವು ಕೊಂಕಣವು ಪರಶುರಾಮ ಭೂಮಿಯೆಂದೂ, ಇದು ಸಹ್ಯಪಾದದಲ್ಲಿ ದಕ್ಷಿಣೋತ್ತರವಗಿರುವುದೆಂದೂ ದಾಖಲಿಸಿದೆ.

೩) ಕೊಂಕಣ ವಿಭಾಗಗಳ ಹೆಸರುಗಳು ಬೇರೆ–ಬೇರೆ ದಾಖಲೆಗಳಲ್ಲಿ ಅಲ್ಪ ವ್ಯತ್ಯಾಸದೊಂದಿಗೆ ಕಂಡುಬರುತ್ತವೆ;

ಒಟ್ಟಾರೆಯಾಗಿ ಹೈವ ನಾಡಿನ ವಿಸ್ತಾರ ಕುರಿತ ಪಂಜೆಯವರ ಮಾರ್ಗದರ್ಶಕ ನಿರೂಪಣೆಯು ವರ್ತಮಾನ ಸಂದರ್ಭದಲ್ಲಿ ಮರುಪರಿಶೀಲನೆಗೆ ಅರ್ಹವಾಗಿದೆ. ನಮ್ಮ ಪರಿಣತ ಮತಿಗಳು ಈ ದಿಸೆಯಲ್ಲಿ ಉಪಲಬ್ಧ ಆಕರಗಳನ್ನಾಧರಿಸಿ ಪ್ರಯತ್ನಿಸಿದಲ್ಲಿ ಉಪಕಾರವಾದೀತೆಂಬುದು ನನ್ನೆಣಿಕೆ.

ಋಣಗಳು

೧. ಉತ್ತರ ಸಹ್ಯಾದ್ರಿ ಖಂಡಃ (ಸ್ಕಾಂದಪುರಾಣ ಪ್ರೋಕ್ತ ಗ್ರಾಮನಿರ್ಣಯಾಭಿಧೇಯಃ)

– ಹೊಸಬಾಳೆ ಅನಂತ ಶರ್ಮಾ ನಡಹಳ್ಳಿ, ಪ್ರ.ಶಕೆ–೧೮೫೮

೨. ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ– ಡಾ. ಸದಾನಂದ ನಾಯಕ

– (ವಿಸ್ತೃತ ಮುದ್ರಣ೧೯೭೪) ಪ್ರ–ಸಮಾಜಮಸ್ತಕಾಲಯ; ಧಾರವಾಡ

೩. ಹೇರೂರು ಸೀಮೆ; ಐತಿಹಾಸಿಕ ಸಮೀಕ್ಷಾಧ್ಯಯನ–ಅತ್ತೀಮರುಡು ವಿಶ್ವೇಶ್ವರ

– ೧೯೯೯, ಗ್ರಾಮ ವಾಙ್ಮಯೀ; ಹೆಗ್ಗರಣಿ

೪. Ancient Karnatak-B.A. Saletore.

೫. Karara Ga3etteer; Part II

(Wilson Mackunzie collection-New collection)

೬. ಲೇಖಕರ ಸಂಗ್ರಹದ ಟಿಪ್ಪಣಿಗಳ

ಕಾಳಿದಾಸನು ಕಾಣಿಸಿದ ಶಿಕ್ಷಣ

◈

ಎ. ಎಸ್. ಕಣ್ಣನ್

ಕಾಳಿದಾಸನ ಕೃತಿಗಳಾದ ಅಭಿಜ್ಞಾನಶಾಕುಂತಲ–ಕುಮಾರಸಂಭವ – ಇವುಗಳ ಹೆಸರನ್ನು ಹೇಳುತ್ತಲೇ, ಬಹುಮಂದಿಯ ಅರಿವು ಇವುಗಳು ಶೃಂಗಾರರಸದ ಕೃತಿಗಳೆಂದು ತೋರುವಷ್ಟಕ್ಕೇ ಸೀಮಿತವಾಗಿರುತ್ತದೆ. ಹಾಗೆಯೇ ಕಾಳಿದಾಸನಿಗೆ ದೊರೆತಿರುವ ಮತ್ತೊಂದು ಪ್ರಥೆಯೆಂದರೆ ಆತನು ಹೇರಳವಾಗಿ ಬಳಸಿರುವ ಉಪಮೆಗಳಿಂದಾಗಿ ಆತನಿಗೆ ಬಂದಿರುವ "ಉಪಮಾ ಕಾಲಿದಾಸಸ್ಯ" ಎಂಬ ಸಾಧಾರಣ ಬಿರುದು.

ಕಾಳಿದಾಸನ ಕೃತಿಗಳನ್ನು ಸ್ವಲ್ಪ ಆಳವಾಗಿ ಪರಿಶೀಲಿಸಿದರೂ, ಆತನ ಶೃಂಗಾರರಸ–ಪ್ರವಣತೆ ಅಥವಾ ಉಪಮಾಲಂಕಾರ–ಪಕ್ಷಪಾತವೆಂಬುದು, ಆತನ ಕೃತಿಗಳು ಮಾಡಿಸುವ ಒಟ್ಟಾರೆ ಜೀವನದರ್ಶನದ ವೈಶಾಲ್ಯದ ಎದುರಿನಲ್ಲಿ, ಕೇವಲ ಆಂಶಿಕವಾದ ಒಂದು ನೋಟವಷ್ಟೆ ಎಂಬುದನ್ನು ನಾವು ಮನಗಾಣಬಹುದು. ಪ್ರಕೃತಿ–ಚಿತ್ರಣವನ್ನೂ ಮನುಷ್ಯಸ್ವಭಾವ–ಚಿತ್ರಣವನ್ನೂ ಸೂಕ್ಷ್ಮೇಕ್ಷಿಕೆಯಿಂದ ಮೂಡಿಸಲಾಗಿರುವ ಈತನ ಕೃತಿಗಳಲ್ಲಿ, ಶಿಕ್ಷಣವನ್ನು ಕುರಿತಾಗಿ ಅಲ್ಲಲ್ಲಿ ಬಂದಿರುವ ಹೊಳಹುಗಳನ್ನು ಒಂದೆಡೆ ತಂದು ಸೇರಿಸುವ ಪ್ರಯತ್ನ ಈ ಲೇಖನದಲ್ಲಿದೆ. ಆತನ ರಘುವಂಶ–ಮಾಲವಿಕಾಗ್ನಿಮಿತ್ರ–ಶಾಕುಂತಲನಾಟಕಗಳಲ್ಲಿ ಲಭ್ಯವಾಗುವ ಕೆಲವು ಈಕ್ಷಣಗಳನ್ನು ಇಲ್ಲಿ ಕಾಣಿಸಿದೆ.

ರಘುವಂಶದ ಆರಂಭದಲ್ಲಿಯೇ ರಘುಕುಲದ ಅರಸುಗಳ ಜೀವನಕ್ರಮವನ್ನು ಚಿತ್ರಿಸುವ ನಾಲ್ಕಾರು ಶ್ಲೋಕಗಳಲ್ಲಿ ಒಂದು, ಅವರು ತಮ್ಮ ಶೈಶವದಲ್ಲೇ

ವಿದ್ಯಾಭ್ಯಾಸದಲ್ಲಿ ತೊಡಗುತ್ತಿದ್ದರು - ಎಂಬುದನ್ನು ಉಲ್ಲೇಖಿಸುತ್ತದೆ. ಆತನ ಉಕ್ತಿ ಹೀಗಿದೆ (ರಘುವಂಶ ೧.೮):

ಶೈಶವೇಽಭ್ಯಸ್ತವಿದ್ಯಾನಾಂ

ಯೌವನೇ ವಿಷಯೈಷಿಣಾಮ್ ।

ವಾರ್ಧಕೇ ಮುನಿ-ವೃತ್ತೀನಾಂ

ಯೋಗೇನಾಂತೇ ತನು-ತ್ಯಜಾಮ್ ॥

ಎಳೆಯ ವಯಸ್ಸಿನಲ್ಲಿಯ ಅವರ ವಿದ್ಯಾಭ್ಯಾಸವು ಹೇಗಿತ್ತೆಂದರೆ ಮುಂದೆ ಯೌವನ-ವಾರ್ಧಕ್ಯ-ಚರಮಾವಸ್ಥೆಗಳಲ್ಲಿ ಏನೇನು ಘಟಿಸಬೇಕೋ ಅವೆಲ್ಲಕ್ಕೂ ಭದ್ರವಾದ ಬುನಾದಿಯನ್ನು ಹಾಕಿಕೊಡುವಂತೆ. ಈ ಅಂಶದಲ್ಲಿ ನಾವು ಇಂದಿನ ಶಿಕ್ಷಣಕ್ಕೂ ಅಂದಿನ ಶಿಕ್ಷಣಕ್ಕೂ ಕೆಲವು ಭೇದಗಳನ್ನು ಕಾಣಬಹುದು. ಇಂದೂ ಬಾಲ್ಯದಿಂದಲೇ ವಿದ್ಯಾಭ್ಯಾಸವು ಆರಂಭವಾಗುವುದೆಂದಾದರೂ ಉನ್ನತ-ಜೀವನದ ರೀತಿ-ನೀತಿಗಳನ್ನು ಬಹಳವೇ ಗಟ್ಟಿಯಾಗಿ ಮೂಡಿಸುವ ವಿದ್ಯಾಭ್ಯಾಸ-ಕ್ರಮವು ಅಂದಿತ್ತೆಂಬುದನ್ನು ಮನಗಾಣಬಹುದು. ಒಂದರ್ಥದಲ್ಲಿ ಅದು ಪ್ರಧಾನವಾಗಿ ಸಂಸ್ಕೃತಿಗೆ ಸಂಬಂಧಪಟ್ಟ ವಿಷಯವಾದರೂ, ಒಂದು ಉದಾತ್ತವಾದ ಜೀವನ-ನಕಾಶೆಯನ್ನು ಒದಗಿಸುವುದಾಗಿತ್ತು - ಎಂದಷ್ಟು ಮಾತ್ರ ಇಲ್ಲಿ ಹೇಳಿ, ಇತರ ವಿಷಯಗಳತ್ತ ಗಮನಹರಿಸಬೇಕಾಗಿದೆ.

ಅರ್ಥಶಾಸ್ತ್ರವನ್ನು ಬರೆದ ಕೌಟಲ್ಯನ (ಕೌಟಿಲ್ಯ - ಎಂದೇ ಬಹುಪ್ರಚುರವಾದ ಬಳಕೆಯಿದ್ದರೂ, ಕೌಟಲ್ಯ ಎಂಬುದೇ ಆತನ ಸರಿಯಾದ ಹೆಸರು) ಕಾಲಕ್ಕೆ ಅನತಿದೂರ-ಕಾಲದಲ್ಲಿದ್ದ ಕಾಳಿದಾಸನು ರಘು-ಮಹಾರಾಜನ ಶಿಕ್ಷಣಾರಂಭವನ್ನು ಗುರುತಿಸುವಾಗ, ಲಿಪಿ-ಗ್ರಹಣವನ್ನೂ ಉಲ್ಲೇಖಿಸುತ್ತಾನೆಂಬುದು (ಅರ್ಥಶಾಸ್ತ್ರ ೩.೨೮) ಗಮನಿಸಬೇಕಾದುದೇ ಸರಿ.

ಭಾರತೀಯರ ಪ್ರಾಚೀನ-ಶಿಕ್ಷಣ-ಪದ್ಧತಿಯು ಪ್ರಧಾನವಾಗಿ ಮೌಖಿಕವೇ ಆಗಿತ್ತೆಂಬುದಾಗಿ ಬಹುಮಂದಿ ಭ್ರಮಿಸಿರುವ, ಅಥವಾ ಪ್ರಚಾರ ಮಾಡುತ್ತಿರುವ, ಇಂದಿನ ಸಂದರ್ಭದಲ್ಲಿ, ಕ್ರಿಸ್ತಪೂರ್ವ ಒಂದನೆಯ ಶತಮಾನದಲ್ಲಿ ಜೀವಿಸಿದ್ದ ಕಾಳಿದಾಸನು ಈ ಅಂಶವನ್ನು ಸಹಜವಾಗೆಂಬಂತೆ, ಆದರೂ ಬಿಡದೇ ಉಲ್ಲೇಖಿಸಿರುವುದು ಗಮನಾರ್ಹ.

(ಕಾಳಿದಾಸನ ಕಾಲದ ವಿಷಯದಲ್ಲಿ ಆತನ ಕ್ರಿಸ್ತಶಕ ಐದನೆಯ ಶತಮಾನದವನಿದ್ದಿರಬೇಕೆಂಬ ಊಹೆಯನ್ನು ಅನೇಕ-ವಿದ್ವಾಂಸರು

ಮಾಡಿರುವರಾದರೂ, ಪಾರಂಪರಿಕವಾಗಿ ನಿರ್ದೇಶಿಸಲಾಗಿರುವ ಕ್ರಿಸ್ತಪೂರ್ವ-ಪ್ರಥಮ-ಶತಮಾನದ ಕಾಲವೆಂಬ ಲೆಕ್ಕವನ್ನು ಅನೇಕ-ಮಂದಿ ವಿದೇಶೀಯರೂ ನಮ್ಮವರೂ ಯುಕ್ತವಾಗಿ ತರ್ಕಿಸಿರುವರೆಂಬ ಉಲ್ಲೇಖವನ್ನು ಮಾತ್ರ ಇಲ್ಲಿ ಮಾಡಬಹುದು: ಇದರ ಪ್ರತಿಪಾದನೆಯು ವಿಸ್ತೃತವಾದ ಪ್ರಯತ್ನವಾಗುವುದರಿಂದ ಸದ್ಯಕ್ಕೆ ಅಪ್ರಸ್ತುತವೆಂದು ಅದನ್ನಿಲ್ಲಿ ಕೈಬಿಡಬಹುದು).

"ನದೀಮುಖದ ಮೂಲಕ ಸಮುದ್ರವನ್ನು ಪ್ರವೇಶಿಸುವಂತೆ" ಎಂಬ ಉಪಮೆಯೊಂದಿಗೆ, ಲಿಪಿಗ್ರಹಣದಿಂದ ವಿಸ್ತೃತ-ವಾಙ್ಮಯವನ್ನೇ ರಘುವು ಪ್ರವೇಶಿಸಿದುದನ್ನು ಕವಿಯು ಸ್ಪಷ್ಟಪಡಿಸುತ್ತಾನೆ. ರಾಜಕುಮಾರರಿಗೆ ಅವಶ್ಯವಾದ ಚತುರ್ವಿದ್ಯೆಗಳಲ್ಲಿ – ಆನ್ವೀಕ್ಷಿಕೀ, ತ್ರಯೀ, ವಾರ್ತಾ ಹಾಗೂ ದಂಡನೀತಿಗಳೆಂಬ ವಿದ್ಯೆಗಳಲ್ಲಿ – ಆತನು ಪಳಗಿದನೆಂಬುದು ಅಲ್ಲಿ ಸ್ಪಷ್ಟವಾಗುವ ಅಂಶ. ಕೌಟಲ್ಯನೂ ತನ್ನ ಅರ್ಥಶಾಸ್ತ್ರದಲ್ಲಿ "ಚತಸ್ರ ಏವ ವಿದ್ಯಾಃ" (೧.೨) ಎಂದು ಹೇಳಿರುವುದರೊಂದಿಗೆ ಇದರ ತಾಳೆಯನ್ನು ಮಾಡಬಹುದು.

ಇವುಗಳಲ್ಲಿ ಆನ್ವೀಕ್ಷಿಕಿಯೊಳಗೆ ಸಾಂಖ್ಯ, ಯೋಗ, ಲೋಕಾಯತಗಳೆಂಬ ಮೂರು ಶಾಖೆಗಳಿವೆ. ತ್ರಯೀ ಎಂಬುದು ಸಾಂಗೋಪಾಂಗವಾದ ವೇದಗಳನ್ನು ಪ್ರತೀಕಿಸುತ್ತದೆ. ಈ ವಿವಿಧ-ಕ್ಷೇತ್ರಗಳ ಆಳ-ಅಗಲಗಳು ಇಂದಿನವರಿಗೆ ಸುಲಭಕ್ಕೆ ಸ್ಫುರಿಸವಾದರೂ, ಒಂದು ವಿಸ್ತಾರವಾದ ದೇಶವನ್ನು ಆಳುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಸುಸಜ್ಜಿತವಾಗಿ ಕೌಟಲೀಯಾರ್ಥಶಾಸ್ತ್ರವು ಮಾಡಿಕೊಡುತ್ತದೆಂಬುದರ ಬಗ್ಗೆ ಎರಡು ಮಾತಿಲ್ಲ. ಹೇಗೆ ವ್ಯಾಕರಣ-ಶಾಸ್ತ್ರದಲ್ಲಿ ಅಗ್ರಗಣ್ಯರಾದ ಅನೇಕ ಪೂರ್ವಾಚಾರ್ಯರ ಮತಗಳನ್ನು ಪಾಣಿನಿಯು ಉಲ್ಲೇಖಿಸುತ್ತಾನೋ, ಹಾಗೆಯೇ ಕೌಟಲ್ಯನೂ ಸಹ ಅನೇಕ ಪೂರ್ವಾಚಾರ್ಯರ ಮತಗಳನ್ನು ಉಲ್ಲೇಖಿಸುವುದೂ ಖಂಡಿಸುವುದೂ ಸ್ವಸಿದ್ಧಾಂತಗಳನ್ನು ಮಂಡಿಸುವುದೂ, ಅಂದು ಪ್ರಚುರವಿದ್ದ ವಾದ-ವಿವಾದ ಪರಂಪರೆಯಲ್ಲಿ ವಿದ್ಯೆಗಳು ವಿಸ್ತರಗೊಂಡು ವರ್ಧಿಸುತ್ತಿದ್ದ ವಾತಾವರಣವನ್ನು ನಿರೂಪಿಸುವುದಾಗಿದೆ – ಎಂದು ಸೂಚಿಸಿ, ಪ್ರಕೃತ ವಿಷಯವನ್ನು ಮುಂದುವರೆಸಬಹುದು.

ಮಾಳವಿಕಾಗ್ನಿಮಿತ್ರ ನಾಟಕದಲ್ಲಿ ಹರದತ್ತ-ಗಣದಾಸರೆಂಬ ಇಬ್ಬರು ನಾಟ್ಯಾಚಾರ್ಯರ ವಿವಾದವು ಅಂದಿನ ಶಿಕ್ಷಣವನ್ನು ಕುರಿತಾದ ಒಂದೆರಡು ಮುಖ್ಯವಾದ ಅಂಶಗಳನ್ನು ಹೊರತರುತ್ತದೆ. ಮೊದಲನೆಯದಾಗಿ ಶಿಕ್ಷಕರಲ್ಲಿ ಯಾರು ಶ್ರೇಷ್ಠರೆಂಬುದಕ್ಕೆ ಒಂದು ಸಿದ್ಧವಾದ ಮಾನದಂಡವು ಅಲ್ಲಿ ಲಭ್ಯವಿದೆ. ಅನೇಕಮಂದಿ ವಿದ್ವಾಂಸರಿಗೆ ತಮ್ಮ ಕ್ಷೇತ್ರದ ಅರಿವು ಚೆನ್ನಾಗಿರುವುದುಂಟು; ಮತ್ತೆ ಕೆಲವರಿಗೆ ಬೋಧನದಲ್ಲಿ ಸಾಮರ್ಥ್ಯವು ಪ್ರಕೃಷ್ಟವಾಗಿರುವುದುಂಟು; ಆದರೆ ಒಳ್ಳೆಯ

ಶಿಕ್ಷಕನೆಂದರೆ ಎರಡರಲ್ಲೂ ಪಳಗಿದ ಕೈಯಾಗಿರಬೇಕು. "ಈ ಎರಡರಲ್ಲೂ ಸಮರ್ಥನಾರೋ ಅಂತಹವನನ್ನೇ ಶಿಕ್ಷಕರಲ್ಲಿ ಅಗ್ರಗಣ್ಯನನ್ನಾಗಿ ಕಾಣಬೇಕು" - ಎಂಬ ಮಾತನ್ನು ಅಲ್ಲಿ ಹೇಳಿದೆ. ಕಾಳಿದಾಸನ ಉಕ್ತಿಯಿದು (ಮಾಲವಿಕಾಗ್ನಿಮಿತ್ರ ೧.೧೬)

ಶ್ಲಿಷ್ಟಾ ಕ್ರಿಯಾ ಕಸ್ಯಚಿದ್ ಆತ್ಮಸಂಸ್ಥಾ
ಸಂಕ್ರಾತಿರ ನ್ಯಸ್ಯ ವಿಶೇಷ-ಯುಕ್ತಾ।
ಯಸ್ಯೋಭಯಂ ಸಾಧು ಸ ಶಿಕ್ಷಕಾಣಾಂ
ಧುರಿ ಪ್ರತಿಷ್ಠಾಪಯಿತವ್ಯ ಏವ ॥

ಒಂದು ವಿಷಯವನ್ನು ಅರಿತುಕೊಂಡಿರುವುದೊಂದು; ಆದರೆ ಅದನ್ನು ಮತ್ತೊಬ್ಬರಿಗೆ ಬೋಧಿಸಲು ಹೊರಟಾಗಲೇ ನಮ್ಮ ಅರಿವಿನಲ್ಲಿದ್ದಿರಬಹುದಾದ ಅಲ್ಲಲ್ಲಿನ ಅಸ್ಪಷ್ಟತೆ, ಅಪೂರ್ಣತೆ ಮುಂತಾದ ನ್ಯೂನತೆಗಳು ಗೋಚರಕ್ಕೆ ಬರಲಾಗುವುದು. ಆ ಅವಕಾಶವು ಉಪಲಬ್ಧವಾಗದಿದ್ದಲ್ಲಿ ನಮಗಿದೆಲ್ಲಾ ಗೊತ್ತಾಗಿದೆಯೆಂಬ ಭಾವನೆಯೇ ಉಂಟಾಗಿಬಿಡುವುದು ಒಳ್ಳೆಯ ಅಧ್ಯಾಪಕರೆಲ್ಲರ ಅನುಭವಕ್ಕೆ ಗೋಚರವಾಗುವುದೇ. ಅದನ್ನೇ ಅಲ್ಲಿ "ನ ಖಲು ಸುಶಿಕ್ಷಿತೋಽಪಿ ಸರ್ವಃ ಉಪದೇಶ-ದರ್ಶನೇ ನಿಪುಣೋ ಭವತಿ" ಎಂದು ಹೇಳಿದೆ. ಇದು ಸ್ವಶಿಕ್ಷಣ-ಸುಶಿಕ್ಷಣಗಳನ್ನೂ ಮೀರಿದ, ಅನ್ಯರಿಗೆ ಉಪದೇಶಕಾಲದಲ್ಲಿ, ಎಂದರೆ ಬೋಧನೆ ಮಾಡಲು ತೊಡಗಿದಾಗಲ್ಲಿ, ಮಾತ್ರವೇ ಸ್ಪಷ್ಟವಾಗುವ ಅಂಶ. ಅಧ್ಯಾಪನವೃತ್ತಿಯಲ್ಲಿ ತೊಡಗಿಲ್ಲದವರಿಗೆ ಎಷ್ಟೋ ವೇಳೆ ಇದು ಸ್ಫುಟವಾಗಿ ಸ್ಫುರಿಸದು.

ಜೀವನದ ಬಹುತೇಕ ವಿದ್ಯಾವಿಷಯಗಳು ಕೇವಲ ಪುಸ್ತಕದ ಬೋಧನೆಯ ವಿಷಯಗಳಾಗುವುದಿಲ್ಲ. ಅವಲ್ಲಿ ಯಥೋಚಿತವಾಗಿ ಪ್ರಯೋಗಗಳ ಆವಶ್ಯಕತೆಯೂ ಇದ್ದೇ ಇರುತ್ತದೆ. ಪ್ರಾಚೀನ ಭಾರತದಲ್ಲಿದ್ದ ಯೋಗ-ಆಯುರ್ವೇದ-ಗಣಿತ-ಜ್ಯೋತಿಷಗಳಿಗಂತೂ ಇದು ಅತ್ಯಂತ ಅನ್ವಿತವಾಗುವ ವಿಷಯವೆಂಬುದು ಸ್ಪಷ್ಟವಾಗುವುದು ಕಷ್ಟವಿಲ್ಲ. ದೊಡ್ಡ ದೊಡ್ಡ ಕಟ್ಟಡಗಳ ನಿರ್ಮಾಣದ ವಿದ್ಯೆಯೆನಿಸುವ ವಾಸ್ತುಶಾಸ್ತ್ರ, ಅನೇಕಾನೇಕ ಸೂಕ್ಷ್ಮಾಂಶಗಳನ್ನೊಳಗೊಂಡ ಶಿಲ್ಪ-ಚಿತ್ರಕಲೆ-ನಾಟ್ಯ-ಸಂಗೀತಕಲೆಗಳಲ್ಲೂ ಪ್ರಯೋಗ-ಪ್ರಧಾನತೆಯು ನಿಚ್ಚಳವಾಗಿ ಕಂಡುಬರುವಂತಹುದೇ. ಎಂದೇ ಈ ನಾಟಕದಲ್ಲಿ ಈ ಆಚಾರ್ಯರಿಬ್ಬರನ್ನೂ "ಶಾಸ್ತ್ರೇ ಪ್ರಯೋಗೇ ಚ" - ಎಂದು ಪರೀಕ್ಷೆಯು ಆರಂಭವಾಗುವುದು.

ನಾಟ್ಯವಿದ್ಯಾಚಾರ್ಯರಿಬ್ಬರಲ್ಲಿ ತಲೆದೋರಿದ ಪಾರಸ್ಪರಿಕ-ವೈಮನಸ್ಯ-ಸ್ಪರ್ಧಾಳುತೆಗಳಿಂದಾಗಿ ಅವರಿಬ್ಬರಲ್ಲಿಯ ವಿದ್ಯೆಯ ತಾರತಮ್ಯವನ್ನು

ಅಳೆಯಬೇಕೆಂದರೆ, ಅವರು ತಮ್ಮ ತಮ್ಮ ಶಿಷ್ಯರಿಗೆ ಹೇಗೆ ಬೋಧಿಸಿ ಅವರನ್ನು ತಯಾರುಮಾಡಿದ್ದಾರೆಂಬುದೇ ಅಳತೆಗೋಲು. ಇದನ್ನೇ "ಪ್ರಯೋಗ-ಪ್ರಧಾನಂ ಹಿ ನಾಟ್ಯಶಾಸ್ತ್ರಮ್. ಕಿಮತ್ರ ವಾಗ್ವ್ಯವಹಾರೇಣ? (ಇಲ್ಲಿ ಬಾಯಿಮಾತಿನ ಚರ್ಚೆಯಿಂದೇನಾದೀತು?)" ಎಂದು ಹೇಳಿ, "ಶಿಷ್ಯರು ಮಾಡಿ ತೋರಿಸುವ ಪ್ರೌಢಿಮೆಯಿಂದ ಗುರುಗಳ ಮೇಲ್ಮೆಯನ್ನು ಲೆಕ್ಕಹಾಕುವ ಬಗೆಯನ್ನು ಅಲ್ಲಿ ಹೇಳಿದೆ. ("ಉಪದೇಶ-ದರ್ಶನೇನ ನಿರ್ಣಯಃ).

ಹಾಗೆಯೇ ವಿದ್ಯಾರ್ಥಿಗಳಲ್ಲೂ ಯಾರಿಗೆ ವಿದ್ಯಾರ್ಜನದ ಅಭಿಲಾಷೆಯಿದೆಯೆಂಬುದು ಮಾತ್ರವಲ್ಲದೆ, ಯಾರಿಗೆ ವಿದ್ಯೆಯು ಹತ್ತುವುದು?, ಹತ್ತಿ ಚೆನ್ನಾಗಿ ಫಲಿಸುವುದು? - ಎಂಬ ಅಂಶಗಳನ್ನೂ ಪರಿಶೀಲಿಸಿ, ನಂತರವೇ ವಿದ್ಯೋಪದೇಶವನ್ನು ಮಾಡತಕ್ಕದ್ದೆಂಬ ಕ್ರಮವನ್ನು ಸೂಚಿಸುವ ಮಾತು ಈ ನಾಟಕದಲ್ಲಿ ಕಂಡುಬರುತ್ತದೆ. ಹಿಂದೆ ತಕ್ಷಶಿಲೆ-ನಾಲಂದಾಗಳಲ್ಲಿ ವಿದ್ಯಾಭ್ಯಾಸಕ್ಕೆ ಬರುವವರನ್ನು ದ್ವಾರ-ಪಾಲಕರೇ ಮೊದಲು ಪರೀಕ್ಷಿಸಿ, ಅಲ್ಲಿ ಉತ್ತೀರ್ಣರಾದವರನ್ನಷ್ಟೆ ಪ್ರವೇಶಿಸಲು ಬಿಡುತ್ತಿದ್ದರೆಂಬುದನ್ನು ಕೇಳುತ್ತೇವಲ್ಲವೆ?

ಅಲ್ಲದೆ, ಮಂದಮತಿಯಾದ ಶಿಷ್ಯನು ಗುರುವು ಮಾಡಿದ ಉಪದೇಶಕ್ಕೇ ಕಳಂಕ ತಂದಾನೆಂಬ ಆತಂಕದ ಎಚ್ಚರವೂ ಅಲ್ಲಿದೆ. "ಯದಾ ಅಮೇಧಾವಿನೀ ಶಿಷ್ಯಾ ಉಪದೇಶಂ ಮಲಿನಯತಿ, ತದಾ ಆಚಾರ್ಯಸ್ಯ ದೋಷೋನು?" ಎಂಬ ಪ್ರಶ್ನೆಯನ್ನೇ ಅಲ್ಲಿ ಕೇಳಿದೆ. ಹಾಗೂ ಅದಕ್ಕೆ ಉತ್ತರವಾಗಿ, "ಯೋಗ್ಯತೆಯಿಲ್ಲದ ಶಿಷ್ಯನನ್ನು ಸ್ವೀಕರುವುದರಲ್ಲಿಯೇ ಆಚಾರ್ಯನ ವಿವೇಕ-ರಾಹಿತ್ಯವೂ ಹೊರಬರುವುದೆಂಬ ಮಾತೂ ಇದೆ. "ವಿನೇತುಃ ಅದ್ರವ್ಯ-ಪರಿಗ್ರಹೋಽಪಿ ಬುದ್ಧಿ-ಲಾಘವಂ ಪ್ರಕಾಶಯತಿ."

ಹಣಗಳಿಕೆಯೊಂದನ್ನೇ ಪ್ರಧಾನವಾಗಿಟ್ಟುಕೊಂಡು ಯೋಗವಿದ್ಯೆಯನ್ನು ಚೆನ್ನಾಗಿ ಅರಿಯದೆ ಅಭ್ಯಸಿಸದೆ ತಮ್ಮ ಗುರುಗಳಿಗೂ, ಅದಕ್ಕಿಂತಲೂ ಹೆಚ್ಚಾಗಿ ಯೋಗವಿದ್ಯೆಗೂ, ಕಳಂಕ ತರುವವರ ಮಂದಿಯು ವರ್ಧಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ, ಈ ಮಾತುಗಳು ನೀಡುವ ಎಚ್ಚರ ಸಾಧಾರಣವಾದುದಲ್ಲ. ಎಲ್ಲರಿಗೂ ಎಲ್ಲ ವಿದ್ಯೆಗಳೂ ಹತ್ತಿಯಾವೇ, ಹತ್ತಬೇಕೇ? ರುಚಿ-ಸಾಮರ್ಥ್ಯಗಳನ್ನು ನೋಡಿ ವಿದ್ಯೆಯನ್ನು ಕೊಡುವುದಲ್ಲದೆ, ಗಿಡುಗಿಬಿಟ್ಟರೆ ಆಯಿತೆಂದುಕೊಳ್ಳುವುದು ತರವೇ?

ಅಷ್ಟೇ ಅಲ್ಲ. ಜ್ಞಾನವನ್ನು ಒಂದು ಮಾರಾಟದ ವಸ್ತು (ಜ್ಞಾನ-ಪಣ್ಯ)ವಾಗಿಟ್ಟುಕೊಂಡು ಅದರಿಂದ ಹೊಟ್ಟೆಹೊರೆಯುವುದೆಷ್ಟೋ ಅಷ್ಟನ್ನು ಮಾತ್ರ (=ಕೇವಲ-ಜೀವಿಕಾ) ಧ್ಯೇಯವಾಗಿಟ್ಟುಕೊಳ್ಳುವವರ ಸ್ಪಷ್ಟ-ನಿಂದನೆ-ಖಂಡನೆಗಳೂ ಈ ಸಂದರ್ಭದಲ್ಲಿ ಈ ನಾಟಕದಲ್ಲಿ ಮೂಡಿಬಂದಿವೆ. ತನಗೆ ತನ್ನ ವೃತ್ತಿಯಲ್ಲಿ

ಬೇಕಾದ ಸ್ಥಾನ-ಮಾನಗಳು ಮೂಡಿವೆಯೆಂದು ತೃಪ್ತನಾಗಿ ಬಿಟ್ಟು, ಅನ್ಯರು ಆತನ ವಿದ್ಯಾ-ಸಾಮರ್ಥ್ಯವನ್ನು ಸಂದೇಹಿಸಿ ಪ್ರಶ್ನಿಸುವ ಸಂನಿವೇಶವು ಬಂದೊದಗಿದಾಗಲೂ, ಆಕ್ಷೇಪಣೆಗಳತ್ತ ಗಮನವನ್ನೇ ಕೊಡದೆ, ನಿಂದೆಗಳನ್ನು ಸಹಿಸಿಕೊಂಡು (ವಿವಾದ-ಭೀರುವಾಗಿ) ಸುಮ್ಮನೆಯೇ ಇದ್ದುಬಿಡುವವನನ್ನು ಇಲ್ಲಿ ಮೂದಲಿಸಿದೆ (ಮಾಲವಿಕಾಗ್ನಿಮಿತ್ರ ೧.೧೮):

ಲಬ್ಧಾಸ್ಪದೋಽಸ್ಮೀತಿ ವಿವಾದ-ಭೀರೋಃ
ತಿತಿಕ್ಷಮಾಣಸ್ಯ ಪರೇಣ ನಿಂದಾಮ್ ।
ಯಸ್ಯಾಗಮಃ ಕೇವಲ-ಜೀವಿಕಾಯೈ
ತಂ ಜ್ಞಾನ-ಪಣ್ಯಂ ವಣಿಜಂ ವದಂತಿ ॥

ಇಂದಿನ ಸಂದರ್ಭದಲ್ಲಿ, ತಮ್ಮ ತಮ್ಮ ಕ್ಷೇತ್ರಗಳನ್ನು ಕುರಿತಾಗಿ ನಡೆಯುವ ಸಮ್ಮೇಳನಗಳಿಗೆ ಹೋಗಿ ಪತ್ರಿಕೆಗಳನ್ನು ಮಂಡಿಸುವುದಿರಲಿ, ಅಲ್ಲಿ ಉಪಸ್ಥಿತಿಯನ್ನು ಸಹ ಬಯಸದ; ಹಳೆಯ ಪ್ರಶ್ನೆಗಳಿಗೆ ಸಮಂಜಸವಾದ ಹೊಸ ಉತ್ತರಗಳೋ, ತಮ್ಮ ಕ್ಷೇತ್ರದಲ್ಲಿ ಬರುವ ನವಾವಿಷ್ಕಾರಗಳೋ – ಯಾವುದರ ಬಗೆಗೂ ಆಸ್ಥೆ-ಆಸಕ್ತಿಗಳಲ್ಲದ – ಅಧ್ಯಾಪಕರ ಸಂಖ್ಯೆಯೇ ವಿಪುಲವಾಗಿರುವ ಇಂದಿನ ಸಂದರ್ಭದಲ್ಲಿ – ಗಮನಿಸಿ ನೋಡಬೇಕಾದ ಹಲವು ವಿಷಯಗಳಿಲ್ಲಿವೆ.

ಚರಕ-ಸಂಹಿತೆ, ಸುಶ್ರುತ-ಸಂಹಿತೆಗಳಲ್ಲಿ ನಿರೂಪಿತವಾಗಿರುವ "ಸಂಭೂಯ-ಸಂಭಾಷಾ", "ತದ್ವಿದ್ಯ-ಸಂಭಾಷಾ" – ಎಂಬ ಹೆಸರಿನಲ್ಲಿ ನಡೆಯುತ್ತಿದ್ದ, (ಕ್ರಿಸ್ತಪೂರ್ವ-ಕಾಲದ) ಸಮ್ಮೇಳನಗಳ ವ್ಯವಸ್ಥಾಪನಗಳನ್ನೂ ನಿರ್ವಹಣ-ಕ್ರಮಗಳನ್ನೂ ಕಾಳಿದಾಸನು ಕಂಡಿರಲಿಕ್ಕೆ ಬೇಕು. ಇಲ್ಲದಿದ್ದಲ್ಲಿ ಈ ಮಾತುಗಳು ಸುಲಭವಾಗಿ ಬರುವುವಲ್ಲವೆಂದೇ ತೋರುತ್ತದೆ.

ವಾಸ್ತವವಾಗಿ ಕಾಳಿದಾಸನು ತನ್ನ ಮೊದಲ ನಾಟಕವಾದ ಮಾಲವಿಕಾಗ್ನಿಮಿತ್ರದ ಆರಂಭದಲ್ಲಿ, "ಹಳೆಯದಾದ ಮಾತ್ರಕ್ಕೆ ಎಲ್ಲವೂ ಚೆನ್ನವೆಂದೇನಲ್ಲ; ಹೊಸದಾಯಿತೆಂಬ ಕಾರಣಕ್ಕೇ ಯಾವುದನ್ನೂ ದೋಷ-ಭರಿತವಿರಬೇಕೆಂದು ಜರೆಯುವಂತೆಯೂ ಇಲ್ಲ. ಯಾವುದನ್ನೂ ಮೊದಲು ಪರೀಕ್ಷೆಗೆ ಒಳಪಡಿಸಿ, ಯಾವುದು ಯುಕ್ತವೋ ಅದನ್ನು ಮಾತ್ರ ಸ್ವೀಕರಿಸುವವರು ವಿವೇಕಿಗಳು; ಹಾಗಿರದ ಮೂಢರು ಮಾತ್ರವೇ ಅನ್ಯರ ಅನಿಸಿಕೆಗಳಿಗೇ ಜೋತುಬೀಳುವವರು" ಎಂಬ ಮುತ್ತಿನಂತಹ ಮಾತನ್ನು ಆಡುವನಷ್ಟೆ? (ಮಾಲವಿಕಾಗ್ನಿಮಿತ್ರ ೧.೨):

ಪುರಾಣಮಿತ್ಯೇವ ನ ಸಾಧು ಸರ್ವಂ
ನ ಚಾಪಿ ಕಾವ್ಯಂ ನವಮಿತ್ಯವದ್ಯಮ್ ।
ಸಂತಃ ಪರೀಕ್ಷ್ಯಾನ್ಯತರದ್ ಭಜಂತೇ
ಮೂಢಃ ಪರ-ಪ್ರತ್ಯಯ-ನೇಯ-ಬುದ್ಧಿಃ ॥

ವಾಸ್ತವವಾಗಿ ಈ ಮಾತಿಗೆ ಸದೃಶವಾದ ಮಾತೇ ಕಾಳಿದಾಸ-ಪೂರ್ವವರ್ತಿಯಾದ ಚರಕ-ಸಂಹಿತೆಯಲ್ಲೂ ಬಂದಿರುವುದರಿಂದ, ಈ ಆಯುರ್ವೇದ-ಗ್ರಂಥವೂ ಕ್ರಿಸ್ತಪೂರ್ವದ ಕಾಲಕ್ಕೇ ಸೇರುವುದಾದ್ದರಿಂದ, ಕಾಳಿದಾಸನು ತನ್ನ ನಿಕಟ-ಪೂರ್ವವರ್ತಿಗಳಾದ ಇವರ ಪ್ರಭಾವಕ್ಕೂ ಒಳಪಟ್ಟಿದ್ದನೆಂದು ಊಹಿಸಬಹುದಾಗಿದೆ.

ಸರಿಯಾದ ಅಧ್ಯಾಪಕನು ಹೇಗಿರಬೇಕೆಂಬುದನ್ನಲ್ಲದೆ, ಒಳ್ಳೆಯ ಶಿಷ್ಯನೆಂದರೆ ಎಂತಹವನೆಂಬುದನ್ನು ಸಹ ಕಾಳಿದಾಸನು ಸೂಚಿಸದೆ ಬಿಟ್ಟಿಲ್ಲ. ಮಾಳವಿಕೆಯು ಕಲಿಯುವ ಪರಿಯು ಹೇಗಿತ್ತೆಂಬುದಕ್ಕೆ ಅಲ್ಲಿಯ ಶ್ಲೋಕವೊಂದು ಒಳ್ಳೆಯ ನಿದರ್ಶನವನ್ನು ಕೊಡುತ್ತದೆ. ತನ್ನ ಶಿಷ್ಯೆಯು ಪರಮನಿಪುಣೆ ಹಾಗೂ ಮೇಧಾವಿನೀ – ಎಂಬುದನ್ನು ಹೇಳುತ್ತಾ, "ನಾಟ್ಯದಲ್ಲಿ ಏನೇನನ್ನು ಹೇಳಿಕೊಟ್ಟರೂ ಈ ಬಾಲೆಯು ಆಯಾ ವಿಶೇಷಗಳನ್ನು ಒಡನೆಯೇ ಮಾಡಿತೋರಿಸುತ್ತಾಳೆ", – ಎಂದು ಹೇಳಿ, "ನೋಡುವವರಿಗಂತೂ ಅವಳೇ ನನಗೆ ಹೇಳಿಕೊಡುತ್ತಿದ್ದಾಳೋ ಎಂಬಂತೆ ಆಗುತ್ತಿದೆ!" – ಎನ್ನುತ್ತಾನೆ ನಾಟ್ಯಾಚಾರ್ಯ ಗಣದಾಸ.

"ಪ್ರತ್ಯುಪದೀಶತೀವ ಮೇ ಬಾಲಾ" ಎಂದು ಹೀಗೆ ಹೇಳುವ ಸಂದರ್ಭದಲ್ಲಿ ಆತನು ಬಳಸಿರುವ "ತತ್ತ ದ್-ವಿಶೇಷಕರಣಾತ್" ಎಂಬ ಮಾತಂತೂ ಬಹಳ ರೋಚಕವಾಗಿದೆ. "ಯದ್ಯತ್ – ತತ್ತತ್ – ವಿಶೇಷಕರಣ" ಎಂಬಲ್ಲಿ "ಏನೇನನ್ನು ಹೇಳಿಕೊಟ್ಟೆನೋ ಆಯಾ ಅಂಶಗಳನ್ನು" ಎಂಬ ಅರ್ಥವು ಬರುವುದೇನೋ ಸರಿ. ಅದಕ್ಕೆ ಮತ್ತೂ ಒಂದು ಅರ್ಥವು ಅವನ ಮನಸ್ಸಿನಲ್ಲಿರುವಂತೆ ತೋರುತ್ತದೆ "ನಾನು ಏನೇನನ್ನು ಹೇಳಿಕೊಡುತ್ತೇನೋ ಅವವನ್ನು ಮತ್ತೂ ವಿಶೇಷವಾದ ಬಗೆಯಲ್ಲಿ (ಎಂದರೆ ಇನ್ನೂ ಮಿಗಿಲಾದ ಪರಿಷ್ಕರಣಗಳೊಂದಿಗೆ) ಅವಳು ಮಾಡಿತೋರಿಸುತ್ತಾಳೆ" ಎಂಬ ಅರ್ಥವದು. ಅನ್ವಯವನ್ನು ಹಾಗಿಟ್ಟುಕೊಂಡರೆ ಅಲ್ಲವೇ ಅವಳು ನನಗೇ "ಪ್ರತ್ಯುಪದೀಶತೀವ ಮೇ" ಎಂಬ ಮಾತಿಗೆ ಔಚಿತ್ಯವು ಪರಿಸ್ಫುಟವಾಗಿ ತೋರುವುದು?

ಅರ್ಥಾತ್, ಗುರುವು ಹೇಳಿಕೊಟ್ಟದ್ದನ್ನು ಶಿಷ್ಯನು ಯಥಾವತ್ತಾಗಿ ಕಲಿತುಕೊಂಡುಬಿಟ್ಟು, ಅದನ್ನು ಅಲ್ಲೇ ಆಗಲೇ ಒಪ್ಪಿಸುವುದು ಸಹ ದೊಡ್ಡ

ಸಾಧನೆಯೇ ಸರಿ; ಆದರೂ, ಗುರುವು ಬೋಧಿಸಿದುದಕ್ಕೆ ಮತ್ತಷ್ಟು ಮೆರುಗುಬರುವಂತೆ ಮಾಡಿ, ಗುರುವೇ ಬೆರಗಾಗುವಂತೆ ಮರುಕ್ಷಣದಲ್ಲಿಯೇ ಮಾಡಿಬಿಡುವ ಶಿಷ್ಯರೇ ಶ್ರೇಷ್ಠ ಶಿಷ್ಯರು – ಎಂಬುದನ್ನು ಸಹ ನಾಟ್ಯಾಚಾರ್ಯನ ಈ ಮಾತು ಸ್ಪಷ್ಟಪಡಿಸುತ್ತದೆ.

ವಿದ್ಯಾರ್ಥಿಗಳಿಗೇ ಒಮ್ಮೆ ಹೇಳಿಕೊಟ್ಟದ್ದನ್ನೇ ಮತ್ತೆ ಮತ್ತೆ ಹೇಳಿಕೊಡಬೇಕಾದ ಸನ್ನಿವೇಶಗಳು ಬರುವುದು ಲೋಕದಲ್ಲಿ ಸಾಮಾನ್ಯವೇ. ಏಕಸಂಧಿಗ್ರಾಹಿಗಳಾದವರು ಒಮ್ಮೆ ಕೇಳಿಯೇ ಒಮ್ಮೆ ನೋಡಿಯೇ ಗ್ರಹಿಸಿಬಿಡುವರು. ಆದರೆ ಮತ್ತೂ ಉತ್ತಮ-ಶಿಷ್ಯನೆಂದರೆ ಗುರುವು ಬೋಧಿಸಿದುದಕ್ಕೆ ಮತ್ತಷ್ಟು ಕಳೆಕಟ್ಟುವಂತೆ ಸ್ವಪ್ರತಿಭೆಯನ್ನೂ ಮೇಳೈಸಿ ವಿದ್ಯೆಯನ್ನು ಬೆಳೆಸುವಂತಹವನೇ ಸರಿ – ಎಂಬುದನ್ನು ನಾವಿಲ್ಲಿ ಗ್ರಹಿಸಬಹುದು.

(ಈಚಿನ ಕಾಲದಲ್ಲೂ ಸಹ ವಿಜ್ಞಾನಕ್ಷೇತ್ರದಲ್ಲಿ ಚಂದ್ರಶೇಖರ್ ಎಂಬುವರು ತಮ್ಮ ಏಕೈಕ ವಿದ್ಯಾರ್ಥಿಗೆ ಬೋಧಿಸಿದಾಗ, ಶಿಷ್ಯನಿಗೆ ನೋಬೆಲ್ ಪಾರಿತೋಷಿಕವು ಬಂದು, ಅದಾದ ಕೆಲಕಾಲದ ನಂತರವೇ ಗುರುವಿಗೆ ಆ ಪಾರಿತೋಷಿಕವು ಸಂದದ್ದಾದರೂ, ಗುರು-ಶಿಷ್ಯರಿಬ್ಬರೂ ಎಂತಹ ಮೇಲ್ದರ್ಜೆಯವರೆಂಬುದನ್ನು ಈ ನಿದರ್ಶನವು ತೋರಿಸುತ್ತದೆ.) ಆದಲ್ಲದೆ, ನಮ್ಮ ದೇಶದಲ್ಲಿ ಪ್ರಚುರವಾಗಿದ್ದ "ಶಿಷ್ಯಾದ್ ಇಚ್ಛೇತ್ ಪರಾಜಯಮ್" (ಶಿಷ್ಯನು ತನ್ನನ್ನು ಮೀರಿಸುವುದನ್ನು ಗುರುವು ಬಯಸಬೇಕು) ಎಂಬ ನ್ಯಾಯದ ಬೆಲೆಯನ್ನು ನಾವು ಮನದಟ್ಟು ಮಾಡಿಕೊಳ್ಳಬಹುದು.

ಈ ಸಂದರ್ಭದಲ್ಲಿ ಕಾಳಿದಾಸನು ಕೊಡುವ ಸುಂದರವಾದ ಉಪಮೆಯು ಇಲ್ಲಿ ಅತ್ಯುಚಿತವಾಗಿ ತೋರುತ್ತದೆ. ಸಮುದ್ರದಲ್ಲಿಯ ಕಪ್ಪೆಚಿಪ್ಪಿಗೆ (ಸ್ವಾತೀನಕ್ಷತ್ರದ) ಮಳೆಯ ಹನಿ ಬಿದ್ದು, ಅದುವೆ ಮುತ್ತಾಗುವುದಷ್ಟೆ? ಅಲ್ಲಿ ಬಿದ್ದದ್ದು ನೀರಿನ ಹನಿ, ಆದರೆ ಅದರಿಂದ ಹೊರಬಂದದ್ದು ಒಂದು ಮುತ್ತು! ಹೀಗೆ ಸರಿಯಾದ ಪಾತ್ರನಲ್ಲಿ ಇಡಲಾದ ವಿದ್ಯೆಯು ಗುಣವಿಶೇಷವನ್ನು ಹೊಂದುವುದು – ಎನ್ನುತ್ತಾನೆ ಗಣದಾಸ. (ಮಾಲವಿಕಾಗ್ನಿಮಿತ್ರ ೧.೬):

ಪಾತ್ರ-ವಿಶೇಷೇ ನ್ಯಸ್ತಂ
  ಗುಣಾಂತರಂ ವ್ರಜತಿ ಶಿಲ್ಪಮಾಧಾತುಃ।
ಜಲಮಿವ ಸಮುದ್ರ-ಶುಕ್ತೌ
  ಮುಕ್ತಾಫಲತಾಂ ಪಯೋದಸ್ಯ॥

ಹೀಗೆ ಸಚ್ಛಿಷ್ಯರ ಕೈಗೆ ಸಿಲುಕಿದ ವಿದ್ಯೆಯು ಗುಣಾತಿಶಯವನ್ನು ಹೊಂದಿ, ಗುರುವಿಗೂ ವಿದ್ಯೆಗೂ ಕೀರ್ತಿಯನ್ನೂ ಪರಿಷ್ಕಾರವನ್ನೂ ತಂದುಕೊಡುವುದರಲ್ಲಿ ಸಂಶಯವಿಲ್ಲ. ಅರ್ಥಾತ್, ಸರಿಯಾದ ಶಿಷ್ಯನೆಂದರೆ, ಗುರುವಿಗೂ ವಿದ್ಯೆಗೂ ಕೆಟ್ಟಹೆಸರು ಬರದಂತಹ ಜವಾಬ್ದಾರಿಯನ್ನು ಹೊತ್ತು, ಎರಡಕ್ಕೂ ಸುಪ್ರಥೆಯು ಏರ್ಪಡುವಂತೆಯೂ, ತನಗೂ ಸಮಾಜಕ್ಕೂ ಉಪಕಾರವಾಗುವಂತೆಯೂ ವರ್ತಿಸತಕ್ಕದ್ದು – ಎಂಬ ಸಂದೇಶವಿಲ್ಲಿದೆ.

ಪ್ರತಿಭಾಶಾಲಿಗಳಾದ ವಿದ್ಯಾರ್ಥಿಗಳಲ್ಲಿ ಅವರ ಪೂರ್ವಜನ್ಮದ ಸಂಸ್ಕಾರಗಳೂ ಕೆಲಸ ಮಾಡಿರುವುವು – ಎಂಬುದನ್ನು ಹೇಳುತ್ತಾ ಪಾರ್ವತಿಗೆ ಕಷ್ಟವೇ ಇಲ್ಲದೆ ವಿದ್ಯೆಗಳು ತಾವಾಗಿ ಒಲಿದುಬಂದವು; ಏಕೆಂದರೆ ಅವು ಹಿಂದಿನ ಜನ್ಮದ ಬಳುವಳಿಯೇ ಸರಿ – ಎಂಬುದನ್ನೂ ಸೂಕ್ಷ್ಮಜ್ಞನಾದ ಕವಿ ಉಲ್ಲೇಖಿಸಲು ಮರೆಯುವುದಿಲ್ಲ (ಕುಮಾರಸಂಭವ ೧.೩೦) "ಸ್ಥಿರೋಪದೇಶಾಮುಪದೇಶಕಾಲೇ ಪ್ರಪೇದಿರೇ ಪ್ರಾಕ್ತನ–ಜನ್ಮ–ವಿದ್ಯಾಃ."

ಇನ್ನು ಅಭಿಜ್ಞಾನ–ಶಾಕುಂತಲದಲ್ಲಿ, ಒಳ್ಳೆಯ ಶಿಷ್ಯನಿಗೆ ಬೋಧಿಸಿದ ವಿದ್ಯೆಯು ಗುರುವಿಗೆ ಸಂತೋಷಕ್ಕೆ ಕಾರಣವಾಗುತ್ತದೆ, ಶೋಕಕ್ಕೆಂದೂ ಕಾರಣವಾಗುವುದಿಲ್ಲ – ಎನ್ನುವ ಮಾತಿದೆ "ಸುಶಿಷ್ಯ–ಪರಿದತ್ತೇವ ವಿದ್ಯಾ ಅಶೋಚನೀಯಾಸಿ ಸಂವೃತ್ತಾ". "ಅಶೋಚನೀಯ"ವೆಂದರೆ ಇಲ್ಲಿ "ಅತ್ಯಭಿನಂದನೀಯ"ವೆಂದೇ: ನಕಾರಾತ್ಮಕವಾದುದರ ನಿಷೇಧನವೆಂಬುದು ಸಕಾರಾತ್ಮಕವಾದುದನ್ನು ಸಬಲವಾಗಿ ಸರಿಗಟ್ಟಿಸಲೆಂದೇ ಸರಿ!

ಹೀಗೆ ಒಟ್ಟಿನಲ್ಲಿ, ಶಿಕ್ಷಣದ ನಾನಾಮುಖಗಳನ್ನು ಕಾಳಿದಾಸನು ಪ್ರಸಂಗ–ಸಂಗತವಾಗಿ ಅಲ್ಲಲ್ಲಿ ಯಥೋಚಿತವಾಗಿ ಸೂಚಿಸಿರುವುದನ್ನು ಆತನ ಹಲವು ಕೃತಿಗಳಲ್ಲೂ ನೋಡುತ್ತೇವೆ.

ಮತ್ತು ಈ ಎಲ್ಲ ಕಾವ್ಯ–ನಾಟಕಗಳಲ್ಲೂ ಕಾಣಸಿಗುವ, ವಿದ್ಯೆಯನ್ನು ಕುರಿತಾದ ಮಾತುಗಳಲ್ಲೂ (ಇನ್ನಿತರ ವಿಷಯಗಳನ್ನು ಹಲವನ್ನು ಕುರಿತಾದ ಮಾತುಗಳಲ್ಲೂ) ಪರಸ್ಪರ–ಹೃದಯ–ಸಂವಾದವು ಅತಿಶಯಿತವಾಗಿಯೇ ಇರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ, "ಕಾಳಿದಾಸರು ಇಬ್ಬರಿದ್ದಿರಬೇಕು, ಮೂವರಿದ್ದಿರಬೇಕು; ಏಕೆಂದರೆ ನಮಗಿಂದು ಇತಿಹಾಸದಲ್ಲಿ ದೊರೆತಿರತಕ್ಕ ಅಂಶಗಳಿಗೆ ತಾಳೆಯಾಗಬೇಕು" – ಎಂದೆಲ್ಲ ಅತ್ಯಾಗ್ರಹಪೂರ್ವಕವಾಗಿ ಹೇಳುವುದು ನಿಶಿತ–ವಿಮರ್ಶೆಗೆ ನಿಲ್ಲತಕ್ಕದ್ದಲ್ಲವೆಂದೇ ಹೇಳಬೇಕಾಗುತ್ತದೆ.

ಅಂತೂ ಇತ್ತ ಆಚಾರ್ಯನ ದೃಷ್ಟಿಯಿಂದ ಹೇಳಬೇಕಾದ ಮಾತುಗಳನ್ನೂ, ಅತ್ತ ವಿದ್ಯಾರ್ಥಿಯ ದೃಷ್ಟಿಯಿಂದ ಹೇಳಬೇಕಾದ ಮಾತುಗಳನ್ನೂ, ಒಟ್ಟಿನ ವಿದ್ಯಾಭಿವೃದ್ಧಿಯ ದೃಷ್ಟಿಯಿಂದ ಹೇಳಬೇಕಾದ ಮಾತುಗಳನ್ನೂ - ಎಲ್ಲವನ್ನೂ ಅಸಾಧಾರಣವಾದ ಸೂಕ್ಷ್ಮದೃಷ್ಟಿಯಿಂದಲೂ ಪ್ರಶಂಸನೀಯವಾದ ಜವಾಬ್ದಾರಿಯಿಂದಲೂ ಅಂದಿಗೂ ಇಂದಿಗೂ ಮುಂದಿನಕಾಲಕ್ಕೂ ಸುಷ್ಠುವಾಗಿ ಅನ್ವಯಿಸುವಂತೆ ಸುಭಗವಾಗಿ ಕಾಳಿದಾಸನು ಹೇಳಿದ್ದಾನೆಂಬುದರಲ್ಲಿ ಸಂಶಯವಿಲ್ಲ.

ಲೋಕಜ್ಞತ್ವ-ತತ್ತ್ವಜ್ಞತ್ವಗಳು ಕವಿತ್ವದೊಂದಿಗೆ ಮೇಳೈಸಿರುವುದನ್ನು ಕಾಳಿದಾಸನಲ್ಲಿ ಕಾಣುವಂತೆ ಇತರರಲ್ಲೆಷ್ಟು ಮಂದಿಯಲ್ಲಿ ಕಾಣುವೆವು?

ಸೋಮನಹಳ್ಳಿ ಮತ್ತು ಕೆರೆ ಚೂಡಹಳ್ಳಿಯ ಪ್ರಾಚೀನ ಸ್ಮಾರಕಗಳು

◈

ಡಾ. ಮುತ್ತುರಾಜು

ಸೋಮನಹಳ್ಳಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಪ್ರಮುಖ ಆಯಕಟ್ಟಿನ ಗ್ರಾಮ. ಪ್ರಾಕ್ಚರಿತ್ರ್ಯ ಗ್ರಾಮಗಳಾದ ಬನ್ನೇರು ಘಟ್ಟ, ರಾಗಿಹಳ್ಳಿ, ಗೊಟ್ಟಿಗೆ ಹಳ್ಳಿಗಳಲ್ಲಿ ಬೃಹತ್ ಶಿಲಾಯುಗದ ಶಿಲಾಸಮಾಧಿಗಳು ದೊರೆತಿವೆ (ಕಾಲ ಕ್ರಿ. ಪೂ. ಸುಮಾರು ೮೦೦) ಈ ಗ್ರಾಮಗಳ ಬಳಿಯೆ ಇರುವ ಸೋಮನಹಳ್ಳಿ ಗ್ರಾಮವೂ ಸಹ ರಾಮನಗರ ಜಿಲ್ಲೆ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳನ್ನು ಬೆಸೆಯುವ ಪ್ರಮುಖ ಕೃಷಿ ಮತ್ತು ವಾಣಿಜ್ಯ ಸ್ಥಳವಾಗಿದೆ.

ಕನಕಪುರ ಮುಖ್ಯ ರಸ್ತೆಗೆ ಹೊಂದಿಕೊಂಡಿರುವಂತಹ ಈ ಪ್ರಾಚೀನ ಗ್ರಾಮದಲ್ಲಿ ಮಾದೇಶ್ವರ ದೇವಾಲಯವಿದ್ದು ಶಿವರಾತ್ರಿ ಹಬ್ಬದ ವೇಳೆ ಪುಟ್ಟ ಜಾತ್ರೆಯು ಸಹ ನಡೆದುಕೊಂಡು ಬಂದಿದೆಯಾದರೂ, ಗ್ರಾಮದ ಪ್ರಮುಖ ಸ್ಥಳದ ಮಧ್ಯೆ ಇರುವ ಬಸವೇಶ್ವರ, ಹನುಮಂತ ಮತ್ತು ಮಾರಮ್ಮದೇವಿಯ ಅಂಗಳದಲ್ಲಿ ಎರಡು ಪ್ರಾಚೀನ ಸ್ಮಾರಕಗಳು ಕಂಡು ಬಂದಿವೆ. ಊರ ಹಬ್ಬ ಮತ್ತು ಇತರೆ ವಿಶೇಷ ದಿನಗಳಲ್ಲಿ ಈ ಸ್ಮಾರಕಗಳಿಗೆ ಸ್ಥಳೀಯರು ಹರಿಶಿಣ ಮತ್ತು ಕುಂಕುಮ ಹಚ್ಚಿ ಪೂಜೆ ಸಲ್ಲಿಸುತ್ತಾರೆ.

ಪೂರ್ವದಿಕ್ಕಿಗೆ ಮುಖಮಾಡಿ ನಿಲ್ಲಿಸಿರುವ ಈ ಪ್ರಾಚೀನ ಸ್ಮಾರಕಗಳು ಮೇಲುನೋಟಕ್ಕೆ ತೀರ ಸರಳವಾಗಿ ಕಂಡರೂ ಸಹ ರೋಚಕ ಘಟನೆಗಳ ನೈಜ ಚಿತ್ರಣಗಳಾಗಿವೆ.

ಈ ಎರಡರಲ್ಲಿ ಬಲಬದಿಯಲ್ಲಿರುವ ಪ್ರಾಚೀನ! ಸ್ಮಾರಕವು ವೀರ–ಮಾಸ್ತಿ ಸ್ಮಾರಕವಾಗಿದ್ದು ೨ ೧/೨ ಅಡಿ ದಪ್ಪವಾಗುಳ್ಳ ಗ್ರಾನೈಟ್ ಆಗಿದೆ ಎರಡು ಹಂತಗಳಲ್ಲಿ

ಚಿತ್ರಣಗಳನ್ನು ಮೂಡಿಸಲಾಗಿದ್ದು, ಮೊದಲನೆಯ ಹಂತದಲ್ಲಿ ವೀರನು ವೀರತನದಿಂದ ಯುದ್ಧಮಾಡಲು ಸನ್ನದ್ಧನಾಗಿ ನಿಂತಿದ್ದು ತನ್ನ ಎಡದ ಕೈನಲ್ಲಿ ಧನುಸ್ಸುವನ್ನು ಹಿಡಿದಿದ್ದಾನೆ. ಬಲದ ಕೈನಲ್ಲಿ ಚಂದ್ರಾಕಾರದ ಮುಖ್ಯವುಳ್ಳ ಪಟ್ಟ ಆಯುಧವನ್ನು ಎತ್ತಿ ಹಿಡಿದಿದ್ದಾನೆ. ನಡುವಿನಲ್ಲಿ ಬಿಚ್ಚುಗತ್ತಿ ಇದೆ. ಕರ್ಣಗಳಲ್ಲಿ ಕುಂಡಲಗಳು ಇದ್ದು ಸಾಧಾರಣವಾದ ಉಡುಗೆಯನ್ನು ಧರಿಸಿದ್ದಾನೆ. ಈ ವೀರನೆದುರಿಗಿರುವ ಶತೃವು ಧನಸ್ಸುವಿಗೆ ಬಾಣವನ್ನು ಹೂಡಿ ವೀರನನ್ನು ಕೊಲ್ಲಲು ಹೊರಟಿದ್ದಾನೆ. ಇವನ ಶಿರೋಮುಡಿ ಶಿರದ ಹಿಂಭಾಗಕ್ಕೆ ಬರುವಂತೆ ಕಟ್ಟಲ್ಪಟ್ಟಿದೆ. ಇವನಿಗೂ ಸಹ ಕರ್ಣಗಳಲ್ಲಿ ಕುಂಡಲಗಳಿದ್ದು ಸಾಧಾರಣ ಉಡುಗೆ ಇವನದ್ದಾಗಿವೆ.

ಈ ಸ್ಮಾರಕದ ಎರಡನೇ ಹಂತದಲ್ಲಿ ಮಡಿದ ವೀರನು ನೇರವಾಗಿ ತನ್ನ ಇಬ್ಬರು ಪತ್ನಿಯರ ಜೊತೆ ಕರಗಳನ್ನು ಮುಗಿದು ಕೈಲಾಸದಲ್ಲಿ ಕುಳಿತು ಕೊಂಡಿರುವ ಚಿತ್ರಣವಿದೆ. ಅಪ್ಸರೆಯರು ಭೂಲೋಕದಿಂದ ಚಾಮರ ಬೀಸುತ್ತ ಕರೆದೊಯ್ಯುವ ಚಿತ್ರಣವನ್ನು ಬಿಡಲಾಗಿದೆ. ಇದೆ ಹಂತದ ಬಲಪಾರ್ಶ್ವದಲ್ಲಿ ಶಿವಗಣ ಒಬ್ಬನು ಶಿವಲಿಂಗವನ್ನು ಪೂಜಿಸುತ್ತಾ ನಿಂತಿರುವ ಚಿತ್ರಣವಿದ್ದು ಇಲ್ಲಿ ಮಡಿದಿರುವ ವೀರನು ಯಾವುದೋ ಕಾರಣಕ್ಕೆ ಆಕ್ರಮಣ ಮಾಡಿರುವ ಶೃತೃವಿನ ಜೊತೆ ಆಯುಧಗಳನ್ನಿಡಿದು ಕಾದಾಡಿದ್ದಾನೆ. ಆದರೆ ಹೋರಾಟದಲ್ಲಿ ಹತನಾಗಿದ್ದಾನೆ. ಮಡಿದ ಈತನ ಇಬ್ಬರು ಸತಿಯರು ಅಂದಿನ ಸಾಮಾಜಿಕ ನಂಬಿಕೆ ಮತ್ತು ಪದ್ಧತಿಯಂತೆ ಸತಿಸಹಗಮನ ಪದ್ಧತಿಯನ್ನು ಅನುಸರಿಸಿ ಸಾವಿನಲ್ಲೂ ಪತಿಯನ್ನು ಹಿಂಬಾಲಿಸಿಕೊಂಡು ಕೈಲಾಸದಲ್ಲಿರುವ ಪತಿಯನ್ನು ಕೂಡಿ ಕೊಂಡಿದ್ದಾರೆ. ಪ್ರಾಚೀನ ಕಾಲದಲ್ಲಿ ಕಾಡು ಮತ್ತು ಹೊಲಗಳಿಗೆ ಕಾರ್ಯ ನಿಮಿತ್ತ ಹೊರಡುವ ಜನ ತಮ್ಮ ಆಯುಧಗಳನ್ನು ಈ ಸ್ಮಾರಕದ ಮೇಲಿನ ಭಾಗದಲ್ಲಿ ಮಸೆದು ಹರಿತಮಾಡಿ ಕೊಂಡಿರುವ ಕಾರಣ ಮೇಲು ಭಾಗ ಸಾಕಷ್ಟು ಸವೆದು ಹೋಗಿದೆ. ಆದುದರಿಂದ ಸೂರ್ಯ ಚಂದ್ರರ ಚಿತ್ರಣಗಳು ಸವೆದು ಹೋಗಿವೆ. ವೀರನ ಶೌರ್ಯ ಮತ್ತು ಸತಿಯರ ತ್ಯಾಗದ ಘಟನೆಗಳನ್ನು ತಿಳಿಸಿರುವ ಈ ಸ್ಮಾರಕವು ಕ್ರಿ.ಶ. ಸು. ೧೧ನೇ ಶತಮಾನಕ್ಕೆ ಸೇರಿದುದ್ದಾಗಿದೆ ಎಂದು ನಿರ್ಧರಿಸಬಹುದಾಗಿದೆ.

ಇದೇ ಸ್ಮಾರಕದ ಎಡಭಾಗದಲ್ಲಿರುವ ಎರಡನೇ ವೀರಗಲ್ಲು ಸ್ಮಾರಕವೂ ಸಹ ಕಣ ಶಿಲೆಯದಾಗಿದ್ದು ೨ ೧/೨ ಅಡಿ ಅಗಲ, ೨ ೩/೪ ಅಡಿ ಎತ್ತರ ಮತ್ತು ೧/೨ ಅಡಿ ದಪ್ಪವನ್ನು ಹೊಂದಿದೆ. ಈ ಪ್ರಾಚೀನ ಸ್ಮಾರಕದಲ್ಲಿ ಒಂದೇ ಹಂತದ ಚಿತ್ರಣವನ್ನು ಮೂಡಿಸಲಾಗಿದೆ. ವೀರನು ತನ್ನ ಬಲದ ಮಂಡಿಯನ್ನು ಮಡಚಿ. ಭೂಮಿಗೆ ನಿಲ್ಲಿಸಿದ್ದು ಎಡಗಾಲಿನಿಂದ ವೀರತನದಿಂದ ನಿಂತಿದ್ದಾನೆ. ಶಿರದ ಮೇಲೆ ಎತ್ತಿ ಹಿಡಿದಿರುವ ತನ್ನ ಬಲದ ಕೈನಲ್ಲಿ ಅಂದು ಸಮಾಜದಲ್ಲಿ ಬಳಕೆಯಲ್ಲಿದ್ದ ಬಾಯಿ

ತೆರೆದಿರುವ ಚಂದ್ರಾಯುಧವನ್ನು ಹಿಡಿದಿದ್ದಾನೆ. ಎಡದ ಕೈನಲ್ಲಿ ಧನಸ್ಸುವನ್ನು ಹಿಡಿದಿದ್ದಾನೆ. ಎಡದ ಕೈನಲ್ಲಿ ಧನಸ್ಸುವನ್ನು ಹಿಡಿದಿದ್ದಾನೆ. ಇವನು ಹಿಡಿದಿರುವ ಬಿಲ್ಲಿಗೆ ತಾಗುವಂತೆ ಎಡಭಾಗದ ಮಂಡಿಯ ಮೇಲೆ ಇವನು ಕಡಿದು ಹಾಕಿರುವ ಶತೃವಿನ ಮುಂಡವು ಉರುಳಿ ನಿಂತಿದೆ. ರುಂಡವು ಇವನ ಪಾದಗಳ ಹಿಂದೆ ಬಿದ್ದಿದೆ. ಹಿಂಭಾಗಕ್ಕೆ ಎತ್ತಿಕಟ್ಟಿರುವ ತುರುಬು ಶಿರದಲ್ಲಿದ್ದು ಕರ್ಣಗಳಲ್ಲಿ ಕುಂಡಲಗಳು ಇವೆ. ವೀರಗಟ್ಟೆ ವಸ್ತ್ರ ಇವನಿಗೆ ಇದೆ. ಇನ್ನಿತರ ಹೋರಾಟದ ಕಾರಣಗಳು ಈ ಪ್ರಾಚೀನ ಶಿಲ್ಪದಲ್ಲಿ ಸ್ಪಷ್ಟವಾಗಿ ನಿರೂಪಿಸಿಲ್ಲವಾಗಿದ್ದು ಸೂರ್ಯ ಚಂದ್ರರ ಚಿತ್ರಣಗಳೂ ಸಹ ಕಾಣದಾಗಿವೆ. ಯಾವುದೋ ಕಾರಣಕ್ಕೆ ಎರಗಿ ಬಂದ ಶತೃವನ್ನು ವೀರನು ರುಂಡ ಮತ್ತು ಮುಂಡಗಳು ಬೇರ್ಪಡುವಂತೆ ಸಂಹರಿಸಿದ್ದಾನೆ, ಆದರೆ ಇತರ ಶತೃಗಳೊಡನೆ ಹೋರಾಡಲಾಗದೆ ತಾನೂ ಸಹ ಹತನಾಗಿದ್ದಾನೆ. ಆದುದರಿಂದ ಈ ಸ್ಮಾರಕದ ನಿರ್ಮಾಣವಾಗಿದೆ. ಒಂದೇ ಹಂತದ ಚಿತ್ರಣ ಮತ್ತು ವೀರನ ವೇಷ ಭೂಷಣಗಳ ಲಕ್ಷಣಗಳಿಂದಾಗಿ, ಕ್ರಿ.ಶ. ಸುಮಾರು ೧೦ನೇ ಶತಮಾನಕ್ಕೆ ಸೇರುವ ವೀರಗಲ್ಲು ಸ್ಮಾರಕ ಇದಾಗಿದೆ ಎಂದು ನಿರ್ಧಾರ ಮಾಡಬಹುದಾಗಿದೆ. ವೀರನನ್ನು ಅಪ್ಸರೆಯರು ಸ್ವರ್ಗ ಅಥವಾ ಕೈಲಾಸಕ್ಕೆ ಕರೆದೊಯ್ಯುವ ದೃಶ್ಯ ಇಲ್ಲಿ ಇಲ್ಲವಾಗಿದೆ.

ಬೆಂಗಳೂರು ಮತ್ತು ಕನಕಪುರ ಮುಖ್ಯ ರಸ್ತೆಯ ಮತ್ತೊಂದು ಬದಿಯಲ್ಲಿ ಸೋಮನ ಹಳ್ಳಿಗೆ ಹೊಂದಿಕೊಂಡಿರುವ ಮತ್ತೊಂದು ಪ್ರಾಚೀನ ಗ್ರಾಮ ಕೆರೆಚೂಡಹಳ್ಳಿ ಆಗಿದೆ. ಈ ಹಳ್ಳಿಯು ಸಹ ಉತ್ತರಹಳ್ಳಿ ಹೋಬಳಿಗೆ ಸೇರಿದ್ದು ಮೈಸೂರು ರಸ್ತೆಯನ್ನು ಬೆಸೆಯುವ ಆಯ ಕಟ್ಟಿನ ಸ್ಥಳದಲ್ಲಿದೆ.

ಈ ಹಳ್ಳಿಯ ಪ್ರವೇಶದಲ್ಲಿಯೇ ಇರುವ ಕಬ್ಬಾಳಮ್ಮ, ಸೊಲ್ಲಾಪುರದಮ್ಮ, ಹನುಮಂತ ಹಾಗೂ ಬಸವೇಶ್ವರ ದೇವಾಲಯದ ಬಳಿ ಎರಡು ಪ್ರಾಚೀನ ಸ್ಮಾರಕಗಳು ಪತ್ತೆ ಆಗಿವೆ. ಈ ಮೇಲೆ ತಿಳಿಸಿರುವ ದೇವಾಲಯಗಳ ಬಳಿ ಇರುವ ಅರಳಿಕಟ್ಟೆಯ ಮಗುಲಲ್ಲಿ ನಿಲ್ಲಿಸಿರುವ ಪ್ರಾಚೀನ ಸ್ಮಾರಕವೊಂದು ೪ ೧/೨ ಅಡಿ ಎತ್ತರ ೨ ೧/೨ ಅಡಿ ಅಗಲ ೩/೪ ಅಡಿ ದಪ್ಪವುಳ್ಳ ಕಣ ಶಿಲೆಯ ಶಿಲ್ಪವಾದುದಾಗಿದೆ. ಮೂರು ಹಂತಗಳಲ್ಲಿ ಈ ಸ್ಮಾರಕವನ್ನು ಮೂಡಿಸಲಾಗಿದೆ.

ಕೆಳಗಿನಿಂದ ಮೊದಲನೆಯ ಹಂತದಲ್ಲಿ ಓರ್ವ ವೀರನು ತನ್ನ ಎಡದ ಕೈನಲ್ಲಿ ಚಂದ್ರಾಯುಧದಂತಹ ಆಯುಧವನ್ನು ಪ್ರಯೋಗಿಸಲು ಸಜ್ಜಾಗಿದ್ದಾನೆ. ಧನುಸ್ಸುವಿನ ಮುಂದೆ ಓರ್ವ ಮಹಿಳೆ ನಿಂತಿದ್ದು ಇಳಿಬಿಟ್ಟ ತನ್ನ ಬಲದ ಕೈನಲ್ಲಿ ಮಡಿದಿರುವ ಶತ್ರುವಿನ ಶಿರೋಮುಡಿಯನ್ನು ಹಿಡಿದಿದ್ದಾಳೆ. ಈಕೆಯ ಶರೀರದ ನಡುಭಾಗದಿಂದ ಇತ್ತೀಚೆಗೆ ಸಿಮೆಂಟ್‌ನಿಂದ ಬಳಿದಿರುವುದರಿಂದ ಇನ್ನಿತರ ಚಿತ್ರಣಗಳು ಸ್ಪಷ್ಟವಾಗಿಲ್ಲ

ಇಲ್ಲಿನ ವೀರನಿಗೆ ಹಿರಿದಾದ ತುರುಬುವಿನ ಗಂಟು ಶಿರದಲ್ಲಿದ್ದು ವೀರಗಚ್ಚೆಯ ಉಡುಗೆ ಇದೆ ಅಲ್ಲದೆ ನಡುವು ಮತ್ತು ತೋಳಿನಲ್ಲಿ ಆಭರಣಗಳಿವೆ. ಮಹಿಳೆಯ ಚಿತ್ರಣದಲ್ಲಿ ಕುಚಗಳು ಸ್ಪಷ್ಟವಾಗಿದ್ದು ಇನ್ನಿತರ ಚಿತ್ರಣಗಳು ಸವೆದಿರುವುದರಿಂದ ಅಸ್ಪಷ್ಟ ರೂಪ ಗೋಚರಿಸುತ್ತದೆ.

ಕೆಳಗಿನಿಂದ ಮೊದಲನೆಯ ಹಂತದಲ್ಲಿ ಓರ್ವ ವೀರನು ತನ್ನ ಎಡದ ಕೈನಲ್ಲಿ ಧನಸ್ಸುವನ್ನು ಹಿಡಿದಿದ್ದು ಬಲದ ಕೈನಲ್ಲಿ ಚಂದ್ರಾಯುಧದಂತಹ ಆಯುಧವನ್ನು ಪ್ರಯೋಗಿಸಲು ಸಜ್ಜಾಗಿದ್ದಾನೆ. ಧನುಸ್ಸುವಿನ ಮುಂದೆ ಓರ್ವ ಮಹಿಳೆ ನಿಂತಿದ್ದು ಇಳಿಬಿಟ್ಟ ತನ್ನ ಬಲದ ಕೈನಲ್ಲಿ ಮಡಿದಿರುವ ಶತೃವಿನ ಶಿರೋಮುಡಿಯನ್ನು ಹಿಡಿದಿದ್ದಾಳೆ. ಈಕೆಯ ಶರೀರದ ನಡುಭಾಗದಿಂದ ಇತ್ತೀಚೆಗೆ ಸಿಮೆಂಟ್‌ನಿಂದ ಬಳಿದಿರುವುದರಿಂದ ಇನ್ನಿತರ ಚಿತ್ರಣಗಳು ಸ್ಪಷ್ಟವಾಗಿಲ್ಲ. ಇಲ್ಲಿನ ವೀರನಿಗೆ ಹಿರಿದಾದ ತುರುಬುವಿನ ಗಂಟು ಶಿರದಲ್ಲಿದ್ದು ವೀರಗಚ್ಚೆಯ ಉಡುಗೆ ಇದೆ ಅಲ್ಲದೆ ನಡುವು ಮತ್ತು ತೋಳಿನಲ್ಲಿ ಆಭರಣಗಳಿವೆ. ಮಹಿಳೆಯ ಚಿತ್ರಣಗಳು ಸವೆದಿರುವುದರಿಂದ ಅಸ್ಪಷ್ಟ ರೂಪ ಗೋಚರಿಸುತ್ತಿದೆ.

ಈ ಪ್ರಾಚೀನ ಸ್ಮಾರಕದ ಎರಡನೇ ಹಂತದಲ್ಲಿ ವೀರನು ವೀರತನದಿಂದ ನಿಂತ ಭಂಗಿಯಲ್ಲಿದ್ದು ಎಡದ ಕೈನಲ್ಲಿ ಹಿಡಿದಿರುವ ಧನಸ್ಸುವಿಗೆ ಬಲಗೈನಲ್ಲಿ ಬಾಣವನ್ನು ಹೂಡಿ ಎದುರಿಗೆ ಕೆನೆಯುತ್ತಿರುವ ಅಶ್ವದ ಮೇಲೆ ಕುಳಿತ ಶತೃವಿನ ಮೇಲೆ ಪ್ರಯೋಗಿಸುತ್ತಿದ್ದಾನೆ. ಶತೃವು ಉದ್ದನೆಯ ಈಟಿಯೊಂದನ್ನು ತನ್ನ ಬಲದ ಕೈನಲ್ಲಿ ಎತ್ತಿ ಹಿಡಿದು ವೀರನ ಮೇಲೆ ಪ್ರಯೋಗಿಸುತ್ತಿದ್ದಾನೆ. ಶತೃವು ಉದ್ದನೆಯ ಈಟಿಯೊಂದನ್ನು ತನ್ನ ಬಲದ ಕೈನಲ್ಲಿ ಎತ್ತಿ ಹಿಡಿದು ವೀರನ ಮೇಲೆ ಪ್ರಯೋಗಿಸುತ್ತಿದ್ದಾನೆ.

ಮೇಲಿನ ಮೂರನೆಯ ಹಂತದಲ್ಲಿ ಶಿವಗಣ ಒಬ್ಬನು ಶಿವಲಿಂಗವನ್ನು ಪೂಜಿಸುತ್ತಿದ್ದು ಬಳಿಯಲ್ಲಿ ನಂದಿಯ ಚಿತ್ರಣವಿದೆ. ಈ ಪ್ರಾಚೀನ ಸ್ಮಾರಕದ ಎಲ್ಲಾ ಅಂಚುಗಳಿಗೂ ಬಣ್ಣ ಬಳಿದಿರುವುದರಿಂದ ಸೂರ್ಯಚಂದ್ರರ ಚಿತ್ರಣವನ್ನು ಗುರುತಿಸುವುದು ಕಷ್ಟವಾಗಿದೆ.

ಈ ಪ್ರಾಚೀನ ಸ್ಮಾರಕದ ಕೆಳಹಂತದಲ್ಲಿ ನಿಂತಿರುವ ಮಹಿಳೆ ಶತೃವಿನ ಉಪಟಳದಿಂದಾಗಿ ಆರ್ತನಾದ ಮಾಡಲಾಗಿ ವೀರನು ಶತೃವಿನ ಜೊತೆ ಹೊರಾಡಿ ಹತ್ಯೆ ಮಾಡಿದ್ದಾನೆ. ಮಹಿಳೆ ಮಡಿದ ಎರಡನೇ ಹಂತದಲ್ಲಿಯೂ ಮತ್ತೆ ಮರಗಿ ಬಂದ ಇನ್ನಿತರ ಶತೃವನ್ನು ಎದುರಿಸುತ್ತಿರುವ ಚಿತ್ರಣವಿರುವುದರಿಂದ ಶತೃವಿನ ಬಂಧುವೋ ಗೆಳೆಯನೋ ವೀರನನ್ನು ಎದುರಿಸಿ ಕೊಲ್ಲುವಲ್ಲಿ ಯಶಸ್ವಿಯಾಗಿದ್ದಾನೆ

ಎಂದು ನಿರ್ಧರಿಸಬಹುದಾಗಿದೆ ಪೆಣ್ಬುಯಲ್ ಪ್ರಕಾರಕ್ಕೆ ಈ ವೀರಗಲ್ಲು ಸ್ಮಾರಕವು ಸೇರುತ್ತದೆ. ಕ್ರಿ.ಶ.ಸುಮಾರು ೧೩ನೇ ಶತಮಾನಕ್ಕೆ ಸೇರುವ ಎಲ್ಲಾ ವೇಷಭೂಷಣ ಮತ್ತು ಶೈಲಿಯನ್ನು ಇಲ್ಲಿ ಗಮನಿಸಬಹುದಾಗಿದೆ.

ಇದೇ ಕೆರೆ ಚೂಡಹಳ್ಳಿಯ ಮುಖ್ಯ ರಸ್ತೆಯ ಬಲಭಾಗದಲ್ಲಿರುವ ಬಸವೇಶ್ವರ ದೇವಾಲಯದ ಬಳಿ ಮತ್ತೊಂದು ಪ್ರಾಚೀನ ಸ್ಮಾರಕವೊಂದನ್ನು ವಿಲ್ಲಿಸಲಾಗಿದ್ದು ಇದನ್ನು ನಾಲ್ಕು ಹಂತಗಳಲ್ಲಿ ಚಿತ್ರಣ ಮೂಡಿಸಲಾಗಿದೆ. ಕಣ ಶಿಲೆಯಲ್ಲಿ ಕಡೆಯಲಾಗಿರುವ ಈ ಪ್ರಾಚೀನ ಸ್ಮಾರಕವು ೪ ೧/೨ ಅಡಿ ಎತ್ತರ ೩ ಅಡಿ ಅಗಲ ಮತ್ತು ೧/೨ ಅಡಿ ದಪ್ಪವನ್ನು ಹೊಂದಿದೆ.

ಕೆಳಹಂತದಲ್ಲಿ ವೀರನೊಬ್ಬನು ತನ್ನ ಎಡದ ಕೈನಲ್ಲಿ ಡಾಲು ಹಿಡಿದು ಬಲದ ಕೈನಲ್ಲಿ ಎತ್ತಿ ಹಿಡಿದ ಖಡ್ಗದಿಂದ ಶತೃವಿನ ಕಡೆಗೆ ಬೀಸುತ್ತಿದ್ದಾನೆ. ಎದುರಿಗಿರುವ ಶತೃವು ಕೆನೆಯುತ್ತಿರುವ ತನ್ನ ಅಶ್ವದ ಮೇಲೆ ಕುಳಿತು ಬಲದ ಕೈನಲ್ಲಿ ಹಿಡಿದಿರುವ ಈಟಿ ಆಯುಧದಿಂದ ವೀರನನ್ನು ಇರಿಯುತ್ತಿದ್ದಾನೆ. ಈಟಿಯು ವೀರನ ಶರೀರವನ್ನು ಹೊಕ್ಕು ಹೊರಗೆ ಬಂದಿದೆ.

ಎರಡನೇ ಹಂತದಲ್ಲಿ ಮಡಿದಿರುವ ವೀರನು ತನ್ನ ಇಬ್ಬರು ಸತಿಯರ ಜೊತೆ ಕರಗಳನ್ನು ಮುಗಿದು ಅರೆ ಪದ್ಮಾಸನದಲ್ಲಿ ಕುಳಿತಿರುವ ದೃಶ್ಯವಿದೆ, ಮೂರನೆಯ ಹಂತದಲ್ಲಿ ಕೈಲಾಸದ ಚಿತ್ರಣವಿದ್ದು ಸ್ಮಾರಕದ ಮೇಲಿನ ಭಾಗ ಹೊಡೆದು ಹೋಗಿದ್ದು ಶಿವಲಿಂಗದ ಪಾರ್ಶ್ವ ಭಾಗ ಮತ್ತು ನಂದಿಯ ಚಿತ್ರಣ ಮಾತ್ರವೇ ಉಳಿದಿದೆ. ಶಿವಗಣದ ಚಿತ್ರಣ ಇಲ್ಲವಾಗಿದೆ. ಸೂರ್ಯ ಚಂದ್ರರ ಚಿತ್ರಣವಿದ್ದಂತ ನಾಲ್ಕನೇ ಹಂತ ಹೊಡೆದಿರುವುದರಿಂದ ಕಾಣೆಯಾಗಿದೆ. ಯಾವುದೋ ಕಾರಣಕ್ಕೆ ವೀರನೊಬ್ಬನು ಅಶ್ವರೂಢ ಶತೃವಿನೊಡನೆ ಹೋರಾಡಿ ಮಡಿದಿದ್ದಾನೆ. ಆದುದರಿಂದ ಈ ವೀರನ ಇಬ್ಬರು ಸತಿಯರು ಅಂದಿನ ನಂಬಿಕೆ ಮತ್ತು ಪದ್ಧತಿಯಂತೆ ಚಿತೆ ಏರಿ ಸಹಗಮನ ಪದ್ಧತಿ ಅನುಸರಿಸಿ ಕೈಲಾಸಕ್ಕೂ ಸಹ ತಮ್ಮ ಪತಿಯನ್ನು ಹಿಂಬಾಲಿಸಿ ಕೊಂಡಿದ್ದಾರೆ. ಕ್ರಿ.ಶ. ಸುಮಾರು ೧೩ನೇ ಶತಮಾನಕ್ಕೆ ಈ ಸ್ಮಾರಕವು ಸೇರಿದ್ದಾಗಿದೆ.

ಈ ಪ್ರಾಚೀನ ಸ್ಮಾರಕಗಳ ಪತ್ತೆಯಿಂದಾಗಿ ಸೋಮನಹಳ್ಳಿ ಮತ್ತು ಕೆರೆ ಚೂಡಹಳ್ಳಿಗಳು ವೀರ ಮತ್ತು ತ್ಯಾಗದ ಪ್ರದೇಶಗಳಾಗಿದ್ದವು ಎಂಬುದಕ್ಕೆ ಸಾಕ್ಷ್ಯಾಧಾರಗಳಾಗಿವೆ.

ಬಸವಣ್ಣನವರ ವಚನಗಳ ಅನುವಾದ ಮತ್ತು ಮಾಸ್ತಿ

◈

ಡಾ. ಎಸ್. ಎಲ್. ಶ್ರೀನಿವಾಸಮೂರ್ತಿ

ವಚನಸಾಹಿತ್ಯವು ಭಾರತೀಯ ಸಾಹಿತ್ಯ ಪರಂಪರೆಗೆ ಕನ್ನಡವು ನೀಡಿರುವ ಅಮೂಲ್ಯವಾದ ಕೊಡುಗೆ. ಅಚ್ಚರಿಯ ಮಾತೆಂದರೆ ೧೯ನೆಯ ಶತಮಾನದ ಆದಿಭಾಗದಲ್ಲಿ ಪಾಶ್ಚಾತ್ಯ ವಿದ್ವಾಂಸರು ಕನ್ನಡದ ಬೇರೆಲ್ಲ ಬಗೆಯ ಸಾಹಿತ್ಯ ಕೃತಿಗಳನ್ನು ಸಂಪಾದಿಸಿ ಪ್ರಕಟಿಸುವ ಕೆಲಸವನ್ನು ಕೈಗೊಂಡರಾದರೂ ಅಪರೂಪವಾದ ಈ ಸಾಹಿತ್ಯಕ ಸಂಪತ್ತನ್ನು ಮುಟ್ಟಹೋಗಲೇ ಇಲ್ಲ. ೨೦ನೇ ಶತಮಾನದ ಆದಿಭಾಗದಲ್ಲಿ ಮಹಾಮಹೋಪಾಧ್ಯಾಯ ರಾ. ನರಸಿಂಹಾಚಾರ್ಯರು ತಮ್ಮ 'ಕರ್ನಾಟಕ ಕವಿಚರಿತೆ'ಯ ಸಂಪುಟಗಳಲ್ಲಿ ಸುಮಾರು ೨೫೦ ಮಂದಿ ವಚನಕಾರರನ್ನು ಪರಿಚಯಿಸಿದರಾದರೂ ಅವುಗಳನ್ನು ಪ್ರಕಟಿಸುವ ಕಾರ್ಯ ತಕ್ಷಣಕ್ಕೆ ಆಗಲಿಲ್ಲ. 'ವಚನಪಿತಾಮಹ'ರೆಂದೇ ಪ್ರಸಿದ್ಧರಾದ ಫಕೀರಪ್ಪ ಗುರಪ್ಪ ಹಳಕಟ್ಟಿಯವರು 'ವಚನ ಶಾಸ್ತ್ರಸಾರ ಭಾಗ-೧'ವನ್ನು ೧೯೨೩ರಲ್ಲಿ ಪ್ರಕಟಿಸುವುದರೊಂದಿಗೆ ವಚನ ಸಾಹಿತ್ಯದ ಶಾಸ್ತ್ರೀಯವಾದ ಪ್ರಕಟಣೆಯು ಆರಂಭವಾಯಿತೆನ್ನಬಹುದು.

ಸ್ವತಃ ಶ್ರೇಷ್ಠ ಸಾಹಿತಿಗಳಾಗಿದ್ದದ್ದು ಮಾತ್ರವಲ್ಲದೇ ಎಲ್ಲ ಬಗೆಯ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ಆಸ್ಥೆಯಿಂದ ಅಧ್ಯಯನ ಮಾಡುತ್ತಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಗಮನ ಕೂಡಲೇ ಹಳಕಟ್ಟಿಯವರ ಕೃತಿಯ ಕಡೆಗೆ ಹರಿದದ್ದು ಸಹಜವೇ ಆಗಿದೆ. ಹರಿದಾಸರ ಕೀರ್ತನೆಗಳಿಂದ ಸ್ಫೂರ್ತಿಗೊಂಡು ಅವರು ಅನೇಕ ಕವನಗಳನ್ನು ರಚಿಸಿದಂತೆಯೇ ಶಿವಶರಣರ ವಚನಗಳನ್ನೂ ಬಹುವಾಗಿ ಮೆಚ್ಚಿಕೊಂಡಿದ್ದರು.ಬಸವಣ್ಣನವರ ವಚನಗಳನ್ನು ಇಂಗ್ಲೀಷಿಗೆ ಅನುವಾದಿಸುವ ಮೂಲಕ ಕನ್ನಡ ತಿಳಿಯದಿರುವವರಿಗೂ ವಚನಸಾಹಿತ್ಯದ ಸೊಗಸನ್ನು ಪರಿಚಯಿಸಲು ಯತ್ನಿಸಿದವರಲ್ಲಿ ಮಾಸ್ತಿಯವರೇ ಮೊತ್ತಮೊದಲಿಗರು.

೧೯೨೭ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರ್ ಆಗಿದ್ದ ಶ್ರೀ ಆರ್. ವೆಂಕಟರತ್ನಂ ನಾಯ್ಡು ಅವರು ವಿಶ್ವವಿದ್ಯಾಲಯದಲ್ಲಿ ದಕ್ಷಿಣದ ನಾಲ್ಕು ಭಾಷೆಗಳಲ್ಲಿ ನಾಲ್ಕು ಉಪನ್ಯಾಸ ಮಾಲೆ ನಡೆಯುವ ಒಂದು ಏರ್ಪಾಡನ್ನು ಆರಂಭಿಸಿದರು. ಆಯೋಜನ ಸಮಿತಿಯ ಸದಸ್ಯರಾಗಿದ್ದ ಬೆನೆಗಲ್ ರಾಮರಾಯರು ಹಾಗೂ ಪಂಜೆ ಮಂಗೇಶರಾಯರ ಸೂಚನೆಯ ಮೇರೆಗೆ ಮಾಸ್ತಿಯವರನ್ನು ಮೊದಲ ಉಪನ್ಯಾಸ ನೀಡಲೆಂದು ವಿಶ್ವವಿದ್ಯಾಲಯ ಆಹ್ವಾನಿಸಿತು. 'ಕನ್ನಡ ನಾಡಿನ ಜನತೆಯ ಸಂಸ್ಕೃತಿ' ಎಂಬ ವಿಷಯವನ್ನು ಕುರಿತು ಮಾಸ್ತಿಯವರು ಉಪನ್ಯಾಸ ನೀಡಿದರು. ಅದೇ ವರ್ಷ ಇದೇ ಶೀರ್ಷಿಕೆಯಲ್ಲಿ ಅವರು ತಮ್ಮ ಉಪನ್ಯಾಸವನ್ನು ಕೃತಿರೂಪದಲ್ಲಿ ಹೊರತಂದರು. ಅದರಲ್ಲಿ ಗ್ರಾಮಜೀವನ, ಹರಿದಾಸರ ಹಾಡುಗಳು, ಜನಪದ ಸಾಹಿತ್ಯ ಮುಂತಾದವುಗಳ ಜೊತೆಗೆ ವೀರಶೈವ ಮತ ಹಾಗೂ ಅದರ ಅನುಭಾವದ ಬಗೆಗೆ ಎರಡು ಅಧ್ಯಾಯಗಳನ್ನು ಬರೆದಿದ್ದಾರೆ. ಜೊತೆಗೆ 'ಬಸವಣ್ಣನವರ ವಚನಗಳು' ಎಂಬ ಪ್ರತ್ಯೇಕ ಅಧ್ಯಾಯವೇ ಇದ್ದು ಅದರಲ್ಲಿ ೨೦ಕ್ಕೂ ಹೆಚ್ಚು ವಚನಗಳನ್ನು ಉದ್ಧರಿಸಿದ್ದಾರೆ. ಬಹುಶಃ ಇದು ವಚನಸಾಹಿತ್ಯವನ್ನು ಕುರಿತಂತೆ ಮಾಸ್ತಿಯವರು ಉಲ್ಲೇಖಿಸಿರುವ ಮೊದಲ ಬರಹ.

೧೯೩೧ರಲ್ಲಿ ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ಬಸವಣ್ಣನವರ ವಚನಗಳನ್ನು ಕುರಿತಂತೆ ಇಂಗ್ಲೀಷಿನಲ್ಲಿ ಭಾಷಣ ಮಾಡಿದ್ದು ಎರಡನೆಯ ಹಂತ. ಈ ಭಾಷಣವು ಸೊಸೈಟಿಯ ಪ್ರಕಟಣೆಯಾದ 'The Quarterly Journal of the Mythic Society'ಯ ೨೨(೧)ನೇ ಸಂಚಿಕೆಯಲ್ಲಿ ಪ್ರಕಟವಾಗಿದೆ (ಪುಟ:೨೬–೪೪, ೧೯೩೧). ಇದರಲ್ಲಿ ಮೂರು ಭಾಗಗಳಿದ್ದು ಮೊದಲನೆಯದರಲ್ಲಿ ಬಸವಣ್ಣನವರ ಜೀವನ ಮತ್ತು ಅವರ ಚಿಂತನೆಗಳ ಸ್ಥೂಲ ಪರಿಚಯವಿದೆ. ಎರಡನೆಯ ಭಾಗದಲ್ಲಿ ೭೮ ವಚನಗಳ ಇಂಗ್ಲಿಷ್ ಅನುವಾದವನ್ನು ೩೯ ಉಪವಿಭಾಗಗಳ ಅಡಿಯಲ್ಲಿ ನೀಡಲಾಗಿದೆ. ಹೀಗೆ ಮಾಡುವಾಗ ಒಂದು ಅಥವಾ ಎರಡು ವಾಕ್ಯಗಳಲ್ಲಿ ರೂಪದ ಮಾತುಗಳಿವೆ. ಕನ್ನಡದ ಮೂಲವಚನಗಳನ್ನು ಉಲ್ಲೇಖಿಸದೆ ಕೇವಲ ಇಂಗ್ಲಿಷ್ ಅನುವಾದವನ್ನು ಮಾತ್ರ ನೀಡಲಾಗಿದೆ.

ಉದಾಹರಣೆಗೆ

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
ಅಂಬೆ ಅಂಬೆ ಎಂದು ಕರೆವುತ್ತಲಿದ್ದೇನೆ,
ಅಂಬೆ ಅಂಬೆ ಎಂದು ಒರಲುತ್ತಲಿದ್ದೇನೆ,
ಕೂಡಲಸಂಗಮದೇವ ಬಾಳು ಬಾಳೆಂಬನ್ನಕ್ಕ.

ಎಂಬ ವಚನವನ್ನು ಮಾಸ್ತಿಯವರು ಅನುವಾದಿಸಿರುವುದು ಹೀಗೆ :

Like the cow which has lost its way in the jungle I am crying 'Amba"...."Amba"...I shall be calling, God kudalasangama until you tell me " Live thou and immortal"

ಮೂರನೆಯ ಭಾಗದಲ್ಲಿ ವಚನಗಳಿಂದ ಹೊರಡುವ ಆಧ್ಯಾತ್ಮಿಕ ಸಂದೇಶವನ್ನು ವಿವರಿಸಲಾಗಿದೆ. ಬಸವಣ್ಣನವರ ಮಾನವ ಪ್ರೀತಿ, ದಯಾಗುಣ, ಸಮಾಜ ಸುಧಾರಣೆಯ ಆಸಕ್ತಿಗಳ ಬಗ್ಗೆ ವಿಸ್ತೃತವಾದ ವಿವರಗಳಿವೆ. 'ಕ್ರಿಸ್ತ, ಸೇಂಟ್ ಅಗಸ್ಟೀನ್ ಆಗಿ ನಮ್ಮಾಳ್ವರರಿಂದ ಹಿಡಿದು ಪುರಂದರ ದಾಸರವರೆಗಿನ ಹರಿದಾಸರುಗಳಲ್ಲಿ ಕಾಣುವಂತಹ ಗುಣಗಳನ್ನು ಬಸವಣ್ಣನವರ ವಚನಗಳಲ್ಲಿಯೂ ಕಾಣಬಹುದು. ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಬಸವಣ್ಣನವರಿಗೆ ಖಂಡಿತ ಒಂದು ಪ್ರಮುಖ ಸ್ಥಾನವಿದೆ' ಎಂಬ ದೃಢವಾದ ಮಾತುಗಳೊಂದಿಗೆ ಮಾಸ್ತಿಯವರು ಈ ಉಪನ್ಯಾಸವನ್ನು ಮುಗಿಸಿದ್ದಾರೆ.

ವೀರಶೈವ ಸಮಾಜದ ಹಿರಿಯರೂ, ಸಂಸ್ಥಾನದ ಪ್ರಮುಖ ಅಧಿಕಾರಿಗಳಲ್ಲಿ ಒಬ್ಬರೂ ಆಗಿದ್ದ ದಿವಾನ್ ಬಹದ್ದೂರ್ ಕೆ.ಪಿ. ಪುಟ್ಟಣ್ಣಚೆಟ್ಟಿಯವರು ಉಪನ್ಯಾಸದಲ್ಲಿ ಉಪಸ್ಥಿತರಿದ್ದರಷ್ಟೇ ಅಲ್ಲದೇ ಭಾಷಣದ ಮುದ್ರಿತ ಪ್ರತಿಯನ್ನು ಪಡೆದ ನಂತರ ಮಾಸ್ತಿಯವರನ್ನು ಪತ್ರಮುಖೇನ ಹೀಗೆ ಅಭಿನಂದಿಸಿದ್ದಾರೆ :

Bangalore City,
25th Agust 1931

Dear Mr. Venkatesa Iyengar,

I write to thank you for a copy of the Lecture you delivered on the sayings of Basavesvara in the Mythic Society hall when I was also present. I heard you delivered another lecture sometime ago at which Mr. Mahadevayya was present. The Veerasaiva community and I feel grateful to scholars like you who though belonging to a different persuasion have made serious study of our ancient teachers and opened treasures to the modern Veerasaivas. All the more credit to you. The Educated Veerasaivas should take a lesson from you.

The terseness of Basava's saying is reminiscent of the Sutra period, so much compressed in so little.

Thanking you again.

Yours sincerely,

K.P.Puttanna Chetty

ಮಿಥಿಕ್ ಸೊಸೈಟಿಯಲ್ಲಿ ಉಪನ್ಯಾಸ ನಡೆದ ನಾಲ್ಕೇ ವರ್ಷಕ್ಕೆ (೧೯೩೫) ಮಾಸ್ತಿಯವರು ೧೦೧ ವಚನಗಳ ಇಂಗ್ಲಿಷ್ ಅನುವಾದವಾದ 'Sayings of

Basavnna'ವನ್ನು ಹೊರತಂದರು. ಇದನ್ನು ಪ್ರಕಟಿಸಿದವರು ಗದಗ್‌ನ ವೀರಶೈವ ತರುಣ ಸಂಘದವರು. ಸಂಘದ ಮೂಲಕ ಕೃತಿಯನ್ನು ಪ್ರಕಟಿಸುವ ಆಸಕ್ತಿಯನ್ನು ವಹಿಸಿದವರು 'ಕರ್ನಾಟಕದ ಗಾಂಧಿ' ಎಂದೇ ಪ್ರಖ್ಯಾತರಾಗಿದ್ದ ಹರ್ಡೇಕರ ಮಂಜಪ್ಪನವರು.

ಪ್ರಸ್ತುತ ಮುದ್ರಣವು ಕ್ರೌನ್ ೧/೮ ಆಕಾರದಲ್ಲಿದ್ದು ೬೪ ಪುಟಗಳನ್ನು ಹೊಂದಿದೆ. ಇದಲ್ಲದೇ ೨ ಪುಟಗಳ 'ಪ್ರಕಾಶಕರ ಟಿಪ್ಪಣಿ'ಯೂ ಇಂಗ್ಲಿಷ್‌ನಲ್ಲಿದ್ದು ಲೇಖಕರ ಪ್ರಸ್ತಾವನೆಯೇನೂ ಇರದೆ ಕೃತಿ ನೇರವಾಗಿ ಆರಂಭವಾಗಿದೆ. Q.J.M.S.ನಲ್ಲಿ ಪ್ರಕಟವಾಗಿರುವಂತೆ ಇಲ್ಲಿಯೂ ೩ ಭಾಗಗಳಿದ್ದು ಎರಡನೆಯ ಭಾಗದಲ್ಲಿ ಪ್ರತಿ ವಚನದ ಇಂಗ್ಲಿಷ್ ಅನುವಾದದ ಮೊದಲಿಗೆ ಆಯಾ ವಚನದ ಕನ್ನಡ ಮೂಲವನ್ನು ನೀಡಲಾಗಿದೆ. Q.J.M.S.ನಲ್ಲಿ ಇರದ ಇನ್ನೂ ಹೆಚ್ಚುವರಿಯಾದ ೨೨ ವಚನಗಳನ್ನು ಇಲ್ಲಿ ಸೇರಿಸಲಾಗಿದೆ. ಹೀಗೆ ಸೇರ್ಪಡೆಯನ್ನು ಮಾಡುವಾಗ ಒಂದೇ ಕಡೆಗೆ ಅವುಗಳನ್ನು ಕೂಡದೇ ಆಯಾ ವಿಭಾಗಗಳಲ್ಲಿ ಸೂಕ್ತವಾಗಿ ಅವುಗಳನ್ನು ಪೋಣಿಸಲಾಗಿದೆ. ಮೊದಲ ಮತ್ತು ಮೂರನೆಯ ಭಾಗಗಳು (ಒಂದೆರಡು ವಾಕ್ಯಗಳನ್ನು ಬಿಟ್ಟರೆ) Q.J.M.S.ನಲ್ಲಿನ ತದ್ವತ್ ಪ್ರತಿಯಾಗಿದೆ.

ಬಸವಣ್ಣನವರ ವಚನಗಳ ಇಂಗ್ಲಿಷ್ ಅನುವಾದದ ಮೊಟ್ಟಮೊದಲ ಪುಸ್ತಕರೂಪದ ಕೃತಿ ಎಂಬ ಹೆಗ್ಗಳಿಕೆಗೆ ಮಾಸ್ತಿಯವರ ಈ ಕೃತಿ ಪಾತ್ರವಾಗಿದೆ. ಗದಗ್‌ನ 'ಶಿವಾನಂದ ಪ್ರಿಂಟಿಂಗ್ ವರ್ಕ್ಸ್' ಈ ಕೃತಿಯನ್ನು ಸುಂದರವಾಗಿ ಮುದ್ರಿಸಿದ್ದು ಇದರ ಕ್ರಯ ೪ ಆಣೆಗಳು.

ಮಾಸ್ತಿಯವರ ಈ ಕೃತಿ ಕೂಡಲೇ ಎಲ್ಲೆಡೆಗಳಿಂದ ಪ್ರಶಂಸೆಯನ್ನು ಪಡೆಯಿತು. ವಿಶೇಷವೆಂದರೆ ಮಹಾತ್ಮ ಗಾಂಧಿಯವರವರಿಗೂ ಮಾಸ್ತಿಯವರ ವಚನಗಳ ಈ ಅನುವಾದ ತಲುಪಿದ್ದಂತೆ ತೋರುತ್ತದೆ. (೧೯೩೪ರಲ್ಲಿ ಗಾಂಧೀಜಿಯವರು ಕರ್ನಾಟಕ ಪ್ರಾಂತ್ಯದಲ್ಲಿ ಪ್ರವಾಸವನ್ನು ಕೈಗೊಂಡಾಗ ಬಸವೇಶ್ವರರ ವಿಷಯವಾಗಿ ಇಂಗ್ಲೀಷಿನಲ್ಲಿರುವ ಸಾಹಿತ್ಯವನ್ನು ಓದುವ ತಮ್ಮ ಇಚ್ಛೆಯನ್ನು ಕರ್ನಾಟಕ ಹರಿಜನ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಪಾಟೀಲ ವೀರನಗೌಡರ ಎದುರು ವ್ಯಕ್ತಮಾಡಿದರು. ಈ ವಿಷಯವನ್ನು ಪತ್ರಿಕೆಗಳ ಮೂಲಕ ಅರಿತ ಗದಗ್‌ನ ವೀರಶೈವ ತರುಣ ಸಂಘದವರು ಮಾಸ್ತಿಯವರ ಅನುವಾದದ ಒಂದು ಟೈಪ್ಡ್ ಪ್ರತಿಯನ್ನು ಸಿದ್ಧಪಡಿಸಿ ಮಹಾತ್ಮರಿಗೆ ಕಳುಹಿಸಲಿರುವವರೆಂದು ದಿನಾಂಕ ೩-೫-೧೯೩೪ರಂದು ಗುರುಸಿದ್ದಪ್ಪಾ ಬಸವಪ್ಪ ಬಳ್ಳಾರಿಯವರು ಮಾಸ್ತಿಯವರಿಗೆ ಬರೆದ ಪತ್ರದಿಂದ ತಿಳಿಯುತ್ತದೆ.ನೋಡಿ : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಾಹಿತ್ಯ ಲಾಲನೆ, ಪು.೫೦)

ಕೃತಿ ಪ್ರಕಟಣೆಯ ನಂತರ ದಿವಾನ್ ಬಹದ್ದೂರ್ ಕೆ.ಪಿ. ಪುಟ್ಟಣ್ಣ ಚೆಟ್ಟಿಯವರು ವ್ಯಕ್ತಪಡಿಸಿರುವ ಸಂತೋಷವನ್ನು ಅವರು ದಿನಾಂಕ ೩೦ನೇ ಮೇ ೧೯೩೫ರಲ್ಲಿ ಬರೆದಿರುವ ಕೆಳಕಂಡ ಪತ್ರದಲ್ಲಿ ಕಾಣಬಹುದು.

Bangalore City,

30th May 1935

Dear Mr. Venkatesa Iyengar,

I have much pleasure in acknowledging receipt of a copy of your book on the "Sayings of Basavanna" kindly sent by you.

You have done a great public service to the Veerasaiva Community as well as the Kannada literature by bringing out in a compendious from the sayings of the immortal Basava, a unique figure in the annals of Veerasaivism and the propagator of the great tenets of thought to which he gave a distinctive trend of his own.It is due to the disinterested labour of scholars like you that the ancient treasures of that period have been brought to light and presented to the world in the modern garb. You are truly cosmopolitan in that. Though you belong to a different faith you studied and assimilated the beautiful doctrines enunciated by the great saint who was very much in advance of his time. The English Translation is excellent and is of the greatest use to the general reader.

On the behalf of the community and my own tender you our greatful thanks for this labour of love

I trust you are in the enjoyment of good health.

With all good regards,

Your's sincerely,
K.P.Puttanna Chetty

ಪುಸ್ತಕವು ಪ್ರಕಟವಾದ ಕೂಡಲೇ ಹರ್ಡೇಕರ ಮಂಜಪ್ಪನವರು ತಾವು ಸಂಪಾದಿಸುತ್ತಿದ್ದ 'ಶರಣ ಸಂದೇಶ' ಎಂಬ ಪತ್ರಿಕೆಯಲ್ಲಿ ಅದನ್ನು ಹಲವು ಭಾಗಗಳಲ್ಲಿ ಮುದ್ರಿಸಿ ತಮ್ಮ ಪತ್ರಿಕೆಯ ವಾಚಕ ವರ್ಗಕ್ಕೆ ತಲುಪಿಸಿದರು. ದಿನಾಂಕ ೨೭-೫-೧೯೩೫ರ ಸಂಚಿಕೆಯಲ್ಲಿ ಆರಂಭಗೊಂಡ ಈ ಸರಣಿಯು ೧೦ ವಾರಗಳ ಕಾಲ ಮುಂದುವರೆಯಿತು. ಅಷ್ಟೇ ಅಲ್ಲದೆ ಮದ್ರಾಸ್‌ನ 'ದ ಹಿಂದೂ' ಪತ್ರಿಕೆಯು ತನ್ನ ಸೆಪ್ಟೆಂಬರ್ ೨೫ರ ಸಂಚಿಕೆಯಲ್ಲಿ ಪ್ರಕಟಿಸಿದ, C.R.S. ಎಂಬುವರು ಬರೆದ ಈ ಕೃತಿಯನ್ನು ಕುರಿತಾದ ವಿಮರ್ಶನ ಲೇಖನವನ್ನು ಮಂಜಪ್ಪನವರು ೨೩-೧೨-೧೯೩೫ರ 'ಶರಣ ಸಂದೇಶ'ದಲ್ಲಿ ಕನ್ನಡ ಅನುವಾದದ ಸಮೇತ ಪ್ರಕಟಿಸಿದ್ದಾರೆ !

ಸುಮಾರು ನಾಲ್ಕು ದಶಕಗಳ ಕಾಲ ಮಾಸ್ತಿಯವರು ಮತ್ತೆ ಬಸವಣ್ಣನವರ ವಚನಗಳ ಬಗೆಗೆ ಏನನ್ನೂ ಪ್ರಕಟಿಸಿರಲಿಲ್ಲವಾದರೂ ಸುಮಾರು ೩೦೦ ವಚನಗಳನ್ನು ಆಯ್ದುಕೊಂಡು ಅವುಗಳನ್ನು ಇಂಗ್ಲೀಷಿಗೆ ಭಾಷಾಂತರಿಸುವ ಹಾಗೂ ಹಿಂದೆ ಭಾಷಾಂತರಿಸಿದ್ದನ್ನು ಪುನಃ ಪರಿಷ್ಕರಿಸುವ ಕೆಲಸವನ್ನು ನಿರಂತರವಾಗಿ ಮುಂದುವರಿಸಿಯೇ ಇದ್ದರು. ೧೯೭೫-೭೬ರ ವೇಳೆಗೆ ಬೆಂಗಳೂರಿನ ಪ್ರತಿಷ್ಠಿತ ಧಾರ್ಮಿಕ ಸಂಸ್ಥೆಯಾದ 'ಬಸವ ಸಮಿತಿ'ಯು ಡಾ. ಸಿದ್ದಯ್ಯ ಪುರಾಣಿಕರ ಪ್ರಧಾನ

ಸಂಪಾದಕತ್ವದಲ್ಲಿ 'Basava Journal' ಎಂಬ ವಿದ್ವತ್ ಪತ್ರಿಕೆಯನ್ನು ಆರಂಭಿಸಿತು. ಸಮಿತಿಯ ಅಧ್ಯಕ್ಷರಾದ ಬಸಪ್ಪ ದಾನಪ್ಪ ಜತ್ತಿ ಹಾಗೂ ಸಂಶೋಧನೆ ಹಾಗೂ ಪ್ರಕಟಣಾ ವಿಭಾಗದ ನಿರ್ದೇಶಕರಾದ ಡಾ. ಸಿದ್ದಯ್ಯ ಪುರಾಣಿಕರ ಆಸಕ್ತಿಯ ಫಲವಾಗಿ ಮಾಸ್ತಿಯವರ ಅನುವಾದವು 'The Sayings of Basavanna' ಎಂಬ ಹೆಸರಿನಲ್ಲಿ ಆ ಪತ್ರಿಕೆಯಲ್ಲಿ ಸರಣಿಯ ರೂಪದಲ್ಲಿ ಪ್ರಕಟವಾಯಿತು (ಪತ್ರಿಕೆಯ ಎಲ್ಲ ಸಂಚಿಕೆಗಳೂ ನೋಡಲು ಲಭ್ಯವಿಲ್ಲದಿರುವುದರಿಂದ ಅದರ ಆದಿ ಮತ್ತು ಮುಕ್ತಾಯದ ವಿವರಗಳನ್ನು ನೀಡುವುದು ಕಷ್ಟ. ನಾನು ಗಮನಿಸಿದ ಸಂಚಿಕೆಗಳಲ್ಲಿ Vol.4, Issue-4 (April 1980), Vol.5, Issue-1, (July 1908) ಹಾಗೂ Vol.5, Issue 2&3 (October 1980, January 1981). ಈ ಎಲ್ಲ ಅನುವಾದಗಳನ್ನು ಒಟ್ಟುಗೂಡಿಸಿ ಬಸವ ಸಮಿತಿಯೇ ೧೯೮೩ರಲ್ಲಿ 'The Sayings of Basavanna' ಎಂಬ ಕೃತಿಯನ್ನು ಹೊರತಂದಿತು. ಡಾ. ಜತ್ತಿಯವರು 'We feel proud to publish these sayings of Basava in English garb as the translator has given us the benefit of his profound scholarship, great erudition and consummate artistry in these translations' ಎಂಬ ಮಾತುಗಳೊಂದಿಗೆ ಮಾಸ್ತಿಯವರಿಗೆ ಧನ್ಯವಾದಗಳನ್ನು ಅರ್ಪಿಸಿದ್ದಾರೆ.

ಪ್ರಸ್ತುತ ಆವೃತ್ತಿಗೆ ಮಾಸ್ತಿಯವರು ೮ ಪುಟಗಳಷ್ಟು ವಿಸ್ತಾರವಾದ 'Introduction' ಬರೆದಿದ್ದಾರೆ. ಇದರ ಒಳಹೂರಣ Q.J.M.S. ಹಾಗೂ ಮೊದಲ ಮುದ್ರಣಗಳ ಮೊದಲ ಭಾಗದ ಅಂಶಗಳನ್ನು ಒಳಗೊಂಡಿದ್ದೇ ಆದರೂ ಅವುಗಳಿಗಿಂತ ಹೆಚ್ಚು ಪ್ರೌಢವೂ, ಚಿಂತನಾತ್ಮಕವೂ ಆಗಿದೆ. ಪ್ರಸ್ತುತ ಸಮಾಜೋ-ಧಾರ್ಮಿಕ ಸನ್ನಿವೇಶದಲ್ಲಿ ಬಸವಣ್ಣನವರ ವಚನಗಳ ಸಾರವನ್ನು ಅರಿಯಬೇಕಾಗಿರುವ ಅಗತ್ಯತೆಯನ್ನು ಮಾಸ್ತಿಯವರು ಈ ಪ್ರಬಂಧದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ಮುಂದಿನ ಪುಟಗಳಲ್ಲಿ ೪೨೬ ವಚನಗಳ ಅನುವಾದವನ್ನು ಅವುಗಳು ಹೊಮ್ಮಿಸುವ ಭಾವನೆಗಳ ಆಧಾರದ ಮೇಲೆ ವಿಂಗಡಿಸಿ ಪ್ರಕಟಿಸಲಾಗಿದೆ. ಆದರೆ ಮೊದಲ ಮುದ್ರಣದಲ್ಲಿರುವ ಯಾವ ನಿರೂಪಣೆಯ ಮಾತುಗಳೂ ಇಲ್ಲ. ಬದಲಿಗೆ 'The cry of the soul to be saved', 'man is weak', 'practise the good life' ಮುಂತಾದ ಉಪಶೀರ್ಷಿಕೆಗಳ ಅಡಿಯಲ್ಲಿ ವಚನಗಳನ್ನು ವಿಂಗಡಿಸಲಾಗಿದೆ. ಮೊದಲ ಮುದ್ರಣದಲ್ಲಿದ್ದ ಕೆಲವು ಅನುವಾದಗಳನ್ನು ಬಳಸಿಕೊಂಡು ಅವುಗಳನ್ನು ಮತ್ತೆ ಹೊಸದಾಗಿ ಅನುವಾದಿಸಿರುವ ಉದಾಹರಣೆಗಳೂ ಇವೆ. ನಿದರ್ಶನಕ್ಕೆ :

ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ,
ದಾರಿ ಸಂಗಡ ಬೇಡ, ದೂರ ನುಡಿಯಲು ಬೇಡ.

ಕೂಡಲಸಂಗನ ಶರಣರಲ್ಲಿ
ಅಚ್ಚಲಿಂಗೈಕ್ಯಂಗೆ ತೊತ್ತಾಗಿಹುದಯ್ಯಾ.

ಎಂಬ ವಚನವನ್ನು ಮೊದಲಿಗೆ ಮಾಸ್ತಿಯವರು ಅನುವಾದಿಸಿದ್ದು ಹೀಗೆ:

Avoid the neighbourhood, avoid the proximity of people who are half-devotees. Walk not with them nor speak to them even from a distance. Be a slave to him who among the devotees of Kudalasangama is fully absorbed in God.

ಎರಡನೇ ಮುದ್ರಣದ ವೇಳೆಗೆ ಅವರು ಅದನ್ನು ಹೀಗೆ ಪರಿಷ್ಕರಿಸಿದ್ದರು:

Of those who are half-devotees, desire neither neighbourhood nor proximity; neither walk with them nor speak to them from a distance. Be a slave, friend, to those who are truly one in spirit with the devotees of God Kudalasangama.

ಅನುವಾದಕ್ಕೆಂದು ವಚನಗಳನ್ನು ಆಯ್ದುಕೊಳ್ಳುವಾಗ ಕೇವಲ ಪ್ರಸಿದ್ಧವಾದವುಗಳನ್ನು ಮಾತ್ರ ಪರಿಗಣಿಸದೆ ಆ ಪ್ರಸಿದ್ಧವಾದ, ಆದರೆ ಅರ್ಥಪೂರ್ಣವಾದ ಇತರ ವಚನಗಳನ್ನೂ ಮಾಸ್ತಿಯವರು ಆರಿಸಿಕೊಂಡಿದ್ದಾರೆ. ಸಾಧ್ಯವಾದಷ್ಟೂ ಕಡಿಮೆ ಮಾತುಗಳಲ್ಲಿ ಇಡಿಯ ವಚನದ ಭಾವವನ್ನು ಹಿಡಿದಿಡಲು ಅವರು ಯತ್ನಿಸಿದ್ದಾರೆ. ವಚನದ ಸಾಲುಗಳ ಪದಶಃ ಅನುವಾದಕ್ಕಿಂತ ಅದರ ಕೇಂದ್ರ ಆಶಯವನ್ನು ಓದುಗರಿಗೆ ತಲುಪಿಸುವುದು ಅವರ ಉದ್ದೇಶ. ಹಾಗಾಗಿಯೇ ಅವರು ಪದ್ಯರೂಪದಲ್ಲಿ ಅವುಗಳನ್ನು ಭಾಷಾಂತರಿಸದೆ ಗದ್ಯವನ್ನು ತಮ್ಮ ಮಾಧ್ಯಮವನ್ನಾಗಿಸಿಕೊಂಡಿದ್ದಾರೆ. ಪೂರ್ಣ ಗ್ರಾಂಥಿಕ ವಲ್ಲದ, ಆದರೆ ಆಡುನುಡಿಗಿಂತಲೂ ತುಸು ಹೆಚ್ಚಿನ ಗಾಂಭೀರ್ಯದ ಭಾಷೆಯನ್ನು ಬಳಸಿದ್ದಾರೆ.

ವಚನಗಳ ಅಂಕಿತದ ಅನುವಾದ ಒಂದು ಚರ್ಚಾರ್ಹ ಸಂಗತಿ. ಫ. ಗು. ಹಳಕಟ್ಟಿಯವರು 'ಕೂಡಲ ಸಂಗಮ ದೇವ' ಎಂಬುದನ್ನು ತಮ್ಮ ಅನುವಾದಗಳಲ್ಲಿ `O KudalasangamaDeva' ಎಂಬ ಕನ್ನಡದ ರೂಪವನ್ನೇ ಉಳಿಸಿಕೊಂಡಿದ್ದಾರೆ. ಎ.ಕೆ. ರಾಮಾನುಜನ್ ಅವರು `O Lord of the meeting rivers' ಎಂದು ಪದಶಃ ಅನುವಾದಿಸಿದ್ದಾರೆ. ಆದರೆ ಮಾಸ್ತಿಯವರು `God Kudalasangama' ಎಂಬ ಮಧ್ಯಮ ಮಾರ್ಗವನ್ನು ಅನುಸರಿಸಿದ್ದಾರೆ.

ಹೀಗೆ ಅನ್ಯಭಾಷಿಕರಿಗೆ ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರವೊಂದನ್ನು ಪರಿಚಯಿಸಲೆಂದು ಮಾಸ್ತಿಯವರು ಕೈಗೊಂಡ ಈ ಆದ್ಯ ಪ್ರಯತ್ನ ಚಾರಿತ್ರಿಕವಾಗಿ ಹಾಗೂ ಸಾಹಿತ್ಯಕವಾಗಿ ಮಹತ್ವದ್ದಾಗಿದೆ.

ಸಾಂಗತ್ಯ – ರಸಗ್ರಹಣ: ಭರತೇಶವೈಭವದ ಅಂಕಮಾಲಾಸಂಧಿ ಹಾಗೂ ರಾಜೇಂದ್ರ ಗುಣವಾಕ್ಯ ಸಂಧಿ

◈

ಡಾ. ಎನ್ ಆರ್ ಲಲಿತಾಂಬ

ಭರತೇಶ ವೈಭವ ನಾನಾ ಕಾರಣಗಳಿಗಾಗಿ ಅಪೂರ್ವವಾದುದು. ಇದು ಸಾಂಗತ್ಯ ಪ್ರಕಾರಕ್ಕೇ ಶೋಭೆಯನ್ನು ತಂದು ಕೊಟ್ಟ ವಿಭಿನ್ನ ಕೃತಿ. ಹಳೆಯ ಕಥೆ, ನೂತನ ದೃಷ್ಟಿ, ಕಾಲಮಾನದ ಒತ್ತಡಕ್ಕೆ ತಕ್ಕ ಆಶಯ ಆಕೃತಿಯನ್ನು ಪಡೆದಿದೆ. ಸಾಂಪ್ರದಾಯಿಕ ಧಾರ್ಮಿಕ ಕಥೆಯನ್ನು ಹೀಗೆ ಮುರಿದು ಕಟ್ಟುವ ಎದೆಗಾರಿಕೆ ತೋರಿರುವುದು ವಿಶೇಷ. ಅನ್ಯ ಧರ್ಮಗಳ ಕಟು ವಿಡಂಬನೆಯನ್ನು ಕೈಬಿಟ್ಟು ಅವುಗಳ ಸಾರವನ್ನು ಜೈನಧರ್ಮದ ತತ್ವಗಳಲ್ಲಿ ಬೆರೆಸಿ ಧರ್ಮಸಮನ್ವಯದ ಹೊಸ ತಾತ್ವಿಕತೆಯನ್ನು ರೂಢಿಸಲು ಪ್ರಯತ್ನಿಸಿದ್ದಾನೆ ಕವಿ. ಆ ಮೂಲಕ ತನ್ನ ಧರ್ಮವನ್ನು ಜನ ಸಾಮಾನ್ಯರ ಹತ್ತಿರಕ್ಕೆ ಕೊಂಡೊಯ್ಯುವ ಹಂಬಲ ಮತ್ತು ಪ್ರಯತ್ನಗಳಿಗಾಗಿ ರತ್ನಾಕರನ ಕೃತಿ ಅಪೂರ್ವವಾದುದಾಗಿದೆ.

ಕಾವ್ಯಗಳನ್ನು ಗಮಕವಾಚನಮಾಡುವ ಪರಂಪರೆ ಪ್ರಾಚೀನಕಾಲದಿಂದಲೂ ರೂಢಿಯಲ್ಲಿದೆ. ಮಧ್ಯಕಾಲೀನ ಕರ್ನಾಟಕದಲ್ಲಿ, ಷಟ್ಪದಿ ಹಾಗೂ ಸಾಂಗತ್ಯ ಕೃತಿಗಳು ಹೆಚ್ಚು ಜನಪ್ರಿಯತೆ ಪಡೆದಿದ್ದವು. ಕನ್ನಡನಾಡಿನಲ್ಲಿ ಅನೇಕ ಜಾನಪದ ಮಹಾಕಾವ್ಯಗಳನ್ನು, ಪಾಡ್ದನಗಳನ್ನು ವ್ರತಕಥೆಯ ಹಾಡುಗಳನ್ನು ಹಾಡುವ ಪರಂಪರೆಯೊಂದು ಬಳೆದುಬಂದಿದೆ. ಅವು ಕನ್ನಡಿಗರ ಧಾರ್ಮಿಕ ಬದುಕಿನ ಆಚರಣೆಯ ಒಂದು ಭಾಗವಾಗಿ ಇಂದಿಗೂ ಉಳಿದುಬಂದಿವೆ. ಸಾಂಗತ್ಯವು ಕನ್ನಡ ನಾಡಿನಲ್ಲಿ ಅತ್ಯಂತ ಜನಪ್ರಿಯವಾದ ಹಾಡುಗಬ್ಬದ ಮಟ್ಟಾಗಿದ್ದು, ಇಂದಿಗೂ ಈ ಮಟ್ಟಿನಲ್ಲಿ ಜನ ಅನೇಕ ಕಥೆಗಳನ್ನು ಹಾಡುವುದನ್ನು ಕೇಳಬಹುದು.

ಸಾಂಗತ್ಯ ಅಂಶಗಣಗಳಿಂದ ಕೂಡಿದ್ದು, ನಾಲ್ಕುಪಾದಗಳನ್ನು ಹೊಂದಿದೆ. ಒಟ್ಟು ಹದಿನಾಲ್ಕು ಗಣಗಳಿದ್ದು ಏಳನೆಯ ಹಾಗೂ ಹದಿನಾಲ್ಕನೆಯ ಗಣಗಳು ಬ್ರಹ್ಮಗಣವಾಗಿದ್ದು, ಉಳಿದದ್ದು ವಿಷ್ಣುಗಣವಾಗಿರುತ್ತವೆ. ಬೇಕೆಂದೆಡೆ ಜೀಕಿಕೊಳ್ಳುವ,

ಮೊಟಕುಗೊಳಿಸುವ ಸ್ವಾತಂತ್ರ್ಯವಿದೆ. ಮಾತ್ರೆಗಳ ತೊಡಕಿಲ್ಲದೇ ದೀರ್ಘಸಮಾಸಗಳಿಲ್ಲದೆ ಸರಳವಾಗಿ ನಿರರ್ಗಳವಾಗಿ ಸಾಗುವ ರತ್ನಾಕರವರ್ಣಿಯ ಶೈಲಿ ಆಕರ್ಷಕವಾಗಿದೆ. ಕನ್ನಡದ ನಾಣ್ನುಡಿಗಳನ್ನು ನೇರಮಾತಿನ ಬಲ್ಮೆಯನ್ನೂ, ಮನದೊಳಗೆ ಅಡಗಿರುವ ಅರ್ಥವನ್ನು ತಟ್ಟನೆ ವ್ಯಂಜಿಸುವ ಬಿನ್ನಾಣವು ತನ್ನೀ ಹಾಡುಗಬ್ಬದಲ್ಲಿರುವುದರಿಂದ "ಅಯ್ಯಾ ಚೆನ್ನಾದುದೆನೆ ಕನ್ನಡಿಗರು, ರಯ್ಯಾಮಂಚಿದಿಯೆನೆ ತೆಲುಗಾ, ಅಯ್ಯಯ್ಯ ಯೆಂಚಪರ್ಲಾಂಡೆಂದು ತುಳುವರು ಮೈಯುಬ್ಬಿ ಕೇಳಬೇಕಣ್ಣ" ಎಂದು ಆಶಿಸುತ್ತಾನೆ ಕವಿ. 'ಜಿಳಕುಳಶಿಥಿಲಸಮಾಸ'ಗಳ ಕೋಟಲೆಗೆ ಹೋಗದೆ, ಶಬ್ದದೋಷಗಳು ಸಂಭವಿಸಿದರೂ ತೊಡಕಿಲ್ಲವೆಂದು ಧೈರ್ಯಮಾಡಿ ಸಾಮಾನ್ಯ ಅಕ್ಷರಸ್ತರು, ಸ್ತ್ರೀಯರು ಬಾಲರಿಗೂ ಅರ್ಥವಾಗುವಂತೆ ಸರಳವಾಗಿ ತಾನು ಬರೆದಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಅವನ ಆಶಯಕ್ಕೆ ತಕ್ಕಂತೆ ಇವತ್ತಿಗೂ ಜೈನರ ಬೆಳಗಿನ ಸಂಜೆಯ ನಿತ್ಯಪ್ರಾರ್ಥನೆ, ಪಾರಾಯಣದಲ್ಲಿ ಭರತೇಷವೈಭವದ ಅನೇಕ ಸಂಗತಿಗಳನ್ನು ಜೈನಸ್ತ್ರೀ, ಪುರುಷ, ಬಾಲಕರು ಹಾಡಿಕೊಳ್ಳುವುದನ್ನು ಕಾಣಬಹುದು. ಸಾಂಗತ್ಯದ ಮಟ್ಟನ್ನು ವಿವಿಧ ರಸಭಾವಕ್ಕೆ ತಕ್ಕಂತೆ ತಳ, ಮಧ್ಯಮ ಹಾಗೂ ತಾರಸ್ಥಾಯಿಗಳಲ್ಲಿ ಹಾಡಲಾಗುತ್ತದೆ. ಈ ಮಟ್ಟುಗಳನ್ನು ಶಿಭಿರಾರ್ಥಿಗಳು ಕಲಿತು ಸನ್ನಿವೇಶದ ಭಾವಕ್ಕೆ ತಕ್ಕಂತೆ ಹಾಡಿ ರಸಗ್ರಹಣಮಾಡುವುದಕ್ಕೆ ಅವಕಾಶವಿದೆ.

ಇದು ತೀರ್ಥಂಕರನ ಕಥೆಯಲ್ಲ. ಚಕ್ರವರ್ತಿಯ ಕಥೆ. ಆದಿನಾಥ ತೀರ್ಥಂಕರನ ವೈರಾಗ್ಯದ ವಿಸ್ತಾರವಾದ ಕಥೆಯ ಒಂದು ಭಾಗ. ಜೈನ ಧರ್ಮವು ಉದ್ದಕ್ಕೂ ಪ್ರತಿಪಾದಿಸುತ್ತಾ ಬಂದ ಭೋಗದಿಂದ ವಿಮುಖವಾದಾಗ ಮಾತ್ರ ಯೋಗ ಸಾಧ್ಯವೆಂಬ ನಿಲುವನ್ನೇ ರತ್ನಾಕರ ಪಲ್ಲಟಿಸಲು ಪ್ರಯತ್ನಿಸಿದ್ದಾನೆ. ಧರ್ಮ ಪ್ರಸಾರವೇ ಅವನ ಉದ್ದೇಶವಾಗಿದ್ದು, ತಾನು ಉಪದೇಶಿಸುವ ಧರ್ಮ 'ಪೀಪಲ್ಸಫ್ರೆಂಡ್ಲಿ'ಯಾಗಿರಬೇಕಾದ ಅನಿವಾರ್ಯತೆಯನ್ನು ಅರಿತು ಅವನು ಹೊಸ ದಾರಿ ತುಳಿದನೆನಿಸುತ್ತದೆ. ಯೋಗಭೋಗವನ್ನು ಹೀಗೆ ಸಮನ್ವಯಗೊಳಿಸುವುದು ಜೈನಸಿದ್ಧಾಂತಕ್ಕೆ ವಿರುದ್ಧವಾದರೂ, ಅನೇಕ ಜೈನ ಕೃತಿಗಳಲ್ಲಿ ಚಿತ್ರಣಗೊಂಡಿರುವ ಜಿನ ಭಕ್ತರ ಬದುಕುಗಳನ್ನು ಗಮನಿಸಿದಾಗ ಅವರು ಆಗರ್ಭ ಸಿರಿವಂತರಾಗಿ ಭೋಗದಲ್ಲಿ ಮುಳುಗಿದ್ದೂ ಜಿನ ಶ್ರದ್ಧೆಯನ್ನು ಬಿಡದೆ ಪಾಲಿಸುವವರಾಗಿರುತ್ತಿದ್ದರೆಂಬುದು ಕಂಡುಬರುತ್ತದೆ. ಅವರು ಕೈಗೊಳ್ಳುವ ತಪಸ್ಸೋ, ವೈರಾಗ್ಯವೋ, ಹಿಡಿಯುವ ವ್ರತಕಥೆಗಳೋ ಮುಂದಿನ ಜನ್ಮದಲ್ಲಿ ಮತ್ತಷ್ಟು ಸುಖಿಯಾಗುವ, ಭೋಗ ವೈಭವಸಂಪತ್ತನ್ನು ಪಡೆಯುವ ಮನದಿಚ್ಛೆಯನ್ನು ಈಡೇರಿಸಿಕೊಳ್ಳುವ ದಾರಿಯಾಗಿಯೇ ಚಿತ್ರಿತವಾಗಿರುವುದೂ ಉಂಟು. ದಾರಿ 'ಧರ್ಮ'ವಾದರೂ ಅದರ ಗುರಿ 'ಅರ್ಥ'ವೇ ಆಗಿರುವುದು ಕೆಲವು ಪ್ರಸಂಗಗಳಲ್ಲಿ ಸ್ಪಷ್ಟವಾಗಿರುತ್ತದೆ. ಎಲ್ಲರೂ ವೈರಾಗ್ಯ ತಾಳಿ ಭೋಗವನ್ನು ತ್ಯಜಿಸಿ ತೀರ್ಥಂಕರರಾಗುವುದು ರತ್ನಾಕರನ ಉದ್ದೇಶವಲ್ಲವೇ ಅಲ್ಲ. ಜನರು ಭೋಗಿಗಳಾಗಿದ್ದೂ ಜಿನಶ್ರದ್ಧೆಯನ್ನು ಮೈಗೂಡಿಸಿಕೊಂಡು ಭೋಗಯೋಗದ

ಒಂದು ಸಮನ್ವಯದ ಬದುಕನ್ನು ಸಾಧಿಸುವುದು ಅವನ ಉದ್ದೇಶ. ಆ ಕಾಲಕ್ಕೆ (ಈ ಕಾಲಕ್ಕೂ ಕೂಡ) ಅದು ಚೆನ್ನಾಗಿ ವರ್ಕೌಟ್ ಆಗುವಂತದ್ದೇ ಆಗಿತ್ತು.

ಭರತ ಚಕ್ರವರ್ತಿಯನ್ನು ನಾಯಕನನ್ನಾಗಿ ಮಾಡಿಕೊಂಡು ಕವಿ ಯೋಗವು ಭೋಗದ ಅಂತ್ಯವಲ್ಲ ಎಂದು ತಿಳಿಸುತ್ತಾ ಹಿತವಾದ, ಹದವಾದ ಭೋಗಯೋಗ ಸಮನ್ವಯದ ಬದುಕನ್ನೂ ರೂಢಿಸಿಕೊಳ್ಳಬಹುದಾದ ಒಂದು ಮಾದರೀ ಕಥೆಯನ್ನಾಗಿ ರೂಪಿಸಿದ್ದಾನೆ. ಯೋಗಭೋಗ ಸಮನ್ವಯಗೊಂಡ ದೈವೀಕತೆಯನ್ನು ಭರತನಲ್ಲಿ ಕಾಣುತ್ತಾನೆ. ಅವನ ಪಾತ್ರವನ್ನು ಕಟ್ಟುವಾಗ ಆ ಕಾಲದ ಪರಿಸರದಲ್ಲಿ ಜನಮಾನಸವನ್ನು ಸೂರೆಗೊಂಡಿದ್ದ ಭಾಗವತ, ಮಾಧ್ವ ಮತ್ತು ಶ್ರೀವೈಷ್ಣವ ಸಿದ್ಧಾಂತಗಳು, ಪುರಾಣ–ಪುಣ್ಯಕಥೆಗಳು, ಭಕ್ತಿಕಾವ್ಯಗಳು, ದಾಸರಪದಗಳಲ್ಲಿನ ಯೋಗಭೋಗ ಸಮನ್ವಯಾತ್ಮನಾದ ಕೃಷ್ಣನ ವ್ಯಕ್ತಿತ್ವವು ರತ್ನಾಕರನ ಮನಸ್ಸನ್ನೂ ಆಕರ್ಷಿಸಿತ್ತು. ಶ್ರೀವೈಷ್ಣವ ಧರ್ಮವು 'ಪ್ರಪತ್ತಿ'ಗೆ ಸರ್ವರೂ ಅರ್ಹರೆಂದು ತೆರೆದಬಾಹುಗಳನ್ನು ಚಾಚಿತ್ತು. ರತ್ನಾಕರನು ಬಾಳಿದ ಪರಿಸರದಲ್ಲಿ ವೀರಶೈವಧರ್ಮದ ಪ್ರಭಾವ ತೀವ್ರವಾಗಿತ್ತು. ಅವರ ಸಿದ್ಧಾಂತಗಳು ಭೋಗಯೋಗತ್ಯಾಗಳಾದ 'ಅಂಗತ್ರಯ'ಗಳನ್ನು ಅಳವಡಿಸಿಕೊಳ್ಳುವ ದಾರಿಯೊಂದನ್ನು ಪ್ರತಿಪಾದಿಸಿತ್ತು. ಶಿವಶರಣರಿಂದ ಪ್ರಣೀತವಾದ 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಗೆ' ಎಂಬ ಸರಳ ಸೂತ್ರ, ಜನಸಾಮಾನ್ಯರನ್ನು ಹೆಚ್ಚು ಆಕರ್ಷಿಸಿದ್ದು, ಜನ ಆ ಧರ್ಮಗಳತ್ತ ನುಗ್ಗುತ್ತಿರುವುದನ್ನು ರತ್ನಾಕರ ಕಂಡಿದ್ದನು. ಅತಿಯಾದ ವೈರಾಗ್ಯ, ಸಾಂಸಾರಿಕ ವಿಮುಖತೆಗಳು ಸಾಮಾನ್ಯನಿಗೆ ದಕ್ಕುವಂತಹುದಲ್ಲ, ರುಚಿಸುವಂತಹುದೂ ಅಲ್ಲವೆಂಬುದು, ಆ ಕಾರಣಕ್ಕಾಗಿಯೇ ತನ್ನ ಧರ್ಮ ಮೂಲೆಗುಂಪಾಗುತ್ತಿದೆ ಎಂಬ ಅರಿವು ರತ್ನಾಕರನಿಗಿತ್ತು. ಇಂತಹ ಹಿನ್ನೆಲೆಯಲ್ಲಿ ಭರತೇಶವೈಭವದಂತಹ ಕೃತಿಯೊಂದು ರೂಪುತಾಳಿತು.

ರತ್ನಾಕರವರ್ಣಿಯು ಭರತನನ್ನು ತನ್ನ ಕೃತಿಯಲ್ಲಿ ಆದರ್ಶ ನಾಯಕನನ್ನಾಗಿ ಮಾಡಿಕೊಂಡು ಅದನ್ನು ಸಾಧಿಸುವುದಕ್ಕೆ ವಿಶೇಷ ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕಾಯಿತು. ಅಂತಹ ಕೆಲವು ಮುಖ್ಯ ಮಾರ್ಪಾಟುಗಳು ಹೇಗೆ ಅವನ ಆಶಯಕ್ಕೆ ತಕ್ಕಂತೆ ಒದಗಿಬಂದಿವೆ ಎಂಬುದನ್ನು ನಾವು ಗಮನಿಸಬಹುದು. ಪ್ರಸ್ತುತ ರಸಗ್ರಹಣಕ್ಕೆ ನಾವು ಆರಿಸಿಕೊಂಡಿರುವ ಭರತ ತನ್ನ ಅಂಕಮಾಲೆಯನ್ನು ವೃಷಬಾದ್ರಿಯಲ್ಲಿ ಬರೆಸುವುದು ಮತ್ತು ಭರತೇಶ ಹಾಗೂ ಬಾಹುಬಲಿಯರ ಯುದ್ಧ ಪ್ರಸಂಗಗಳೆರಡನ್ನು ನೋಡೋಣ.

ಭರತ ಚಕ್ರವರ್ತಿಯ ಪಾತ್ರಕ್ಕೆ ಆ ಮೊದಲೇ ಒಂದು ಪರಂಪರೆಯಿದ್ದು ಒಬ್ಬ ಭೋಗಿಯಾಗಿ, ಅತಿಮಹತ್ವಾಕಾಂಕ್ಷಿಯಾಗಿ, ಅಹಂಕಾರಿಯಾಗಿ, ಸರ್ವಾಧಿಕಾರೀ ಮನೋಭಾವದವನಾಗಿ ಈ ಎರಡೂ ಪ್ರಸಂಗಗಳಲ್ಲಿ ಚಿತ್ರಣಗೊಂಡು ಅನೇಕ ಶತಮಾನಗಳಿಂದ ಜನಮಾನಸದಲ್ಲಿ ಅಚ್ಚೊತ್ತಿ ನಿಂತದ್ದನು. ಈ ಸಾಂಪ್ರದಾಯಿಕ

ಕಥೆಯ ಮೂಲ ಚೌಕಟ್ಟನ್ನು ಉಳಿಸಿಕೊಂಡಾಗಲೂ ಭರತನ ವ್ಯಕ್ತಿತ್ವವನ್ನು ಭಿನ್ನವಾಗಿ ಎರಕ ಹೊಯ್ಯುವ ಸಾಹಸಕ್ಕೆ ರತ್ನಾಕರನು ಕೈಹಾಕಿದನು.

ಭರತನ ದಿಗ್ವಿಜಯ ಪ್ರಶಸ್ತಿಯ ಸನ್ನಿವೇಶವನ್ನು ಉಳಿಸಿಕೊಳ್ಳಲಾರದೇ, ಕೈಬಿಡಲಾರದೇ ರತ್ನಾಕರ ಒಂದು ಸಂದಿಗ್ಧಕ್ಕೆ ಸಿಕ್ಕಿಕೊಳ್ಳುತ್ತಾನಾದರೂ ಅದನ್ನು ತನಗೆ ಬೇಕಾದಂತೆ ಮಾರ್ಪಡಿಸಿಕೊಂಡಿದ್ದಾನೆ. ಪಂಪನಲ್ಲಿ ಇದು ಅತ್ಯಂತ ಧ್ವನಿಪೂರ್ಣ ಪ್ರಸಂಗ. ಮಹತ್ವಾಕಾಂಕ್ಷಿಯಾದ ಭರತನು ಷಟ್‌ಖಂಡಗಳ ವಿಜಯದ ಗರ್ವದಿಂದ ಉನ್ಮತ್ತನಾಗಿ ತನ್ನ ವಿಜಯಪ್ರಶಸ್ತಿಯನ್ನು ವೃಷಭಾದ್ರಿಯಲ್ಲಿ ಬರೆಸಲು ಮುಂದಾಗುತ್ತಾನೆ. ಅಲ್ಲಿ ದಿಗ್ವಿಜಯವನ್ನು ಸಾಧಿಸಿದ್ದ ಅವನಿಪಾಲರ ಕಿಕ್ಕಿರಿದು ತುಂಬಿಹೋಗಿದ್ದ ಪ್ರಶಸ್ತಿಗಳನ್ನು ನೋಡಿ ಅವನಲ್ಲಿ 'ಕೊಳಗೊಂಡ ಗರ್ವರಸ' ಸೋರಿತಾದರೂ ಅರಿವು ಮೂಡಲಿಲ್ಲ! ಗಳಿತಗರ್ವನಾಗಿ ಸಿಗ್ಗಾದರೂ ಮರುಕ್ಷಣವೇ ತನ್ನ ದಂಡರತ್ನದಿಂದ ಶಾಸನವೊಂದನ್ನಳಿಸಿ ತನ್ನ ಪ್ರಶಸ್ತಿಯನ್ನು ಬರೆಸುತ್ತಾನೆ. ಇಲ್ಲಿ ಯಾವ ಸಂದಿಗ್ಧವೂಯಿಲ್ಲ. ಇಲ್ಲಿನ ಭರತನ ನಡವಳಿಕೆ ಅವನ ಮೂಲ ಸ್ವಭಾವಕ್ಕೆ ಹೊಂದುವಂತೆಯೇಯಿದೆ. ಆದರೆ ರತ್ನಾಕರನ ಭರತನು ಆತ್ಮಜ್ಞಾನಿಯಾದವನು ಅವನು ಸೋಲು-ಗೆಲವುಗಳನ್ನು ಸಮಾನವಾಗಿ ತೆಗೆದುಕೊಳ್ಳುವವನು. ಆದರೂ ದಿಗ್ವಿಜಯವು ಅವನಲ್ಲೂ ಗರ್ವವನ್ನು ಮೂಡಿಸಿತ್ತು. 'ತನ್ನಂಕಮಾಲೆಗೆ ತೆರಪಿಲ್ಲದಿರೆ' ನೃಪಾಲನ ಗರ್ವ ಸೋರುವುದರೊಂದಿಗೆ 'ಭೂತಳ ನನ್ನದೆಂದುಬ್ಬುವ ಮನುಜನೆ ಮರುಳು' ಎಂಬ ವಿವೇಕವೂ ಅವನಲ್ಲಿ ಮೂಡುತ್ತದೆ. ಆದರೆ ಅವನ ವರ್ತನೆಯಲ್ಲಿ ಮಾತ್ರ ಯಾವ ಬದಲಾವಣೆಯೂ ಕಾಣುವುದಿಲ್ಲ. ಚಕ್ರವರ್ತಿಯಾಗಿ ವಿಜಯಶಾಸನವನ್ನು ಬರೆಸುವುದು ತನ್ನ ಕರ್ತವ್ಯವೆನ್ನುವಂತೆ ಮುನ್ನಿನ ಶಾಸನವೊಂದನ್ನಳಿಸಿ, ತನ್ನ ಶಾಸನವನ್ನು ಬರೆಸುತ್ತಾನೆ. ಅಷ್ಟೇ ಅಲ್ಲದೇ ಶಾಸನವನ್ನು ಅಳಿಸಲು ವಿರೋಧಿಸಿದ ಶಾಸನದೇವತೆಗಳನ್ನು 'ಬಡಿಬಡಿ ತೊಂಡರ' ಎಂದು ಅಪ್ಪಣೆಮಾಡಿ ಹಲ್ಲುದುರುವಂತೆ ಬಡಿಸುವ ಉದ್ಧಟ ವರ್ತನೆಯನ್ನೇ ತೋರುತ್ತಾನೆ. ಹಾಗೆ ಶಾಸನವನ್ನು ಉಜ್ಜಿ ಒರೆಸಲು ಹಾಗೂ ತನ್ನದನ್ನು ಬರೆಸಲು ಕಾರಣವನ್ನು ವಿವರವಾಗಿ ನೀಡಿ ಆ ತನ್ನ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಾನೆ. ತನ್ನ ಶಾಸನವಾದರೋ 'ಮಿಥ್ಯಾಭಿದಾನ' ಶಾಸನಗಳಂತಲ್ಲದೇ ಅದು 'ಆತ್ಮತತ್ತ್ವವ ಮುಟ್ಟಿ' ಬರೆದಿರುವ ಲಿಪಿಗಳೆಂದೂ, ಆತ್ಮತತ್ವಕ್ಕೆ ಹೊರಗಾದ ಲಿಪಿಗಳು ನಾಶಯೋಗ್ಯವೆಂದೂ ಸಮರ್ಥಿಸಿಕೊಳ್ಳುತ್ತಾನೆ. ಆ ಪರ್ವತದಲ್ಲಿದ್ದ ಆತ್ಮತತ್ವವ ಮುಟ್ಟಿ ಬರೆದಿದ್ದ ಲಿಪಿಗಳನ್ನು ಹಾಗೇ ಉಳಿಸಿ ಆತ್ಮತತ್ವಕ್ಕೆ ಹೊರಗಾದುದೊಂದು ಲಿಪಿಯನ್ನು ಒರೆಸಿಹಾಕಿಸುತ್ತಾನೆ. "ಶಾಸನದೇವತೆಗಳನ್ನು ಹೀಗೆ ಹೊಡೆಸಿ ಅವರ ವಿರೋಧವನ್ನು ಕಟ್ಟಿಕೊಂಡರೆ ನಿನ್ನ ಶಾಸನವನ್ನು ರಕ್ಷಿಸುವವರಾರು" ಎಂದು ಆತಂಕಗೊಂಡವರಿಗೆ "ಹಂಸತತ್ವವ ಮುಟ್ಟಿಬರೆಸಿದ ತನ್ನ ಜಿನಶಾಸನವನ್ನು ಶಾಸನದೇವತೆಗಳ ರಕ್ಷಣೆಯಿಲ್ಲದಿದ್ದರೂ ಅದನ್ನು ಒರೆಸುವ ದಕ್ಷರಿಲ್ಲವೆಂದೂ, ಹಂಸತತ್ವವ ಹೊದ್ದದ ಶಾಸನಗಳಿಗೆ, ಅರ್ಥವಿಲ್ಲದ ತೊಂಡುಶಾಸನಗಳಿಗೆ ಅವರು ಅಷ್ಟೊಂದು ಪ್ರಾಮುಖ್ಯತೆಯನ್ನು ಕೊಡುವ ಅವಶ್ಯಕತೆಯಿಲ್ಲ" ಎಂದು

ಸಮಾಧಾನಪಡಿಸುತ್ತಾನೆ. 'ಧೂಳಿಲಿಪಿ'ಗಳನಳಿಸುವಂತೆ ಅವುಗಳನ್ನು ತೊಡೆದುಹಾಕಿಸಿ ಅಲ್ಲಿ ಹಂಸನಾಥನನ್ನು ನೆನೆದು 'ಹಂಸತತ್ವ'ವನ್ನು ಮುಟ್ಟಿ ಶಾಸನ ಬರೆಸುತ್ತಾನೆ. ಹಾಗೆ ಬರೆಸಿದ್ದು ತನ್ನ 'ಅಂಕಮಾಲಾ ಪ್ರಶಸ್ತಿ'ಯಲ್ಲ 'ಆತ್ಮ ಸಾಧನೆ'ಯ ಪ್ರಶಸ್ತಿ ಎಂಬುದು ಅವನ ವಾದ!

ಪಂಪ ಬರೆಸಿದ ಭರತನ ಶಾಸನಪಾಠಕ್ಕೂ ರತ್ನಾಕರನು ಬರೆಸಿದ ಭರತನ ಶಾಸನಪಾಠಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಿದರೆ 'ಹಂಸತತ್ವ'ವನ್ನು ಮುಟ್ಟಿ ಬರೆಸುವುದೆಂದರೇನು ಅದು ಪೊಳ್ಳುಹೊಗಳಿಕೆಯಿಂದ ಕೂಡಿದ ಇತರ ಮಿಥ್ಯಾಭಿದಾನದ 'ತೊಂಡುಶಾಸನ'ಗಳಿಗಿಂತ ಹೇಗೆ ಭಿನ್ನ ಎಂಬ ರತ್ನಾಕರನ ವಿಚಾರ ತಿಳಿಯುತ್ತದೆ.

"ಸ್ವಸ್ತಿ ಆದಿದೇವನ ಅಗ್ರತನೂಜನಾದ ಭರತೇಶ್ವರನು ಸಮಸ್ತ ನರೇಶರ ಮಸ್ತಕದಮೇಲೆ ತನ್ನಾಜ್ಞೆಯನ್ನೂ ಇರಿಸಿದವನು, ಸಕಲ ಜಗತ್ತಿಗೆ ತನ್ನ ಕೀರ್ತಿಯನ್ನು ಹಬ್ಬಿಸಿದವನು, ತನ್ನ ವಂಶವಿಸ್ತರಿಸಿದವನು. ಅವನು ಪ್ರಪಂಚದಲ್ಲಿ ತಿಲಕಪ್ರಾಯನು, ಇಕ್ಷ್ವಾಕುವಂಶವೆಂಬ ಆಗಸದ ಚಂದ್ರನು, ಚಕ್ರರತ್ನಕ್ಕೊಡೆಯ, ನವನಿಧಿಗಳಿಗಾಶ್ರಯ, ದಿವಿಜರಿಂದ ನಮಸ್ಕೃತನು, ನಾಭಿರಾಜನ ಮೊಮ್ಮಗನು, ಯಾವನ ದಿಗ್ವಿಜಯದ ಕಾಲದಲ್ಲಿ ಐರಾವತಕ್ಕೆಣೆಯಾದ ಗಜಗಳಿಂದ ಭೂಮಂಡಲವು ತುಂಬಿದ್ದಿತೋ, ಯಾವನ ಸೈನ್ಯಧೂಳಿಗಳಿಂದ ಸಮುದ್ರವು ಹೂತುಹೋಯಿತೋ, ವೇಲಾವನಗಳೂ, ಪರ್ವತಗಳೂ ಯಾವ ನೃಪಾಲನ ಸೈನ್ಯವು ನಡೆದರೆ ನಿರ್ಮೂಲವಾಗುತ್ತಿದ್ದುವೋ, ಯಾವನ ತೋಳುಗಳಿಂದ ಸಮುದ್ರದವರೆಗೆ ರಾಜ್ಯವು ವಿಸ್ತರಿಸಿತೋ, ಯಾವನ ಕೀರ್ತಿಯನ್ನು ದೇವಾಂಗನೆಯರು ಕುಲಗಿರಿಗಳಲ್ಲಿ ಹಾಡುವರೋ, ಯಾವನು ಷಟ್ಖಂಡಮಂಡಿತವಾದ ಭೂಮಂಡಲವನ್ನು ಶೌರ್ಯಾತಿರೇಕದಿಂದ ಆಳಿದನೋ ಅವನೇ ಭರತೇಶ, ಹೀಗೆ ಪ್ರಸಿದ್ಧವಾದ ತನ್ನ ಕೀರ್ತಿಯನ್ನು ಆತನು ವೃಷಭಾದ್ರಿಯಲ್ಲಿ ನೆಲವು ನಿಲ್ಲುವತನಕ ನೆಲೆಗೊಳಿಸಿದನು"– ಪಂಪ ಆದಿಪುರಾಣ, ತ್ರಯೋದಶಾಸ್ವಾಸ.

"ಸ್ವಸ್ತಿ ಶ್ರೀಮನ್ಮಹಾ ತ್ರೈಲೋಕ್ಯ ರಾಜೇಂದ್ರರ ಮಸ್ತಕ ಮಣಿಗಣಗಳ ಕಿರಣಗಳಿಂದ ಶೋಭಿತವಾದ ಪಾದಕಮಲ ಉಳ್ಳವನು, ಅಪಾಯಕರವಾದ ಕರ್ಮಸಮೂಹವನ್ನು ಮಥನಮಾಡಿದ ವಿಕ್ರಮನೂ, ಮೂರುಲೋಕದ ಅಂತರ್ ಬಹಿರ್ ಬೆಟ್ಟಗಳನ್ನು ಈಕ್ಷಣೆ ಮಾಡಬಲ್ಲವನೂ, ಅಂತಹ ತ್ರಿಜಗತ್ತಿನ ಅದ್ಭುತಶಕ್ತಿಯುತನೂ, ಜರೆಯಿಲ್ಲದವನೂ, ಅನಂತಸುಖಿಯಾದ ವೃಷಭೇಶನ ನಿಜಕುಮಾರನು, ನಿರಾಮಯನಾದವನೂ, ಹಂಸೋಪಮಾನವಾದ ಸಾರಗ್ರಾಹಿಯೂ ಶ್ರೀ ಗುರುಹಂಸನಾಥೇಕ್ಷಣ ಉತ್ಸಾಹಿಯೂ, ಸಂಸೇವ್ಯನೂ, ಸನ್ಮೋಹದಿಂದುದಿಸುವ ಕರ್ಮಗಳ ವಿಧ್ವಂಸಿಯೂ, ಸುಜ್ಞಾನಾವಗಾಹಿಯೂ, ಶೃಂಗಾರರಂಗೋಗಿ, ಶುದ್ಧಾತ್ಮಾನುರಾಗಿ, ರಾಜ್ಯಾಂಗನಾಗಿಯೂ ಸಂಗತ್ಯಾಗಿಯಾದವನೂ, ಅಂಗನಾ ಜನವನ ಮಧುಮಾಸನಾದವನೂ ಅಂತೆಯೇ

ದಿವ್ಯ ಮುಕ್ತ್ಯಂಗನೆಯ ಚಿತ್ತವಿಲಾಸನಾದವನೂ ಆದ ಭರತಚಕ್ರೇಶನು ಹುಂಡಾವಸರ್ಪಿಣಿ ಕಾಲದಾದಿಯಲ್ಲಿ ಷಟ್ಖಂಡಭೂಮಂಡಲವನ್ನು ಆಳಿದನು. ಸುಮಂಗಲಮಹಾಶ್ರೀಶ್ರೀ."- ರತ್ನಾಕರವರ್ಣಿ, ಭರತೇಶ ವೈಭವ ಅಂಕಮಾಲಾ ಸಂಧಿ.

ಈ ಎರಡೂ ಶಾಸನಗಳು ಆ ಎರಡು ಭಿನ್ನವಾದ ಕಾಲಮಾನಗಳ ಮೌಲ್ಯಗಳನ್ನೇ ಎತ್ತಿಹಿಡಿಯುತ್ತಿರುವುದೂ, ಪಲ್ಲಟಗೊಂಡಿರುವ ಯುಗಧರ್ಮಕ್ಕೆ ಕನ್ನಡಿಹಿಡಿದಂತಿರುವುದೂ ಗೊತ್ತಾಗುತ್ತದೆ. ಕ್ಷಾತ್ರಯುಗದ ಮೌಲ್ಯಗಳು ಕುಸಿದು ವೀರನು ಭಕ್ತನಿಗೂ, ವೀರವು ಭಕ್ತಿಗೂ, ಲೌಕಿಕ ಸಾಧನೆಗಳು ಆಧ್ಯಾತ್ಮಸಾಧನೆಗೂ ಎಡೆಮಾಡಿಕೊಟ್ಟಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಹಂಸನೆಂದರೆ ಆತ್ಮ, ಸಂಸಾರಮಾರ್ಗದಲ್ಲಿ ನಿರ್ಲಿಪ್ತವಾಗಿಹೋಗುವ ಜೀವನೆಂದೂ ತ್ರಿಲೋಕದ ಮಧ್ಯೆ ಇರುವ ಪರಮಾತ್ಮನೆಂದೂ ಅರ್ಥವಿದೆ. ಇದು ಸಂಪೂರ್ಣವಾದ ವೈದಿಕ ಪರಿಭಾಷೆಯಾಗಿದೆ. ರತ್ನಾಕರನು ಈ ಹಂಸತತ್ವಕ್ಕೆ ಮಾರುಹೋಗಿರುವುದನ್ನೂ, ವೇದೋಪನಿಷತ್ತುಗಳ ಮಾತುಗಳನ್ನು ಯಥಾವತ್ತಾಗಿ ಅನೇಕ ಕಡೆಗಳಲ್ಲಿ ಪ್ರಸ್ತಾಪಿಸಿರುವುದನ್ನೂ 'ಹಂಸನಾಥ', 'ಹಂಸಯೋಗ', 'ಹಂಸಕಲೆ', 'ಹಂಸತತ್ವ', 'ಹಂಸಾನುಭವ'ವೆಂಬ ವಿನೂತನ ಪದಪ್ರಯೋಗಗಳನ್ನು ತನ್ನ ಕಾವ್ಯದುದ್ದಕ್ಕೂ ಮಾಡುವುದನ್ನು ಕುರಿತು ಈಗಾಗಲೇ ವಿದ್ವಾಂಸರು ಚರ್ಚಿಸಿದ್ದಾರೆ.

ಒಟ್ಟಿನಲ್ಲಿ ಈ ಇಡೀ ಪ್ರಸಂಗದಲ್ಲಿ ಹಂಸತತ್ವ ಅಥವಾ ಆತ್ಮ ತತ್ವವು, ಆತ್ಮಸಾಧನೆಯು ಶಾಸ್ವತವಾದುದೆಂದೂ, ಶ್ರೇಷ್ಟವೆಂದೂ ಅದನ್ನೊಳಗೊಂಡ ಶಾಸನ ಶಾಶ್ವತವಾಗಿ ನಿಲ್ಲುವುದೆಂದೂ ಅದರ ಮುಂದೆ ಕೇವಲ ಅಶಾಶ್ವತವಾದ ಲೌಕಿಕಸಾಧನೆಯ ಪೊಳ್ಳು ಹೊಗಳಿಕೆಯ 'ತೊಂಡುಶಾಸನ'ವು ನಾಶವಾಗುವುದೆಂದು ಹೇಳುವುದು ರತ್ನಾಕರನ ಉದ್ದೇಶವಾಗಿದೆ. ಭರತೇಶವೈಭವದುದ್ದಕ್ಕೂ ಚಿತ್ರಿಸಿರುವ ಭೋಗಯೋಗೀಶ್ವರನಾದ ಆತ್ಮಸಾಧಕ ಭರತನ ವ್ಯಕ್ತಿತ್ವವನ್ನು ಇಲ್ಲಿನ ಶಾಸನದ ಕೇವಲ ಐದು ಪದ್ಯಗಳಲ್ಲಿ ಕಟ್ಟಿಕೊಟ್ಟಿದ್ದಾನೆ. ಪಂಪನೂ ಶಾಸನಕ್ಕೆ ಐದು ಕಂದಪದ್ಯ ಬಳಸಿವುದರೊಂದಿಗೆ ಈ ಪ್ರಸಂಗವನ್ನು ಕೇವಲ ಒಂದು ವೃತ್ತ ಒಂದು ವಚನದ ತುಣುಕಿನಲ್ಲಿ ಮುಗಿಸುತ್ತಾನೆ ಭರತನ ಇಂತಹ ವರ್ತನೆಗೆ ಯಾವ ಪ್ರಶ್ನೆಯನ್ನೂ, ಆತಂಕವನ್ನೂ ವಿರೋಧವನ್ನು ವ್ಯಕ್ತಪಡಿಸುವ ಯಾವ ಪ್ರತಿಕ್ರಿಯೆಯೂ ಪಂಪನಲ್ಲಿಲ್ಲ. ಆದರೆ ಶಾಸನವನ್ನು ಹಾಳುಮಾಡುವವರು ರೌರವ ನರಕಕ್ಕಿಳಿವರೆಂದು ನಂಬಿರುವ ಸಂಸ್ಕೃತಿಯಲ್ಲಿ ಭರತನ ಈ ವರ್ತನೆ ದೋಷಪೂರ್ಣವಾಗಿ ಉದ್ಧಟತನವಾಗಿ ಕಂಡಿದೆ ರತ್ನಾಕರನಿಗೆ. ಆ ದೋಷದಿಂದ ರತ್ನಾಕರ ತನ್ನ ನಾಯಕನನ್ನು ಬಿಡಿಸಲೇಬೇಕಾಗಿದೆ. ಹಾಗಾಗಿ ಈ ಪ್ರಸಂಗದಲ್ಲಿ ಶಾಸನದೇವತೆಗಳ ವಿರೋಧ ಆರ್ಭಟ, ಅವರಿಗೆ ದೊರೆತ ಶಿಕ್ಷೆ, ಅವರ ಹೆಂಡತಿಯರ ಗೋಳಾಟ, ಭರತನಿಂದ ಅವರಿಗೆ ದೊರೆತ ಬಿಡುಗಡೆ, ಹಲ್ಲುಕಳೆದುಕೊಂಡ ಅವರ ಹೀನಸ್ಥಿತಿಯ ಬಗೆಗಿನ ವಿಟನೊಬ್ಬನ ನಗೆಸಾರದ ಮಾತುಗಳು, ಶಾಸನದೇವತೆಗಳನ್ನು ಬಡಿಸಿದ್ದರ ಬಗೆಗೆ

ಸೇವಕರು ಹಾಗೂ ಹಿತವರ ಆತಂಕ, ಮಹತ್ತರನಾದ ದಕ್ಷಿಣಾಂಕನ ಪ್ರತಿಕ್ರಿಯೆ ಭರತ ತನ್ನ ವರ್ತನೆಗೆ ನೀಡುವ ವಿವರಣೆ ಎಲ್ಲವನ್ನೂ ಅತಿ ಜಾಣತನದಲ್ಲಿ ಜೋಡಿಸಿ, ಭರತನ ವರ್ತನೆಯನ್ನು ಸಮರ್ಥಿಸಿ ಅದಕ್ಕೆ ಜನಸಾಮಾನ್ಯರು ಮಿಡುಕಬೇಕಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾನೆ.

ಅತ್ಯಂತ ಮನೋಹರವಾದ ದೇಸೀ ನಾಣ್ಣುಡಿಗಳನ್ನು ಸುಂದರ ಉಪಮೆಗಳನ್ನೂ ಬಳಸಿಕೊಂಡು ಸ್ವಾರಸ್ಯಕರವಾಗಿ ಈ ಪ್ರಸಂಗವನ್ನು ನಿರೂಪಿಸಿರುವುದು ಮೆಚ್ಚುವಂತದ್ದು. ವೃಷಭಾದ್ರಿಯವರ್ಣನೆಯಲ್ಲಿ ಅಪ್ಪಟ ಗ್ರಾಮೀಣಚಿತ್ರವೊಂದನ್ನು ನೀಡಿದ್ದಾನೆ. ಸಮತಟ್ಟಾದ ಮಧ್ಯದೇಶದ ನಡುವೆ ನೆಟ್ಟಗೆ ಮೇಲೆದ್ದು ನಿಂತಿದ್ದ ಎತ್ತರವಾದ ವೃಷಬಾದ್ರಿಯು 'ನಟ್ಟನಡುವಣ ಕಳದೆಡೆಯಲ್ಲಿ ಮೇಟಿಯಿಪ್ಪಂತೆ' ಇತ್ತು ಎನ್ನುತ್ತಾನೆ. ಅಲ್ಲದೆ ವೃಷಭಾದ್ರಿಯು ನೂರುಗಾವುದ ತಳಭಾಗದಲ್ಲಿ ದಟ್ಟಯಿಸಿಹರಡಿದ್ದು ಮಧ್ಯೆನೂರುಗಾವುದ ನೇರವಾಗಿ ಎತ್ತರವಾಗಿ ಬೆಳೆದು ಮತ್ತೆ ಕ್ರಮವಾಗಿ ತಗ್ಗಿ ಬೆಳೆದು ನೋಡಲು 'ಪಗಡೆಯಕಾಯಂತೆ' ತೋರುತ್ತಿತ್ತೆಂದು ಹೇಳುತ್ತಾನೆ. ಆನೆಯಮೇಲೆ ವೈಭವದಿಂದ ಬರುವ ಭರತೇಶನ ದೇಹದಮೇಲೆ ಲೆಕ್ಕವಿಲ್ಲದ ಸೈನಿಕರ ಕಣ್ಣುಬಿದ್ದುದರಿಂದ 'ಮೈಗಣ್ಣ'ನೆಂಬ ಅಭಿಧಾನಕ್ಕೆ ತಕ್ಕಂತೆ ಇಂದ್ರಸಮಾನನಾಗಿ ಶೋಭಿಸುತ್ತಿದ್ದನೆಂದು ಚಮತ್ಕಾರವಾಗಿ ಹೊಗಳುತ್ತಾನೆ. ಅನೆಯನ್ನು ನಡೆಸುವ ಪರಿಣತಿ ಭರತನಿಗೆ ಹೆಣ್ಣುಗಳೊಂದಿಗಿನ ಸರಸವಾಡುವಷ್ಟೇ, ಕುದುರೆಯನ್ನು ನಡೆಸುವಷ್ಟೇ ಸುಸಾರವಾದದ್ದು. ಅದು 'ನೀರಮೇಲೊಂದು ಬೆಂಡಿನ ತೇರನ್ನು ತೆಗೆವಂತೆ' ಅತ್ಯಂತ ಸರಳ, ಸುಸಾರ, ಸುಲಭವಾದ ಕೆಲಸವಂತೆ. 'ನೀರಮೇಲೆ ತೇಲುವ ಬೆಂಡಿನ ತೇರಿ'ನ ಚಿತ್ರಣ ಗ್ರಾಮೀಣ ಪರಿಸರದ ತೆಪ್ಪೋತ್ಸವಗಳನ್ನು ನೆನಪಿಸುತ್ತದೆ. ಪೂರ್ವ ಚಕ್ರಿಗಳ ಶಾಸನವನ್ನಳಿಸಲು ಅಡ್ಡಿಮಾಡಿದ ಶಾಸನದೇವತೆಗಳ ಹಲ್ಲನ್ನು ಉದುರಿಸುವ ಚಿತ್ರಣ ಮತ್ತು ಅವರು ಹುರುಳಿಲ್ಲದ ಅಟಮಟ ಲಿಪಿಗಾಗಿ ಸಮಸ್ತಕಟಕದ ಮುಂದೆ ಬಾಯನ್ನು ತಟಮಟನೆ ಹೊಯ್ಸಿಕೊಂಡು ಮಡದಿಯರಿಗೆ ಚುಂಬಿಸಲಾಗದಂತೆ ಹಲ್ಲುನೀಗಿಕೊಂಡ ಹೀನಸ್ಥಿತಿಯನ್ನು ನಗೆಯುಕ್ಕುವಂತೆ ಚೆನ್ನಾಗಿ ವರ್ಣಿಸಿದ್ದಾನೆ. ರಾಜಾಜ್ಞೆಯಂತೆ ಮಾಗಧನ ಸೈನಿಕರು ಆ ಮರುಳು ದೈವಗಳನ್ನು ಬಡಿದಾಗ ಅವರ ಹಲ್ಲೆಲ್ಲ 'ಕವಡೆಯ ಚೀಲವಕೊಡಹಿದಂತೆ' ಧರೆಗೆ ಉದುರಿದವಂತೆ! ಇದೊಂದು ಅಪೂರ್ವವಾದ ಚಿತ್ರ. (ಇದು ಹೊಡೆಸುವ ಕ್ರೌರ್ಯವನ್ನು ನಗೆಯಲ್ಲಿ ತೇಲಿಸಿಬಿಡುವ ಹುನ್ನಾರವೇ ಸರಿ!) ಹಂಸತತ್ವವನ್ನು ಮುಟ್ಟಿಬರೆಸುವ ಭರತೇಶನ ಶಾಸನವನ್ನು ನೋಡಲು ಭೂತಕೋಟಿ ಆಕಾಶದಲ್ಲಿ 'ನಾಕಾವೆ ತಾಕಾವೆ ಚಕ್ರಿಯಲಿಪಿಯನ್' (ನಾನು ಕಾಣುವೆ ತಾನು ಕಾಣುವೆ)ಎಂದು ನೂಕುನುಗ್ಗಲು ಮಾಡಿದವಂತೆ! ಇಲ್ಲಿನಭಾಷಾ ಪ್ರಯೋಗದ ದೇಸೀ ಸೊಗಡು ಅಕರ್ಶಕವಾಗಿದೆ.

ರತ್ನಾಕರನ ವಿಶೇಷತೆಯನ್ನು ಜಾಣ್ಮೆಯನ್ನು ತಿಳಿಸುವ ಮತ್ತೊಂದು ಪ್ರಸಂಗ ಭರತ ಬಾಹುಬಲಿಯರ ಸಂಘರ್ಷದ ಸನ್ನಿವೇಶ. ಪಂಪನ ಲೌಕಿಕ ಸಾಧನೆಯ

ಸಂಕೇತವಾದ ಭರತ ಹಾಗೂ ಆಧ್ಯಾತ್ಮ ಸಾಧನೆಯ ಸಂಕೇತವಾದ ಬಾಹುಬಲಿಯ ಸಂಘರ್ಷವು ರತ್ನಾಕರನಲ್ಲಿ 'ರಾಜೇಂದ್ರ ಗುಣವಾಕ್ಯ ಸಂಧಿ'ಯೆಂದು ಬದಲಾಗಿರುವುದನ್ನು ಗಮನಿಸಬಹುದು. ಸರ್ವಾಧಿಕಾರ ಮತ್ತು ಸ್ವಾತಂತ್ರ್ಯಪ್ರಿಯತೆಯ ಸೆಣಸಾಟದ ಧ್ವನಿಪೂರ್ಣ ಸಂದರ್ಭದ ಪಂಪನ ಚಿತ್ರಣವು ಇಲ್ಲಿ ಒಂದು ಅದ್ಭುತ ಸೋದರಸಂಹಿತೆಯ, ಆಪ್ತಸಮಾಲೋಚನೆಯ (ಕೌನ್ಸಲಿಂಗ್) ಸೆಷನ್‌ಆಗಿ ಮಾರ್ಪಟ್ಟಿದೆ.

ಒಲಿಸುವ ದಕ್ಷಿಣಾಂಕನ ಜಾಣತನದ ಮಾತಿಗೆ ಸೊಪ್ಪುಹಾಕದೇ ಬಾಹುಬಲಿ ಯುದ್ಧಸಾರಿರುವ ವಿಚಾರ ತಿಳಿದು ತಾಯಿ, ಮಡದಿಯರು, ಮಂತ್ರಿ ಮಹೋದಯರೆಲ್ಲರೂ ಬುದ್ಧಿವಾದವನ್ನು ಹೇಳಿದರೂ ಕೇಳದೆ ಉನ್ಮತ್ತನಾಗಿ ಯುದ್ಧಕ್ಕೆ ಬರುತ್ತಾನೆ ಬಾಹುಬಲಿ. ಯುದ್ಧ ಅನಿವಾರ್ಯವೆಂದಾಗ ಎರಡೂ ಪಕ್ಷದ ಮಂತ್ರಿಗಳಿಂದ ಧರ್ಮಯುದ್ಧವು ನಿಶ್ಚಯವಾಗುತ್ತದೆ. ಕಿರಿಯನಾದ ಬಾಹುಬಲಿಯ ಈ ದುಡುಕುತನದಿಂದ ಪುರುದೇವನ ಮಕ್ಕಳ ಈ ಮೇಲಾಟ ಲೋಕಕ್ಕೇ ಕೆಟ್ಟ ಉದಾಹರಣೆ ಆಗಬಾರದೆಂದೂ, ಹಿರಿಯನೂ ವಿವೇಕಿಯೂ ಆದ ತಾನು ದುಡುಕಬಾರದೆಂದೂ ಆ ವಿಷಮ ಪರಿಸ್ಥಿತಿಯನ್ನು ಬದಲಿಸಬೇಕೆಂದು ಭರತನು ಯೋಚಿಸುತ್ತಾನೆ! ಕುಂದಣದ ಪರ್ವತ ಪಚ್ಚೆಯಪರ್ವತಗಳಂತೆ ರಣರಂಗದಲ್ಲಿ ಒಬ್ಬರಿಗೊಬ್ಬರು ಒಡ್ಡಿನಿಲ್ಲುತ್ತಾರೆ. ಅಡ್ಡವೋರೆಯನ್ನು ಮಾಡಿ 'ತೊಡಕಿದತೋಳು'ಗಳೊಂದಿಗೆ ಬಾಹುಬಲಿ ಕಡುದಿಟ್ಟನಂತೆ ನಿಂತಿರುತ್ತಾನೆ. ಆದರೂ ಭರತ ಹಿರಿಯನಾಗಿ ಯುದ್ಧಪೂರ್ವದಲ್ಲಿ ತಮ್ಮನಿಗೆ ಒಂದೆರಡು ಮಾತುಗಳನ್ನು ಹೇಳುವುದು ಸರಿಯೆಂದೂ ಭಾವಿಸಿ ಮಾತಿಗೆ ತೊಡಗುತ್ತಾನೆ. ಆ ಮಾತಾದರೂ ಯುದ್ಧಕ್ಕಂಜಿದವನ ಮಾತಲ್ಲ, "ನುಡಿವ ಗಂಭೀರ, ಬೋಧಿಪ ಬೋಧೆ, ತಮ್ಮನೆಂದೊಡಕು ಹುಟ್ಟಿಸದೊಂದು ಪ್ರೀತಿ, ತೊಡರದ ಮಾತಿಂದ ಗೆಲ್ಲುವ ಚಾತರ್ಯ"ದಿಂದ ಕೂಡಿದ ಮಾತುಗಳವು.

"ಮನಸಿಜ ಕೇಳಣ್ಣ ದುರ್ಮನದಿಂದ ನಮ್ಮಿಬ್ಬರಿಗೆ ಜಗಳವಾಗುತ್ತಿದೆ, ಆದಿ ತೀರ್ಥಂಕರನ ಮಕ್ಕಳಾದ ನಾವು ಕದನ ಮಾಡುವುದು ಎಷ್ಟು ಸರಿ, ನಿನ್ನ ಒಡವೆಗಳನ್ನು ನಾನಾಗಲೀ ನನ್ನದನ್ನು ನೀನಾಗಲೀ ಅಪಹರಿಸಿದ್ದಿಲ್ಲ, ಆ ಮೊದಲು ನಮ್ಮ ತಂದೆ ಹಂಚಿಕೊಟ್ಟಂತೆ ರಾಜ್ಯವನ್ನು ರಾಜ-ಯುವರಾಜರೆಂಬ ಸನ್ನಾಹದಲ್ಲಿ ನಡೆಸಿಕೊಂಡು ಹೋಗುತ್ತಿದ್ದೆವು. ನಾನಾಗಲೀ ನನ್ನ ಪಡೆಯವರಾಗಲಿ ನಿನ್ನನ್ನು ಕುರಿತು ಲಘುನುಡಿಗಳನ್ನಾಡಿದ್ದಿಲ್ಲ, ಒಡಹುಟ್ಟಿದವನನ್ನು ನೋಡಬೇಕೆಂದು ನಿನ್ನನ್ನು ಬರಹೇಳಿದರೆ ಅದನ್ನು ಹುಸಿಯೆಂದು ಭಾವಿಸಬಹುದೇನಪ್ಪ? ಯುದ್ಧಕ್ಕಂಜಿ ಬರಿಮಾತಿಗೆ ತೊಡಗಿದ್ದೇನೆಂದು ಭಾವಿಸಬೇಡ, ಜನ ಮೆಚ್ಚಿ ಕೊಂಡಾಡುವಂತೆ ಯುದ್ಧಮಾಡುತ್ತೇನೆ. ಆದರೆ ಅದಕ್ಕೆ ಮೊದಲು ನಿನ್ನ ಮನಸ್ಸಿನಲ್ಲಿ ತುಂಬಿಕೊಂಡಿರುವ ಪಾತಕ ವಿಚಾರಗಳನ್ನು ತೊಡೆದುಹಾಕುತ್ತೇನೆ. ನಿನಗಿಂತ ನಾನು ಹಿರಿಯನೆಂಬ ಕಾರಣಕ್ಕೆ ಸೇನೆಗೆ ನಿನ್ನ ಬರಲು ಹೇಳಿದೆನು. ನೀನೇ ಅಗ್ರಜನಾಗಿದ್ದರೆ ನೀನಿದ್ದ ಜಾಗಕ್ಕೇ

ತಡಮಾಡದೇ ಬಂದು ನಿನ್ನನ್ನು ಕಾಣದೆ ಇರುತ್ತಿದ್ದೆನೆ? ನನ್ನ ಮಾತನ್ನು ಸರಿಯಾಗಿ ಕೇಳಿಸಿಕೋ. ನಮ್ಮಿಬ್ಬರ ಭಟರುಗಳು ನೋಟಕಾರರು ನಾವಿಬ್ಬರೂ ಆಟಕಾರರು. ನೀನು ಬಯಸಿದ ರೀತಿಯಲ್ಲಿಯೇ ನಮ್ಮಿಬ್ಬರ ಯುದ್ಧವು ಸಂಘಟಿತವಾಗಿದೆ. ನನ್ನನ್ನು ಗೆದ್ದು ನಿನಗೆ ಬರುವ ಕೀರ್ತಿಯೇನು? ಅಥವಾ ನಿನ್ನನ್ನು ಗೆದ್ದು ನನಗೆ ಬರುವ ಯಶಸ್ಸೇನು? ಪನ್ನಗ, ಸುರ ನರಲೋಕದ ಉತ್ತಮರು ನಮ್ಮ ನಡವಳಿಕೆಯನ್ನು ನೋಡಿ 'ಛೀ' ಎನ್ನುವುದಿಲ್ಲವೇ ಯೋಚಿಸಿನೋಡು. ಕದನವೆಂದಮೇಲೆ ಸೋಲು ಗೆಲವುಗಳು ಇದ್ದದ್ದೇ. ನೀನಾದರು ಯುದ್ಧಕ್ಕೇ ಮುಂದಾಗಿನಿಂತಿರುವೆ. ಅವಿವೇಕಿಗಳ ಹಾಗೆ ನೀಚರಹಾಗೆ ಗೆಲವಿಗೋಸ್ಕರ ಹೋರಾಡಬೇಕೆ? (ಈ ಮಾತುಗಳನ್ನು ಷಟ್ಖಂಡಗಳನ್ನು ಗೆದ್ದು ಬಂದಿರುವವನು ಆಡುತ್ತಿರುವುದು!) ಗೆಲವು ನಿನ್ನದು ಸೋಲವೆನಗೆ ಅದಕ್ಕೇಕೆ ಯುದ್ಧ ಬಿಡು, ಗೆಲವೆಂಬುದೇನು ಉಪಚಾರವಲ್ಲ, ನಿನ್ನ ತೋಳಿನ ಬಲವನ್ನು ನಾನು ಅರಿತಿದ್ದೇನೆ. ಇಡೀ ಚತುರಂಗಬಲವೆಲ್ಲವೂ ಕೇಳುವಂತೆ ಸಾರಿ ಹೇಳುತ್ತೇನೆ. ಈಗ ನಿಶ್ಚಯವಾಗಿರುವ ಯುದ್ಧಗಳಲ್ಲಿ ನೀನೆ ಗೆಲ್ಲುತ್ತೀಯೆ. ಏಕೆಂದರೆ ದೃಷ್ಟಿಯುದ್ಧದಲ್ಲಿ ಇಪ್ಪತ್ತೈದು ಚಾಪಗಳೆತ್ತರವಿರುವ ನೀನು ಅನಾಯಾಸವಾಗಿ ನನ್ನನು ದೃಷ್ಟಿಸಬಹುದು ಆದರೆ ನಾನು ನಿನ್ನನ್ನು ಡಿಟ್ಟಿಸುವಾಗ ಊರ್ಧ್ವದೃಷ್ಟಿಯಿಂದ ಎವೆಗಳು ನೊಂದು ಹೊಯ್ದುಕೊಳ್ಳುವುದು ಸಹಜ. ಇನ್ನು ಜಲಯುದ್ಧದಲ್ಲಾದರೂ ನಾನು ಚೆಲ್ಲುವ ನೀರು ನಿನ್ನ ಎದೆಯನ್ನು ಮುಟ್ಟಿ ಇಳಿಯುತ್ತದೆ. ದೀರ್ಘ ಬಾಹುಗಳಿಂದ ನೀನು ಉಗ್ಗುವ ನೀರು ನನ್ನನ್ನು ಮುಳುಗಿಸಿಬಿಡುತ್ತದೆ. ರಾಚುವ ನೀರಿನ ರಭಸಕ್ಕೆ ನನ್ನ ಮುಖ ಪಕ್ಕಕ್ಕೆ ತಿರುಗುವುದು ಸಹಜವಲ್ಲವೇ? ಮತ್ತೆ ಇನ್ನು ಮಲ್ಲಯುದ್ಧದಲ್ಲಿ ನನ್ನನ್ನು ಮೇಲೆತ್ತಿ ಹಿಡಿದು ನೀನೇ ಗೆಲ್ಲುವೆ, ಅಷ್ಟಲ್ಲದೇ ತಂದೆಯು ಬುಜಬಲಿಯೆಂದು ನಿನಗಿಟ್ಟ ಹೆಸರು ಹುಸಿಯಾಗುವುದೇ? ಹಾಗಾಗಿ ಯುದ್ಧವೇ ಬೇಡ. ಗೆಲವು ನಿನ್ನದು ಸೋಲವೆನಗೆ" ಎಂದು ಒಂದೇ ಸಮನೆ ಭರತ ಮಾತನಾಡುತ್ತಾನೆ. ತಮ್ಮನಿಗೆ ಅಣ್ಣ ಸೋತೆನೆಂದು ಹೇಳುವ ಮಾತನ್ನು ಕೇಳಿ ದಶದಿಕ್ಕುಗಳು ಕಂದಿಹೋದುವಂತೆ! ಬೆಂಕಿಯಿಲ್ಲದೇ ಹೊಗೆ ತುಂಬಿದಂತಾಯ್ತು, ಇಡೀ ವಾತಾವರಣ ಮಂಕಾಗಿಹೋಯಿತಂತೆ. ಮನರತ್ನ ನೊಂದು ಮಾತನಾಡುವಾಗ ಇದು ಸಹಜವೇ ಎನ್ನುತ್ತಾನೆ ಕವಿ. ಈ ವಿವರಗಳ ಮೂಲಕ ಬಾಹುಬಲಿಯ ಗೆಲುವಿಗೆ ಕಾರಣವಾಗುವ ಅಂಶಗಳನ್ನು ರತ್ನಾಕರ ವಿಶ್ಲೇಷಿಸುತ್ತಿದ್ದಾನೆ. ಪಂಪನಲ್ಲಿ ದ್ವಂದ್ವಯುದ್ಧ, ಬಾಹುಬಲಿಯ ಗೆಲುವು ಸರ್ವಾಧಿಕಾರಿಂಬೊಬ್ಬನಿಗೆ ಕೊಟ್ಟ ಉತ್ತರವಾಗಿ, ಸ್ವಾಭಿಮಾನ ಸ್ವಾತಂತ್ರ್ಯಯಪ್ರಿಯತೆಯ ಸಂಕೇತವೆಂಬಂತೆ ತೋರುತ್ತದೆ. ಆದರೆ ರತ್ನಾಕರನ ಪ್ರಕಾರ ಬಾಹುಬಲಿಯ ಆ ಗೆಲುವಾದರೂ ಅವನ ದೇಹೋನ್ನತಿಯಿಂದಲೇ ಹೊರತು ಆತ್ಮೋನ್ನತಿಯಿಂದಾಗುವುದಲ್ಲ. ಹಾಗಾಗಿ ಈ ದ್ವಂದ್ವಯುದ್ಧ ನಿಜವಾಗಿಯೂ ಭರತನ ಆತ್ಮೋನ್ನತಿಗೆ ಯಾವ ಧಕ್ಕೆಯನ್ನೂ ಉಂಟುಮಾಡುವುದಿಲ್ಲ. ಬಾಹುಬಲಿ ಗೆದ್ದೂ ದೊಡ್ಡವನಾಗುವುದಿಲ್ಲ ಎಂಬುದು ರತ್ನಾಕರನ ತರ್ಕ. ಚತುರಂಗ ಬಲವಾದರೂ ಭರತನ ಮಾತನ್ನು ಕೇಳಿ ಬೆದರಿತಂತೆ.

ಈ ಮಾತುಗಳು ಮುಲೆತು ನಿಂತಿದ್ದ ಮದನನ ಮೇಲೆ ಪರಿಣಾಮವನ್ನುಂಟುಮಾಡಿದವು. "ಹಾ ಕಷ್ಟವನೆನೆದೆ' ಎಂದು ಅವನ ಎದೆಯಲ್ಲಿ ನೋವುಂಟಾಗಿ ಅಣ್ಣನಿಗೆ ಸಮ್ಮುಖವಾಗಿ ನಿಲ್ಲಲಾರದೇ ಓರೆಯಾಗಿರಲು ಅತಿ ಸೂಕ್ಷ್ಮಜ್ಞನಾದ ಭರತ ಇದೇ ಸಮಯವೆಂದು ತನ್ನ ಮಾತನ್ನು ಮತ್ತಷ್ಟು ಆಪ್ಯಾಯತೆಯನ್ನು ತುಂಬಿ ಮುಂದುವರೆಸುತ್ತಾನೆ. "ಕೇಳಣ್ಣ ಚಕ್ರವನ್ನು ಬಯಸಿದವನಲ್ಲ ನಾನು, ಅತಿಶಯವಾದ ಚಕ್ರರತ್ನವು ತಾನೇ ಶಸ್ತ್ರಾಗಾರದಲ್ಲಿ ಹುಟ್ಟಿ ನಿಮ್ಮೆಲ್ಲರ 'ಆಲಿಗೆ ನೋವಾಗುವಂತೆ' ನನ್ನನ್ನು ಏಳಿಸಿ ನಾಡಿನ ದಿಗ್ವಿಜಯವನ್ನು ಮಾಡಿಸಿತು. ಅರಸನಂತೆ ನೀ ಹಾಯಾಗಿ ಊರಿನಲ್ಲಿದ್ದೆ. ನೀನು ಅಟ್ಟಿದ ದೊರೆಯಂತೆ ನಾನು ದಿಗ್ವಿಜಯಮಾಡಿ ಧರೆಯನ್ನು ಸಾಧಿಸಿತಂದಿದ್ದೇನೆ, ಗೆದ್ದು ತಂದ ಭೂವರರಿದ್ದಾರೆ, ಅಪಾರ ಸೈನ್ಯವಿದೆ ಒಪ್ಪಿಸಿಕೋ" ಎನ್ನುತ್ತಾನೆ ಭರತ. ಮತ್ತೆ ಮುಂದುವರೆದು "ನಿನಗೆ ನಾನು ಅಣ್ಣನೆಂಬ ಅಕ್ಕರೆಯಿಲ್ಲದಿದ್ದರೂ ನನಗೆ ನೀನು ಅನುಜನೆಂಬ ಅಕ್ಕರೆ ಉಂಟಪ್ಪ ನನೆವಿಲ್ಲ, ರಾಜ್ಯಪದವಿಯನ್ನು ಒಪ್ಪಿಸಿಕೊ, ನಿನ್ನ ಭಾಗ್ಯವನ್ನು ಕಣ್ಣುತುಂಬಾ ನೋಡುತ್ತೇನೆ, ಕೌಸಲಿಯನ್ನು ನೀನು ಸುಖವಾಗಿ ಆಳ್ವಿಕೆಮಾಡು ನನಗೆ ಒಂದು ದೇಶವನ್ನು ಕೊಟ್ಟು ಬೇರೆ ಇರಿಸು, ಈ ಮಾತುಗಳನ್ನು ಕಷ್ಟದಿಂದ ಹೇಳುತ್ತಿಲ್ಲ, ಪುರುಪರಮೇಶ್ವರನ ಪಾದದಾಣೆಯಾಗಿ ಸಂತೋಷವಾಗಿಯೇ ಹೇಳುತ್ತಿದ್ದೇನೆ ವಿರಸವನ್ನು ಬಿಡು" ಎಂದು ಮನಮುಟ್ಟುವಂತೆ ಭರತ ಚಕ್ರಿ ನುಡಿಯಲು ಭಾಹುಬಲಿಯ ಮನಸ್ಸು ಕುಗ್ಗಿಹೋಯಿತು. ಮುಖ ಕೆಳವಾಲಿತು.

ಇಷ್ಟಕ್ಕೆಲ್ಲಾ ಕಾರಣವಾದ ಚಕ್ರರತ್ನವನ್ನು ಕರೆದು ಬಾಹುಬಲಿಯನ್ನು ಓಲೈಸುವಂತೆ ಭರತನು ಆಜ್ಞೆಮಾಡುತ್ತಾನಾದರೂ ಚಕ್ರರತ್ನವು ಪೂಗಣೆಯನಾದ ಬಾಹುಬಲಿಗೆ ಚಕ್ರವನ್ನು ಬೆಸಗೈಯ್ಯುವ ಪುಣ್ಯವಿಲ್ಲದ್ದರಿಂದ, ಅದು ಭರತನಿಗೆ ಮಾತ್ರವಿರುವುದರಿಂದ ಬಾಹುಬಲಿಯತ್ತ ಹೋಗಲು ನಿರಾಕರಿಸಿ ಭರತನ ಮುಂದೆ ಬಂದು ನಿಲ್ಲುತ್ತದೆ. ಕೋಪಗೊಂಡ ಭರತನು "ಎಲೆಲೆ ಪಿಶಾಚ ಹೋಗೆಂದರೇತಕೆ ಹೋಗೆ, ಕಲಹ ನಿನ್ನಿಂದಾದುದು ಜಲಜಾಸ್ತ್ರನತ್ತ ಹೋಗು" ಎಂದು ನೂಕುತ್ತಾನೆ. ಮನಸ್ಸಿಲ್ಲದ ಮನಸ್ಸಿನಲ್ಲಿ ಚಕ್ರವು ಬಳೆ ಜಾರುವಂತೆ ನಿಧಾನವಾಗಿ ಬಾಹುಬಲಿಯತ್ತ ಸರಿಯುತ್ತದೆ.

ಅಣ್ಣನ ಮಾತುಗಳು ವರ್ತನೆಗಳಿಂದ 'ಗರುಡಮಂತ್ರಕೆ ವಿಷವಿಳಿವಂತೆ' ಬಾಹುಬಲಿಯ ಕೋಪ ಶಮನವಾಗಿ ಮನಕ್ಕೆ ತಂಪೊದಗಿತಂತೆ! ಒಲೆದ ಅವನ ಮೋರೆ ತಿರುಗಿತು ಅಣ್ಣನ ಕಡೆಗೆ, ಅಹಮ್ಮಿನಿಂದ ತೊಡಕಿಕೊಂಡಿದ್ದ ಬಾಹುಗಳು ಸಡಿಲಿದವು, ಅಣ್ಣನ ಮುಖವನ್ನು ನೋಡಲಾಗದೆ ನಾಚಿಕೆಯಿಂದ ತಲೆಕುಸಿಯಿತಂತೆ. ಇಲ್ಲಿನ 'ಬಾಡಿಲಾಂಗ್ವೇಜ್'ನ ಸೂಕ್ಷ್ಮವಿವರಗಳ ಚಿತ್ರಣವನ್ನು ರತ್ನಾಕರ ಅದ್ಭುತವಾಗಿ ಮಾಡಿದ್ದಾನೆ. ಬಾಹುಬಲಿಯ ಮನಸ್ಸಿನಲ್ಲಾಗುತ್ತಿದ್ದ ಈ ಪರಿವರ್ತನೆಯನ್ನು ಅವನ ದೇಹಭಾವ ಸ್ಪಷ್ಟವಾಗಿ ತಿಳಿಸುತ್ತಿತ್ತು. ಹಾಗಾಗಿ ಆ ಬದಲಾವಣೆ ಅವರನ್ನೇ

ದಿಟ್ಟಿಸುತ್ತಿದ್ದ ಎಲ್ಲರಿಗೂ ತಿಳಿದು ಹೋಯಿತು. ಯುದ್ಧವಿಲ್ಲದೆಯೇ ನುಡಿಯೊಳೇ ಚಕ್ರಿ ಹೇಗೆ ಬಾಹುಬಲಿಯನ್ನು ಸೋಲಿಸಿದನೆಂಬುದು ತಿಳಿದು ಎಲ್ಲರೂ ಹರ್ಷಗೊಂಡರು.

ಭರತನ ಮಾತಿನ ಜಾಣ್ಮೆಗೆ ಇಡೀ ಸೈನ್ಯ ಬೆರಗಾಯಿತು. ಬಾಹುಬಲಿಯಂತೂ ತನ್ನ ವರ್ತನೆಗೆ ತಾನೇ ನಾಚಿ ಕುಗ್ಗಿಹೋಗಿದ್ದಾನೆ. ಮೂಗಿನಮೇಲೆ ಬೆರಳಿಟ್ಟುಕೊಂಡಿದ್ದಾನೆ. ತನ್ನ ದುರ್ವರ್ತನೆಯ ವಾಸನೆ ತನಗೇ ಬಡಿದು ತನ್ನ ಬಗೆಗೇ ಹೇಸಿಗೆಯಾಯಿತಂತೆ! "ತಾನು ಪಾಪಿ, ಅಣ್ಣನನ್ನೇ ಎದುರಿಸಿ ನಿಂತು ಕುಲಕ್ಕೆ ಅಪವಾದ ತಂದೆ. ಕೋಪ ಗರ್ವಗಳು ಯಾರನ್ನು ತಾನೆ ಕೆಡಿಸುವುದಿಲ್ಲ" ಎಂದು ಮರುಗುತ್ತಾನೆ. "ಸನ್ಮತವಲ್ಲದ ಕಾರ್ಯವನ್ನು ಮಾಡುವ ನನ್ನಂತಹ ಉನ್ಮತ್ತನನ್ನು ತಂದೆ ಮನ್ಮಥನೆಂದು ಏಕೆ ಕರೆದನೋ, 'ನಿನ್ನಣ್ಣ ನಿನ್ನಣ್ಣ' ಅವನೊಡನೆ ವೈರಬೇಡವೆಂದು ಪ್ರಿಯರಾದ ಹಿತವರೆಲ್ಲರೂ ತಿಳಿಹೇಳಿದರೂ ಆ ಮಾತುಗಳನ್ನು ದಿಕ್ಕರಿಸಿ 'ಅವನು–ಇವನು–ಚಕ್ರವರ್ತಿ' ಎಂದು ನಾನು ಹೀನಾಯವಾಗಿ ಮಾತನಾಡಿದೆನೆ ಹೊರತು ಅಗ್ರಜನೆಂದು ಭಾವಿಸಲೇಯಿಲ್ಲ, ಲೋಕದ ಮುಂದೆ ಅಣ್ಣನು 'ತಾನು ಸೋತೆ ನಿನ್ನದೇ ಗೆಲವು' ಎಂದು ಸಾರಿ ಹೇಳಿದನಲ್ಲ! ಆ ಚಕ್ರರತ್ನಕ್ಕಾದರೂ ಎಷ್ಟು ಧರ್ಮ ಸಂಕಟವನ್ನು ನಾನು ತಂದೆ, ಅತಿ ಲಘುವಾಗಿ ವರ್ತಿಸಿಬಿಟ್ಟೆನಲ್ಲಾ" ಎಂದು ಬಗೆಬಗೆಯಾಗಿ ಬಾಹುಬಲಿ ಆತ್ಮನಿಂದನೆ ಮಾಡಿಕೊಳ್ಳುತ್ತಾನೆ. ರತ್ನಾಕರವರ್ಣಿ ಈ ಪ್ರಸಂಗದಲ್ಲಿ ಬಾಹುವಲಿಯ ವರ್ತನೆ ನಡೆಗಳನ್ನು ಬಹಳ ಸೂಕ್ಷ್ಮವಾಗಿ ವಿವರಿಸಿದ್ದಾನೆ. ಅದು ಭರತನ ಶ್ರೇಯಸ್ಸು, ಸಾಧನೆಗಳನ್ನು ಸಹಿಸಿಕೊಳ್ಳಲಾರದ 'ಕಣ್ಣುರಿಯ' ಫಲವೆಂದೂ, ಭರತ ಕಷ್ಟಪಟ್ಟು ಸಾಧಿಸಿತಂದಿರುವ ಷಟ್ಖಂಡದ ಸಂಪತ್ತನ್ನು ಅರಮನೆಯಲ್ಲಿ ಹಾಯಾಗಿಕುಳಿತ ಅವನು ಸುಲಭವಾಗಿ ತನ್ನ ದೇಹೋನ್ನತಿಯಿಂದ ದಕ್ಕಿಸಿಕೊಳ್ಳುವ ಹುನ್ನಾರವೆಂದೂ, ಸೋದರಸಂಬಂಧಕ್ಕೆ ಬೆಲೆಯಿಲ್ಲದ, ಗುರುಹಿರಿಯರ ಮಾತನ್ನೂ ಕೇಳದ ಉನ್ಮತ್ತತೆ, ಅಹಂಕಾರವೆಂಬುದನ್ನು ಓದುಗರಿಗೆ ಮುಟ್ಟುವಂತೆ ಮಾಡಿದ್ದಾನೆ. ಕೊನೆಗೆ ಎಷ್ಟಾದರೂ ಬಾಹುಬಲಿ ಆಸನ್ನ ಮೋಕ್ಷುಕನಲ್ಲವೇ, ಅಣ್ಣನ ಮಾತುಗಳಿಂದ ಅವನ ಮನ ಪರಿವರ್ತನೆಯಾದುದು ಸಹಜವೇ ಆಗಿದೆ, ಅದು ಅಗಬೇಕಾದದ್ದೇ ಎನ್ನುತ್ತಾನೆ ಕವಿ. ಆ ಮೂಲಕ ಪಂಪನ ಬಾಹುಬಲಿಯ ಆ ಗೆಲವು! ಗೆಲುವಿನ ತುತ್ತತುದಿಯಲ್ಲಿ ಉಂಟಾಗುವ ಮನಃಪರಿವರ್ತನೆ ಆ ಮಹೋನ್ನತ ಭಾವ, ಸೋಲನ್ನು ಜೀರ್ಣಿಸಿಕೊಳ್ಳಲಾಗದ ಭರತನ ಹೀನ ನಡೆ ಎಲ್ಲವನ್ನೂ ಅತ್ಯಂತ ಜಾಣತನ ಮತ್ತು ಬದ್ಧತೆಯಿಂದ ಕವಿ ಇಲ್ಲಿ ಮರೆಯಾಗುವಂತೆ ನಿಭಾಯಿಸಿದ್ದಾನೆ.

ತನ್ನತಪ್ಪಿನ ಅರಿವಾಗಿ ಬಾಹುಬಲಿ ಪ್ರಾಯಶ್ಚಿತ್ತಕ್ಕಾಗಿ ದೀಕ್ಷೆಗೆ ತೆರಳುವುದೇ ಸರಿ ಎಂದು ತೀರ್ಮಾನಿಸಿ ಅಣ್ಣನನ್ನು ದಿಟ್ಟಿಸಿ ನೋಡಲಾಗದೇ ಅತ್ತ ಇತ್ತ ನೆರೆದ ಸೈನ್ಯದಕಡೆಗೆ ದೃಷ್ಟಿ ಹಾಯಿಸುತ್ತಾನೆ. ಅವರಾದರೋ ಬಾಹುಬಲಿಗೆ ಕೈಗಳನ್ನು ಮುಗಿಯುತ್ತಾರೆ. ತನ್ನಂತಹ 'ತಪ್ಪುಗಾರ'ನಿಗೆ ಏಕೆ ಕೈಮುಗಿಯುತ್ತಾರೋ ಎಂದು ಅವನು ನಾಚಿಕೆಯಿಂದ ಮತ್ತಷ್ಟು ಕುಗ್ಗಿಹೋಗುತ್ತಾನೆ. ತಲೆಯನ್ನು ತಗ್ಗಿಸಿ ತನ್ನ

ತೀರ್ಮಾನವನ್ನು ಅಣ್ಣನಿಗೆ ತಿಳಿಸುವ ನಿರ್ಧಾರವನ್ನು ಮಾಡುತ್ತಾನೆ. ಈ 'ಸೋದರ ಸಂಹಿತೆ'*ಯ ಪ್ರಸಂಗವು ಒಬ್ಬ ಅದ್ಭುತ ಆಪ್ತಸಮಾಲೋಚಕನಾಗಿ ರಾಜಕೀಯ ತಂತ್ರಗಾರಿಕೆಯಲ್ಲಿ ನಿಪುಣನಾದ ಮುತ್ಸದ್ದಿಯಾಗಿ, ಭರತನ ವ್ಯಕ್ತಿತ್ವದಲ್ಲಿರುವ ಹಲವು ಮುಖಗಳನ್ನು ತೋರಿಸುತ್ತದೆ. ಯಾವ ಪ್ರಸಂಗದಲ್ಲಿ ಪಂಪನ ಭರತನ ವ್ಯಕ್ತಿತ್ವ ಬಾಹುಬಲಿಯ ಉದಾತ್ತತೆಯ ಮುಂದೆ, ತಿಳುವಿನ ಮುಂದೆ ಕುಬ್ಜವಾಗುತ್ತದೋ, ಅವಮಾನ ಹೀನಗುಣಗಳಿಂದ ಕುಸಿದುಹೋಗುತ್ತದೋ ಅದನ್ನು ಸಂಪೂರ್ಣವಾಗಿ ಬದಲಿಸಿದ್ದಾನೆ. ರತ್ನಾಕರ ತನ್ನ ಕೃತಿಯ ನಾಯಕ ಪಾತ್ರದ ಘನತೆಯನ್ನು ಕಾಪಾಡಿ, ಅದ್ಭುತವಾಗಿ ನಿಭಾಯಿಸಿರುವುದಕ್ಕೆ ಈ ಪ್ರಸಂಗ ಸಾಕ್ಷಿಯಾಗಿದೆ. ಈ ಪ್ರಸಂಗದಲ್ಲೂ ಭಾಷಾ ಬಳಕೆಯಲ್ಲಿ ದೇಸೀ ಕಾಕುಗಳು, ಮಾತಿನ ಸೊಗಸು, ಆಪ್ತತೆ ಮನಸೆಳೆಯುತ್ತದೆ.

ಪ್ರಗತಿಶೀಲ ಸಾಹಿತ್ಯ ಮತ್ತು ನಿರಂಜನರು

◈

ರಾಜಶೇಖರ ಹಳೆಮನೆ

ಭಾರತ ೧೯೪೦ರಲ್ಲಿ ಅನೇಕ ಬದಲಾವಣೆಗೆ ಒಳಗಾಗುತಿತ್ತು. ಸ್ವಾತಂತ್ರ್ಯ ಚಳುವಳಿ ಗಂಭೀರ ಸ್ವರೂಪವನ್ನು ಪಡೆದುಕೊಂಡು ನಿರ್ಣಾಯಕ ಹಂತ ತಲುಪುತಿತ್ತು. ಅನೇಕ ಲೇಖಕರು ಈ ಚಳುವಳಿಯಲ್ಲಿ ಪಾಲ್ಗೊಂಡು ವಸಾಹತುಶಾಹಿ ಮುಕ್ತ ಭಾರತಕ್ಕೆ ನಾಂದಿ ಹಾಡುತ್ತಿದ್ದರು. ಹೊಸ ಭಾರತವನ್ನು ಕಟ್ಟುವ ಹುಮ್ಮಸ್ಸಿನಲ್ಲಿದ್ದರು. ಭಾರತ ಸ್ವಾತಂತ್ರ್ಯಗೊಂಡರೂ ಭಾರತದ ಕೆಲವು ಮೂಲಭೂತ ಸಮಸ್ಯೆಗಳು ಹಾಗೆ ಉಳಿಯುವುದರ ಬಗ್ಗೆ ಮತ್ತು ಹೊಸದಾಗಿ ಬೆಳೆಯುತ್ತಿರುವ ನಗರೀಕರಣ ಪ್ರಕ್ರಿಯೆಯ ಬಗ್ಗೆ ಲೇಖಕರು ಗಂಭೀರವಾಗಿ ಯೋಚಿಸುತ್ತಿದ್ದರು. ಈಗಾಗಲೇ ನಗರೀಕರಣಕ್ಕೆ ಒಳಗಾದ ದೇಶಗಳ ಪರಸ್ಥಿತಿಯನ್ನು ಗಮನಿಸುತ್ತಿದ್ದರು. ಜಾತೀಯತೆ, ಅಸ್ಪೃಶ್ಯತೆ, ಲಿಂಗತಾರತಮ್ಯ, ಧಾರ್ಮಿಕ ಕಂದಾಚಾರ, ಮೌಢ್ಯ, ಅಸಮಾನತೆ ಮುಂತಾದ ಸಮಸ್ಯೆಗಳು ಯಾವ ಸ್ವರೂಪವನ್ನು ಪಡೆಯಬಹುದೆಂದು ಚಿಂತಿಸುತ್ತಿದ್ದರು. ಮುಖ್ಯವಾಗಿ ನಗರದಲ್ಲಿ ಬೆಳೆಯುತ್ತಿದ್ದ ಶ್ರೀಮಂತ ವರ್ಗದ ಮನೋಭಾವದ ಬಗ್ಗೆ ಗಮನಹರಿಸಲಾಗುತಿತ್ತು. ಅವರು ಯಾವ ರೀತಿಯಲ್ಲಿ ಸಮಾಜವನ್ನು ಮುಂದೆ ಕೊಂಡೊಯ್ಯುತ್ತಿದ್ದಾರೆ ಎಂಬುದನ್ನು ವಿಮರ್ಶೆಗೆ ಒಡ್ಡಲಾಗುತಿತ್ತು. ಯಾಕೆಂದರೆ ಈಗಾಗಲೇ ಈ ವರ್ಗ ಯುರೋಪ ದೇಶಗಳಲ್ಲಿ ಬಹುದೊಡ್ಡ ವರ್ಗತಾರತಮ್ಯವನ್ನು ಹುಟ್ಟುಹಾಕಿ ಬಡವರನ್ನು ಶೋಷಣೆಗೆ ಈಡುಮಾಡುತಿತ್ತು. ಜಗತ್ತನ್ನು ಏಕಮುಖನೆಲೆಯಲ್ಲಿ ನೋಡುವ ಮನೋಭಾವ ಹೆಚ್ಚಾಗುತಿತ್ತು. ಜಗತ್ತಿನ ಸಂಪತ್ತಿನ ಒಡೆಯರು ತಾವಾಗಬೇಕೆಂಬ ಸರ್ವಾಧಿಕಾರಿ ಧೋರಣೆಯು ಮೂಡುತಿತ್ತು. ಅದರ ಪರಿಣಾಮವಾಗಿ ಒಂದನೆಯ ಪ್ರಪಂಚ ಮಹಾಯುದ್ಧ ನಡೆದಿತ್ತು. ಅದು ಜನಸಾಮನ್ಯರ ಮೇಲೆ ಯಾವ ಪರಿಣಾಮ

ಮಾಡಿದೆ ಎಂಬುದರ ಚಿತ್ರಣ ಕಣ್ಣ ಮುಂದೆ ಇತ್ತು. ಇಡೀ ಯುರೋಪ್ ದೇಶವೇ ಯುದ್ಧದಿಂದ ಆರ್ಥಿಕವಾಗಿ ಕುಸಿದು ಹೋಗಿತ್ತು. ಸಾಮಾಜಿಕ ಸಂಬಂಧಗಳು ತುಂಬಾ ಸಂಕೀರ್ಣಗೊಂಡು ಸಹಜತೆಯನ್ನು ಕಳೆದುಕೊಂಡು ಕೃತಕವಾಗುತ್ತಿದ್ದವು. ರಾಜಕೀಯ ಅಸ್ಥಿರತೆ ತಲೆದೋರಿತ್ತು. ನಿರುದ್ಯೋಗ ತಾಂಡವಾಡುತಿತ್ತು. ಪರಸ್ಪರ ದೇಶಗಳ ನಡುವೆ ಸಂಬಂಧಗಳು ವಿಶ್ವಾಸ ಕಳೆದುಕೊಳ್ಳುತ್ತಿದ್ದವು. ಮುಖ್ಯವಾಗಿ ನಗರಗಳಲ್ಲಿ ಕಾರ್ಮಿಕ ವರ್ಗ ಬೆಳೆಯುತಿತ್ತು. ಕಾರ್ಖಾನೆಗಳು ತಲೆ ಎತ್ತುತ್ತಿದ್ದವು. ಕಾರ್ಖಾನೆಯ ಮಾಲೀಕರು ಈ ದುರ್ಬರ ಪರಿಸ್ಥಿತಿಯನ್ನು ತಮ್ಮ ಸ್ವಾರ್ಥಕ್ಕೆ ಬಳಿಸಿಕೊಂಡರು. ಅಸಹಾಯಕರಾದ ಕಾರ್ಮಿಕರು ಗ್ರಾಮಗಳಿಂದ ವಲಸೆ ಬರುತ್ತಿದ್ದರು. ನಗರಕ್ಕೆ ಬಂದವರು ಮತ್ತೆ ಗ್ರಾಮಗಳಿಗೆ ಹಿಂದಿರುಗುವ ಪರಸ್ಥಿತಿಯಲ್ಲಿ ಕಾರ್ಮಿಕರು ಇರಲಿಲ್ಲ. ಆದ್ದರಿಂದ ಅವರನ್ನು ಕಾರ್ಖಾನೆಗಳಲ್ಲಿ ಕಡಿಮೆ ಕೂಲಿಗೆ ಹೆಚ್ಚು ದುಡಿಸಿಕೊಳ್ಳುತ್ತಿದ್ದರು. ಈ ಕಾರ್ಮಿಕವರ್ಗ ಯಾವ ಪ್ರತಿಕ್ರಿಯೆಯಿಲ್ಲದೆ ದುಡಿಯುತ್ತಿದ್ದರು. ಇವರಿಗೆ ಒಂದು ಪ್ರಜ್ಞೆಯನ್ನು ನೀಡುವ ಆಲೋಚನೆಯನ್ನು ಲೇಖಕರು ಮಾಡಿದರು.

ವ್ಯಕ್ತಿ ವ್ಯಕ್ತಿಗಳ ನಡುವೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಎಲ್ಲಾ ರೀತಿಯ ಸಂಬಂಧಗಳ ಒಟ್ಟು ಮೊತ್ತ ಒಂದು ಸಾಮಾಜಿಕ ಸಂಸ್ಥೆ ಎನಿಸಿಕೊಳ್ಳುತ್ತದೆ. ಯಾವ ರೀತಿಯ ಸಾಮಾಜಿಕ ವ್ಯವ್ಯಸ್ಥೆಯೆ ಆಗಲಿ, ಅದರ ಮುಖ್ಯವಾದ ಸ್ವರೂಪ ನಿರ್ಣಯವಾಗುವುದು ಅದರ ತಳಪಾಯದಂತಿರುವ ಆರ್ಥಿಕ ವ್ಯವಸ್ಥೆಯ ಮೇಲೆ. ಆದ್ದರಿಂದಲೇ ವ್ಯವಸ್ಥೆಯಲ್ಲಿ ಅಂದರೆ ಉತ್ಪತ್ತಿ ಸಂಪಾದನ ಕ್ರಮಗಳಲ್ಲಿ ಮೂಲಭೂತ ಬದಲಾವಣೆಗಳು ಆದಾಗೆಲ್ಲಾ ವ್ಯಕ್ತಿ ವ್ಯಕ್ತಿಗಳ ನಡುವಣ ಇತರ ಎಲ್ಲಾ ಸಂಬಂಧಗಳಲ್ಲೂ ಸೂಕ್ಷ್ಮ ಮಾರ್ಪಾಡುಗಳು ಆಗುತ್ತವೆಂಬುದನ್ನು ನಾವು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಆ ಸಂದರ್ಭದಲ್ಲಿ ಸಾಹಿತ್ಯ ಯಾವ ಧೋರಣೆಯನ್ನು ತಾಳಬೇಕು ಎಂದು ಗಂಭೀರವಾಗಿ ಚರ್ಚೆಗಳು ನಡೆಯುತ್ತಿದ್ದವು. ಈ ಹೊತ್ತಿಗೆಲ್ಲ ಮಾರ್ಕ್ಸನ ಸಿದ್ಧಾಂತಗಳು ಸಾಕಾರ ರೂಪ ಪಡೆಯುತ್ತಿದ್ದವು.

ಮಾರ್ಕ್ಸ್ ಚರಿತ್ರೆಯನ್ನು ದುಡಿಯುವವರ ನೆಲೆಯಲ್ಲಿ ನಿಂತು ಅವಲೋಕಿಸಿದನು. ಆರ್ಥಿಕಶಕ್ತಿಗಳು ವ್ಯವಸ್ಥೆಯ ಮೇಲೆ ನಿಯಂತ್ರಣ ಸಾಧಿಸಿ ಬಡವರನ್ನು ಹೆಚ್ಚು ಶೋಷಣೆ ಮಾಡುತ್ತವೆ ಮತ್ತು ಸರ್ವಾಧಿಕಾರಿ ಧೋರಣೆಯನ್ನು ತಾಳುತ್ತವೆ. ಆದ್ದರಿಂದ ಕಾರ್ಮಿಕರೆಲ್ಲ ಒಂದಾಗಿ ಆರ್ಥಿಕ ಶಕ್ತಿಗಳ ಸರ್ವಾಧಿಕಾರವನ್ನು ನಿರ್ನಾಮ ಮಾಡಿ ಕಾರ್ಮಿಕರ ರಾಜಕೀಯ ಅಧಿಕಾರವನ್ನು ನಿರ್ಮಾಣ ಮಾಡಬೇಕೆಂದು ಮಾರ್ಕ್ಸ್‌ವಾದದ ನಿಲುವಾಗಿತ್ತು. ಅನಂತಮೂರ್ತಿಯವರು ಮಾರ್ಕ್ಸ್‌ವಾದದ ಬಗ್ಗೆ ಹೀಗೆ ಹೇಳುತ್ತಾರೆ. "ಜಗತ್ತು ಹೇಗೆ ಬದಲಾಗಬೇಕು ಎಂಬುದರ ಆಧಾರದ ಮೇಲೆ ಜಗತ್ತನ್ನು

ಅರ್ಥಮಾಡಿಕೊಳ್ಳಬಹುದು" ಎಂದು ಆತ ವಿವರಿಸಿದ. ಅದು ಕ್ರಿಯಾಪರ ತತ್ವಜ್ಞಾನವಾಗಿದ್ದು, ತೀವ್ರವಾದಿ ಗಡಿರೇಖೆಯನ್ನು ಮುಟ್ಟಿತ್ತು. ಅಲ್ಲಿ ಬದಲಾವಣೆಯ ಗುರಿಯೇ ಜ್ಞಾನದ ಕೀಲಿಕೈ ಆಯಿತು. ಸಮಾನತೆಯ ಸಾಧನೆ ಒಡೆತನದ ವರ್ಗದ ನಿರ್ನಾನವು ಬದಲಾವಣೆಯ ಆಶಯ ಕೇಂದ್ರ ಬಿಂದುವಾಯಿತು. ಇಲ್ಲಿ ಕ್ರಿಯೆ ಒಂದು ನಿರ್ದಿಷ್ಟ ರೂಪದಲ್ಲಿತ್ತು. ಅಂದರೆ ಆಸ್ತಿ ಸಂಬಂಧಗಳಲ್ಲಿ ಬದಲಾವಣೆ ತಂದು ಸಮಾನತೆ ಸಾಧಿಸುವದಕ್ಕೆ ಸಂಬಂಧಪಟ್ಟ ಕ್ರಿಯೆಯಾಗಿತ್ತು."೧

ಮಾರ್ಕ್ಸ್ ಜ್ಞಾನದ ಉತ್ಪತ್ತಿಯ ಮೂಲವನ್ನು ಶೋಧಿಸುದರ ಜೊತೆಗೆ ಅದರ ಹೊಣೆಗಾರಿಕೆಯ ಬಗೆಗೆ ಗಂಭೀರವಾಗಿ ಚಿಂತಿಸಿದನು. ಅದು ಒಣಪಾಂಡಿತ್ಯವಾಗದೆ ಸಾಮಾಜಿಕ ಬದಲಾವಣೆಯ ಅಸ್ತ್ರವಾಗಬೇಕೆಂದು ಪ್ರತಿಪಾದಿಸಿದನು. ಬದಲಾವಣೆ ತರುವದೇ ಅದರ ಅಂತಿಮ ಗುರಿಯಾಗಿರಬೇಕೆಂದು ವಾದ ಮಾಡಿದನು. ಸಾಹಿತ್ಯವು ಕೂಡ ಸಾಮಾಜಿಕತೆಯ ಭಾಗವಾಗಿರುವುದರಿಂದ ಅದರಲ್ಲಿರುವ ಶೋಷಣೆಯ ನೆಲೆಗಳಿಗೆ ಸ್ಪಂದಿಸುವುದು ಅದರ ಮೂಲ ಆಶಯವಾಗಿರಬೇಕು. "ಅವರ ಪ್ರಕಾರ ಕಲೆಯ ಬೆಳವಣಿಗೆಯು ಆಕಸ್ಮಿಕವಲ್ಲ. ಕಲೆಯಾಗಲಿ ಸಾಹಿತ್ಯವಾಗಲಿ ಸಾಮಾಜಿಕ ಬೆಳವಣಿಗೆಯೊಂದಿಗೆ ಚಲನಶೀಲತೆಯನ್ನು ಪಡೆದುಕೊಂಡಿದೆ ಮತ್ತು ಅದು ಸಾಮಾಜಿಕ ಉದ್ದೇಶಕ್ಕೆ ತಕ್ಕಂತೆ ಪರಿವರ್ತನೆಯನ್ನು ಕಂಡಿದೆ. ಕಲೆಯಾಗಲಿ ಸಾಹಿತ್ಯವಾಗಲಿ ಅಂತಿಮವಾಗಿ ಸಮಾಜವಾದಿ ಆಶಯಕ್ಕೆ ತಕ್ಕಂತೆ ಇರಬೇಕಾಗುತ್ತದೆ. ಅದು ಅನಿವಾರ್ಯ. ಸೌಂದರ್ಯಶಾಸ್ತ್ರ ಮತ್ತು ವಾಸ್ತವತೆಯ ನಡುವೆ ದ್ವಂದ್ವಮಾನ ಭೌತಿಕವಾದಿ ಸಂಘರ್ಷವಿರುತ್ತದೆ. ಕಲೆಯಾಗಲಿ, ಸಾಹಿತ್ಯವಾಗಲೀ ಚರಿತ್ರೆಯೊಂದಗಿನ ಮುಖಾಮುಖಿಯಲ್ಲಿ ಬೆಳೆಯುತ್ತದೆ. ವರ್ಗಸಂಘರ್ಷ, ರಾಜಕಾರಣ, ನಿರ್ದಿಷ್ಟ ವರ್ಗದ ತಾತ್ವಿಕತೆಯು ಸಾಹಿತ್ಯ ಚಿಂತನೆಯ ಮೇಲೆ ಪ್ರಭಾವ ಬೀರುತ್ತದೆ."೨ ಸಾಹಿತ್ಯ ನಿರ್ಮಾಣಕ್ಕೆ ಕಾರಣವಾಗುವ ಅಂಶಗಳು ಯಾವುವು ಎಂಬುದರ ಮೇಲೆ ಸಾಹಿತ್ಯ ರಚನೆಯು ನಿಂತಿರುತ್ತದೆ. ಸಮಾಜವನ್ನು ಚಾರಿತ್ರಿಕವಾಗಿ ಗ್ರಹಿಸುವುದರ ಮೂಲಕ ವಾಸ್ತವವನ್ನು ಸರಿಮಾಡಬೇಕಾದ ಹೊಣೆಗಾರಿಕೆ ಲೇಖಕನದಾಗಿರುತ್ತದೆ. ಬರಹಗಾರ ಸಮಾಜದ ಭಾಗವಾಗಿರುದರಿಂದ ಸದಾ ಸಮಾಜಕ್ಕೆ ಸ್ಪಂದಿಸಬೇಕಾಗುತ್ತದೆ. ಶೋಷಣಾರಹಿತ ಸಮಾಜವನ್ನು ನಿರ್ಮಿಸುದೇ ಸಾಹಿತ್ಯದ ಗುರಿಯು ಆಗಬೇಕಾಗುತ್ತದೆ ಎಂದು ಮಾರ್ಕ್ಸ್ ಹೇಳಿದನು.

"೧. ತತ್ವಜ್ಞಾನದ ಗುರಿ ಜಗತ್ತಿನ ಮೂಲಸ್ವರೂಪವನ್ನು ವಿವರಿಸುವದಲ್ಲ. ಬದಲಾಗಿ ಜಗತ್ತನ್ನು ಪುನಾರಚಿಸುವುದು.

೨. ಚರಿತ್ರೆಯನ್ನು ರೂಪಿಸುವ ಶಕ್ತಿಗಳು ಪ್ರಧಾವಾಗಿ ಆರ್ಥಿಕ ಶಕ್ತಿಗಳು.

೩. ಸಮಾಜ ಯಾವಾಗಲು ಮಾಲೀಕರು ಆಳುಗಳೆಂಬ ಎರಡು ವರ್ಗಗಳಾಗಿ ವಿಭಜನೆಯಾಗಿರುತ್ತದೆ. ಅವರುಗಳ ನಡುವೆ ಯಾವಾಗಲು ಘರ್ಷಣೆ ಸಾಗಿರುತ್ತದೆ.

೪. ಕೂಲಿಗಳ ದುಡಿಮೆಯ ಫಲವಾದ ಹೆಚ್ಚಳ ಮೌಲ್ಯವನ್ನು ಮಾಲೀಕರು ಯವಾಗಲು ಕಬಳಿಸುತ್ತಾರೆ.

೫. ಖಾಸಗಿ ಆಸ್ತಿಯ ರದ್ಧತಿ ಅಥವಾ ಉತ್ಪದನಾ ಸಾಧನಗಳ ರಾಷ್ಟ್ರೀಕರಣದಿಂದ ಮಾತ್ರ ಈ ಸೋಷಣೆ ನಿಲ್ಲುತ್ತದೆ.

೬. ಈ ಬಡತನ ಕಾರ್ಮಿಕರಲ್ಲಿ ಕ್ರಾಂತಿಕಾರಿ ಚೈತನ್ಯತುಂಬಿ ವರ್ಗಗಳ ಘರ್ಷಣೆ ವರ್ಗಯುದ್ಧವಾಗಿ ಮಾರ್ಪಾಡಾಗುತ್ತದೆ.

೭. ಕೂಲಿಕಾರರು ಮಾಲೀಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅವರು ಪ್ರಭುತ್ವವನ್ನು ವಶಪಡಿಸಿಕೊಂಡು ತಮ್ಮದೇ ಆದ ರಾಜ್ಯವನ್ನು ಸ್ಥಾಪಿಸುತ್ತಾರೆ.ಇದನ್ನೇ ಮಾರ್ಕ್ಸ್ ದುಡಿಮೆಗಾರರ ಸರ್ವಾಧಿಕಾರತ್ವ ಎಂದು ಕರೆಯುತ್ತಾನೆ.

೮. ಈ ವಿದ್ಯಾಮಾನಗಳನ್ನು ಪಡೆಯಲಾಗುವದಿಲ್ಲ. ಹೀಗಾಗಿ ಸಮಾಜವಾದ ಅನಿವಾರ್ಯ."೩

ಮಾರ್ಕ್ಸ್‌ನ ಈ ಚಿಂತನೆಗಳು ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಸಾಹಿತ್ಯವನ್ನು ಅಭಿಜಾತ ನೆಲೆಯಲ್ಲಿ ನೋಡದೆ ಅದು ಸಾಮಾಜಿಕ ಸ್ವರೂಪದಲ್ಲಿ ಕಾಣಬೇಕೆಂಬ ನಿಲುವುಗಳು ಮುಂಚೂಣಿಗೆ ಬಂದವು. ಇದರಿಂದಾಗಿ ಸಾಹಿತ್ಯವನ್ನು ನೋಡುವ ದೃಷ್ಟಿಕೋನಗಳು ಕೂಡ ಬದಲಾದವು.

ಸಮಾಜವನ್ನು ವಾಸ್ತವವಾಗಿ ಕಟ್ಟಿಕೊಡಬೇಕೆಂಬ ಚಿಂತನೆ ಬೆಳೆಯಿತು. ಗ್ರಾಮಗಳು ಭೂಮಾಲಿಕ ವರ್ಗಗಳಿಂದ ಶೋಷಣೆಗೆ ಗುರಿಯಾಗುತ್ತಿದ್ದವು. ಜಾತೀಯತೆ, ಅಸ್ಪೃಶ್ಯತೆಯಂತ ಸಮಸ್ಯೆಗಳು ಅಸಮಾನತೆಯನ್ನು ಸೃಷ್ಟಿಸಿದ್ದವು. ರೈತರು, ಕೂಲಿಕಾರರು, ಮಹಿಳೆಯರು, ಕಾರ್ಮಿಕರು, ಅರೆ ಕಾರ್ಮಿಕರು ಯಾವ ಭದ್ರತೆ ಇಲ್ಲದೆ ಜೀವನ ಸಾಗಿಸುತ್ತಿದ್ದರು. ಇಂತವರ ಜೀವನವನ್ನು ಕುರಿತು ಸಾಹಿತ್ಯ ರಚಿಸಬೇಕೆಂದು ಪ್ರಗತಿಶೀಲರು ಆಲೋಚಿಸಿದರು. ಈ ಸಂದರ್ಭದಲ್ಲಿ ಹೊಸ ಓದುಗ ವರ್ಗ ಸೃಷ್ಟಿಯಾಗುತಿತ್ತು. ಅವರಿಗೆ ಸಾಹಿತ್ಯ ಒದಗಿಸಬೇಕಿತ್ತು. ಅವರಿಗೆ ಕೇವಲ ಮನೋರಂಜನೆ ಮಾತ್ರ ಕೊಡದೆ ಚಿಂತನೆ ಮಾಡುವಂತ ವಾಸ್ತವವನ್ನು ದರ್ಶನ ಮಾಡಿಸಬೇಕೆಂಬ ನಿಲುವು ಸಾಹಿತ್ಯದ್ದಾಯಿತು.

ಪ್ರಗತಿಶೀಲರು ಸಾಹಿತ್ಯವನ್ನು ಸಾಮಾಜಿಕ ಸಂಸ್ಥೆ ಎಂದು ಪರಿಗಣಿಸಿ ಅದಕ್ಕೆ ಗಂಭೀರವಾದ ಜವಾಬ್ದಾರಿ ಇದೆ ಎಂದು ಬಾವಿಸಿದರು. ಪ್ರಗತಿಶೀಲರು ಸಾಹಿತ್ಯವನ್ನು

ಕೂಲಿಕಾರರ, ಬಡವರ, ರೈತರ, ದಲಿತರ ಪರ ರಚಿಸಬೇಕೆಂದು ನಂಬಿದ್ದರು. ಅನ್ಯಾಯ, ಶೋಷಣೆ, ಜಮೀನ್ದಾರಿಕೆ, ರಾಜಕೀಯ ಬ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿ ಸಾಮಾಜಿಕ ಪರಿವರ್ತನೆ ಸಾಹಿತ್ಯದ ಮುಖ್ಯ ಗುರಿಯಾಗಬೇಕೆಂದರು. ಇದಕ್ಕೆ ಪ್ರೇರಣೆಯಾದವರು ರಷ್ಯದ ಸಾಹಿತಿಗಳು. ರಷ್ಯದ ಸಾಹಿತಿಗಳು ಮಾರ್ಕ್ಸ್‌ವಾದವನ್ನು ಅನುಸರಿಸುತ್ತಿದ್ದರು. ಅವರಂತೆ ಪ್ರಗತಿಶೀಲರು ಕೂಡ ಮಾರ್ಕ್ಸನ ಸಿದ್ಧಾಂತವನ್ನು ತಾತ್ವಿಕ ಪ್ರಣಾಳಿಕೆಯನ್ನಾಗಿ ಮಾಡಿಕೊಂಡರು. ವರ್ಗ ಹೋರಾಟವೇ ಅವರಿಗೆ ಮುಖ್ಯವಾಯಿತು. ದುಡಿಯುವ ವರ್ಗ ಒಗ್ಗೂಡಿ ಬಂಡವಾಳಿಶಾಹಿ ವರ್ಗವನ್ನು ಸದೆಬಡಿದು, ರಾಜಕೀಯ ಅಸ್ತಿತ್ವವನ್ನು ಪಡೆಯಬೇಕೆಂಬ ನಿಲುವನ್ನು ತಮ್ಮ ಸಾಹಿತ್ಯದಲ್ಲಿ ತಂದರು. ಬಂಡವಾಳಶಾಹಿಗೆ ಪೋಷಕರಾದ ಜಮೀನುದಾರರನ್ನು ಕಟುವಾಗಿ ಅಲ್ಲಗಳೆದರು. ಜಮೀನ್ದಾರರ, ಬಂಡವಾಳಶಾಹಿಗಳ, ಶ್ರೀಮಂತರ ಶೋಷಣಾ ಸ್ವರೂಪವನ್ನು ವಿಶ್ಲೇಷಿಸಿದರು. ಸಾಹಿತ್ಯ ರಚನೆ–ಹೋರಾಟ–ಸಂಘಟನೆ–ಬದಲಾವಣೆ–ಕ್ರಾಂತಿಯನ್ನು ಒಂದಕ್ಕೊಂದು ಪೂರಕ ಎಂದು ತಿಳಿದರು. ಲೇಖಕ ಸಾಮಾಜಿಕ ಜವಾಬ್ದಾರಿಯನ್ನು ಅರಿಯಬೇಕು. ಆ ಜವಬ್ದಾರಿಯ ಭಾಗವಾಗಿ ಸಾಹಿತ್ಯ ಮೂಡಿಬರಬೇಕೆಂದು ಭಾವಿಸಿದರು. ದುಡಿಯುವ ವರ್ಗದಲ್ಲಿ ರಾಜಕೀಯ ಅಧಿಕಾರ ನೆಲೆಗೊಳ್ಳಬೆಕು. ಇಂತಹ ರಾಜಕೀಯದ ಜೊತೆಗೆ ಸಾಹಿತಿ ಕಲಾವಿದರಿರಬೇಕೆಂದು ಪ್ರಗತಿಶಿಲರ ಆಶಯವಾಗಿತ್ತು.

ಪ್ರಗತಿಶೀಲತೆ ಮೊಳಕೆಯೊಡದದನ್ನು ಸಜ್ಜದ್ ಜಾಹೀರ್ ಹೀಗೆ ವಿವರಿಸುತ್ತಾರೆ. "೧೯೩೧ ಒಂದು ವಿಶಿಷ್ಟ ವರ್ಷ. ಆಗ ನಾನು ಇಂಗ್ಲೆಂಡ್ ನಲ್ಲಿ ನನ್ನ ವಿದ್ಯಾರ್ಥಿ ಜೀವನದ ಕೊನೆಯ ದಿನಗಳನ್ನು ಕಳೆಯುತಿದ್ದೆ. ಜಗತ್ತನ್ನೇ ನುಂಗ ಹೊರಟ ಆರ್ಥಿಕ ಬಿಕ್ಕಟ್ಟಿನ ರಾಜಕೀಯ ಪರಿಣಾಮದ ವಿರಾಟರೂಪ ಕಾಣಿಸಿಕೊಂಡಿತು. ಎಲ್ಲ ಕಡೆಯೂ ಫ್ಯಾಸಿಸ್ಟ್ ದಬ್ಬಾಳಿಕೆಯ ದುಃಖಪೂರ್ಣ ಕಥೆಗಳೇ ಕೇಳಿ ಬರುತ್ತಿದ್ದವು. ಅಂಥ ಶಕ್ತಿಗೆದುರಾಗಿ ಜನತೆ ಪ್ರತಿಭಟಿಸುವುದನ್ನು ನಾವು ಕಂಡೆವು. ಬುದ್ಧಿಜೀವಿಗಳಲ್ಲು ವಿಚಾರ ಕ್ರಾಂತಿಯಾಯಿತು. ನಮ್ಮ ಕಣ್ಣೆದುರು ನಡೆಯುತ್ತಿದ್ದ ಘಟನೆಗಳು, ನಾವು ಓದುತ್ತಿರುವ ಪುಸ್ತಕಗಳು, ನಡೆಸುತ್ತಿದ್ದ ಚರ್ಚೆಗಳು ನಮ್ಮನ್ನು ಹೊಸಬರನ್ನಾಗಿ ಮಾಡಿದವು. ನಾವು ಮೆಲ್ಲ ಮೆಲ್ಲನೆ ಸಮಾಜವಾದ ಸಿದ್ಧಾಂತದತ್ತ ಸಾಗಿದೆವು." ೪ ಇವರು ಪ್ರಗತಿಶೀಲ ಸಾಹಿತ್ಯದ ಮೊಳಕೆಯೊಡೆಯಲು ಕಾರಣರಾದರು. ಅದರ ಪ್ರಣಾಲಿಯಂತೆ ಸಾಹಿತ್ಯ ರಚಿಸುವ ಪಣ ತೊಟ್ಟರು. ತಮ್ಮ ಜೊತೆಗಾರರನ್ನು ಬರೆಯುವಂತೆ ಪ್ರೇರೇಪಿಸಿದರು.

ಕೈಗಾರಿಕೆ ಕ್ರಾಂತಿಯಿಂದ ಬಂಡವಾಳಶಾಹಿ ವ್ಯವಸ್ಥೆ ಬೆಳೆಯುತಿತ್ತು. ದುಡಿವ ವರ್ಗವನ್ನು ಕಡಿಮೆ ಕೂಲಿಗೆ ದುಡಿಸಿಕೊಂಡು ಹೆಚ್ಚು ಲಾಭ ಪಡೆಯುತ್ತಿತ್ತು. ದುಡಿಯುವ ವರ್ಗಕ್ಕೆ ಶಿಕ್ಷಣ, ಆರೋಗ್ಯ, ವಸತಿ, ಸ್ವಾತಂತ್ರ್ಯದಂತ ಕನಿಷ್ಟ

ಸೌಲಭ್ಯವನ್ನು ನೀಡಿರಲಿಲ್ಲ. ಕೇವಲ ದುಡಿಯುವ ಯಂತ್ರದಂತೆ ಭಾವಿಸಿದರು. ಕಾರ್ಮಿಕರ ದುಡಿಮೆ ಹೆಚ್ಚಾದಂತೆ ಮಾಲೀಕರ ಬಂಡವಾಳ ವೃದ್ಧಿಯಾಗುತ್ತಾ ಹೋಯಿತು. ಹಣವಂತರು ವ್ಯವಸ್ಥೆಯ ಮೇಲೆ ಸಂಪೂರ್ಣ ಹತೋಟಿ ಸಾಧಿಸುತ್ತಾ ಹೋದರು. ಅದು ಕೇವಲ ಆಯಾ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಹಣವಂತ ದೇಶಗಳು ಬಡ ದೇಶಗಳ ಮೇಲೆ ಸವಾರಿ ಮಾಡುತ್ತಿದ್ದವು. ಬಲಾಢ್ಯ ದೇಶಗಳು ಬಡ ದೇಶಗಳ ಮೇಲೆ ವಸಾಹತುವನ್ನು ಸ್ಥಾಪಿಸಿ ಸುಲಿಯುತ್ತಿದ್ದವು. ಶ್ರೀಮಂತ–ಬಡವ, ಮಾಲೀಕ–ಕಾರ್ಮಿಕ ಎಂಬ ಭೇದದ ಅಂತರ ಬೆಳೆಯುತ್ತಲೆ ಹೋಯಿತು. ದುಡಿಯುವ ವರ್ಗಕ್ಕೆ ಯಾವುದೇ ಭದ್ರತೆ ಮತ್ತು ಅಸ್ತಿತ್ವ ಇಲ್ಲದಂತಾಯಿತು. ಅನಿವಾರ್ಯವಾಗಿ ದುಡಿವ ವರ್ಗ ತಮ್ಮ ಬದುಕಿಗೆ ಹೋರಾಡಲೇಬೇಕಾಯಿತು. ಸಾಹಿತ್ಯ ರಚಿಸುವವರು ಸಂಘಟನೆ ಮಾಡಿಕೊಂಡರು. ಸಂಘಟನೆಯಿಂದ ಸಾಹಿತ್ಯ ರಚಿಸುವದರ ಜೊತೆಗೆ ಹೋರಾಟ ಮಾಡುವುದು ಅವರ ಉದ್ದೇಶವಾಯಿತು. ಬರೆಯುದರ ಜೊತೆಗೆ ಶೋಷಿತರ ಪರವಾಗಿ ಬೀದಿಗಿಳಿದು ಚಳುವಳಿ ಮಾಡುವುದು ಬಹು ಮುಖ್ಯ ಎಂದು ಭಾವಿಸಿದರು.

ಅದರಂತೆ ಪ್ರಗತಿಶೀಲ ಲೇಖಕರು ನಡೆದುಕೊಂಡರು. ಸಾಹಿತ್ಯವು ಅವರ ಬರವಣಿಗೆಗೆ ಒತ್ತಾಸೆಯಾಗಿತ್ತು. ಲೇಖಕರು ದುಡಿವವರ್ಗದ ಅಂಗವಾಗಿ, ಸಾಮಾಜಿಕ ಕಾರ್ಯಕರ್ತರಾಗಿ ಬೀದಿಗಿಳಿಯುವ ವಿಚಾರ ಮಾಡಿದರು. ಇಂತಹ ಪರಸ್ಥಿತಿ ಆ ಸಂದರ್ಭದಲ್ಲಿ ನಿರ್ಮಾಣವಾಗುತಿತ್ತು. ಎರಡನೆಯ ಪ್ರಪಂಚ ಮಹಾಯುದ್ಧ ನಡೆದು ಜಗತ್ತಿನ ಪರಸ್ಥಿತಿ ತಂಬಾ ಅಧೋಗತಿಗೆ ಇಳಿದಿತ್ತು. ಆರ್ಥಿಕ ಬಿಕ್ಕಟ್ಟು ಸಂಭವಿಸಿತ್ತು. ಎಲ್ಲಲ್ಲೂ ನಿರುದ್ಯೋಗ ತಾಂಡವವಾಡುತಿತ್ತು. ಇಂತಹ ದಯನೀಯ ಪರಸ್ಥಿತಿಯನ್ನು ದುರುಪಯೊಗ ಪಡಿಸಿಕೊಂಡ ಶ್ರೀಮಂತ ವರ್ಗ ಬಡವರನ್ನು ತಮ್ಮ ಸ್ವಾರ್ಥಕ್ಕೆ ಬಳಿಸಿಕೊಂಡಿತು. ಬಡವರನ್ನು ಮುನ್ನೆಡೆಸುವವರು ಯಾರು ಇದ್ದಿಲ್ಲ. ಆ ಕಾರ್ಯವನ್ನು ಸಾಹಿತಿಗಳು ಮಾಡಬೇಕೆಂದು ಅವರ ಉದ್ದಾರದಲ್ಲಿ ತೊಡಗಿದರು. ಸಾಹಿತಿಯದವನು ಬರವಣಿಗೆಯಲ್ಲಿ ತೊಡಗಿಕೊಂಡರೆ ಸಾಲದು. ಬಡವರಿಗೆ ಸಹಾಯ ಮಾಡಿ ಅವರಿಗೆ ತಿಳುವಳಿಕೆ ನೀಡುವ ಕಾರ್ಯವನ್ನು ಮಾಡಬೇಕೆಂದು ಎಲ್ಲಾ ಬರಹಗಾರರ ಮೇಲೆ ಒತ್ತಡ ಹಾಕಿದರು. ಬರವಣಿಗೆಯಲ್ಲೂ ಬಡವರ ಬವಣೆಗಳನ್ನು ಬಿಂಬಿಸಬೇಕೆಂದು ತಿಳಿಸಿದರು. ಹೀಗಾಗಿ ಪ್ರಗತಿಶೀಲರ ಸಾಹಿತ್ಯದಲ್ಲಿ ಹೆಚ್ಚಾಗಿ ಬಡವರ ಕಷ್ಟಗಳ ಸಂಗತಿಗಳೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ.

೧೯೩೬ರಲ್ಲಿ ಪ್ರಗತಿಶೀಲ ಸಂಘಟನೆ ಸಭೆ ಸೇರಿತು. ಈ ಸಭೆ ಭಾರತೀಯ ಸಾಹಿತ್ಯ ವಲಯದಲ್ಲಿ ಹೊಸ ಗಾಳಿ ಬೀಸಲು ಕಾರಣವಾಯಿತು. ಸಭೆಯ ಅಧ್ಯಕ್ಷತೆಯನ್ನು ವಾಸ್ತವವಾದಿ ಲೇಖಕರಾದ ಪ್ರೇಮಚಂದರ್ ವಹಿಸಿದ್ದರು. ಅಧ್ಯಕ್ಷೀಯ ಭಾಷಣವೇ ಪ್ರಗತಿಶೀಲರ ಪ್ರಣಾಳಿಕೆಯಾಯಿತು. "ಇಲ್ಲಿಯತನಕವೂ

ತನ್ನ ಪ್ರತಿಗಾಮಿ ಶಕ್ತಿಯಲ್ಲಿ ಬಂಧಿಸಿಕೊಂಡ ಅದರ ಸತ್ಯ ಮತ್ತು ಪ್ರಗತಿ ಸಂರಚನೆಯನ್ನೇ ನಾಶಗೊಳಿಸಿದ ಪ್ರತಿಗಾಮಿವರ್ಗದ ಕಡೆಯಿಂದ ಸಾಹಿತ್ಯವನ್ನು ಮತ್ತಿತರ ಕಲೆಯನ್ನು ಸೆರೆಬಿಡಿಸಬೇಕಾದುದೇ ಹಾಗೆ. ಅದು ಸತ್ಯವನ್ನು ಜನರ ಹೃದಯದ ಹತ್ತಿರ ತಂದು ಬದುಕಿನ ಉಜ್ವಲವಾದ ವಾಸ್ತವತೆಯನ್ನು ಚಿತ್ರಿಸುವಂತೆಯು ಭವಿಷ್ಯತ್ತನ್ನೂ ರೂಪಿಸುವ ಜವಾಬ್ದಾರಿಯನ್ನು ಹೊರುವಂತೆಯು ಮಾಡಬೇಕಾಗಿದೆ. ಆದ್ದರಿಂದ ಇಂದಿನ ಭಾರತೀಯ ಸಾಹಿತ್ಯ ಜನರ ಮೂಲಭೂತ ಸಮಸ್ಯೆಗಳನ್ನು ಹೊಂದಿರಬೇಕಾಗಿದೆ. ಜನರ ಹಸಿವು, ಬಡತನ, ಹಿಂದುಳಿದಿರುವಿಕೆ ಮತ್ತು ರಾಜಕೀಯ ಕಟು ಪರಸ್ಥಿತಿಯ ಕುರಿತು ಗಂಭೀರ ಕಾಳಜಿ ಹೊಂದಿರಬೇಕೆಂದು ನಾವು ನಂಬುತ್ತೇವೆ. ಯಾವುದು ನಮ್ಮನ್ನು ನಿರಾಶವಾದಿ, ನಿಷ್ಕ್ರೀಯ ಮತ್ತು ವಿಚಾರ ಶೂನ್ಯತೆಯೆಡೆಗೆ ಒಯ್ಯುತ್ತದೆಯೋ ಅದೇ ಪ್ರತಿಗಾಮಿ ನಿಲುವು. ಅದನ್ನು ನಾವು ವೈಚಾರಿಕತೆಯಿಂದ ತಿರಸ್ಕರಿಸುತ್ತೇವೆ. ಯಾವುದು ನಮ್ಮ ವಿಮರ್ಶಕ ಬುದ್ಧಿಯನ್ನು ಹೊಡೆದೆಬ್ಬಿಸುತ್ತದೋ ಆ ಮೂಲಕ ನಮ್ಮ ಸಂಸ್ಥೆ, ಮಾಧ್ಯಮ, ಕಂದಾಚಾರ, ನಡೆ-ನುಡಿಗಳನ್ನು ಪರೀಕ್ಷೆಗೆ ಹಚ್ಚುತ್ತದೋ ಅದರಿಂದಾಗಿ ಅಥವಾ ಆ ಮುಖಾಂತರವಾಗಿ ಒಂದು ಸಂಘಟನೆಯ ಅಡಿಯಲ್ಲಿ ಒಂದು ಹೊಸಕಾಲ ಪರಿವರ್ತನೆಗೆ ಅನುವು ಮಾಡುತ್ತಾ ಮುಂದುವರಿವುದೋ ಆ ಸಿದ್ದಿಯನ್ನು ಪ್ರಗತಿಶೀಲತೆಯೆಂದು ಗ್ರಹಿಸುತ್ತೇವೆ ಮತ್ತು ಸ್ವೀಕರಿಸುತ್ತೇವೆ ಎಂಬುದಾಗಿದೆ."೫

ಸಾಹಿತ್ಯವು ಸಾಮಾಜಿಕ ಅಸಮಾನತೆ ಅನ್ಯಾಯ, ಭ್ರಷ್ಟತೆ, ಅಧಿಕಾರದ ದುಷ್ಟತನ, ಚಾರಿತ್ರಿಕ ಶೋಷಣೆಯ ವಿರುದ್ಧವಿರಬೇಕೆಂಬ ನಿಲುವು ಪ್ರಗತಿಶೀಲರದಾಯಿತು. ಮಾರ್ಕ್ಸನ ಕ್ರಾಂತಿಯ ಪರಿಕಲ್ಪನೆ ಪ್ರಗತಿಶೀಲರಿಗೆ ಮಾದರಿಯಾಯಿತು. ಬಂಡವಾಳಶಾಹಿಯು ಬೆಳೆಯುತ್ತಾ ಹೋದಂತೆ, ದುಡಿಯುವ ವರ್ಗದ ಸಂಘಟನೆ ಗಟ್ಟಿಗೊಂಡು ವಿವೇಕ ಪಡಿದುಕೊಂಡು ಬಂಡವಾಳಶಾಹಿಯ ವಿರುದ್ಧ ಹೋರಾಡುತ್ತಾರೆ. ಆಗ ಕ್ರಾಂತಿ ಸಂಭವಿಸಿ ದುಡಿಯುವ ವರ್ಗದ ಜನರಿಗೆ ಅಧಿಕಾರ ಪ್ರಾಪ್ತವಾಗುತ್ತದೆ. ಸಮಾನತೆಯ ಸಮಾಜ ನಿರ್ಮಾಣವಾಗುತ್ತದೆ ಎಂಬ ಆಶಯವನ್ನು ಸಾಹಿತ್ಯದಲ್ಲಿ ತರಲು ಪ್ರಯತ್ನಿಸಿದರು. ಮಾರ್ಕ್ಸವಾದಕ್ಕೂ ಅಂಟಿಕೊಳ್ಳದೆ ಪ್ರಗತಿಪರವಾದುದನ್ನು ಪ್ರಗತಿಶೀಲರು ಒಪ್ಪಿಕೊಂಡರು."ಮಾರ್ಕ್ಸ್ ವಾದವು ಒಂದು ತತ್ವಜ್ಞಾನ ಸಮಗ್ರ ಜೀವನವನ್ನು ನೋಡುವ ದೃಷ್ಟಿಕೋನ. ಬುದ್ಧಿಜೀವಿಗಳು ಆ ತತ್ವಜ್ಞಾನದಿಂದ ಪ್ರಭಾವಿತರಾಗಬಹುದು. ಆಗದೆ ಇರಬಹುದು. ಅದು ಅವರಿಗೆ ಸಂಬಂಧ ಪಟ್ಟ ವಿಷಯ. ಆದರೆ ಮಾರ್ಕ್ಸವಾದಿಗಳು ಮಾತ್ರವೇ ಪ್ರಗತಿಶೀಲರು ಎನ್ನುವುದು ತಪ್ಪು. ವೈಜ್ಞಾನಿಕ ದೃಷ್ಟಿಕೋನವುಳ್ಳವರು, ಆದರ್ಶವಾದಿಗಳು ತಮ್ಮ ಮಾನವೀಯ ಬಾವನೆಗಳಿಂದ ಸತ್ಯ, ನಿಷ್ಟೆಯಿಂದ ಪ್ರಗತಿಶೀಲವಾದ ಸಾಹಿತ್ಯವನ್ನು ರಚಿಸುತ್ತಾರೆ"೬

ಪ್ರಗತಿಶೀಲರು ೧೯೪೬ರಲ್ಲಿ ನಡೆದ ಧಾರವಾಡದ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮ ಸಾಹಿತ್ಯಿಕ ನಿಲುವುಗಳನ್ನು ಸ್ಪಷ್ಟಪಡಿಸಿದರು. "ಸಾಹಿತ್ಯವೆಂಬ ಮಡಿಕೋಟೆಯನ್ನು ಕಟ್ಟಿಕೊಂಡು ಸುತ್ತಮುತ್ತಲಿನ ಜಗತ್ತಿನ ಹಾಹಾಕಾರದ ಮೇಲೆ ಅವಕುಂಠನ ಹಾಕಿ ತನ್ನ ಭಾವ ಪ್ರಪಂಚದಲ್ಲಿ ಮೈಮರೆಯುವ ಸಾಹಿತಿ ತನ್ನ ಅಥವಾ ದೇಶದ ಹಿತವನ್ನು ಸಾಧಿಸಲಾರ. ಇವರು ಮಧ್ಯಮ ವರ್ಗದ ಆಸೆ, ಕೋಪ, ತಾಪ, ತೃಪ್ತಿಗಳನ್ನಷ್ಟೇ ಸೃಷ್ಟಿಸುತ್ತಾರೆ. ವರ್ಗವೈಷಮ್ಯವನ್ನು ಅವರು ಕೆರಳಿಸುವದಿಲ್ಲ. ಆದ್ದರಿಂದ ಇಂದಿನ ಸಾಹಿತ್ಯ ಬದಲಾಗಬೇಕಿದೆ. ಒಂದು ವರ್ಗಕ್ಕೆ ಅನ್ಯಾಯವಾಗುತ್ತಿದ್ದರೆ ಸಾಹಿತಿ ಸುಮ್ಮನೆ ಕೂಡಬಾರದು. ತಕ್ಷಣ ಅದಕ್ಕೆ ಸ್ಪಂದಿಸಬೇಕು. ಅನ್ಯಾಯ, ಕ್ರೌರ್ಯ, ದಬ್ಬಾಳಿಕೆ, ಶೋಷಣೆ ಯಾರಲ್ಲಿ ಕಂಡುಬಂದರೂ ಸಾಹಿತಿ ಸಿಡಿದೇಳಬೇಕು. ಎಲ್ಲಾ ಸಾಹಿತ್ಯ ಕಲೆಗಳ ಉಗಮಕ್ಕೆ ಸಾಮಾನ್ಯ ಜನತೆಯೇ ಮೂಲ. ಉತ್ತಮ ಕಲೆಯ ತಾಯಿಬೇರು ಸಾಮಾನ್ಯ ಜನತೆಯಲ್ಲಿಯೇ ಅಡಗಿದೆ. ನವೋದಯದವರು ಜನಪದವನ್ನು ಕಡೆಗಣಿಸಲಿಲ್ಲ. ಅವರೊಂದಿಗೆ ಪೂರ್ಣ ಬೆರೆಯಲಿಲ್ಲ. ಅವರು ನಿರ್ವಿಣ್ಣರಾಗಿ ಸುಮ್ಮನೆ ಕುಳಿತರು. ಪರಂಪರಾಗತ ಮೌಢ್ಯವನ್ನು ಖಂಡಿಸಬೇಕು. ದುರ್ಬಲತೆಯಿಂದ ಶಾಂತಿ ಲಭಿಸುವದಿಲ್ಲ. ನ್ಯಾಯ ದೊರಕುವುದಿಲ್ಲ. ಕ್ರಾಂತಿಯಿಂದ ಶಾಂತಿ ಸಾಧ್ಯವಾಗುತ್ತದೆ. ಈಗ ಜಗತ್ತಿನಲ್ಲಿ ಪ್ರಜಾಸಾಮ್ಯ, ಬಂಡವಾಳಸಾಮ್ಯ ಎಂಬ ಎರಡು ಪಕ್ಷಗಳು ಉದಯಿಸುತ್ತಿವೆ. ಇವೇ ಎರಡು ಜಾತಿಗಳು. ಇವುಗಳಲ್ಲಿ ಸಾಹಿತಿ ಯಾವುದರೊಂದಿಗೆ ಗುರುತಿಸಿಕೊಳ್ಳುತ್ತಾನೆ ಎಂಬುದು ಮುಖ್ಯ. ಸಾಹಿತ್ಯ ವಿಲಾಸದ ಸಾಧನವಲ್ಲ. ದೇಶೋದ್ಧಾರಕ್ಕೆ, ಆತ್ಮೋದ್ಧಾರಕ್ಕೆ ಸಾಧನವಾಗಿರುವ ಗಾಯಿತ್ರಿಯಿದು. ಸಾಹಿತ್ಯ ದುರ್ಬಲರ, ದಲಿತರ, ಬಡವರ ರಕ್ಷಾಕವಚವಾಗಬೇಕು." ೭

ಪ್ರಗತಿಶೀಲರ ಒಟ್ಟು ನೋಟವನ್ನು ಗಮನಿಸಿದಾಗ ಅನೇಕ ಮಿತಿಗಳು ಕಂಡುಬರುತ್ತವೆ. ಅದು ಮುಖ್ಯವಾಗಿ ಬರಹಕ್ಕಿರುವ ಸಾಹಿತ್ಯಕ ಮೌಲ್ಯವನ್ನು ಕುರಿತು. ಬರಹ ವರದಿಯ ಮಾದರಿಯನ್ನು ಪಡೆಯದೆ ಅದು ಕಲೆಯ ರೂಪವನ್ನು ಹೊಂದಿರಬೇಕು ಎಂಬುದು ಮುಖ್ಯವಾದ ಅಭಿಪ್ರಾಯ. ಕಲೆಗಿಂತ ಬದುಕು ಮುಖ್ಯ ಅದನ್ನು ಬಿಂಬಿಸುವುದು ಜನರಿಗೆ ತಲುಪಿಸುವುದು ಆ ಮೂಲಕ ಜನರಲ್ಲಿ ಪ್ರಜ್ಞೆಯನ್ನು ಮೂಡಿಸುವುದು ಮುಖ್ಯ ಎಂದು ವಾದಿಸುವವರು ಉಂಟು. ಈ ಚರ್ಚೆ ನಡೆಯುತ್ತಲೇ ಇದೆ. ಈ ಅಂಶವನ್ನು ಕೇಂದ್ರವಾಗಿಟ್ಟುಕೊಂಡು ಪ್ರಗತಿಶೀಲ ಸಾಹಿತ್ಯವನ್ನು ವಿಮರ್ಶೆ ಮಾಡುವ ಮನೋಭಾವಗಳು ಕನ್ನಡದಲ್ಲಿ ನಡೆದಿವೆ. ಈ ಚರ್ಚೆ ನಡೆಯುವಾಗಲೆಲ್ಲ ನಿರಂಜನರ ಸಾಹಿತ್ಯವನ್ನು ಕಲೆಯ ಮತ್ತು ಮೌಲಿಕ ನೆಲೆಯಲ್ಲಿ ನೋಡುವುದನ್ನು ಕಾಣುತ್ತೇವೆ. ನಿರಂಜನರು ಕಲೆ ಮತ್ತು ಬದುಕಿನ ಆಯಾಮಗಳನ್ನು ಬಹಳ ಯಶಸ್ವಿಯಾಗಿ ತಮ್ಮ ಬರಹದಲ್ಲಿ ಬಿಂಬಿಸಿದವರು. ಈ ಕಾರಣಕ್ಕಾಗಿ ಅವರು ಪ್ರಗತಿಶೀಲರಲ್ಲಿ ವಿಭಿನ್ನರಾಗಿ ನಿಲ್ಲುತ್ತಾರೆ. ಪ್ರಗತಿಶೀಲರ

ಮಿತಿಯನ್ನು ದಾಟಿ ಮುನ್ನಡೆಯುತ್ತಾರೆ. "ನಿರ್ದಿಷ್ಟ ಸಾಹಿತ್ಯ ಪ್ರಕಾರವೊಂದು ತನ್ನದೇ ಆದ ರೀತಿಯಲ್ಲಿ ಬೆಳೆಯುತ್ತ ಒಂದು ಹಂತವನ್ನು ತಲುಪಿರುವಾಗ, ಅದಕ್ಕಿಂತಲೂ ಹಿಂದಿನ ಹಂತಗಳಲ್ಲಿ ರಚಿತವಾದ ಕೃತಿಗಳು ತಮ್ಮ ಜೀವಂತಿಕೆಯನ್ನು, ಸಾಂದರ್ಭಿಕತೆ(ರಿಲೆವೆನ್ಸ್)ಯ ಬಗೆ ಹೇಗೆ ಎಂಬುದು ಮಹತ್ವದ ಪ್ರಶ್ನೆ. ಕೇವಲ ಸಮಕಾಲಿನ ಪ್ರಸ್ತುತತೆ ಮತ್ತು ತಾಂತ್ರಿಕ ಪರಿಣತಿಗಳನ್ನು ಬಯಸುವ ವಿಮರ್ಶಕರು ಹಿಂದಿನ ಕೃತಿಗಳಿಗೆ ಅನ್ಯಾಯ ಮಾಡುತ್ತಿರುತ್ತಾರೆ. ಇಷ್ಟಕ್ಕೂ ಸಾಹಿತ್ಯಾಸಕ್ತನೊಬ್ಬನು ಬೇರೆ ಬೇರೆ ಕಾಲಖಂಡಗಳಲ್ಲಿ ರಚಿತವಾದ ಕೃತಿಗಳನ್ನು ಏಕಕಾಲದಲ್ಲಿ ಓದುವ ಅವಕಾಶ ಪಡೆಯುವುದರಿಂದ, ಅವನಿಗೆ ಕೃತಿ ರಚನೆಯ ಕಾಲದ ಐತಿಹಾಸಿಕ ಸಂದರ್ಭಕ್ಕಿಂತ ಆ ಕೃತಿಯ ಸಾಹಿತ್ಯಿಕ ಮೌಲ್ಯವೇ ಹೆಚ್ಚು ಮುಖ್ಯವಾಗುತ್ತದೆ. ಮನುಷ್ಯನ ಅನುಭವ, ಅನಿಸಿಕೆ ಮತ್ತು ಭಾವನೆಗಳ ಲೋಕವನ್ನು ಕಲೆಯಾಗಿ ಕಟ್ಟುವ ಪ್ರಕ್ರಿಯೆಯಲ್ಲಿ ಸಾಹಿತಿ ಪಡೆದಿರುವ ಯಶಸ್ಸು ಮಾತ್ರ ನಮಗೆ ಮುಖ್ಯ. ಅವನ ಕೃತಿಗಳು ಆ ಕಾಲದ ಸಾಹಿತ್ಯಿಕ ಗ್ರಹಿಕೆಗಳಿಗಿಂತ ತಾಂತ್ರಿಕ ಆವಿಷ್ಕಾರಗಳಿಂದ ಪರಿಮಿತವಾಗಿರುತ್ತದೆ. ಹಲವು ಬಾರಿ ಅವನ್ನು ಮೀರಿ ನಿಲ್ಲುತ್ತವೆ. ಅದೇ ರೀತಿಯಲ್ಲಿ ಪ್ರತಿಯೊಂದು ಯುಗವೂ ಕೂಡ ತನಗೆ ವಿಶಿಷ್ಟವಾದ ಸಂಗತಿಗಳ ಸಾಹಿತ್ಯಕ ಅಭಿವ್ಯಕ್ತಿಗೆ ಅತ್ಯಂತ ಸೂಕ್ತವಾದ ರೂಪವನ್ನು, ತಾಂತ್ರಿಕ ಸಲಕರಣೆಗಳನ್ನು ರೂಪಿಸಿಕೊಳ್ಳುತ್ತದೆಯೆನ್ನುವ ಮಾತಿನಲ್ಲಿಯೂ ಸಾಕಷ್ಟು ಸತ್ಯವಿದೆ."೮. ಈ ಮಾತುಗಳು ನಿರಂಜನರ ಸಾಹಿತ್ಯಕ್ಕೆ ಅನ್ವಯಿಸುತ್ತದೆ

ನಿರಂಜನರು ಜನಪರವಾದ ಸಾಹಿತ್ಯವನ್ನು ಸೃಷ್ಟಿಸುವ ಆಶಯವನ್ನು ಹೊಂದಿದ್ದರೂ ಅವರು ಕಲಾತ್ಮಕತೆಗೂ ಮಹತ್ವವನ್ನು ನೀಡಿದರು. ಅವರು ಬರಹಗಾರರು ಮಾತ್ರವಾಗಿರದೆ ಕಮ್ಯುನಿಷ್ಟ್ ಪಕ್ಷದ ಕಾರ್ಯಕರ್ತರಾಗಿದ್ದರು. ಅವರ ಸಮಸ್ಯೆಗಳನ್ನು ಬಹಳ ಹತ್ತಿರದಿಂದ ಕಂಡವರಾಗಿದ್ದರು. ಆದ್ದರಿಂದ ಅವರಿಗೆ ಜನರ ಆಳದ ನಾಡಿಮಿಡಿತದ ಅರಿವು ಇತ್ತು. ಅವರ ಬರಹದಲ್ಲಿ ಕಾಳಜಿಯ ಕ್ರಿಯೆಗಳು ತೋರಿಕೆಯ ವಾಚ್ಯದ ನೆಲೆಯನ್ನು ಪಡೆಯುದಿಲ್ಲ. ಅವು ನೈಜ ಮತ್ತು ಮಾನವೀಯ ನೆಲೆಯನ್ನು ಪಡೆದಿವೆ. ಅದಕ್ಕೆ ಅವರ ಬದುಕಿನಲ್ಲಾದ ಬದಲಾವಣೆಗಳು ಕೂಡ ಕಾರಣವಾಗಿರುವುದನ್ನು ಗಮನಿಸಬೇಕು. "ನಿರಂಜನರ ಬದುಕಿನಲ್ಲಿ ಹಲವು ಮಹತ್ವದ ಘಟ್ಟಗಳಿದ್ದು, ಅವು ಅವರ ಬರವಣಿಗೆಯ ಮೇಲೆ ಪ್ರಭಾವ ಬೀರಿವೆ ಎಂಬುದು ನನ್ನ ಅಭಿಪ್ರಾಯ. ಅವರು ಕಮ್ಯುನಿಷ್ಟ್ ಪಕ್ಷದ ಸಕ್ರಿಯ ಸದಸ್ಯರಾಗಿದ್ದು, ಭೂಗತವಾಗಿದ್ದು, ಜನಶಕ್ತಿ ಸಂಪಾದಕರಾಗಿದ್ದುದು ೧೯೪೧ರಿಂದ ೧೯೫೧ರ ವರೆಗಿನ ಅವಧಿಯಲ್ಲಿ. ಎಂದರೆ ಹದಿನೆಂಟರಿಂದ ಇಪ್ಪತ್ತರ ವಯಸ್ಸಿನಲ್ಲಿ, ಹಲವು ಕಾರಣಗಳಿಂದ ರಾಜಕೀಯ ಚಟುವಟಿಕೆಗಳಿಂದ ಬಿಡುಗಡೆ ಪಡೆದ ನಂತರ ಎಂದರೆ ೧೯೮೫ರಲ್ಲಿ ಅವರ ಮೊದಲ ಕಾದಂಬರಿ ಪ್ರಕಟವಾಯಿತು (ವಿಮೋಚನೆ). ಆಗ

ಅವರಿಗೆ ಮುವತ್ತು ವರ್ಷ. ಅದರ ನಂತರ ಅವರು ರಾಜಕೀಯ ಸಿದ್ಧಾಂತವೊಂದರ ಬೆಂಬಲಿಗರಾಗಿ ಉಳಿದರೆ ವಿನಾ, ಸಾಹಿತಿಗಳಾದರೆ ವಿನಾ ರಾಜಕೀಯ ಹೋರಾಟಗಾರರಾಗಲಿಲ್ಲ. ಆದ್ದರಿಂದ ಕ್ರಾಂತಿ ಪರವಾದ, ಜನತೆಯ ಹೋರಾಟವನ್ನು ಸಮರ್ಥಿಸುವ ಅವರ ಕೃತಿಗಳೆಲ್ಲವೂ ಅವರು ಮೂವತ್ತನೆಯ ವಯಸ್ಸಿನಲ್ಲಿ ರಾಜಕೀಯ ನಿವೃತ್ತಿ ಪಡೆದ ನಂತರವೇ ರಚಿತವಾದವು. ಇದು ತಪ್ಪೆಂದು ನಾನು ಹೇಳುತ್ತಿಲ್ಲ. ಇದು ಪ್ರಾಯಶಃ ಆ ಕಾಲದ ವಾಮಪಂಥೀಯ ಹೋರಾಟಗಳ ವಸ್ತುಸ್ಥಿತಿಯನ್ನು ಪ್ರತಿಫಲಿಸುತ್ತಿರಬಹುದು. ಆದರೆ ತನ್ನ ಬದುಕಿನ ಕೊನೆವರೆಗೂ ಹೋರಾಟದಲ್ಲಿ ನಿರತನಾಗಿದ್ದ ಪಾಬ್ಲೋ ನೆರುದಾ ಅಂತವರ ಬರವಣಿಗೆಗೂ ಇದಕ್ಕೂ ವ್ಯತ್ಯಾಸ ಇದೆಯೆಂದು ನನಗೆ ತೋರುತ್ತದೆ."[೯]

ನಿರಂಜನರು ಬದುಕನ್ನು ಸೌಂದರ್ಯದ ನೆಲೆಯಲ್ಲಿ ಕಾಣುವ ಕಾದಂಬರಿಯನ್ನು ಬರೆದರು. ಅವರ ಬದುಕಿನ ಸೌಂದರ್ಯವೇ ಬೇರೆ. ಶೋಷಣೆಗೆ ಒಳಗಾಗುವ ವ್ಯವಸ್ಥೆಯನ್ನು ಮಾನವೀಯ ನೆಲೆಯಲ್ಲಿ ಕಾಣುವುದು. ಶೋಷಣೆಗೆ ಒಳಗಾಗುವ ಬದುಕನ್ನು ಹೋರಾಟದ ಮೂಲಕ ಬದಲಾಯಿಸುವುದು ಅವರಿಗೆ ಮುಖ್ಯವಾದರೂ ಸಾಹಿತ್ಯ ರಚನೆಯಲ್ಲಿ ಮಾತ್ರ ಕಲಾತ್ಮಕ ಅಂಶವನ್ನು ಬದಿಗಿಟ್ಟು ಜನಪ್ರಿಯ ಮಾದರಿಯನ್ನು ಅನುಸರಿಸಿ ಸಾಹಿತ್ಯವನ್ನು ಬರೆಯಲಿಲ್ಲ. ಖಚಿತ ಸಮಾಜವಾದಿ ನಿಲುವುಗಳನ್ನು ಸ್ಪಷ್ಟವಾಗಿ ಸಾಹಿತ್ಯದಲ್ಲಿ ತರುವ ಪ್ರಯತ್ನ ಮಾಡಿದರು. ಅದು ಹೇಳಿಕೆಯ ರೀತಿಯಲ್ಲಿ ಇರದೆ ಸೈದ್ಧಾಂತಿಕ ಸ್ವರೂಪವನ್ನು ಪಡೆದುಕೊಂಡಿತ್ತು. ಮುಖ್ಯವಾಗಿ ಮಾನವನ ಶೋಷಣೆಯನ್ನು ಚಾರಿತ್ರಿಕ ಸಂಗತಿಗಳಲ್ಲಿ ಶೋಧಿಸುವ ಚಿಂತನೆಯನ್ನು ಅವರ ಬರಹಗಳಲ್ಲಿ ಕಾಣುತ್ತೇವೆ. ಶೋಷಣೆಯ ಕುರಿತು ಯೋಚಿಸುವ ವಿಧಾನದಲ್ಲಿಯೇ ಸೌಂದರ್ಯದ ಮಾದರಿಯನ್ನು ಕಾಣುವ ಮನೋಭಾವ ನಿರಂಜನರದು. "ಮಾನವನ ಜೀವನವನ್ನು ನಿಯಂತ್ರಿಸುತ್ತಿರೋ ಶಕ್ತಿಗಳು ಯಾವುವು? ಈ ಪ್ರಶ್ನೆಯತ್ತ ನಿರಂಜನರ ಗಮನ. ಅದಕ್ಕೆ ಅವರು ಕಂಡುಕೊಂಡ ಸಮಾಜದ ವಾಸ್ತವ ಶಕ್ತಿಗಳ– ಶೋಷಣೆ ದಬ್ಬಾಳಿಕೆಗಳ ಬಗ್ಗೆ ಕಾನ್ಸರೇಷನ್ ಮಾಡಿದರು. ಹಾಗೆ ಕನ್ನಡ ಕಾದಂಬರಿಯಲ್ಲಿ ಮೊದಲ ಬಾರಿಗೆ ಸಾಮಾಜಿಕ ಪ್ರವಾದಿಯ ಧ್ವನಿ ಕೇಳಿಸಲು ಆರಂಭವಾಯಿತು. ಕಾರಂತ, ಪುಟ್ಟಪ್ಪರಿಗೆ ಶೈಲಿಯಲ್ಲಿ ಸರಳವಾದ ಒಂದು ಬಿಡುವು ಇದೆ. ಒಂದು ಮಳೆಗಾಲ, ಮಳೆಯ ರಾತ್ರಿ, ಬೆಳದಿಂಗಳ ರಾತ್ರಿ, ಸೂರ್ಯೋದಯಗಳನ್ನು ಏನು ಕೆಲಸವಿಲ್ಲದ, ಸೌಂದರ್ಯ ಪ್ರಜ್ಞೆಯುಳ್ಳ ಒಬ್ಬ ಸಾಮಾನ್ಯನಂತೆ ಅವರು ವರ್ಣಿಸಬಲ್ಲರು. (ಕಾರಂತರ ಬೆಟ್ಟದಜೀವ, ಮರಳಿ ಮಣ್ಣಿಗೆ ಕಾದಂಬರಿಯನ್ನು ಲಕ್ಷಿಸಿ ಈ ಮಾತು) ನಿರಂಜನಿಗಾದರೋ ಈ ರೀತಿಯ ಬಿಡುವು ಇಲ್ಲ. ಅವರಿಗೆ ಯಾವ ರೀತಿಯ ಒಂದು ಆತುರ, ಒಂದು ಆರ್ತತೆ ಇದೆಯೆಂದರೆ ಮನುಷ್ಯ ಯಾಕೆ ಹೀಗಾಗಿದ್ದಾನೆ .... ಎಂಬುದೇ ಆ ತುಡಿತ." ೧೦

ನಿರಂಜನರ ಬರವಣಿಗೆಯಲ್ಲಿ ನಿರಂತರ ಹರಿಯುವ ಬದುಕನ್ನು ಹಿಡಿದಿಡುವ ಅಖಂಡತೆಯನ್ನು ಕಾಣುತ್ತೇವೆ. ಅದು ಹುಸಿ ಹಸಿಯಾದ ಬರವಣಿಗೆಯಲ್ಲ. ಬದುಕನ್ನು ಹಸನುಗೊಳಿಸುವ, ಬದಲಾಯಿಸುವ, ಶೋಷಣೆಗೆ ಈಡುಮಾಡುವವರ ಮನೋಧರ್ಮವನ್ನು ಬಯಲುಗೊಳಿಸುವ ಚಿಂತನೆ ಅವರದು. ಯಾವ ಗೊಂದಲಗಳಿಲ್ಲದೆ ಬದುಕಿನುದ್ದಕ್ಕೂ ಹೋರಾಟವನ್ನು ವಾಸ್ತವಗೊಳಿಸುವ ಆಲೋಚನೆಯನ್ನು ಮಾಡುತ್ತಲೇ ಬಂದಿದ್ದಾರೆ. ಇದು ಅವರ ಬರವಣಿಗೆಯ ಸಾಧ್ಯತೆಯನ್ನು ಹೆಚ್ಚಿಸಿದೆ. ಹೊಸ ಬರಹಗಾರರಿಗೆ ಮಾದರಿಯೊಂದನ್ನು ಹಾಕಿಕೊಟ್ಟಿದೆ. "ನಿರಂಜನರ ಬರವಣಿಗೆಯ ರೀತಿ ಯಾವುದೆಂದರೆ ಅವರ ಕೊನೆಯ ಗಿರಾಕಿಯ ಬಗ್ಗೆ ಮಾತಾಡುವಾಗ ಆ ಇಡೀ ಕತೆಗೆ ಮೃತ್ಯುಂಜಯದಂತ ಒಂದು ಆಕೃತಿ ಇದೆ. ಒಂದು ಸಮಾಜವಾದಿ ಪುರಾಣದ ಆಕೃತಿ ಇದೆ ಅನ್ನುವುದು ತಿಳಿಯುತ್ತದೆ. ಸಾಹಿತ್ಯವನ್ನು ಅದರ ವಾಸ್ತವತೆಯಿಂದ ಮೇಲೆತ್ತಿ ಮಹಾನ್ ರೂಪಕವಾಗಿ ಮಿತ್ ಆಗಿ ಮಹೋನ್ನತಿಯನ್ನಾಗಿ ಬರೆಯುವ ಛಲ ಇದೆ. (ಸಮಾಜವಾದಿ ಬರಹಗಾರರಿಗೆಲ್ಲ ಇದು ಸಾಮಾನ್ಯ- ಯುರೋಪ್‌ನಲ್ಲಿ ಗಾರ್ಕಿಯಂತವರು ಇತ್ಯಾದಿ.) ನಿರಂಜನರ ಈ ಸಮಾಜವಾದಿ ಛಲಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಕನ್ನಡ ಸಾಹಿತ್ಯದಲ್ಲಿ ಈ ರೀತಿಯ ಅಖಂಡ ಶೈಲಿ ಇರುವವರು ನಿರಂಜನನೊಬ್ಬರೆ. ಆದುದರಿಂದ ಸಮಾಜವಾದದಲ್ಲಿ ಆಸಕ್ತಿ ಇರುವ ತರುಣ ಲೇಖಕರು ಅವರಿಂದ ಕಲಿಯಬೇಕಾದುದನ್ನೆಲ್ಲ ಕಲಿತು ಅವರಿಗಿಂತ ಭಿನ್ನವಾಗಿ ಬರೆಯಬೇಕು."೧೧

ನಿರಂಜನರು ತೀಕ್ಷ್ಣಮತಿಗಳಾಗಿದ್ದರಿಂದ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗ್ರಹಿಸುತ್ತಿದ್ದರು. ಸಾಹಿತ್ಯಕ ಬದಲಾವಣೆಯನ್ನು ಗಮನಿಸುತ್ತಿದ್ದರು. ಬರವಣಿಗೆಯಲ್ಲಿ ಒಂದೇ ತೆರನಾದ ಮಾರ್ಗವನ್ನು ಅನುಸರಿಸುತ್ತಿರಲಿಲ್ಲ. ಹೊಸ ಪ್ರಯೋಗಗಳನ್ನು ಮಾಡುತ್ತಿದ್ದರು. "ಕಾಲು ಶತಮಾನದಿಂದ ಒಂದು ಸಾಹಿತ್ಯ ಪ್ರಕಾರವನ್ನು ಬೆಳೆಸುತ್ತಾ ಬಂದಿರುವ, ಸಾಹಿತಿಯೊಬ್ಬನು ಆ ಪ್ರಕಾರದಲ್ಲಿ ಆಗುತ್ತಿರುವ ಬೆಳವಣಿಗೆ ಮತ್ತು ಆವಿಷ್ಕಾರಗಳನ್ನು ಎಚ್ಚರದಿಂದ ಗಮನಿಸಿ, ಅವಕ್ಕೆ ತನ್ನ ಬರವಣಿಗೆಯಲ್ಲಿ ಪ್ರತಿಸ್ಪಂದಿಸಬೇಕಾಗುತ್ತದೆ. ಹಾಗಲ್ಲದೆ ಅವನು ತನ್ನ ಸುತ್ತಾ ಅನಾಸಕ್ತಿ, ಹಟಮಾರಿತನ ಮತ್ತು ತಿರಸ್ಕಾರಗಳ ಗೋಡೆಯನ್ನು ಕಟ್ಟಿಕೊಂಡು ಬದಲಾಗದೆ ಉಳಿದುಬಿಟ್ಟರೆ ಅವನ ಬರವಣಿಗೆಯು ಪುನರುಕ್ತಿ ಪರಂಪರೆಯಾಗಿಬಿಡುತ್ತದೆ. ಸರ್ವಮಂಗಳ, ಸ್ವರೂಪ, ಮತ್ತು ಚಿರುಕು ಕಾದಂಬರಿಗಳನ್ನು ಬರೆದವರು, ಎಷ್ಟೋ ಕಾಲದ ನಂತರ ವೈಶಾಖ, ಕಾರ್ವಾಲೋ, ಮುಸ್ಸಂಜೆಯ ಕಥಾಪ್ರಸಂಗಳಂತಹ ಮಹತ್ವದ ಕೃತಿಗಳನ್ನು ರಚಿಸಿದ್ದು ಈ ಬಗೆಯ ಪ್ರತಿಸ್ಪಂದನಕ್ಕೆ ಸಾಕ್ಷಿ. ಅದೇ ೧೯೮೦ರ ಮೃತ್ಯುಂಜಯಕ್ಕೂ ೧೯೫೪ರ ಚಿರಸ್ಮರಣೆಗೂ ಇರುವ ವ್ಯತ್ಯಾಸ. ಕಾಲ, ದೇಶ, ಗಾತ್ರ ಮತ್ತು ವಿವರಗಳಲ್ಲಿ

ಮಾತ್ರವೆನಿಸಿದರೆ ಅದು ಒಂದು ಬಗೆಯ ಸ್ಥಗಿತ ಮನೋಧರ್ಮಕ್ಕೆ ಸಾಕ್ಷಿಯಾಗುತ್ತದೆ. ಹರಿಯುವ ನದಿಯ ಬದಿಯಲ್ಲಿ ಹರಿಯದೆ ನಿಂತ ನೀರು ಆರೋಗ್ಯದಿಂದಲೇ ವಂಚಿತವಾಗುತ್ತದೆ. ತನ್ನ ವಿಕಸನದ ಸಾಧ್ಯತೆಗಳನ್ನು ಮೊಟಕು ಮಾಡಿಕೊಂಡಿರುತ್ತದೆ. ಆದ್ದರಿಂದ ಚಿರಸ್ಮರಣೆಯು ಯಾವ ಕಾರಣಗಳಿಗೋಸ್ಕರ, ಹೇಗೆ ಮುಖ್ಯ ಅದ್ವಿತೀಯ ಎನಿಸಿತೋ ಅದೇ ಕಾರಣಗಳಿಗೋಸ್ಕರ ಮೃತ್ಯುಂಜಯು ಕೂಡ ಮುಖ್ಯವಾಗುತ್ತದೆ."೧೨ ಅವರ ಸಾಹಿತ್ಯಕ ಸಾಧನೆಯನ್ನು ಪ್ರಗತಿಶೀಲರೊಂದಿಗೆ ಹೋಲಿಸಿದರೆ ಭಿನ್ನ ನೆಲೆಗಳನ್ನು ಕಾಣುತ್ತೇವೆ. ಕೇವಲ ಸಿದ್ಧಾಂತಕ್ಕೆ ಮಾತ್ರ ತಮ್ಮನ್ನು ಮತ್ತು ಸಾಹಿತ್ಯವನ್ನು ಸೀಮಿತಗೊಳಿಸಲಿಲ್ಲ. ಬದುಕಿನ ಅನಂತವನ್ನು ಶೋಧಿಸುವ ಪ್ರಯತ್ನ ಮಾಡಿದರು. ಬದುಕಿನ ಹಲವು ಆಯಾಮಗಳನ್ನು ತಮ್ಮ ಬರಹಗಳಲ್ಲಿ ತಂದರು. ಸಾಹಿತ್ಯವನ್ನು ತಮ್ಮತನದ ಪ್ರದರ್ಶನಕ್ಕೆ ಬಳಸಿಕೊಳ್ಳಲಿಲ್ಲ. ಬಹಳ ಗಂಭೀರವಾಗಿ ಸಾಹಿತ್ಯ ಚಿಂತನೆಯನ್ನು ಮಾಡಿದರು. "ಪ್ರಗತಿಶೀಲ ಸಾಹಿತ್ಯಕ್ಕೂ ನಿರಂಜನರ ಕಾದಂಬರಿಗಳಿಗೂ ಇರುವ ಸಂಬಂಧವನ್ನು ಕುರಿತು ಒಂದೆರಡು ಮಾತುಗಳು ಅಗತ್ಯ. ೧೯೪೩ರಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ತಾವು ಶ್ರೀ ಅ.ನ.ಕೃ. ಜೊತೆಯಲ್ಲಿ ಪ್ರಗತಿಶೀಲತೆಯ ತುತ್ತೂರಿ ಊದಿದೆವೆಂದು ನಿರಂಜನರು ಹೇಳುತ್ತಾರೆ. ಆಗ ಅವರಿಗೆ ಇಪ್ಪತ್ತು ವರ್ಷ. ೧೯೪೪ರಲ್ಲಿ ಎಂದರೆ ಒಂದು ವರ್ಷದ ನಂತರ, "ಪ್ರಗತಿಶೀಲ ಸಾಹಿತ್ಯಾಸಕ್ತರ ಸಭೆಯಲ್ಲಿ ಶ್ರೀ ಅ.ನ.ಕೃ. ಅವರ ಕಾರ್ಯವಿಧಾನವನ್ನು ಟೀಕಿಸಿ ಭಾಷಣ ಮಾಡುತ್ತಾರೆ. ೧೯೪೫ರಲ್ಲಿ ಶ್ರೀ ಅ.ನ.ಕೃ. ಬಳಗದವರಿಗೆ ಅಸ್ಪೃಶ್ಯರಾಗುತ್ತಾರೆ. ಹೀಗೆ ನಾವು ಪ್ರಗತಿಶೀಲ ಸಾಹಿತ್ಯವೆಂದು ಕರೆಯುವ ಚಳುವಳಿಯ ಮೊದಲ ಹಂತದಿಂದಲೂ, ನಿರಂಜನರದು ಭಿನ್ನವಾದ ಧೋರಣೆಯಾದುದರಿಂದ, ಅವರ ಕಾದಂಬರಿಗೆ ಅ.ನ.ಕೃ ಅನುಕರಣೀಯ ಮಾದರಿಯೆನಿಸುವದಿಲ್ಲ. ತಮ್ಮ ಮೊದಲ ಕಾದಂಬರಿ ಪ್ರಕಟಣೆಗಿಂತಲೂ ಮುಂಚಿನಿಂತಲೂ ಅವರು ಬೆಳಿಸಿಕೊಂಡ ವಿಮರ್ಶಾತ್ಮಕ ನೆಲೆಯು ನಿರಂಜನರು ಪ್ರಗತಿಶೀಲರ ನಡುವೆ ವಿಶಿಷ್ಟರಾಗಲು ಕಾರಣವಾಯಿತು. ಅಲ್ಲದೆ ಹಿಂದೂಧರ್ಮದ ತಾತ್ವಿಕ ಮೌಲ್ಯಗಳ ಕಡೆಗೆ ಅ.ನ.ಕೃ. ತಾ.ರ.ಸು. ಅವರ ಆಸಕ್ತಿಯು ಜೀವಂತವಾದರೆ ನಿರಂಜನರೂ ಇಂದಿನವರೆಗೂ ಕಟ್ಟಾ ನಾಸ್ತಿಕರಾಗಿಯೇ ಉಳಿದಿದ್ದಾರೆ. ಅವರ ಯಾವ ಬರಹದಲ್ಲಿಯೂ ದೇವರು, ಧರ್ಮಗಳೂ ಮಾನವೀಯ ಸಂಬಂಧಗಳಿಗಿಂತ ಮುಖ್ಯವಾಗುವದಿಲ್ಲ. ಇಲ್ಲಿಯೇ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಪ್ರಗತಿಶೀಲರ ಕಾಮಪ್ರಚೋದಕ ಬರವಣಿಗೆಯ ವಿರುದ್ಧ ನಿರಂಜನರು ವ್ಯಕ್ತಪಡಿಸಿದ ತೀವ್ರ ಪ್ರತಿಭಟನೆ. ಅವರು ಅದನ್ನು ಸ್ವಚ್ಛಂದತೆಗೆ ಲೈಸೆನ್ಸ ಎಂದು ಕರೆದರು. ಪ್ರಗತಿಶೀಲರ ಕಮ್ಯೂನಿಸ್ಟ್ ವಿರೋಧವನ್ನು ಖಂಡಿಸುವದರ ಮೂಲಕ ಅವರು ಇನ್ನಷ್ಟು ಏಕಾಂಗಿಯಾದರು. ಹೀಗೆ ಬುದ್ಧಿಪೂರ್ವಕವಾಗಿ ಬೆಳಿಸಿಕೊಂಡ

ವಿರೋಧ ಮತ್ತು ಭ್ರಮನಿರಸನಗಳೇ ಅವರ ಕಾದಂಬರಿಗಳ ಹಲವು ಒಳ್ಳೆಯ ಗುಣಗಳಿಗೆ ಕಾರಣವಾಗುವುದನ್ನು ಗಮನಿಸಬಹುದು."೧೩ ಬರಹ ಮತ್ತು ಬದುಕನ್ನು ಅವರು ಬೆಸೆಯುತ್ತಾ ಬಂದವರು. ಎಂತ ತೊಡುಕಗಳ ನಡುವೆಯೂ ವ್ಯವಸ್ಥೆಯೊಂದಿಗೆ ರಾಜಿಯಾಗದೆ ತಮ್ಮತನವನ್ನು ಕಾಪಾಡಿಕೊಂಡು ಬಂದಿದ್ದಾರೆ. ಪ್ರಗತಿಪರತೆಯನ್ನು ಬದುಕಿನುದ್ದಕ್ಕೂ ಅನುಸರಿಸಿಕೊಂಡು ಬಂದಿದ್ದಾರೆ. ಜೀವಪರ ಚಿಂತನೆಯನ್ನೇ ನಂಬಿಕೊಂಡು ಅದರಂತೆ ಸಾಹಿತ್ಯವನ್ನು ಸೃಷ್ಟಿ ಮಾಡಿದ್ದಾರೆ. "ಕನ್ನಡ ಹಾಗು ಭಾರತೀಯ ಭಾಷೆಗಳಲ್ಲಿಯೇ, ತಾವು ಪ್ರಗತಿಶೀಲರೆಂದು ಕರೆಸಿಕೊಂಡ ಅನೇಕ ಸುಪ್ರಸಿದ್ದ ಸಾಹಿತಿ, ಕವಿಗಳು, ಸ್ವಾತಂತ್ರ್ಯಾನಂತರ ಯಾವ ಯಾವುದೋ ಕಾರಣದಿಂದ ತಮ್ಮ ಪ್ರಗತಿಪರ ನಿಲುವುಗಳಿಂದ ಹೊಯ್ದಾಡಿದ್ದಾರೆ. ಇವರು ತಮ್ಮ ತಾರುಣ್ಯದ ಬಿಸಿರಕ್ತದ ಆವೇಶದಲ್ಲಿ ಪ್ರಗತಿವಾದಿಗಳಾಗಿ, ಕ್ರಾಂತಿಕಾರಿಗಳಾಗಿ ಸಾಹಿತ್ಯ ಸೃಷ್ಟಿಗೆ ನುಗ್ಗಿದ್ದಾರೆ. ಆದರೆ ನಂತರ ತಮ್ಮ ಮಧ್ಯಮ ಹಾಗು ಕೊನೆಯ ವಯಸ್ಸಿನಲ್ಲಿ ಆಧ್ಯಾತ್ಮ, ದಿಗಂಬರ, ಪ್ರತೀಕ ಮೊದಲಾದ ವಾದಗಳಿಗೆ ಒಳಗಾಗಿ ಸೋತಿದ್ದಾರೆ. ತಮ್ಮ ಸುತ್ತಲಿನ ಸಾಮಂತಿ ಹಾಗು ಬೂರ್ಜ್ವಾ ವಾತಾವರಣಕ್ಕೆ ಹೆದರಿಕೊಂಡು ಹೇಗಾದರೂ ಬದುಕುವ ಬಯಕೆಗಾಗಿ ಒಡಂಬಡಿಕೆ ಮಾಡಿಕೊಂಡಿದ್ದಾರೆ. ಭಾರತೀಯ ಲೇಖಕರಲ್ಲಿ ಇಂಥವರ ಸಂಖ್ಯೆ ಹೇರಳವಾಗಿದೆ. ಕೇವಲ ಬೆರಳೆಣಿಕೆಯಷ್ಟು ಸಾಹಿತಿಗಳು ಮಾತ್ರ ತಾವು ದೃಢವಾಗಿ ನಂಬಿಕೊಂಡು ಬಂದ ಪ್ರಗತಿಶೀಲ ಧೋರಣೆಗಳಿಗೆ ದ್ರೋಹ ಬಗೆಯದೆ ಆಜೀವ ಬದ್ಧರಾಗಿ ಸಾಹಿತ್ಯ ಸೃಷ್ಟಿಸುತ್ತಾ ಬಂದಿದ್ದಾರೆ. ಇಂಥ ಅಪರೂಪದ ಲೇಖಕರಲ್ಲಿ ನಿರಂಜನರು ಒಬ್ಬರೆಂದು ಧೈರ್ಯವಾಗಿ ಹೇಳಬಹುದು".೧೪

ಅಡಿಟಿಪ್ಪಣಿ

೧. ಯು. ಆರ್. ಅನಂತಮೂರ್ತಿ, ಪ್ರಜ್ಞೆ ಮತ್ತು ಪರಿಸರ, ಪು. ೨೭

೨. ಡಾ. ಕೆ. ಕೇಶವಶರ್ಮ, ಮಾರ್ಕ್ಸವಾದಿ ವಿಮರ್ಶೆ ಪು. ೪೫

೩. ಡಿ.ಆರ್. ನಾಗರಾಜ್, ಸಂಸ್ಕೃತಿ ಕಥನ, ಪು. ೨೦೬

೪. ನಿರಂಜನ, ಬುದ್ದಿ ಬಾವ ಬೆಳಕು ೧೯೮೪, ಪು.೯೬

೫. ಆರ್.ವಿ.ಭಂಡಾರಿ: ಕಾದಂಬರಿಗಳಲ್ಲಿ ವರ್ಗ ವರ್ಣ ಸಂಘರ್ಷ, ೨೦೦೩, ಪು. ೭೩

೬. ನಿರಂಜನ , ಬುದ್ದಿ ಬಾವ ಬೆಳಕು, ೧೯೮೪, ಪು. ೫೩

೭. ಎಚ್.ಎಸ್. ರಾಘವೇಂದ್ರರಾವ್, ನಿರಂಜನರ ಕಾದಂಬರಿಗಳು ಕೆಲವು ಟಿಪ್ಪಣಿಗಳು, ಪು. ೩೪೦ ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬,)

೮. ಎಚ್.ಎಸ್. ರಾಘವೇಂದ್ರರಾವ್, ನಿರಂಜನರ ಕಾದಂಬರಿಗಳು ಕೆಲವು ಟಿಪ್ಪಣೆಗಳು, ಪು. ೩೪೧, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬,).

೯. ಡಿ.ಆರ್. ನಾಗರಾಜ್, ಕನ್ನಡ ಕಾದಂಬರಿಕಾರರಲ್ಲಿ ನಿರಂಜನರ ಪಾತ್ರ, ಪು.೩೩೬, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬)

೧೦. ಡಿ.ಆರ್. ನಾಗರಾಜ್, ಕನ್ನಡ ಕಾದಂಬರಿಕಾರರಲ್ಲಿ ನಿರಂಜನರ ಪಾತ್ರ, ಪು.೩೩೮, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬)

೧೨. ಎಚ್.ಎಸ್. ರಾಘವೇಂದ್ರರಾವ್, ನಿರಂಜನರ ಕಾದಂರಿಗಳು ಕೆಲವು ಟಿಪ್ಪಣೆಗಳು, ಪು. ೩೪೦ ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬

೧೩. ಎಚ್.ಎಸ್. ರಾಘವೇಂದ್ರರಾವ್, ನಿರಂಜನರ ಕಾದಂರಿಗಳು ಕೆಲವು ಟಿಪ್ಪಣೆಗಳು, ಪು. ೩೪೧, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬

೧೪. ಪಿ. ವಿ. ವಜ್ರಮಟ್ಟಿ, ಪ್ರಗತಿಶೀಲ ಸಾಹಿತಿಯಾಗಿ ನಿರಂಜನ, ಪು. ೨೦೨, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬

ತೀನಂಶ್ರೀ ಗದಾಯುದ್ಧ ಸಂಗ್ರಹ ಕುರಿತು

ದಿ॥ ಪಿ. ಸುಬ್ರಾಯಭಟ್ಟರ ಟಿಪ್ಪಣಿಗಳು

◈

ಪ್ರೊ. ಜಿ. ಅಶ್ವತ್ಥನಾರಾಯಣ

ಡಾ. ಪಿ. ಶ್ರೀಕೃಷ್ಣಭಟ್ ಕಾಸರಗೋಡು ಅವರು ಸಂಪಾದಿಸಿರುವ ದಿ.ಪಿ. ಸುಬ್ರಾಯಭಟ್ ಕಾಸರಗೋಡು ಅವರ ಲೇಖನ "ಪಂಪಭಾರತ ದೀಪಿಕೆಯ ಮೇಲೊಂದು ಕ್ಷ ಕಿರಣ" ನೋಡಿದೆ. ಓದಿ ಸಂತೋಷವಾಯಿತು. ಈಚೀಚೆಗೆ ವಿದ್ವತ್‌ಪತ್ರಿಕೆಗಳೂ ಹೆಚ್ಚಾಗಿ ಬರುತ್ತಿಲ್ಲ. ಬರುತ್ತಿರುವ ಪತ್ರಿಕೆಗಳಲ್ಲಿ ವಿದ್ವತ್ ಪೂರ್ಣಲೇಖನಗಳೂ ಬರುತ್ತಿಲ್ಲ. ವಿದ್ವಾಂಸರಾದವರು ಹೆಚ್ಚಾಗಿ ಬರೆಯುತ್ತಿಲ್ಲ. ಅನೇಕ ಸಂಪಾದಕರು ಪ್ರಕಟಿಸಲು ಮುಂದೆ ಬರುತ್ತಿಲ್ಲ. ಇಂಥ ಸನ್ನಿವೇಶದಲ್ಲಿ ಲೋಚನ ಸಂಪಾದಕರು ಇಂಥ ಲೇಖನವನ್ನು ಪ್ರಕಟಿಸಿರುವುದು ಶ್ಲಾಘನೀಯ.

ಡಿ.ಎಲ್.ಎನ್. ಅಂಥವರು ಆರ್ಥೈಸಿದ್ದನ್ನು ಪ್ರಶ್ನಿಸುವ ವಿದ್ವಾಂಸರು ಬಹಳ ಅಪರೂಪ. ಅವರಲ್ಲಿ ಡಿ.ಎಲ್.ಎನ್. ಅವರಷ್ಟೇ ಪಾಂಡಿತ್ಯವುಳ್ಳವರು ಪಿ. ಸುಬ್ರಾಯಭಟ್ ಅವರು.

ಡಿ. ಸುಬ್ರಾಯಭಟ್ ಅವರ ಹೆಸರನ್ನು ನಾನು ಕೇಳಿದ್ದು ೧೯೬೪-೬೫ರ ಸುಮಾರಿನಲ್ಲಿ ನಾನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಮಾಡುತ್ತಿದ್ದಾಗ ಸುಬ್ರಾಯಭಟ್ ಬಿ.ಕೆ. ತಿಮ್ಮಪ್ಪನವರ ಶಿಷ್ಯರಾಗಿದ್ದ ಮಹಾಲಕ್ಷ್ಮಿ-ಮುಂಡಲೀಕರು ನನ್ನ ಸಹಪಾಠಿಗಳಾಗಿದ್ದರು. ಅವರು ತಮ್ಮ ಗುರುಗಳಾದ ಇವರಿಬ್ಬರನ್ನು ಮನಸಾರೆ ಮೆಚ್ಚಿ ಅವರ ಪಾಂಡಿತ್ಯವನ್ನು ಶ್ಲಾಘಿಸುತ್ತಿದ್ದರು. ನಿಮ್ಮಲ್ಲಿ ಡಿ.ಎಲ್.ಎನ್.-ತೀನಂಶ್ರೀ ಇದ್ದಹಾಗೆ ನಮ್ಮಲ್ಲಿ ಡಿ.ಸುಬ್ರಾಯ್‌ಭಟ್-ತಿಮ್ಮಪ್ಪನವರು ಎನ್ನುತ್ತಿದ್ದರು.

೧೮-೧-೧೯೭೬ರಲ್ಲಿ ವಿದ್ವಾಂಸರಾದ ಟಿ. ಕೇಶವಭಟ್ ಅವರು ಪ್ರೊ. ಡಿ. ಸುಬ್ರಾಯ್‌ಭಟ್ ಅವರ 'ಗದಾಯುದ್ಧ ದರ್ಪಣಂ" ಪುಸ್ತಕ ತೋರಿಸಿದರು. ಅದನ್ನು ತಿರುವು ಹಾಕಿ ಈ ಗ್ರಂಥಬೇಕು ಎಲ್ಲಿ ಸಿಗುತ್ತೆ ಎಂದಾಗ ಸಂಪಾದಕರ

ವಿಳಾಸಕೊಟ್ಟರು. ೨೧-೧-೧೯೭೭ರಲ್ಲಿ ಸುಬ್ರಾಯಭಟ್ಟರಿಗೆ ಪ್ರತಿ ಬೇಕೆಂದು ಬರೆದಾಗ ಅಂಚೆಯಲ್ಲಿ ಕಳಿಸಿಕೊಟ್ಟರು (೧೭-೨-೧೯೭೭ರಲ್ಲಿ.)

ಆಗ ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಬಿ.ಎಂ.ಶ್ರೀ ಅವರ ಗದಾಯುದ್ಧ ನಾಟಕವನ್ನು ಪಾಠ ಮಾಡುತ್ತಿದ್ದಾಗ ಮೂಲಪದ್ಯಗಳನ್ನು ಈ ಸಂದರ್ಭದಲ್ಲಿ ತೀನಂಶ್ರೀ ಅವರ ಗದಾಯುದ್ಧ ಸಂಗ್ರಹವನ್ನು ಪರಿಶೀಲಿಸುತ್ತಿದ್ದೆ. ತೌಲನಿಕವಾಗಿ ಇವುಗಳನ್ನು ಓದುತ್ತಿರುವಾಗ ಗದಾಯುದ್ಧ ದರ್ಪಣದಲ್ಲಿ ಅಲ್ಲಲ್ಲಿ ತೀನಂಶ್ರೀ ಅವರ ಸಂಗ್ರಹದ ಟಿಪ್ಪಣಿಗಳಲ್ಲಿದ್ದ ಕೆಲವು ವಿಷಯಗಳನ್ನು ಸಮರ್ಪಕವಾಗಿಲ್ಲವೆಂದು ಚರ್ಚಿಸಿದ್ದು ಗಮನಕ್ಕೆ ಬಂದಿತು. ತೀ.ನಂ.ಶ್ರೀ ಅಂಥವರ ಬರಹವನ್ನು ಕುರಿತು ಪ್ರಶ್ನಿಸುವುದು ಸಾಮಾನ್ಯರಿಗೆ ದೂರದ ಮಾತು, ಪಿ. ಸುಬ್ರಾಯಭಟ್ಟರು. ಇನ್ನಾವ ಟೀಕಾ ಗ್ರಂಥಗಳನ್ನು ಬರೆದಿದ್ದಾರೆ, ಅವುಗಳಲ್ಲಿ ಇತರ ವಿದ್ವಾಂಸರ ಬಗ್ಗೆ ಏನು ಟಿಪ್ಪಣಿಗಳನ್ನು ಟೀಕೆಯಲ್ಲಿ ಬರೆದಿದ್ದಾರೆ ಎಂಬುದನ್ನು ತಿಳಿಯುವ ಕುತೂಹಲದಿಂದ ೧೭-೯-೧೯೭೭ರಲ್ಲಿ ಪಿ. ಸುಬ್ರಾಯಭಟ್ಟರಿಗೆ ಕಾಗದ ಬರೆದೆ.

ಆ ವೇಳೆಗೆ ೨೯-೮-೧೯೭೭ರಂದು ಪಿ. ಸುಬ್ರಾಯಭಟ್ ಅವರು ೫೪ನೇ ವಯಸ್ಸಿನಲ್ಲಿ ಸ್ಕೂಟರ್ ಅಪಘಾತದಲ್ಲಿ ತೀವ್ರ ಗಾಯಗೊಂಡು ನಿಧನರಾದರು ಎಂದು ಪ್ರಜಾವಾಣಿ ಪತ್ರಿಕೆ ೩೦-೮-೧೯೭೭ರಲ್ಲಿ ವರದಿ ಮಾಡಿತ್ತು ನಾನು ಪತ್ರಿಕೆಯನ್ನು ನೋಡಿರಲಿಲ್ಲ.

ಸೆಪ್ಟೆಂಬರ್೧೯೭೭ರಲ್ಲಿ ಸುಬ್ರಾಯಭಟ್ಟರ ವಿಳಾಸಕ್ಕೆ ಪತ್ರ ಬರೆದುದಕ್ಕೆ ಅವರ ಶಿಷ್ಯರೂ ಸಹೋದ್ಯೋಗಿಗಳೂ ಆದ ತಿಮ್ಮಪ್ಪನವರು ಭಟ್ ಅವರ ಕುಟುಂಬದ ಪರವಾಗಿ ನನಗೊಂದು ಅಂತರ್‌ದೇಶೀಯ ಪತ್ರ ಬರೆದರು. ಆ ಪತ್ರದ ವಿವರನ್ನು ಇಲ್ಲಿ ಲಗತ್ತಿಸಿದ್ದೇನೆ.

ಕಾಸರಗೋಡು
ತಾ॥ ೧-೨-೭೭

ಸನ್ಮಾನ್ಯ ಶ್ರೀ ಜಿ. ಅಶ್ವತ್ಥನಾರಾಯಣ ಅವರಿಗೆ ಪ್ರೀತಿಪೂರ್ವಕ ನಮಸ್ಕಾರಗಳು

ತಾವು ತಾ೧೭-೯-೭೭ರಂದು ಪ್ರೊ. ಪಿ. ಸುಬ್ರಾಯಭಟ್ಟರ ಕುಟುಂಬವರ್ಗಕ್ಕೆ ಬರೆದಿರುವ ಪತ್ರದಲ್ಲಿ ಶ್ರೀಯುತರು ಬರೆದಿರುವ ಪುಸ್ತಕಗಳ ವಿವರವನ್ನು ಕೇಳಿದ್ದೀರಿ. ಅವರ ಕುಟುಂಬವರ್ಗದ ಪರವಾಗಿ ಅವರ ಸಹೋದ್ಯೋಗಿಯಾಗಿ ಈ ಊರಿನಲ್ಲಿ ಹದಿನಾಲ್ಕು ವರ್ಷಗಳನ್ನು ಕಳೆದ ನಾನು ಈ ಪತ್ರ ಬರೆಯುತ್ತಿದ್ದೇನೆ.

ಶ್ರೀಯುತರು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಗ 'ಓರಿಯಂಟಲ್ ಲಾಂಗ್ ಮನ್ಸ್' ಅವರಿಗೆ 'ವಿಶ್ವಕವಿ ರವೀಂದ್ರರು' ಎನ್ನುವ ಪುಸ್ತಕವನ್ನು ಇಂಗ್ಲೀಷಿನಿಂದ ಭಾಷಾಂತರ ಮಾಡಿಕೊಟ್ಟಿದ್ದರು.

ಅಪೂರ್ವವೂ ಹಾಗು ಕೈವಶವಿರುವ ಒಂದೇ ಒಂದು ಪ್ರತಿಯನ್ನು ಅವರ ನೆನಪಿಗಾಗಿ ಕನ್ನಡ ವಿಭಾಗದ ಲೈಬ್ರೆರಿಯಲ್ಲಿ ಜೋಪಾನವಾಗಿಟ್ಟಿದ್ದೇವೆ. ಅನಂತರ ಅವರಿಂದ ಸೃಷ್ಟಿಗೊಂಡ ಕೃತಿ ರನ್ನನ 'ಗದಾಯುದ್ಧದಪರ್ಣಂ' ೨೫ ವರ್ಷಗಳು ರನ್ನನ ಕೃತಿಗಳನ್ನು ವಿವಿಧ ತರಗತಿಗಳಿಗೆ ಪಾಠ ಹೇಳಿದ, ಟಿಪ್ಪಣಿಮಾಡಿದ ಅನುಭವಗಳನ್ನು ಪಕ್ವಗೊಳಿಸಿದ ಒಂದು ರಸಪಾಕವಾಗಿ ಅದನ್ನು ಹೊರ ತಂದರು. ಈ ಮಾರ್ಚಿ ೩೧ಕ್ಕೆ ನಿವೃತ್ತರಾಗಲಿದ್ದರು. ನಿವೃತ್ತ ಜೀವನದಲ್ಲಿ ಕೈಗೊಳ್ಳ ಬೇಕಾದ ಹಲವು ಯೋಜನೆಗಳನ್ನು ಹಾಕಿ ತಂದರು. ಅವರೊಂದಿಗೆ ಆ ಯೋಜನೆಗಳೂ ಕಣ್ಮರೆಯಾದುದು, ಕನ್ನಡಿಗರಿಗೆ ಅಪಾರ ನಷ್ಟವೂ ಆಯಿತು. 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ' ಎಂದು ದೇವರು ಬಹುಬೇಗ ಅವರನ್ನು ಕರೆಯಿಸಿಕೊಂಡ ಕಳುಹಿಸಿ ಕೊಟ್ಟಿದ್ದವನು ಕರೆಯಿಸಿಕೊಂಡದ್ದು ಅದು ಅವನ ಇಚ್ಛೆ. ಅವರ ಸಂಕ್ಷೇಪ್ತ ಜೀವನ ಪರಿಚಯ : ಹೈಸ್ಕೂಲಿನವರೆಗೆ ಇಲ್ಲಿಯ 'ಪೆರ್ಲ' ಎನ್ನುವ ಸ್ಥಳದಲ್ಲಿ ವಿದ್ಯಾಭ್ಯಾಸ. ಇಲ್ಲಿಯ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ವಿದ್ವಾನ್- ಮದರಾಸಿನಲ್ಲಿ ತಿಂಗಳಿಗೆ ೧೭ರೂಪಾಯಿಗೆ ಲೈಬ್ರರಿಯನ್, ಇಂಟರ್‌ಮೀಡಿಯಟ್- ಮದರಾಸಿನಲ್ಲಿ. ಪ್ರೈವೇಟ್ ಸ್ಟಡಿ-೧೯೫೮ರಲ್ಲಿ ಕಾಸರಗೋಡಿಗೆ. ಕೇರಳ ವಿಶ್ವವಿದ್ಯಾನಿಲಯದಿಂದ ಬಿ.ಎ.(Private) ೧೯೬೩ರಲ್ಲಿ ಕನ್ನಡ ಎಂ.ಎ. ಕರ್ಣಾಟಕ ವಿಶ್ವವಿದ್ಯಾನಿಲಯ (Private) ೧೯೬೪ರಲ್ಲಿ ಪ್ರೊಫೆಸರ್ ಆಗಿ ಇದೇ ಕಾಲೇಜಿನಲ್ಲಿ ನೇಮಕ. ೧೯೫೮-೬೪ರವರೆಗೆ Lecturer. ೧೯೬೪-೧೯೭೬ ಆಗಸ್ಟ ತಿಂಗಳಿನಿಂದ ಕೊನೆಯವರೆಗೂ ಪ್ರೊಫೆಸರ್.

ಕುಟುಂಬವರ್ಗ- ೮ಮಕ್ಕಳು ಯಾರಿಗೂ ಮದುವೆಯಾಗಿಲ್ಲ. ಕೊನೆಯ ಮಗು ಪ್ರೈಮರಿ ಶಾಲೆಗೆ ಸೇರಲು ಇನ್ನೂ ಎರಡು ವರ್ಷಬೇಕು. ಕಡು ಬಡವರಲ್ಲ, ಶ್ರೀಮಂತರೂ ಅಲ್ಲ- ಸಮಾಜದ ದೃಷ್ಟಿಯಿಂದ ದೇವರ ದೃಷ್ಟಿಯಲ್ಲಿ ಎಲ್ಲರಿಗಿಂತ ದೊಡ್ಡವರು. ತಮ್ಮ ಪತ್ರಕ್ಕೆ ಉತ್ತರಿಸುವುದು ತಡವಾಯಿತು. ಕ್ಷಮಿಸಿರಿ ತಮ್ಮ ಪ್ರೀತಿ ಗೌರವಗಳ ಪತ್ರವನ್ನು ನೋಡಿ ತಮಗೆ ನಾನೂ ಋಣಿಯಾಗಿದ್ದೇನೆ.

- ತಿಮ್ಮಪ್ಪ

ಅದರಲ್ಲಿ ಲೇಖನದ ಸಂಪಾದಕರಾದ ಡಾ. ಪಿ. ಕೃಷ್ಣಭಟ್ ಅವರು ಹೇಳಿರುವ ಸಂಗತಿಗಳಿಗೆ ಪೂರಕವಾಗಿ ಒಂದೆರಡು ಸಂಗತಿಗಳಿವೆ. ಇದೀಗ ಡಿಎಲ್‌ಎನ್ ಅವರ ದೀಪಿಕೆ ಕುರಿತ ಲೇಖನ ಕಂಡ ಮೇಲೆ ಗದಾಯುದ್ಧ ದರ್ಪಣದಲ್ಲಿ ತೀ.ನಂ.ಶ್ರೀ ಅವರು ಬರೆದಿರುವ ಟಿಪ್ಪಣಿಗಳ ಬಗ್ಗೆ ತಿಳಿಸಿರುವ ಸುಬ್ರಾಯಭಟ್ಟರ ಅಭಿಪ್ರಾಯಗಳನ್ನು ಇಲ್ಲಿ ವಿದ್ಯಾಜನರ ಅವಗಾಹನೆಗೆ ತಿಳಿಸುತ್ತಿದ್ದೇನೆ.

ಸಾಹಸಭೀಮ ವಿಜಯಂ (ಆ೨ ಪದ್ಯ ೩೯)

ಕಲಿ ಪನ್ನೊಂದಕ್ಷೋಹಿಣಿ।
ಬಲಮೆಲ್ಲಮನೊಂದೆ ರಥದೊಳರ್ವನೆ ಗೆಲ್ದಂ॥
ಗೆಲಲರಿಯಂ ಗೋಗ್ರಹಣದ
ಕಲಹದೊಳೇಕಾಂಗ ವಿಜಯನಾದಂ ವಿಜಯಂ ॥೨-೩೯॥

ಸು.ಭಟ್ ಅವರ ವ್ಯಾಖ್ಯಾನ : (ಪುಟ-೭೭ ಗದಾಯುದ್ಧ ದರ್ಪಣಂ)

ಅನ್ವಯಾರ್ಥ: ಕಲಿ = ಶೂರನಾದ ಅರ್ಜುನನು

ಪನ್ನೊಂದಕ್ಷೋಹಿಣಿ ಬಲಮೆಲ್ಲಮಂ = ಹನ್ನೊಂದು ಅಕ್ಷೋಹಿಣಿ ಸೈನ್ಯವನ್ನೆಲ್ಲ (ಸಂ. ೧೮೭೦ರಥಗಳೂ ಅಷ್ಟೇ ಆನೆಗಳೂ ಆ ಸಂಖ್ಯೆಯ ಮೂರರಷ್ಟು ಕುದುರೆಗಳೂ ಐದರಷ್ಟು ಕಾಲಾಳುಗಳು ಇರುವ ಸೇನೆ)

ಒಂದೆ ರಥದೊಳ್ ಒರ್ವನೆ ಗೆಲ್ದಂ = ಒಂದೇ ರಥದಲ್ಲಿ ಯುದ್ಧ ಮಾಡುತ್ತ ಒಬ್ಬನೇ ಜಯಿಸಿದನು.

ಗೋಗ್ರಹಣದ ಕಲಹದೊಳ್ = ವಿರಾಟನ ಗೋವುಗಳನ್ನು ಕೌರವರು ಮುತ್ತಿಗೆ ಹಾಕಿದಾಗ ನಡೆದ ಯುದ್ಧದಲ್ಲಿ.

ವಿಜಯಂ ಅರಿಯಂ ಗೆಲಲ್ = ಅರ್ಜುನನು ಶತ್ರುಗಳಾದ ಕೌರವರನ್ನು ಜಯಿಸಲು

ಏಕಾಂಗ ವಿಜಯನಾದಂ = ಯಾರ ಸಹಾಯವೂ ಇಲ್ಲದೆ ಜಯಶಾಲಿಯಾದನು.

ತಾತ್ಪರ್ಯ : ಮಹಾಶೂರನಾದ ಅರ್ಜುನನು ಒಂದೇ ರಥದಲ್ಲಿ ಕುಳಿತು ಯುದ್ಧಮಾಡುತ್ತಾ ಹನ್ನೊಂದು ಅಕ್ಷೋಹಿಣಿ ಸೈನ್ಯವನ್ನು ಒಬ್ಬನೇ ಗೆದ್ದನು. ಗೋಗ್ರಹಣಾವಸರದಲ್ಲಿ ನಡೆದ ಯುದ್ಧದಲ್ಲಿ ಶತ್ರುಗಳನ್ನು ಏಕಾಕಿಯಾಗಿ ಜಯಸಿದುದರಿಂದ ಏಕಾಂಗವಿಜಯನಾದನು.

ತೀನಂಶ್ರೀ ಟಿಪ್ಪಣಿ (ಗದಾಯುದ್ಧ ಸಂಗ್ರಹ ಪುಟ ೧೧೭ ಆ ೩-೧೫ ಟಿಪ್ಪಣಿಗಳು)

ಕಲಿ = ಶೂರ

ಅಕ್ಷೋಹಿಣಿ (ಸಂ) ಅಕ್ಷೋಹಿಣೀ - ೨೧೮೭೦ ರಥಗಳೂ ಅಷ್ಟೇ ಆನೆಗಳೂ ಆ ಸಂಖ್ಯೆಗೆ ಮೂರರಷ್ಟು, ಕುದುರೆಗಳೂ ಐದರಷ್ಟು ಕಾಲಾಳುಗಳೂ ಇರುವ ಸೇನೆ; ಪಂಪಭಾರತದಲ್ಲಿ ಈ ಲೆಕ್ಕವನ್ನು ಬೇರೆ ರೀತಿಯಾಗಿ ಹೇಳಿದೆ (೯-೯೫ ಪಂ.ಭಾ)

ಗೆಲಲ್ ಅರಿಯಂ - ಗೆಲ್ಲಲು ಅಸಾಧ್ಯನಾದವನು.

ಅರಿಯಂ ಎಂಬುದು ಅರಿದು ಎಂಬ ಗುಣವಾಚಕದ ಪುಲ್ಲಿಂಗ ಏಕವಚನ ರೂಪ.

ಗೋಗ್ರಹಣದ ಕಲಹ : ಪಾಂಡವರ ಅಜ್ಞಾತವಾಸ ಕಾಲದಲ್ಲಿ ವಿರಾಟನ ಗೋವುಗಳನ್ನು ಕೌರವರು ಹಿಡಿದಾಗ ನಡೆದ ಕದನ

ಏಕಾಂಗ ವಿಜಯ – ಅನ್ಯ ಸಹಾಯವಿಲ್ಲದೆ ತಾನೊಬ್ಬನೇ ವಿಜಯವನ್ನು ಸಾಧಿಸಿದವನು ವಿಜಯ – ಅರ್ಜುನ

ವಿಚಾರ-(ಭಟ್); ತೀನಂಶ್ರೀ ಅವರು ಈ ಪದ್ಯವನ್ನು ಅರ್ಥವಿಸುವಲ್ಲಿ ಎಡವಿದ್ದಾರೆ.

ರನ್ನನ ಸಾಹಸ ಭೀಮ ವಿಜಯಂ (೨–೧೩)
ಪದುಳಂ ಕುಳ್ಳಿರ್ದೆಮಗಾ।
ಯದ ಮಾತಂ ತಗುಳೆ ಗಱಪಿ ಪೋದಂ ಸಂದಿ॥
ರ್ದದಟರೊಳಿಱಿದಱಿಯಂ
ತಪ್ಪದೆ ಕಮ್ಮಱಿಯೋಜನೆನಿಸಿದಾ ಬಿಲ್ಲೋಜಂ. (೨–೧೩)

ಪಿ.ಸು. ಭಟ್ ಅವರ ವ್ಯಾಖ್ಯಾನ (ಪುಟ ೬೨) ಗದಾಯುದ್ಧದರ್ಪಣಂ)

ಅನ್ವಯಾರ್ಥಃ ಪದುಳಂ ಕುಳ್ಳಿರ್ದು=ತಾನು ಸುಖವಾಗಿ ಕುಳಿತುಕೊಂಡು ಎಮಗೆ ಆಯದ ಮಾತಂ ತಗುಳೆ ಗಱಪಿ ಪೋದಂ=ನಮಗೆಲ್ಲ ತನ್ನ ಶೌರ್ಯೋಕ್ತಿಯನ್ನು ಮನಸ್ಸಿಗೆ ಹಿಡಿಸುವಂತೆ (ಧಾ.ತಗುಳ್) ಹರಟೆ ಕೊಚ್ಚಿ ಸತ್ತೇ ಹೋದನು.

ಸಂದಿರ್ದ ಅದಟರೊಳ್ = ಹೆಸರಾಂತ ಪರಾಕ್ರಮಿಗಳೊಂದಿಗೆ

ಇಱಿದು ಅಱಿಯಂ= ಯುದ್ಧಮಾಡಿ ತಿಳಿಯನು.

ತಪ್ಪದೆ ಬಿಲ್ಲೋಜಂ = ನಿಜಕ್ಕೂ ಧನುರ್ವಿದ್ಯಾಗುರು ದ್ರೋಣನು (ಓಜ = ಗುರು ಉವಜ್ಝು (ಪ್ರಾಕೃತ) ಕಮ್ಮಱಿಯೋಜನ್ ಎನಿಸಿದಂ = ಕಮ್ಮಾರ ಗುರು ವೆನಿಸಿಕೊಂಡನು. ಕರ್ಮಕಾರ (ಸಂ)ಕಮ್ಮಱಿ, ಕಮ್ಮಾಱ (ತ್ರ) 'ಕಮ್ಮರಿಯೋಜ' ಎಂಬ ರೇಫಾಂತ ರೂಪವು ಆದಿಪುರಾಣ, ಚಂದ್ರ ಪ್ರಭ ಪುರಾಣ ಮುಂತಾದವುಗಳಲ್ಲಿ ಕಂಡು ಬರುತ್ತಿದೆ. ಬಹುಶಃ ಎರಡು ರೂಪಗಳೂ ರೂಢಿಯಲ್ಲಿದ್ದಿರಬಹುದು.

ತಾತ್ಪರ್ಯ : ಆಚಾರ್ಯ ದ್ರೋಣನು ಸುಖವಾಗಿ ಕುಳಿತು ಕೊಂಡು ನಮಗೆಲ್ಲ ತನ್ನ ಪರಾಕ್ರಮದ ಹೆಗ್ಗಳಿಕೆಯನ್ನು ಮನಮೆಚ್ಚುವಂತೆ ಹರಟಿ ಯುದ್ಧಮಾಡದೆ ಸತ್ತೇ ಹೋದನು. ಪ್ರಸಿದ್ಧ ಶೂರರಲ್ಲಿ ಹೋರಾಡಿ ಅರಿಯನು. ನಿಜಕ್ಕೂ ಬಿಲ್ಲೋಜನು ಕಮ್ಮರಿಯೋಜನೇ ಆದನು.

ತೀನಂಶ್ರೀ ಅವರ ಟಿಪ್ಪಣಿ(ಗದಾಯುದ್ಧ ಸಂಗ್ರಹ ಪುಟ ೧೧೧-೧೧೨) ಪದುಳಂ ಕುಳ್ಳಿರ್ದು = ತಾನು ನೆಮ್ಮದಿಯಾಗಿ, ತೆಪ್ಪಗೆ ಕುಳಿತಿದ್ದು ಆಯ = ಶೌರ್ಯ. ತಗುಳೆ = ಮುಟ್ಟುವಂತೆ, ತಗುಲುವಂತೆ; (ಧಾ. ತಗುಳ್) ಗಟಿಪಿ = ಹರಟೆಕೊಚ್ಚಿ. ಸಂದಿರ್ದ ಅದಟರೊಳ್ = ಪ್ರಸಿದ್ಧರಾದ ಶೂರರ ಸಂಗಡ. ಇಱಿದು ಅಱಿಯಂ = ಯುದ್ಧಮಾಡಿ ಅರಿಯನು.

ಬಿಲ್ಲೋಜ = ಬಿಲ್ಲಿನ ವಿದ್ಯೆಯನ್ನು ಕಲಿಸುವ ಗುರು, ದ್ರೋಣ,

ಓಜ = (=ಒವಜ)ಸಂ. ಉಪಾಧ್ಯಾಯ

ಕಮ್ಮಱಿಯೋಜ : ಬಾಯಲ್ಲಿ ಹೇಳಿ ಕೈಯಲ್ಲಿ ಮಾಡದವನು ಹೆಸರಿಗೆ ಉಪದೇಶ ಮಾಡಿ ತಾನು ಅದರಂತೆ ನಡೆಯದವನು ಎಂದು ಈ ಶಬ್ದಕ್ಕೆ ಅರ್ಥವಾಗುತ್ತದೆ.

ಇಲ್ಲಿ ಮುಂದೆ ಕೊಟ್ಟಿರುವ ಪಂಪಭಾರತದ ಪದ್ಯವನ್ನು ಆದಿಪುರಾಣ(೨-೬೧), ಚಂದ್ರ ಪ್ರಭ ಪುರಾಣ (೧೦-೧೨೪)ವನ್ನು ಹೋಲಿಸಿ ಇದರ ಮೂಲಾರ್ಥ ಕಮ್ಮಾರ ಕೆಲಸದವನು ಎಂದಿರುವಂತೆ ತೋರುತ್ತದೆ. (ಕಮ್ಮಱಿ+ಓಜ) ಓಜ ಎಂಬುದು "ವಾಜ" ಎಂಬ ರೂಪದಲ್ಲಿ ಬಡಗಿ, ಕಮ್ಮಾರ ಮೊದಲಾದ ಅರ್ಥಗಳಲ್ಲಿ ಮೈಸೂರ ಕಡೆ ಈಗಲೂ ರೂಢಿಯಲ್ಲಿದೆ;

ಬೈಚೋಜ, ಗಂಗಾ ಚಾರಿ ಎಂಬಲ್ಲಿ ಇರುವಂತೆ ಓಜ ಆಚಾರಿ (ಆಚಾರ್ಯ)ಮೊದಲಾದ ಶಬ್ದಗಳನ್ನು ಶಿಲ್ಪಿವರ್ಗದವರು ತಮ್ಮ ಹೆಸರಿನ ಮುಂದುಗಡೆ ಕೂಡಿಸಿಕೊಳ್ಳುವ ಪದ್ಧತಿ ಹಿಂದೆಯೂ ಇತ್ತು. ಮಾತುಕೊಟ್ಟು ಕೆಲಸ ಮಾಡಿಕೊಡದೆ ಕಾಲ ತಳ್ಳುವ ಪ್ರವೃತ್ತಿಯ ಫಲವಾಗಿ ಕಮ್ಮಱಿಯೋಜ ಎಂಬುದಕ್ಕೆ ನಿಂದಾರ್ಥ ಬಲು ಹಿಂದಿನಿಂದಲು ಅಂಟಿತೋ ಏನೋ. ಮೇಲೆ ಕೊಟ್ಟಿರುವ ನಿಷ್ಪತ್ತಿಗೆ ಆಕ್ಷೇಪಣೆಯೂ ಇಲ್ಲದಿಲ್ಲ. ಕಮಱ(ಸಂ. ಕರ್ಮಕಾರ) ಎಂಬುದು ಅಕಾರಾಂತ: ಇಲ್ಲಿ ಇಕಾರಾಂತ ಹೇಗಾಯಿತು; ಆದಿಪುರಾಣ, ಚಂದ್ರಪ್ರಭ ಪುರಾಣಗಳಲ್ಲಿ ಕಮ್ಮರಿ ಎಂಬುದು ಸಾಮಾನ್ಯ ರೇಫದೊಡನೆ ಅಚ್ಚಾಗಿದೆ. ಬೊಪ್ಪಣ ಪಂಡಿನ ಗೊಮ್ಮಟ ಸ್ತುತಿಯಲ್ಲಿ (ಶ್ರ. ಬೆಳಗೊಳ ಶಾಸನಗಳು ಸಂ-೨೩೪) 'ಕಮ್ಮರಿಯೋಜ' ಎಂಬ ಸಾಮಾನ್ಯ ರೇಫ ಸಹಿತವಾದ ರೂಪವೇ ಕಾಣಬರುತ್ತದೆಯಲ್ಲ (ಪಂಕ್ತಿ ೫೫) ಇದಕ್ಕೆಲ್ಲ ಸಮಾಧಾನವೇನು? ಎಂಬ ಪ್ರಶ್ನೆ ಏಳುತ್ತದೆ.

ತೀನಂಶ್ರೀ ಅವರ ಟಿಪ್ಪಣಿ (ಪುಟ೧೧೧-೧೧೨)

ಕಮ್ಮರಿ ಎಂಬುದು ಕರ್ಮಾರಿ ಎಂಬುದರ ತದ್ಭವವಾಗಿರಬೇಕು. ಕಮ್ಮರಿಯೋಜ ಎಂದರೆ ಕೆಲಸಕ್ಕೆ ಹಗೆಗಳಾದವರ, ಸೋಮಾರಿಗಳ ಗುರು ಎಂದು ಅರ್ಥವೆಂಬುದಾಗಿ ಇನ್ನೊಂದು ಅಭಿಪ್ರಾಯವುಂಟು ಅಂತೂ ಈ ವಿಷಯದಲ್ಲಿ ಇನ್ನೂ ವಿಚಾರ ಮಾಡಬೇಕಾಗಿದೆ.

ದ್ರೋಣನು ನಮಗೆಲ್ಲ ಶೌರ್ಯವನ್ನು ಬೋಧಿಸಿ ತಾನು ತೆಪ್ಪಗೆ ಕುಳಿತಿದ್ದನು. ಶತ್ರುಗಳ ಮೇಲೆ ಯುದ್ಧ ಮಾಡಲೇ ಇಲ್ಲ. ಅವನು ಉಪದೇಶದಲ್ಲಿ ಮಾತ್ರ ಗಟ್ಟಿಗ; ಹೇಳಿದ್ದನ್ನು ಕಾರ್ಯತಃ ಮಾಡಿ ತೋರಿಸುವವನಲ್ಲ ಎಂದು ದುರ್ಯೋಧನನ ಭಾವ.

ರನ್ನನ ಪದ್ಯಕ್ಕೆ ಪಂಪಭಾರತದ ಈ ಕೆಳಗಿನ ಪದ್ಯ ಪ್ರೇರಕ;

ಬವರದೊಳೇಂ ಬಲ್ಲಂ ಕರ
ಮೊವಜುಗೆಯಲ್ ಪೆಜರ್ಗೆ(ಕಂಡು) ತನಗಱುಯನದೆಂ
ತುವೊ ನುಡಿ ತಪ್ಪದು ಕಮ್ಮಜೆ
ಯೊವಜಂ ಬಿಲ್ಲೊವಜನೆಂಬುದಂ ಮಾಡುವನೆ(೧೨-೩)

ಆದರೆ ಇಲ್ಲಿ ಇದನ್ನು ದ್ರೋಣನೇ ಹೇಳಿಕೊಂಡು ಯುದ್ಧಮಾಡಿ ತನ್ನ ಶೌರ್ಯವನ್ನು ಪ್ರದರ್ಶಿಸುತ್ತಾನೆ.

ರನ್ನನ ಸಾಹಸ ಭೀಮ ವಿಜಯ(೩-೭೪) ಭಟ್ ಪುಟ ೧೨೭

ಪಡೆ ಪನ್ನೊಂದಕ್ಷೋಹಿಣಿ
ಗೊಡೆಯನೆ ಮೂರ್ಧಾಭಿಷಿಕ್ತನಯ್ ಮೂಱುಂ ಬೆ
ಳ್ಗೊಡೆಯ ನಡುವಿರ್ಪ ನೀನಿ
ರ್ದೆಡೆಯುಮದೆಮಗಱಯದಂತುಟಾದುದೆ ಮಗನೇ (೩-೭೪)

ಸುಬ್ರಾಯ ಭಟ್ಟರ ವ್ಯಾಖ್ಯಾನ

ಪನ್ನೊಂದಕ್ಷೋಹಿಣಿ= ಹನ್ನೊಂದು ಅಕ್ಷೋಹಿಣಿ, (ಅಕ್ಷೌಹಿಣೀ-ಸಂ) ಪಡೆಗೆ ಒಡೆಯನೆ= ಸೇನೆಗೆ ಸ್ವಾಮಿಯೆ, ರಾಜನೆ

ಮೂರ್ಧಾಭಿಷಿಕ್ತನಯ್ = ಮೂರ್ಧ + ಅಭಿಷಿಕ್ತನಯ್ (ಸ.ದೀ.ಸಂ) ಶಿರಸ್ಸಿನಲ್ಲಿ ಅರಸೊತ್ತಿಗೆಯ ಅಭಿಷೇಕವನ್ನು ಮಾಡಿಸಿಕೊಂಡವನೇ, ಪಟ್ಟಾಭಿಷಿಕ್ತನೇ

ಮೂಱುಂ ಬೆಳ್ಗೊಡೆಯ ನಡುವಿರ್ಪ = ಮೂರು ಬೆಳ್ಗೊಡೆಗಳ ಮಧ್ಯದಲ್ಲಿರುವ,

ನೀನಿರ್ದ ಎಡೆಯುಂ = ನೀನಿರ್ದ ಸ್ಥಳವೂ

ಎಮಗೆ ಅಱಿಯದೆ+ಅಂತುಟು ಆದುದೆ ಮಗನೇ

ನಮಗೆ ತಿಳಿಯದ ಹಾಗೆ ಆಯಿತೇ ಮಗನೇ

ತಾತ್ಪರ್ಯ : ಹನ್ನೊಂದು ಅಕ್ಷೋಹಿಣಿ ಸೇನೆಗೆ ಅಧಿಪತಿಯಾವವನೇ, ಪಟ್ಟಾಭಿಷಕ್ತನೇ, ಉನ್ನತ ಶ್ವೇತಛತ್ರದ ನಡುವೆ ಮೆರೆಯುತ್ತಿದ್ದ ಅರ್ಥಾತ್ ಚಕ್ರೇಶ್ವರನಾಗಿದ್ದ ನೀನು, ಇರುವ ಸ್ಥಳವೂ ಇಂದು ನಮಗೆ ತಿಳಿಯದ ಹಾಗಾಯಿತಲ್ಲ ಮಗನೇ।

ಗಗನ ಚುಂಬಿತವಾಗಿದ್ದ ಶ್ವೇತಚ್ಛತ್ರದ ಹಾಗೂ ಇನ್ನಿತರ ರಾಜ ಚಿಹ್ನೆಗಳಿಂದ ಮೆರೆಯುತ್ತಿದ್ದ ದುರ್ಯೋಧನನು ಎಷ್ಟೇ ದೂರದಲ್ಲಿದ್ದರೂ ಗುರುತಿಸಬಹುದಾಗಿತ್ತು. ಅಂಥವನು ಇಂದು ಎಲ್ಲವನ್ನೂ ಕಳೆದುಕೊಂಡಿದ್ದರಿಂದ ಅವನನ್ನು ಪತ್ತೆ ಹಚ್ಚುವುದೇ ಕಷ್ಟವಾಯಿತಲ್ಲ ಎಂದು ಗೋಳಿಡುತ್ತಾರೆ. ಧೃತರಾಷ್ಟ್ರ ಗಾಂಧಾರಿಯರು

ಭಟ್ (ಪುಟ ೧೨೮ ಆ೩-ಪದ್ಯ ೭೪)

ವಿಚಾರ: "ಮೂಱುಂ ಬೆಳ್ಗೊಡೆಯ ನಡುವಿರ್ಪ" ಶ್ರೀ ತೀನಂಶ್ರೀ ಅವರು 'ಜಿನನಿಗೆ ಮೂರು ಶ್ವೇತಚ್ಛತ್ರಗಳುಂಟೆಂಬುದು ಪ್ರಸಿದ್ಧ ವಿಷಯ ಚಕ್ರವರ್ತಿಗೂ ಉಂಟೇ ಎಂಬುದನ್ನು ವಿಚಾರ ಮಾಡಬೇಕಾಗಿದೆ, ಎಂದಿದ್ದಾರೆ. ಇಲ್ಲಿ ಬಹುಶಃ ಮೂಲ ಗ್ರಂಥದಿಂದ ಪ್ರತಿಯನ್ನು ತೆಗೆಯವಾಗ ತಪ್ಪಾಗಿದ್ದಿರಬೇಕು. ಮೂಲದಲ್ಲಿ "ಮೂರ್ಧಾಭಿಷಿಕ್ತ ನಯ್ಯೇಱುಂ ಬೆಳ್ಗೊಡೆ" ಎಂದಿದ್ದಿರಬಹುದು.

ಏಱುಂ ಬೆಳ್ಗೊಡೆ ಉನ್ನತ ಶ್ವೇತಚ್ಛತ್ರಂ.

ಏಱುವುದು ಜವ್ವನಂ= ಏಱುಂಜವ್ವನಂ, ತೂಗುವುದು ತೊಟ್ಟಿಲ್ = ತೂಗುಂದೊಟ್ಟಿಲ್ (ಕ.ಸ) ಎಂದಂತೆ.

ಸಾಹಸ ಭೀಮ ವಿಜಯಂ(೪-೭)
ಸಮರದೊಳದೃಷ್ಟವಶದಿಂ
ಸಮವಾಯಂ ಸಾಯೆ ನಾಲ್ವರನುಜರೊಳೊರ್ವಂ
ಯಮಭರನತೀತನಪ್ಪಂ
ಯಮನಂದನನದಱಿನಾ(೧೧೪-೭) ನೃಪಂಗಂ ಜಯಮೇ (೧೧೪-೭)

ವ್ಯಾಖ್ಯಾನ : ಸುಬ್ರಾಯಭಟ್ (ಪು.೧೪೦)

ಅನ್ವಯ : ಸಮರದೊಳ್ ಸಮವಾಯಂ ಅದೃಷ್ಟವಶದಿಂ= ಯುದ್ಧದಲ್ಲಿ ಎಲ್ಲರೂ ಒಂದಾಗಿರುವುದು, ಬದುಕಿರುವುದು. ಭಾಗ್ಯವಶದಿಂದ:

ನಾಲ್ವರ್ ಅನುಜರೊಳ್ ಒರ್ವಂ ಸಾಯೆ= ನಾಲ್ವರು ತಮ್ಮಂದಿರಲ್ಲಿ ಒಬ್ಬನು ಸತ್ತರೆ ಯಮಭರನ್ ಯಮನಂದನ್ ಅತೀತನಪ್ಪಂ=ನಿಷ್ಠಾವಂತನಾದ ಧರ್ಮರಾಯನೂ ಸಾಯುತ್ತಾನೆ. ಅದಱಿಂ ಆ ನೃಪಗಂ ಜಯಮೇ ಆ ಕಾರಣದಿಂದ ಜಯವಾದೀತೇ ಎಂಬ ಸಂಶಯ.

ತಾತ್ಪರ್ಯ : ಯುದ್ಧದಲ್ಲಿ ಎಲ್ಲರೂ ಬದುಕಿ ಉಳಿಯುವುದು ದೈವಾಯುತ್ತ ತನ್ನ ನಾಲ್ವರು ತಮ್ಮಂದಿರಲ್ಲಿ ಒಬ್ಬನು ಸತ್ತರೂ ತಾನು ಅಗ್ನಿಪ್ರವೇಶ ಮಾಡುವೆನೆಂದು ನಿಷ್ಠಾವಂತನಾದ ಧರ್ಮರಾಜನು ಶಪಥ ಮಾಡಿರುತ್ತಾನೆ. ಧರ್ಮರಾಯನಿಗೂ ಯುದ್ಧದ ಜಯದ ವಿಚಾರದಲ್ಲಿ ಭಯವಿದ್ದೇ ಇದೆ. ಅದುದರಿಂದ ಅವನು ಖಂಡಿತವಾಗಿಯೂ ಸಂಧಿಗೆ ಒಪ್ಪದಿರನು.

ವಿಚಾರ : ಯಮಭರನತೀತನಪ್ಪಂ ಎಂಬ ಪಾಠವನ್ನು ತೀನಂಶ್ರೀ ಅವರು 'ಯಮಭವನಾತಿಥಿಯಪ್ಪಂ' ಎಂಬುದಾಗಿ ಮಾರ್ಪಡಿಸಿದ್ದಾರೆ, ಯಮಭರನ್ + ಅತೀತನಪ್ಪಂ ಎಂಬ ರೂಪವೇ ಸಾಧುವೆಂದು ತೋರುತ್ತದೆ.

ತೀನಂಶ್ರೀ ಗದಾಯುದ್ಧ ಸಂಗ್ರಹ (ಪುಟ ೧೩೪ ಪದ್ಯ ೪-೧೪)

ಸಮರದೊಳ್ ಅದೃಷ್ಟವಶದಿಂದ ಸಮವಾಯಂ= ಯುದ್ಧ ನಡೆಯುವಲ್ಲಿ ಒಬ್ಬರನ್ನೊಬ್ಬರು ಅಗಲದಿರುವುದು ಎಂದರೆ ಎಲ್ಲರೂ ಬದುಕಿರುವುದು. ಅದೃಷ್ಟಾಧೀನ; ಮನುಷ್ಯನಾಲೋಚನೆಯಂತೆ ಅದು ನಡೆಯುವುದಿಲ್ಲ.

ನಾಲ್ವರ್ ಅನುಜರೊಳ್ ಒರ್ವಂ ಸಾಯೆ ಯಮನಂದನಂ ಯಮ ಭವನಾತಿಥಿ ಅಪ್ಪಂ- ಎಂದು ಅನ್ವಯ.

ಯಮಪುತ್ರನು ಯಮನ ಮನೆಯ ಅತಿಥಿಯಾಗುವನು ಎಂದರೆ ಪ್ರಾಣತ್ಯಾಗ ಮಾಡುವನು.

ಅದಜೆಂ ನೃಪಂಗಂ ಭಯವೇ- ಆದಕಾರಣ ಅವನಿಗೂ (ಯುದ್ಧ ವಿಷಯದಲ್ಲಿ) ಅಂಜಿಕೆಯೇ ಉಂಟು.

ತೀನಂಶ್ರೀ ಅವರ ಟಿಪ್ಪಣಿ (ಗದಾಯುದ್ಧ ಸಂಗ್ರಹ ೫-೩೭ ಪುಟ ೪೩) ಈ ಲೇಖನದ ಸಂಪಾದಕರ ಟಿಪ್ಪಣಿ.

ಪಾಠಾಂತರ ವಿಚಾರ (ಸಂಪಾದಕ ಅನಾಜಿ ಟಿಪ್ಪಣಿ) ಈ ಕಂದದಲ್ಲಿ (೫-೩೭) ಪಿ. ಸುಬ್ರಾಯಭಟ್ ಅವರು ತರಣಿ ತನಯಾನನೇಂದು ಎಂಬ ಪಾಠವನ್ನು ಸ್ವೀಕರಿಸಿದ್ದಾರೆ. ಇದು ಕವಿ ಕೃಷ್ಣಭಟ್ಟರಿಂದ ಸಂಪಾದಿತವಾಗಿ ೧೯೪೬ರಲ್ಲಿ ಮತ್ತು ೧೯೭೫ರಲ್ಲಿ ಪ್ರಕಟವಾದ ಮುದ್ರಿತ ಪ್ರತಿಯ ಪಾಠ ಇದನ್ನು ಭಟ್ ಸ್ವೀಕರಿಸಿದ್ದಾರೆ. ತೀನಂಶ್ರೀ ಅವರು ತರಣಿತನಯನ ಗುಣೌಘ ಎಂಬ ಪಾಠವನ್ನು ಸ್ವೀಕರಿಸಿದ್ದಾರೆ. ಈ ಪಾಠ ಯಾವ ಗ್ರಂಥದಲ್ಲೂ ಇಲ್ಲ. ತೀನಂಶ್ರೀ ಅವರು ತರಣಿಯ ತನಯನ ನೆನೆದು (ನ.ಅ)

ಅರುಣ ತನಯನ ಗುಣೌಘ(ಮ) ಎಂಬ ಎರಡು ಪಾಠಗಳನ್ನು ಸಮನ್ವಯಿಸಿ ತರಣಿ ತನಯನಗುಣೌಘ ಎಂಬ ಪಾಠವನ್ನು ಸಿದ್ಧಪಡಿಸಿಕೊಂಡಿದ್ದಾರೆ.

ಕೆ.ವಿ.ಕೃಷ್ಣಭಟ್ ಅವರೂ ಸಹ ತರಣಿಯ ತನಯನ (ಕಚ)ಪ್ರತಿಯಿಂದ ಯಾನನೇಂದು (ಜ) ಪ್ರತಿಯಿಂದ ಸ್ವೀಕರಿಸಿ, ತರಣಿ ತನಯಾನನೇಂದು ಪಾಠವನ್ನು ಸ್ವೀಕರಿಸಿದ್ದಾರೆ. ಅದನ್ನೇ ಸುಬ್ರಾಯಭಟ್ ಬಳಸಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ತೀನಂಶ್ರೀ ಮತ್ತು ಕೆ.ವಿ ಕೃಷ್ಣಭಟ್ ಅವರು ತಮ್ಮದೇ ಆದ ಸಂಪಾದಕರ ಪಾಠ ಸಿದ್ಧಪಡಿಸಿ ಕೊಂಡಿದ್ದಾರೆ. ಅದನ್ನು ಬಿ.ಎಸ್. ಸಣ್ಣಯ್ಯ ಅವರು ತೀನಂಶ್ರೀ ಪಾಠ ಬಳಸಿದರೆ ಸುಬ್ರಾಯ್ ಭಟ್ ಪಿ.ವಿ. ಕೃಷ್ಣಭಟ್ ಅವರ ಪಾಠ

ಸ್ವೀಕರಿಸಿದ್ದಾರೆ ಈ ಎರಡು ಪಾಠಗಳೂ ತರಣಿ ತನಯಾನನೇಂದು ತರಣಿ ತನಯನ ಗುಣೌಘ ಸಂಪಾದಕರು (ಕೆ.ವಿ.ಕೃಷ್ಣಭಟ್ ತೀನಂಶ್ರೀ ಸಿದ್ಧಪಡಿಸದ ಪಾಠಗಳು ಎಂಬುದನ್ನು ಗಮನಿಸಬೇಕು.

ರನ್ನನ ಸಾಹಸಭೀಮ ವಿಜಯಂ(೩-೩೭)
'(ತರಣಿ ತನಯಾನನೇಂದು)'
ಸ್ಮರಣದೆ ಕಯ್ಗಣ್ಮುವೆನ್ನ ಶೋಕ ಮಹಾಸಾ
ಗರಮಂ ತವೆ ಪೀರ್ದುದು ಭೀ
ಕರಮತ್ಕೋಪಾಗ್ನಿ ಬಾಡಬಾಗ್ನಿಯ ತೆಱದಿಂ(೫-೩೭)

ಗದಾಯುದ್ಧದರ್ಪಣ (ಪು. ೨೦೨ ಆಶ್ವಾಸ ೫ ಪದ್ಯ ೩೭)

ಅನ್ವಯ ; ತರಣಿತನಯನ = ಕರ್ಣನ

ಆನನೇಂದು (ಆನನ ಇಂದು) = ಮುಖಚಂದ್ರನ

ಸ್ಮರಣದೆ = ನೆನಪಿನಿಂದಾಗಿ ಕಯ್ಗಣ್ಮುವ = ಉಕ್ಕೇರುವ

ಎನ್ನ ಶೋಕ ಮಹಾಸಾಗರಮಂ= ನನ್ನ ದುಃಖಾಂಬುಧಿಯನ್ನು ಭೀಕರ ಮತ್ಕೋಪಾಗ್ನಿ= ಭಯಂಕರವಾದ ನನ್ನ ಕೋಪಾಗ್ನಿಯು ಬಾಡಬಾಗ್ನಿಯ ತೆಱದಿಂ = ವಡಬಾಗ್ನಿಯ ರೀತಿಯಲ್ಲಿ

ತವೆ ಪೀರ್ದುದು= ಸಂಪೂರ್ಣ ನಾಶವಾಗುವಂತೆ ಹೀರಿಬಿಟ್ಟಿತು.

ತಾತ್ಪರ್ಯ : ಸಂಜಯಾ! ಕರ್ಣನ ಮುಖೇಂದು ಸ್ಮರಣೆಯಿಂದಾಗಿ ಉಕ್ಕೇರುತ್ತಿರುವ ನನ್ನ ಶೋಕಾಂಬುಧಿಯನ್ನು, ಭಯಂಕರವಾದ ನನ್ನ ಕ್ರೋಧಾಗ್ನಿಯು ವಡಬಾಗ್ನಿಯೋಪಾದಿಯಲ್ಲಿ ಸಂಪೂರ್ಣ ಹೀರಿಬಿಟ್ಟಿತು!

ವಿಚಾರ : ಇಲ್ಲ, ಇನ್ನು ದುರ್ಯೋಧನನು ಕರ್ಣನಿಗಾಗಿ ಅಳುವಂತಿಲ್ಲ ವಡಬಾಗ್ನಿ ಸದೃಶವಾದ ಅತನ ಕೋಪಾಗ್ನಿಯು ಶೋಕಸಾಗರವನ್ನು ಪೂರ್ಣ ಬತ್ತಿಸಿ ಬಿಟ್ಟಿತು!

ಅಲಂಕಾರ –ರೂಪಕ

ತೀನಂಶ್ರೀ ಅವರ ಟಿಪ್ಪಣಿ (ಗದಾಯುದ್ಧ ಸಂಗ್ರಹ ೫-೪೯ ಪುಟ ೧೪೯)

ಟಿಪ್ಪಣಿ : ತರಣಿ = ಸೂರ್ಯ, ಗುಣೌಘ = ಗುಣಸಮೂಹ ಕಯ್‌ಗಣ್ಮು (ಕಯ್ + ಕಣ್ಮು) ಕೈಮೀರು ಬಾಡಬಾಗ್ನಿ= ಸಾಗರದ ಒಳಗಡೆ ನೆಲಸಿ ಅದರ ನೀರನ್ನು ಹೀರುವುದೆಂದು ಹಿಂದಿನವರು ಭಾವಿಸಿದ ಅಗ್ನಿ.

ರನ್ನನ ಸಾಹಸ ಭೀಮ ವಿಜಯಂ (೫-೩೭ ವಚನ ಭಾಗ ಪುಟ ೨೦೩) ೫-೩೭ ವಚನ : ಎಂದು ಶೋಕರಸಮಂ ಕ್ರೋಧರಸದ ಮೇಲಿಕ್ಕಿ

ಮಾರ್ಪಡೆಯೆಯ್ತುರ್ಪುದಂ ನೋಡಿ ನಡೆವ ದಂದಶೂಕ ಪತಾಕನ ಗೆಲ್ಲದ ಮುಳಿಸಿನಂದಮನಱಿದು ಸಂಜಯನೆಂದನೆಲೆ ದೇವಾ ಭೀಷ್ಮರಿತ್ತಲಿರ್ದಪರಿತ್ತ ಬಿಜಯಂಗೆಯ್ಯಿಂ ನಿಜಗುರು ಜನ ಪ್ರಾರ್ಥನಾಭಂಗಂ ಮಾಡಲಾಗದು. ಇಂ ನೀಂ ನೆಗಟ್ಟಿ ಕಜ್ಜಮಾವುದುಮಂ ನಿಮ್ಮಜ್ಜನೊಳಾಳೋಚಿಸಿ ನೆಗಟ್ಟುದೆನೆ ಪೇಟ್ಟುದುಂ, ನಿಜಗುರು ಜನ ಪ್ರಾರ್ಥನಾಭಂಗಂ ಮಾಡದೆ ಸಂಜಯನ ಮಾತಂ ಮೀಱದೆ ಶರಶಯನಗತನಾಗಿರ್ಪ ನದೀನಂದನನ ಚರಣಾರವಿಂದ ವಂದನಂಗೆಯ್ಯಲೆಂದು ಗಾಂಧಾರಿ ನಂದನನೆಯ್ದಿ ವಂದು ಗಂಗಾನದೀನಂದನನಂ ಕಂಡು

ಭಟ್-ಗದಾಯುದ್ಧದರ್ಪಣಂ (ಪುಟ ೨೦೩ ಆ ೫ ಪ೩೭ ಗದ್ಯ)

ಶೋಕರಸಮಂ ಕ್ರೋಧರಸದ ಮೇಲಿಕ್ಕಿ =

ಶೋಕವನ್ನು ಕ್ರೋಧದ ಮೇಲೆ ಹಾಕಿ. ಇಲ್ಲಿ ರಸವೆಂಬುದು ಕಾವ್ಯರಸವಲ್ಲ. ಶೋಕರಸಮಂ ಕ್ರೋಧರಸದ ಕೆಳಗಿಕ್ಕಿ ಎಂದೋ ಕ್ರೋಧ ರಸಮಂ ಶೋಕರಸದ ಮೇಲಿಕ್ಕಿ ಎಂದೊ ಇದ್ದಿರಬೇಕು. ಕ್ರೋಧವು ಶೋಕವನ್ನು ಇಕ್ಕಿಮೆಟ್ಟಿ ಅರ್ಥಾತ್ ಶೋಕವು (ಕ್ರೋಧವಾಗಿ) ಮಾರ್ಪಡೆ. ಬದಲಾಗಲು ಎಯ್ತುರ್ಪುದು-ಬರುತ್ತಿರುವುದನ್ನು ನೋಡಿ (ಸಂಜಯನು ಕಂಡು)

ಇಲ್ಲಿ ಶ್ರೀ ತೀನಂಶ್ರೀ ಅವರು ಅರ್ಥೈಸುವಲ್ಲಿ ಎಡವಿದ್ದಾರೆ. ನಡೆವ-ಮುನ್ನಡೆವ ದಂದಶೂಕಪತಾಕನ=ಪನ್ನಗಪತಾಕನಾದ ದುರ್ಯೋಧನನ ಗೆಲ್ಲದ ಮುಳಿಸಿನ ಅಂದಮಂ ಅಱಿದು= ವಿಜಯಕ್ರೋಧದ ರೀತಿಯನ್ನು ತಿಳಿದು ಸಂಜಯನ್ ಎಂದಂ= ಸಂಜಯನು ಹೇಳಿದನು.

ದೇವಾ! ಭೀಷ್ಮರ್ ಇತ್ತಲ್ ಇರ್ದಪರ್ ಇತ್ತ ಬಿಜಯಂಗೆಯ್ಯಿಂ= ಭೀಷ್ಮರು ಇಲ್ಲೇ ಸಮೀಪದಲ್ಲಿದ್ದಾರೆ, ಇಲ್ಲಿಗೆ ದಯಮಾಡಿಸಿರಿ

ನಿಜಗುರುಜನ ಪ್ರಾರ್ಥನಾ ಭಂಗಂ ಮಾಡಲಾಗದು= ನಿನ್ನ ಮಾತಾಪಿತರ ಇಚ್ಛೆಯನ್ನು ನಿರಾಶೆ ಗೊಳಿಸಬಾರದು.

ಸುಬ್ರಾಯಭಟ್ ಗದಾಯುದ್ಧ ದರ್ಪಣಂ(ಪುಟ ೨೦೩ ಆ೫-೩೭)

ಇಂ ನೀಂ ನೆಗಟ್ಟಿ ಕಜ್ಜಮಾವುದುಮಂ ನಿಮ್ಮಾಜ್ಜನೊಳಾಳೋಚಿಸಿ ನೆಗಟ್ಟುದೆನೆ ಪೇಟ್ಟುದುಂ= ಇನ್ನು ನೀವು ಮಾಡಲಿರುವ ಯಾವ ಕಾರ್ಯವನ್ನಾದರೂ ನಿಮ್ಮ ಅಜ್ಜನೊಂದಿಗೆ ಆಲೋಚಿಸಿಯೇ ಮಾಡಬೇಕೆಂದು ಹೇಳಲು.

ನಿಜಗುರುಜನ ಪ್ರಾರ್ಥನಾಭಂಗಂ ಮಾಡದೆ ಸಂಜಯನ ಮಾತಂಮೀಱದೆ.

ಶರಶಯನಗತನಾಗಿರ್ಪ ನದೀನಂದನನ ಚರಣಾರವಿಂದ ವಂದನಂ ಗೆಯ್ಯಲೆಂದು ಬಾಣಗಳ ಮಂಚದ ಮೇಲೆ ಮಲಗಿರುವ ಗಂಗಾಸುತನಾದ ಭೀಷ್ಮನ,

ಪಾದಕಮಲಗಳಿಗೆ ನಮಸ್ಕರಿಸುವುದಕ್ಕಾಗಿ ಗಾಂಧಾರಿಯ ನಂದನನ್ ಎಯ್ದೆವಂದು= ಗಾಂಧಾರಿಯ ನಂದನನು (ದುರ್ಯೋಧನನು) ಸಮೀಪಕ್ಕೆ ಬಂದು ಗಂಗಾನದೀ ನಂದನನಂ ಕಂಡು ಭೀಷ್ಮರನ್ನು ನೋಡಿ.

ತೀನಂಶ್ರೀ (ಗದಾಯುದ್ಧ ಸಂಗ್ರಹ ಪುಟ ೪೩ ಆ೫-೪೯ಗದ್ಯ)

ಟಿಪ್ಪಣಿ : ಶೋಕರಸಮಂ ಕೋಪರಸದ ಮೇಲಿಕ್ಕಿ=ಶೋಕವು ಕೋಪದ ಮೇಲೆ ಆಧಾರಗೊಳ್ಳುವಂತೆ ಮಾಡಿ ಎಂದರೆ ಶೋಕಕ್ಕೆ ಪೋಷಕವಾಗಿ ಕೋಪವನ್ನು ಬೆಳೆಸಿ (ಪಂಪಭಾ. ೧೩-೬೧ವ. ಅನ್ನು ಹೋಲಿಸಿ) ಇಲ್ಲಿ ರಸ ಎಂಬುದು ಕಾವ್ಯರಸವಲ್ಲ. ಅದು ವ್ಯಾವಹಾರಿಕ ಚಿತ್ತವೃತ್ತಿ.

ಮಾರ್ಪಡೆಯೆಯ್ತರ್ಪುದಂ ನೋಡಿ ನಡೆವ = ಶತ್ರು ಸೇನೆಯು ಸಮೀಪಿಸುವುದನ್ನು ನೋಡಿ (ಅದನ್ನೆದುರಿಸಲು) ನಡೆಯುವ ದಂದಶೂಕಪತಾಕನ = ಸರ್ಪಧ್ವಜನ ದುರ್ಯೋಧನ

ನಿಜಗುರುಜನ= ನಿಮ್ಮ ತಾಯಿ ತಂದೆಗಳ ಇಂ=ಇನ್ನು

(ಕನ್ನಡದಲ್ಲಿ ಈಗ, ಮು.ಆ. ರಾಮಾನುಜ ಅಯ್ಯಂಗಾರ್, ಬಿ.ಎಸ್. ಸಣ್ಣಯ್ಯ ಬಿ. ಸುಬ್ರಾಯ ಭಟ್, ಕೆ.ವಿ. ಕೃಷ್ಣಭಟ್, ಎಲ್. ಬಸವರಾಜ, ಆರ್.ವಿ. ಕುಲಕರ್ಣಿ ಈ ಆರ್ವರ ಮೂಲಗ್ರಂಥದ ಪಾಠಾಂತರಗಳನ್ನು ತೀನಂಶ್ರೀ ಅವರ ಗದಾಯುದ್ಧ ಸಂಗ್ರಹದ ಪಾಠಾಂತರ ಗ್ರಂಥಸಂಪಾದನಾ ವಿಧಾನ ಕುರಿತು ಪ್ರತ್ಯೇಕ ಲೇಖನವನ್ನು ಸಿದ್ಧಪಡಿಸುತ್ತಿರುವುದರಿಂದ ಇಲ್ಲಿ ಭಟ್, ತೀನಂಶ್ರೀ ಅವರ ಅವತರಣಿಕೆಗಳನ್ನಷ್ಟೇ ಕೊಡಲಾಗಿದೆ.)

ಡಿ. ಎಲ್. ಎನ್. ಅವರ 'ದೀಪಿಕೆ' ಕುರಿತ ಲೇಖನ ಲೋಚನದಲ್ಲಿ ಕಂಡ ಮೇಲೆ 'ಗದಾಯುದ್ಧ ದರ್ಪಣ' ದಲ್ಲಿ ತೀನಂಶ್ರೀ ಅವರು ಬರೆದಿರುವ ಟಿಪ್ಪಣಿಗಳ ಬಗ್ಗೆ ಪ್ರತಿಕ್ರಿಯಿಸಿರುವ ಸುಬ್ರಾಯಭಟ್ಟರ ಅಭಿಪ್ರಾಯಗಳನ್ನು ಇದೀಗ ವಿದ್ವಜ್ಜನರ ಅವಗಾಹನೆಗೆ ತರುತ್ತಿದ್ದೇನೆ.

– ಪ್ರೊ. ಜಿ. ಅಶ್ವತ್ಥನಾರಾಯಣ

ನಾಗವರ್ಮನ ಕರ್ಣಾಟಕ ಭಾಷಾಭೂಷಣ' ದ್ರಾವಿಡ ಭಾಷಾ ವಿಜ್ಞಾನಿಗಳಿಗೂ ತಿಳಿದಿಲ್ಲವೆನಿಸುತ್ತದೆ. ಕನ್ನಡ ಲೇಖಕರ ಗಮನಕ್ಕೆ ಬಂದಂತಿಲ್ಲ. ಆದ್ದರಿಂದ ಇದರ ಬಗ್ಗೆ ತಿಳುವಳಿಕೆ ನೀಡುವುದೇ ಈ ಲೇಖನದ ಉದ್ದೇಶ.

– ಡಾ. ಎಚ್. ಎಸ್. ಅನಂತನಾರಾಯಣ

ವ್ಯಾಪ್ತ ಅಧ್ಯಯನ, ಬಹುಜ್ಞತೆ, ಬಹುಭಾಷಾ ಜ್ಞಾನ, ಪ್ರಖರ ಸ್ಮರಣ ಶಕ್ತಿ, ಗ್ರಹಣ ಶಕ್ತಿ, ನಿಶ್ಚಿತ ಬುದ್ಧಿ–ಇಂಥವು ಸತ್ಯಶೋಧಕ್ಕೆ ಕೂಡಿಬಂದವುಗಳಾಗಿವೆ.

– ಪ್ರೊ. ಶಿವಾಜಿ ಜೋಯಿಸ್

ಮೇಲುದುರ್ಗದ ಮಠದ ಹತ್ತಿರವೇ ಇರುವ ಈಗ 'ಟಂಕಶಾಲೆ', 'ಪಾಳೆಯಗಾರರ ಕಛೇರಿ'–ಎಂದು ಮುಂತಾಗಿ ಕರೆಯುವ ಮಣ್ಣಿನ ದೊಡ್ಡಗೋಡೆಗಳ ಕಟ್ಟಡ– ಈ ಸಂಕೀರ್ಣವೇ ಬರಮಣ್ಣ ನಾಯಕನ ಅರಮನೆ ಎನಿಸುತ್ತದೆ.

– ಡಾ. ಬಿ. ರಾಜಶೇಖರಪ್ಪ

'ಪಲ್ಮಡಿ'ಯನ್ನು 'ಪಲ್ಮ+ಅಡಿ' ಎಂದು ವಿಭಜಿಸಬೇಕಾಗುತ್ತದೆ. 'ಅಡಿ' ಎಂಬುದು ಕೂಡ ತುಳುವಿನಲ್ಲಿ ಸ್ಥಳನಾಮದ ಒಂದು ವಾರ್ಗಿಕ

– ಡಾ. ಎನ್. ಎಸ್. ತಾರಾನಾಥ್

ಅರ್ಹದ್ದಾಸ, ಈ ಗ್ರಂಥದಲ್ಲಿ ಮಳೆ ಬರುವುದು, ಬಾರದಿರುವುದು, ಅದರ ಕಾರಣಗಳು ಬೆಳೆಯ ವಿಚಾರಗಳು, ಮಳೆಗೆ ಹಾಗೂ ನೀರಿಗೆ ಸಂಬಂಧಪಟ್ಟ ಎಲ್ಲ ರೀತಿಯ ವಿಷಯಗಳನ್ನು ಪ್ರತಿಪಾದಿಸಿದ್ದಾನೆ.

– ಡಾ. ಕೆ. ನಳಿನಿ ವೆಂಕಟೇಶ್

ಹೈವನಾಡಿನ ವಿಸ್ತಾರ ಕುರಿತ ನಿರೂಪಣೆಯು ವರ್ತಮಾನದ ಸಂದರ್ಭದಲ್ಲಿ ಮರುಪರಿಶೀಲನೆಗೆ ಅರ್ಹವಾಗಿದೆ.

– ಅತ್ತಿಮುರುಡು ವಿಶ್ವೇಶ್ವರ ಹೆಗಡೆ

ಎಲ್ಲರಿಗೂ ಎಲ್ಲ ವಿದ್ಯೆಗಳೂ ಹತ್ತಿಯಾವೇ, ಹತ್ತಬೇಕೆ? ರುಚಿ ಸಾಮರ್ಥ್ಯಗಳನ್ನು ನೋಡಿ ವಿದ್ಯೆಯನ್ನು ಕೊಡುವುದಲ್ಲದೆ ಗಿಡುಗಿಬಿಟ್ಟರೆ ಆಯಿತೆಂದುಕೊಳ್ಳುವುದು ತರವೆ?

– ಎ. ಎಸ್. ಕಣ್ಣನ್

ಈ ಪ್ರಾಚೀನ ಸ್ಮಾರಕಗಳ ಪತ್ತೆಯಿಂದಾಗಿ ಸೋಮನಹಳ್ಳಿ ಮತ್ತು ಕೆರಬೂಡ ಹಳ್ಳಿಗಳು ವೀರ ಮತ್ತು ತ್ಯಾಗದ ಪ್ರದೇಶಗಳಾಗಿದ್ದುವು ಎಂಬುದಕ್ಕೆ ಸಾಕ್ಷ್ಯಾಧಾರಗಳಾಗಿವೆ.

– ಡಾ. ಮುತ್ತುರಾಜ್

ಸರ್ವಾಧಿಕಾರ ಮತ್ತು ಸ್ವಾಂತತ್ರ್ಯಪ್ರಿಯತೆಯ ಸೆಣಸಾಟದ ಧ್ವನಿಪೂರ್ಣ ಸಂದರ್ಭದ ಪಂಪನ ಚಿತ್ರಣವು ಇಲ್ಲಿ ಒಂದು ಅದ್ಭುತ ಸೋದರ ಸಂಹಿತೆಯ, ಆಪ್ತ ಸಮಾಲೋಚನೆಯ (ಕೌನ್ಸಿಲಿಂಗ್)ಸೆಷನ್ ಆಗಿ ಮಾರ್ಪಟ್ಟಿದೆ.

– ಡಾ. ಎನ್.ಆರ್. ಲಲಿತಾಂಬ

ಪ್ರಗತಿಶೀಲ ಧೋರಣೆಗಳಿಗೆ ದ್ರೋಹ ಬಗೆಯದೆ ಆಜೀವ ಬದ್ಧರಾಗಿ ಸಾಹಿತ್ಯ ಸೃಷ್ಟಿಸಿದವರು– 'ನಿರಂಜನರು'

– ಶ್ರೀ. ರಾಜಶೇಖರ ಹಳೆಮನೆ

ವಚನಗಳನ್ನು ಇಂಗ್ಲಿಷಿಗೆ ಅನುವಾದಿಸುವ ಮೂಲಕ ಕನ್ನಡ ತಿಳಿಯದಿರುವವರಿಗೂ ವಚನಸಾಹಿತ್ಯದ ಸೊಗಸನ್ನು ಪರಿಚಯಿಸಲು ಯತ್ನಿಸಿದವರಲ್ಲಿ ಮಾಸ್ತಿಯವರು ಮೊತ್ತಮೊದಲಿಗರು

– ಡಾ. ಎಸ್.ಎಲ್. ಶ್ರೀನಿವಾಸ ಮೂರ್ತಿ